ಭಾನುವಾರ, ಮೇ 22, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 141 | ಪುಟ 24

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಅಧಿಕಾರಿಗಳಿಗೆ 15 ದಿನ ರಜೆ ಇಲ್ಲ: ಸಿ.ಎಂ 5

ವರ್ಷಕ್ಕೊಮ್ಮೆ ದ್ವಾರಾಳು ಗ್ರಾಮಕ್ಕೆ ಭೇಟಿ

ಭೀಕರ ಅಪಘಾತ: 9 ಮಂದಿ ಸಾವು 5

ಚಂದ್ರ ಕನ್ನಡಾಭಿಮಾನಕ್ಕೆ ಗ್ರಾಮಸ್ಥರ ಹೆಮ್ಮೆ 7

ಬಿತ್ತನೆ ಬೀಜ ಬಂಜೆಯಾದೊಡೆ...

• ಇ.ಎಸ್. ಸುಧೀಂದ್ರ ಪ್ರಸಾದ್

ಧಾರವಾಡ: 'ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ನೀಡುತ್ತದೆ' ಎಂಬ ದೇವನೂರ ಮಹಾದೇವ ಅವರ ಮಾತು ಇಂದಿನ ಕಾಳಸಂತೆಯಲ್ಲಿ ಮಾರಾಟವಾಗುವ ಬಿತ್ತನೆ ಬೀಜಗಳಿಗೆ ಅನ್ವಯವಾಗದು.

ಕಳಪೆ ಗುಣಮಟ್ಟದ ಬೀಜಗಳ ಮಾರಾಟ ಜಾಲದಿಂದ ಬಂಜೆ ಬೀಜಗಳ ಹಾವಳಿ ತಪ್ಪದಂತಾಗಿದೆ. 2020–21ನೇ ಸಾಲಿನಲ್ಲಿ ₹14.71ಕೋಟಿ ಮೊತ್ತದ 8,957 ಕ್ವಿಂಟಲ್ ಕಳಪೆ ಬಿತ್ತನೆ ಬೀಜವನ್ನು ಜಾಗೃತ ದಳ ವಶಪಡಿಸಿಕೊಂಡಿದೆ. ಕಳೆದ ಮೂರು ತಿಂಗಳಲ್ಲಿ ಬೆಳಗಾವಿ, ಕೊಪ್ಪಳ ಹಾಗೂ ಹಾವೇರಿ ಜಿಲ್ಲೆಗಳ ವಿವಿಧೆಡೆ ನಡೆದ ದಾಳಿಯಲ್ಲಿ ₹5 ಲಕ್ಷ ಮೌಲ್ಯದ 35 ಕ್ವಿಂಟಲ್ ಕಳಪೆ ಬೀಜ ಪತ್ತೆಯಾಗಿದೆ. ಹೆಚ್ಚಾಗಿ ಗೋವಿನಜೋಳ, ಸೂರ್ಯಕಾಂತಿ, ಸಜ್ಜೆ, ಮುಸುಕಿನ ಜೋಳ ಸೇರಿವೆ.

ಪರವಾನಗಿ ಹೊಂದಿದ ವರ್ತಕರಿಂದ ಗುಣಮಟ್ಟದ ಬೀಜ ಖರೀದಿಸುವಂತೆ ಮತ್ತು ಅವುಗಳ ಖರೀದಿಯ ರಶೀದಿಯನ್ನು ಹಂಗಾಮು ಮುಗಿಯುವವರೆಗೂ ಇಟ್ಟುಕೊಳ್ಳುವಂತೆ ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾಲಯಗಳು ಸೂಚಿಸುತ್ತಲೇ ಇವೆ.

ಪ್ರತಿ ವರ್ಷ ಬಹಳಷ್ಟು ರೈತರು ಕೃಷಿ ಸಾಲ ಮಾಡಿಯೇ ಹಂಗಾಮಿಗೆ ಸಜ್ಜಾಗುತ್ತಾರೆ. ಕಳಪೆ ಬೀಜಗಳ ಬಿತ್ತನೆಯಿಂದ ಇಳುವರಿ ಕುಂಠಿತಗೊಂಡು, ಸಾಲದ ಹೊರೆಗೆ ಸಿಲುಕುತ್ತಿದ್ದಾರೆ. ರೈತರ ಆತ್ಮಹತ್ಯೆಗೆ ಇದೂ ಒಂದು ಕಾರಣ ಎಂದು ಅಂದಾಜಿಸಲಾಗಿದೆ. ಶೇ 60ಕ್ಕಿಂತಲೂ ಕಡಿಮೆ ಮೊಳಕೆಯೊಡೆಯುವ ಪ್ರಮಾಣವಿರುವ ಈ ಬೀಜಗಳನ್ನು ತಿರಸ್ಕೃತ ಬೀಜಗಳೊಂದಿಗೆ ಸೇರಿಸಿ ಮಾರಾಟ ಮಾಡುವ ಜಾಲವೂ ವ್ಯವಸ್ಥಿತವಾಗಿ ಬೇರು ಬಿಟ್ಟಿದೆ.

ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು ಮುಂಗಾರಿ ಮತ್ತು ಹಿಂಗಾರಿ ಸೇರಿದಂತೆ 110 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಚಟುವಟಿಕೆಗಳು ನಡೆಯುತ್ತವೆ. ರಾಷ್ಟ್ರೀಯ ಬೀಜ ನಿಗಮ, ರಾಜ್ಯ ಬೀಜ ನಿಗಮ, ವಿಶ್ವವಿದ್ಯಾಲಯಗಳ ಬೀಜ ಘಟಕಗಳು ಅಗತ್ಯ ಇರುವಷ್ಟು ಬೀಜಗಳನ್ನು ಉತ್ಪಾದಿಸಿ ಮಾರಾಟ ಮಾಡುತ್ತಿವೆ. ಉತ್ತರಾಖಂಡದ ಪಂತ್‌ನಗರ, ಪಂಜಾಬ್‌ನ ಲುಧಿಯಾನ ಹೊರತುಪಡಿಸಿದರೆ ಧಾರವಾಡ ಕೃಷಿ ವಿಶ್ವವಿದ್ಯಾಲಯ ವಾರ್ಷಿಕ ಅತಿ ಹೆಚ್ಚು– ಸುಮಾರು ಎಂಟು ಸಾವಿರ ಕ್ವಿಂಟಲ್ ಬೀಜೋತ್ಪಾದನೆ ಮಾಡುತ್ತಿದೆ.

ಒಳನೋಟ

ಕಳಪೆ ಬಿತ್ತನೆ ಬೀಜ ಹಾವಳಿ

ಪ್ರತಿಕ್ರಿಯಿಸಿ: 9606038256

feedback@prajavani.co.in

> **ಕಳಪೆ ಬಿತ್ತನೆ ಬೀಜಕ್ಕಾಗಿ ಈವರೆಗೆ ಯಾವುದೇ ಕಂಪನಿ ಮುಚ್ಚಿಸಿದ, ಕಪ್ಪು ಪಟ್ಟಿಗೆ ಸೇರಿಸಿದ ಉದಾಹರಣೆಗಳಿಲ್ಲ. ಅಧಿಕಾರಿಗಳು ಶಾಮೀಲಾಗದ ಹೊರತು ಇದು ನಡೆಯಲು ಸಾಧ್ಯವೇ ಇಲ್ಲ**
>
> **ಎಚ್.ವಿ. ದಿವಾಕರ್**
> ಐಎಕೆಕೆಎಂಎಸ್ ರಾಜ್ಯ ಘಟಕದ ಅಧ್ಯಕ್ಷ

'ಪ್ರಸಕ್ತ ವರ್ಷ ಕೃಷಿ ಹಂಗಾಮಿಗೆ ಸುಮಾರು 5.90 ಲಕ್ಷ ಕ್ವಿಂಟಲ್ ಬೀಜಕ್ಕೆ ಬೇಡಿಕೆ ಇದೆ. ಇದರಲ್ಲಿ ಶೇ 35ರಷ್ಟು ಖಾಸಗಿ ಕಂಪನಿಗಳ ಪಾಲು ಇದೆ. ಸೂರ್ಯಕಾಂತಿ, ಸೋಯಾಬೀನ್, ಮೆಕ್ಕೆಜೋಳ ಬೆಳೆಯುವ ಕ್ಷೇತ್ರಗಳು ಹೆಚ್ಚಾಗಿವೆ' ಎಂದು ಕೃಷಿ ಇಲಾಖೆ ಬೀಜ ವಿಭಾಗದ ಜಂಟಿ ನಿರ್ದೇಶಕ ದೇವರಾಜ್ ತಿಳಿಸಿದರು.

ಸಿಬ್ಬಂದಿ ಕೊರತೆ: ಜಾಗೃತ ದಳದ ಕಾರ್ಯನಿರ್ವಹಣೆಯಿಂದ ಸಾಕಷ್ಟು ಪ್ರಕರಣಗಳು ಪತ್ತೆಯಾಗಿದ್ದರೂ, ಈಗಲೂ ಕಳಪೆ ಗುಣಮಟ್ಟದ ಬೀಜಗಳ ಮಾರಾಟ ಅಲ್ಲಲ್ಲಿ ಪತ್ತೆಯಾಗುತ್ತಲೇ ಇದೆ. ಬೀಜಗಳು ಹೆಚ್ಚಾಗಿ ಮಾರಾಟವಾಗುವ ರೈತ ಸಂಪರ್ಕ ಕೇಂದ್ರಗಳ ಮೂಲಕವೇ ನಕಲಿ ಜಾಲದ ಪತ್ತೆ ಸಾಧ್ಯ. ಇಲಾಖೆಯಲ್ಲಿ ಒಟ್ಟು ಮಂಜೂರಾದ ಸುಮಾರು 5,300 ಹುದ್ದೆಗಳು ಖಾಲಿ ಇವೆ. ಇತ್ತೀಚೆಗೆ 300 ಹುದ್ದೆಗಳಿಗೆ ಹಣಕಾಸು ಇಲಾಖೆ ಅನುಮೋದನೆ ನೀಡಿದೆ. ಅದರ ನೇಮಕಾತಿ ಇನ್ನಷ್ಟೇ ಆಗಬೇಕಿದೆ. ಹೀಗಾಗಿ ನಕಲಿ ಬಿತ್ತನೆ ಬೀಜ ವಿತರಣಾ ಜಾಲ ಪತ್ತೆ ಕಾರ್ಯ ಅಷ್ಟಾಗಿ ನಡೆಯುತ್ತಿಲ್ಲ.

ಕಳಪೆ ಬೀಜ; ಆಂಧ್ರದ ಮೂಲ: ಆಂಧ್ರದಲ್ಲಿರುವ ಬಹಳಷ್ಟು ಬೀಜ ತಯಾರಿಕಾ ಕಂಪನಿಗಳು ತಮ್ಮದೇ ಸಂಶೋಧನಾ ಕೇಂದ್ರದಲ್ಲಿ ಸಣ್ಣದೊಂದು ಪರೀಕ್ಷೆ ನಡೆಸಿ, ಆಕರ್ಷಕ ಹೆಸರನ್ನಿಟ್ಟು ಬೀಜಗಳನ್ನು ಬಿಡುಗಡೆ ಮಾಡುತ್ತವೆ. ಕಳಪೆ ಬೀಜ, ಗೊಬ್ಬರ ಮತ್ತು ಕೀಟನಾಶಕಗಳನ್ನು ಅಲ್ಲಿಂದಲೇ ಕಳುಹಿಸುತ್ತಿದೆ.

ಖಾಸಗಿ ಕಂಪನಿಗಳ ನೆಚ್ಚಿನ ಹೈಬ್ರಿಡ್: ಖಾಸಗಿ ಕಂಪೆನಿಗಳು ಹೆಚ್ಚಾಗಿ ಕಡಿಮೆ ಬಂಡವಾಳ, ಹೆಚ್ಚಿನ ಲಾಭದ ಬೆಳೆಗಳನ್ನೇ ಆಯ್ಕೆ ಮಾಡಿಕೊಳ್ಳುತ್ತವೆ. ಪರಕೀಯ ಪರಾಗಸ್ಪರ್ಶದ ಹೈಬ್ರಿಡ್ ತಳಿಗಳಾದ ಹತ್ತಿ, ಈರುಳ್ಳಿ, ಮೆಣಸು, ತರಕಾರಿ, ಸೂರ್ಯಕಾಂತಿ ಬೀಜಗಳನ್ನು ಹೆಚ್ಚಾಗಿ ಉತ್ಪಾದಿಸುತ್ತವೆ. ಆದರೆ ಮತ್ತೊಂದೆಡೆ ಸ್ವಪರಾಗಸ್ಪರ್ಶ ಬೆಳೆಗಳಾದ ಗೋಧಿ, ಹಿಂಗಾರಿ ಜೋಳ, ಹೆಸರು, ಉದ್ದು, ಸೋಯಾಬೀನ್ ಬೆಳೆಗಳ ಬೀಜಗಳನ್ನು ಇಂದಿಗೂ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳೇ ಅಭಿವೃದ್ಧಿಪಡಿಸುತ್ತವೆ.

ಖಾಸಗಿ ಕಂಪನಿಗಳು ಇಳುವರಿ ಕಡಿಮೆ, ಕಳಪೆ ಆರೋಪಗಳು ಕೇಳಿಬಂದ ತಕ್ಷಣ, ಅವೇ ಬೀಜಗಳನ್ನು ಬೇರೊಂದು ಹೆಸರಿನಲ್ಲಿ ಮಾರಾಟ ಮಾಡುವ ತಂತ್ರವನ್ನೂ ಅನುಸರಿಸುತ್ತವೆ. ಒಂದೆಡೆ ಬೇಡಿಕೆ ಹೆಚ್ಚಿಸುವುದು, ನಂತರ ಕೃತಕ ಅಭಾವ ಸೃಷ್ಟಿಸುವುದು, ಬೆಲೆ ಹೆಚ್ಚಳ ಮಾಡಿ ಮಾರಾಟ ಮಾಡುವುದು ಒಂದು ಜಾಲ. ಇಂಥ ಬೇಡಿಕೆ ಸಂದರ್ಭದಲ್ಲೇ ಅಗ್ಗದ ಬೆಲೆಗೆ ಕಳಪೆ ಬೀಜಗಳನ್ನು ಮಾರುಕಟ್ಟೆಗೆ ಬಿಡುವುದು ಮತ್ತೊಂದು ಜಾಲ. ಈ ಜಾಲಗಳ ನಡುವೆ ಸಿಲುಕಿ ರೈತ ನಲುಗಿದ್ದಾನೆ. ದೂರು ಬಂದ ತಕ್ಷಣ ಇಲಾಖೆಯು ತನಿಖಾ ಸಮಿತಿ ರಚಿಸಿ ಕೈತೊಳೆದುಕೊಳ್ಳುತ್ತದೆ. ಹವಾಮಾನ ವೈಪರೀತ್ಯ, ಶಿಫಾರಸಿನಂತೆ ಬಿತ್ತನೆ ಮಾಡದಿರುವುದು, ಅಧಿಕ ಒಣ ಹವೆ ದಿನಗಳ ನೆಪವೊಡ್ಡಿ ಕಂಪನಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತವೆ.



ಕುಮಟಾದ ನಾಗರಾಜ ನಾಯ್ಕ ಅವರ ಮನೆಯ ಅಂಗಳದಲ್ಲಿ ಭತ್ತದ ಸಸಿ ಮಡಿ (ಸಂಗ್ರಹ ಚಿತ್ರ)

ಪರವಾನಗಿ ರದ್ದು: ಬಿ.ಸಿ.ಪಾಟೀಲ



'ಕಳಪೆ ಬಿತ್ತನೆ ಬೀಜ ಮಾರುವುದು ಮತ್ತು ದುಬಾರಿ ದರದಲ್ಲಿ ರಸಗೊಬ್ಬರ ಮಾರಾಟ ಮಾಡುವುದನ್ನು ನಾನು ಸಹಿಸುವುದಿಲ್ಲ. ಮೋಸ ಮಾಡುವ ವ್ಯಕ್ತಿಗಳು ಎಷ್ಟೇ ದೊಡ್ಡ ವ್ಯಕ್ತಿಗಳಾಗಿದ್ದರೂ, ಪ್ರಭಾವಶಾಲಿಯಾದರೂ ಮುಲಾಜಿಲ್ಲದೆ ಅಂಥವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಖಡಕ್ ಎಚ್ಚರಿಕೆ ನೀಡಿದರು.

'ರಾಜ್ಯದಲ್ಲಿ ರಸಗೊಬ್ಬರ, ಬಿತ್ತನೆ ಬೀಜದ ಕೃತಕ ಅಭಾವ ಸೃಷ್ಟಿಸುವವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ರಸಗೊಬ್ಬರ ಮತ್ತು ಬಿತ್ತನೆ ಬೀಜದ ಅಕ್ರಮ ದಾಸ್ತಾನು ಮಾಡಿದ್ದರೆ ಅಂತಹ ಅಂಗಡಿಗಳ ಪರವಾನಿಗೆ ರದ್ದುಪಡಿಸಲಾಗುವುದು. ನಾನು ಕೃಷಿ ಸಚಿವನಾದ ನಂತರ ಸುಮಾರು 14 ಸಾವಿರ ಕ್ವಿಂಟಲ್ ಕಳಪೆ ಬಿತ್ತನೆ ಬೀಜ ಹಾಗೂ ಕೀಟನಾಶಕ ಪತ್ತೆ ಹಚ್ಚಲಾಗಿದೆ. ರಾಜ್ಯದಲ್ಲಿ ಕಳಪೆ ಬೀಜ, ಕ್ರಿಮಿನಾಶಕ ಮಾರಾಟ ಮಾಡಿ ಸಿಕ್ಕಿಬಿದ್ದ 184 ಅಂಗಡಿಗಳ ಲೈಸೆನ್ಸ್ ರದ್ದುಪಡಿಸಲಾಗಿದೆ' ಎಂದು ಹೇಳಿದರು.

ಕಾವೇರಿ ಚಾಂಪ್ ಪ್ರಕರಣ

2014ರಲ್ಲಿ ಗದಗ ಜಿಲ್ಲೆಯಲ್ಲಿ ಕಾವೇರಿ ಚಾಂಪ್ ಹೆಸರಿನಲ್ಲಿ ಮಾರಾಟವಾದ ಸೂರ್ಯಕಾಂತಿ ಬೀಜಕ್ಕೆ ಕೃತಕ ಬೇಡಿಕೆ ಸೃಷ್ಟಿಸಲಾಗಿತ್ತು. ಒಂದು ಪೊಟ್ಟಣಕ್ಕೆ ₹1,500 ಮುಖಬೆಲೆ ಇದ್ದರೂ, ಅದನ್ನು ₹3,500ಕ್ಕೂ ಆಗ ಮಾರಾಟ ಮಾಡಲಾಗಿತ್ತು. ಎಕರೆಗೆ 5ರಿಂದ 6 ಕ್ವಿಂಟಲ್ ಇಳುವರಿ ನಿರೀಕ್ಷಿಸಿದ್ದ ರೈತರಿಗೆ ಸಿಕ್ಕಿದ್ದು 50 ಕೆ.ಜಿ. ಮಾತ್ರ. ಇದು ಆಂದೋಲನ ಸ್ವರೂಪ ಪಡೆದುಕೊಂಡಿತು. ರಸೀದಿ ಪಡೆದ ಸುಮಾರು 60 ರೈತರು ಗ್ರಾಹಕರ ವ್ಯಾಜ್ಯಗಳ ನ್ಯಾಯಾಲಯಗಳಲ್ಲಿ ಮೊಕದ್ದಮೆ ಹೂಡಿದರು. ಇವರಲ್ಲಿ ಈವರೆಗೆ 8ರಿಂದ 10 ರೈತರು ಮೃತಪಟ್ಟಿದ್ದಾರೆ. ಆದರೆ ಪ್ರಕರಣ ಇತ್ಯರ್ಥಗೊಂಡಿಲ್ಲ.

ಇನ್ನಷ್ಟು ಸುದ್ದಿಗಳು 6

ಸುಂಕ ಕಡಿತ: ಪೆಟ್ರೋಲ್ ₹9.5, ಡೀಸೆಲ್ ₹7 ಇಳಿಕೆ

ನವದೆಹಲಿ (ಪಿಟಿಐ): ಹಣದುಬ್ಬರ ನಿಯಂತ್ರಿಸಲು ಮತ್ತು ಅಗತ್ಯ ವಸ್ತುಗಳ ದರ ಏರಿಕೆ ತಡೆಯುವ ಉದ್ದೇಶದಿಂದ ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಪ್ರತಿ ಲೀಟರಿಗೆ ಕ್ರಮವಾಗಿ ₹8 ಮತ್ತು ₹6 ಕಡಿತ ಮಾಡಿದೆ.

'ಎಕ್ಸೈಸ್ ಸುಂಕ ಕಡಿತದಿಂದಾಗಿ ಪೆಟ್ರೋಲ್ ಮಾರಾಟ ದರವು ಲೀಟರಿಗೆ ₹9.5 ಮತ್ತು ಡೀಸೆಲ್ ದರವು ಲೀಟರಿಗೆ ₹7ರಷ್ಟು ಕಡಿಮೆ ಆಗಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶನಿವಾರ ತಿಳಿಸಿದ್ದಾರೆ.

'ಈ ನಿರ್ಧಾರದಿಂದ ಕೇಂದ್ರ ಸರ್ಕಾರಕ್ಕೆ ವಾರ್ಷಿಕವಾಗಿ ₹1 ಲಕ್ಷ ಕೋಟಿ ವರಮಾನ ನಷ್ಟ ಆಗುವ ಅಂದಾಜು ಮಾಡಲಾಗಿದೆ' ಎಂದು ಅವರು ಹೇಳಿದ್ದಾರೆ. ಶನಿವಾರದ ಕಡಿತದಿಂದಾಗಿ ಎಕ್ಸೈಸ್ ಸುಂಕ ಲೀಟರ್ ಪೆಟ್ರೋಲ್‌ಗೆ ₹ 19.9 ಮತ್ತು ಡೀಸೆಲ್‌ಗೆ ₹ 15.8ಕ್ಕೆ ಇಳಿಕೆ ಆಗಿದೆ.

'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆಗೆ ಅನುಗುಣವಾಗಿ ದೇಶದಲ್ಲಿ ಇಂಧನ ದರ ಹೆಚ್ಚಾಗುವುದನ್ನು ತಪ್ಪಿಸಲು ಎಕ್ಸೈಸ್ ಸುಂಕದಲ್ಲಿ ಕಡಿತ ಮಾಡಲಾಗಿದೆ' ಎಂದು ಹೇಳಿದ್ದಾರೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಮಾರ್ಚ್ 22ರಿಂದ ಏಪ್ರಿಲ್ 6ರವರೆಗಿನ ಅವಧಿಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ದರವನ್ನು ಪ್ರತಿ ಲೀಟರಿಗೆ ₹10 ಏರಿಕೆ ಮಾಡಿದೆ.

'ಎಲ್ಲಾ ರಾಜ್ಯ ಸರ್ಕಾರಗಳೂ ಅದರಲ್ಲಿಯೂ ವಿಶೇಷವಾಗಿ 2021ರ ನವೆಂಬರ್‌ನಲ್ಲಿ ತೆರಿಗೆ ಕಡಿತವನ್ನು ಮಾಡದ ರಾಜ್ಯಗಳು, ಕೇಂದ್ರ ಸರ್ಕಾರದ ರೀತಿಯಲ್ಲಿಯೇ ತೆರಿಗೆ ಕಡಿತ ಮಾಡಿ, ಸಾಮಾನ್ಯ ಜನರಿಗೆ ಬೆಲೆ ಏರಿಕೆಯಿಂದ ತುಸು ನೆಮ್ಮದಿ ನೀಡುವಂತೆ ನಾನು ಒತ್ತಾಯಿಸಲು ಬಯಸುತ್ತೇನೆ' ಎಂದು ಹೇಳಿದ್ದಾರೆ.

ಕೇರಳ ರಾಜ್ಯವು ಪೆಟ್ರೋಲ್ ಮೇಲಿನ ರಾಜ್ಯ ತೆರಿಗೆಯನ್ನು ಲೀಟರಿಗೆ ₹ 2.41 ಮತ್ತು ಡೀಸೆಲ್ ಮೇಲಿನ ತೆರಿಗೆಯನ್ನು ಲೀಟರಿಗೆ ₹ 1.36 ಇಳಿಕೆ ಮಾಡಿದೆ.

> **ಸರ್ಕಾರಕ್ಕೆ ಜನರೇ ಆದ್ಯತೆ. ಇಂದಿನ ನಿರ್ಧಾರವು ಜನರಿಗೆ ತುಸು ನೆಮ್ಮದಿ ನೀಡಲಿದೆ**
>
> **ನರೇಂದ್ರ ಮೋದಿ,** ಪ್ರಧಾನಿ

ಉಜ್ವಲ ಸಿಲಿಂಡರ್‌ಗೆ ₹ 200 ಸಬ್ಸಿಡಿ

ಉಜ್ವಲ ಯೋಜನೆಯ ಫಲಾನುಭವಿಗಳಿಗೆ ಪ್ರತಿ ಸಿಲಿಂಡರ್‌ಗೆ ₹ 200 ಸಬ್ಸಿಡಿಯನ್ನು ನೀಡಲಾಗುವುದು ಎಂದು ನಿರ್ಮಲಾ ತಿಳಿಸಿದ್ದಾರೆ. ಯೋಜನೆಯಡಿ ಒಂದು ವರ್ಷಕ್ಕೆ 12 ಸಿಲಿಂಡರ್ ನೀಡಲಾಗುತ್ತಿದೆ.

'9 ಕೋಟಿ ಫಲಾನುಭವಿಗಳು ಇದರ ಪ್ರಯೋಜನ ಪಡೆಯಲಿದ್ದಾರೆ. ಅಡುಗೆ ಅನಿಲ ದರವು ದಾಖಲೆಯ ಮಟ್ಟಕ್ಕೆ ಏರಿಕೆ ಆಗಿರುವುದರಿಂದ ಜನರ ಮೇಲೆ ಆಗುವ ಹೊರೆಯನ್ನು ತಗ್ಗಿಸಲು ಈ ನಿರ್ಧಾರಕ್ಕೆ ಬರಲಾಗಿದೆ' ಎಂದು ಹೇಳಿದ್ದಾರೆ.

'ಸಬ್ಸಿಡಿ ನೀಡುವುದರಿಂದ ಸರ್ಕಾರಕ್ಕೆ ವಾರ್ಷಿಕವಾಗಿ ₹6,100 ಕೋಟಿಗಳಷ್ಟು ವರಮಾನ ಕಡಿತ ಆಗುವ ಅಂದಾಜು ಮಾಡಲಾಗಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಬಿಜೆಪಿ 3ನೇ ಅಭ್ಯರ್ಥಿ ಉದ್ಯಮಿ ಪ್ರಕಾಶ್ ಶೆಟ್ಟಿ?

• ಸಿದ್ದಯ್ಯ ಹಿರೇಮಠ

ನವದೆಹಲಿ: ರಾಜ್ಯಸಭೆ ಮತ್ತು ವಿಧಾನ ಪರಿಷತ್ ಚುನಾವಣೆ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸುವ ಸಂಬಂಧ ಶನಿವಾರ ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರನ್ನು ಭೇಟಿ ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಸಭೆ ಚುನಾವಣೆಗೆ ಪಕ್ಷದ 3ನೇ ಅಭ್ಯರ್ಥಿ ಕಣಕ್ಕಿಳಿಸುವ ಬಗ್ಗೆ ಚರ್ಚಿಸಿದರು.

ಹಾಲಿ ಸದಸ್ಯರಾಗಿರುವ ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ನಿವೃತ್ತ ಐಪಿಎಸ್ ಅಧಿಕಾರಿ ಕೆ.ಸಿ. ರಾಮಮೂರ್ತಿ ಅವರನ್ನು ಕಣಕ್ಕಿಳಿಸುವುದು ಬಹುತೇಕ ಖಚಿತವಾಗಿದೆ. ಮೂರನೇ ಅಭ್ಯರ್ಥಿ ಆಯ್ಕೆ ಕುರಿತು ಸುದೀರ್ಘ ಚರ್ಚೆ ನಡೆಸಲಾಗಿದೆ ಎಂದು ತಿಳಿದು ಬಂದಿದೆ.

ಜೆಡಿಎಸ್ ವರಿಷ್ಠರಿಗೂ ಆಪ್ತರಾಗಿರುವ ಹೋಟೆಲ್ ಉದ್ಯಮಿ ಪ್ರಕಾಶ್ ಶೆಟ್ಟಿ ಅವರನ್ನು ಬಿಜೆಪಿಯಿಂದ ಕಣಕ್ಕಿಳಿಸಿ ರಾಜ್ಯಸಭೆಗೆ ಕಳುಹಿಸುವ ಸಂಬಂಧ ಚಿಂತನೆ ನಡೆದಿದೆ. ಒಂದೆರಡು ದಿನಗಳಲ್ಲಿ ಈ ಕುರಿತು ಅಂತಿಮ ನಿರ್ಧಾರ ಹೊರಬೀಳುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು 'ಪ್ರಜಾವಾಣಿ'ಗೆ ಖಚಿತಪಡಿಸಿವೆ.

7ನೇ ಪುಟ ನೋಡಿ

ವರಿಷ್ಠರದ್ದೇ ಅಂತಿಮ ನಿರ್ಧಾರ: ಸಿದ್ದರಾಮಯ್ಯ

ನವದೆಹಲಿ: 'ವಿಧಾನ ಪರಿಷತ್ ಚುನಾವಣೆಯ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಸಂಬಂಧ ವರಿಷ್ಠರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದೇನೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಹ ಸಭೆಯಲ್ಲಿ ಭಾಗಿಯಾಗಿದ್ದರು. ಈ ಸಂಬಂಧ ವರಿಷ್ಠರೇ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಅವರೊಂದಿಗೆ ಶನಿವಾರ ಚರ್ಚೆ ನಡೆಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

7ನೇ ಪುಟ ನೋಡಿ

ಚೆಸ್: ಪ್ರಜ್ಞಾನಂದಗೆ ಮಣಿದ ಕಾರ್ಲಸನ್



ನವದೆಹಲಿ(ಪಿಟಿಐ): ಭಾರತದ 16 ವರ್ಷ ವಯಸ್ಸಿನ ಗ್ರ್ಯಾಂಡ್ ಮಾಸ್ಟರ್ ಪ್ರಜ್ಞಾನಂದ ರಮೇಶಬಾಬು, ವಿಶ್ವಚಾಂಪಿಯನ್ ಮ್ಯಾಗ್ನಸ್ ಕಾರ್ಲಸನ್ ಅವರನ್ನು ಶುಕ್ರವಾರ ತಡರಾತ್ರಿ ನಡೆದ ಚೆಸೆಬಲ್ ಮಾಸ್ಟರ್ಸ್ ಆನ್‌ಲೈನ್ ರ‍್ಯಾಪಿಡ್ ಚೆಸ್ ಟೂರ್ನಿಯಲ್ಲಿ ಮಣಿಸಿದರು. ಮೂರು ತಿಂಗಳುಗಳ ಹಿಂದೆಯೂ ಪ್ರಜ್ಞಾನಂದ ಅವರು ನಾರ್ವೆಯ ಕಾರ್ಲಸನ್ ಅವರನ್ನು ಮೊದಲ ಸಲ ಮಣಿಸಿದ್ದರು.

ಈ ಪಂದ್ಯದಲ್ಲಿ ತುರುಸಿನ ಹೋರಾಟ ಕಂಡುಬಂದಿತು. ಕೊನೆಯ ಹಂತದವರೆಗೂ ಇಬ್ಬರೂ ಸಮಬಲ ಸಾಧಿಸಿದ್ದರು. ಆದರೆ 40ನೇ ನಡೆಯಲ್ಲಿ ತಪ್ಪು ಮಾಡಿದ ಕಾರ್ಲಸನ್ ಸೋತರು. ಟೂರ್ನಿಯಲ್ಲಿ ಪ್ರಜ್ಞಾನಂದ ಒಟ್ಟು 12 ಅಂಕ ಕಲೆಹಾಕಿದ್ದಾರೆ.

ಕನ್ನಡ ಪಠ್ಯಕ್ಕೆ ನಾರಾಯಣ ಗುರು ಸೇರ್ಪಡೆ

ಪಠ್ಯಕ್ಕೆ ಸೇರಿದ ಸೂಲಿಬೆಲೆ ಪಾಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹತ್ತನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿದ್ದ ವಿಚಾರವಾದಿ ಲೇಖಕ ಜಿ.ರಾಮಕೃಷ್ಣ ಅವರ 'ಭಗತ್ ಸಿಂಗ್' ಪಠ್ಯ ಕೈಬಿಟ್ಟು ವಿವಾದ ಮೈಮೇಲೆ ಎಳೆದುಕೊಂಡಿದ್ದ ರಾಜ್ಯ ಸರ್ಕಾರ, ಅದನ್ನು ಮರು ಸೇರ್ಪಡೆ ಮಾಡಿದೆ. ಆದರೆ, 'ಯುವ ಬ್ರಿಗೇಡ್'ನ ಚಕ್ರವರ್ತಿ ಸೂಲಿಬೆಲೆ ಅವರು ಬರೆದಿರುವ 'ತಾಯಿ ಭಾರತಿಯ ಅಮರಪುತ್ರರು' ಪಾಠವನ್ನೂ ಸೇರಿಸಲಾಗಿದೆ.

ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯಪುಸ್ತಕಗಳ ಪರಿಷ್ಕರಣಾ ಸಮಿತಿಯ ಶಿಫಾರಸ್ಸಿನಂತೆ ಈ ಪಠ್ಯ ಸೇರ್ಪಡೆಯಾಗಿದೆ. ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಮ ಹೆಡಗೇವಾರ್ ಅವರ ಭಾಷಣವನ್ನು ಪಠ್ಯದಲ್ಲಿ ಸೇರಿಸಿದ್ದಕ್ಕೆ ತೀವ್ರ ಆಕ್ಷೇಪಗಳು ವ್ಯಕ್ತವಾಗಿದ್ದವು. ಈ ಬೆಳವಣಿಗೆಯ ಬಳಿಕ ಶಿಕ್ಷಣ ಇಲಾಖೆಯು ಹೊಸದಾಗಿ ಮೂರು ಅಧ್ಯಾಯಗಳನ್ನು ಸೇರ್ಪಡೆ ಮಾಡಿದೆ.

ಮರು ಪರಿಷ್ಕರಣೆ ಸಂದರ್ಭದಲ್ಲಿ ಜಿ.ರಾಮಕೃಷ್ಣ ಅವರು ಬರೆದಿರುವ ಭಗತ್‌ಸಿಂಗ್ ಕುರಿತಾದ ಪಾಠವನ್ನು ಮರು ಪರಿಷ್ಕರಣೆ ಸಮಿತಿಯು ಕೈಬಿಟ್ಟಿತ್ತು. ಈ ಕ್ರಮಕ್ಕೆ ಶೈಕ್ಷಣಿಕ ವಲಯ ಮತ್ತು ಸಾರ್ವಜನಿಕರಿಂದ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಈ ಎರಡೂ ಅಧ್ಯಾಯಗಳ ಜತೆಗೆ, 'ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರು (ಸಂಗ್ರಹ)' ಅಧ್ಯಾಯವನ್ನು ಸೇರ್ಪಡೆ ಮಾಡಲಾಗಿದೆ.

ಸಾಮಾಜಿಕ ಚಳವಳಿಯನ್ನೇ ಹುಟ್ಟುಹಾಕಿ, ಹಿಂದುಳಿದ ಸಮುದಾಯದವರಲ್ಲಿ ಸ್ವಾಭಿಮಾನದ ಕಿಡಿ ಹೊತ್ತಿಸಿದ್ದ ಬ್ರಹ್ಮಶ್ರೀ ನಾರಾಯಣ ಗುರು ಅವರ ಕುರಿತ ಅಧ್ಯಾಯ ಸಮಾಜ ವಿಜ್ಞಾನ ಪಠ್ಯದಲ್ಲಿತ್ತು. ಅದನ್ನೂ ಕೈಬಿಡಲಾಗಿತ್ತು. ಮತ್ತೆ ಪರಿಷ್ಕರಿಸಿರುವ ಸರ್ಕಾರ, ಈ ವಿವರವನ್ನು ಕನ್ನಡ ಪುಸ್ತಕದಲ್ಲಿ ಸೇರಿಸಿದೆ. ಆದರೆ, ಇವರ ಬಗ್ಗೆ ಪ್ರತ್ಯೇಕ ಪಾಠ ಇಲ್ಲ.

'ಭಗತ್‌ಸಿಂಗ್', 'ತಾಯಿ ಭಾರತಿಯ ಅಮರಪುತ್ರರು' ಮತ್ತು 'ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರು' ಅಧ್ಯಾಯಗಳನ್ನು ಪಠ್ಯಪೂರಕ ಅಧ್ಯಯನ ವಿಭಾಗದಲ್ಲಿ ಸೇರಿಸಲಾಗಿದೆ.

7ನೇ ಪುಟ ನೋಡಿ

'ಕ್ರಾಂತಿಕಾರಿಗಳ ಹೋರಾಟ ಸೇರಿಸಲಾಗಿದೆ'

'ಹತ್ತನೇ ತರಗತಿಯ ಕನ್ನಡ ಪಠ್ಯದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು, ಭಗತ್ ಸಿಂಗ್, ಪೆರಿಯಾರ್ ಸೇರಿದಂತೆ ಯಾರನ್ನೂ ಕೈಬಿಟ್ಟಿಲ್ಲ. ಎಲ್ಲರ ವಿಚಾರಗಳು ಇರಲಿವೆ' ಎಂದು ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಸ್ಪಷ್ಟಪಡಿಸಿದ್ದಾರೆ.

'ತಾಯಿ ಭಾರತಿಯ ಅಮರಪುತ್ರರು' ಅಧ್ಯಾಯವು ದೇಶಪ್ರೇಮಿ ಕ್ರಾಂತಿಕಾರಿಗಳ ಕುರಿತಾಗಿದೆ. ಸುಖದೇವ್, ರಾಜಗುರು, ಭಗತ್‌ಸಿಂಗ್ ಅವರ ವಿಷಯಗಳಿವೆ. ಕ್ರಾಂತಿಕಾರಿಗಳ ಬಗ್ಗೆ ವಿಸ್ತೃತವಾಗಿ ವಿವರಿಸುವ ಅಧ್ಯಾಯಗಳನ್ನು ಸೇರಿಸಲು ಸಮಿತಿ ನಿರ್ಧರಿಸಿತ್ತು. ಅದರಂತೆ ಪರಿಷ್ಕರಿಸಲಾಗಿದೆ' ಎಂದು ಸಮರ್ಥಿಸಿಕೊಂಡಿದ್ದಾರೆ. 'ಪಠ್ಯಪುಸ್ತಕ ಕುರಿತು ಹಲವಾರು ಪಿಡಿಎಫ್‌ಗಳು ಹರಿದಾಡುತ್ತಿವೆ. ಇವು ಅಧಿಕೃತವಲ್ಲ. ಮುದ್ರಿತ ಪಠ್ಯಪುಸ್ತಕಗಳು ಮಾತ್ರ ಅಧಿಕೃತ. ಬ್ರಹ್ಮಶ್ರೀ ನಾರಾಯಣ ಗುರು ಕುರಿತಾದ ಅಧ್ಯಾಯವನ್ನು ಪಠ್ಯದಿಂದ ಕೈಬಿಟ್ಟಿಲ್ಲ. ನಾರಾಯಣ ಗುರು ಅವರಿಗೆ ಸಂಬಂಧಿಸಿದ ಪಠ್ಯವನ್ನು ಕನ್ನಡ ವಿಷಯದಲ್ಲಿ ತೆಗೆದುಕೊಳ್ಳಲಾಗಿದೆ' ಎಂದು ವಿವರಿಸಿದ್ದಾರೆ.

ವಿಶ್ವಕಪ್ ಆರ್ಚರಿ: ಭಾರತಕ್ಕೆ ಚಿನ್ನ

ಗ್ವಾಂಗ್ಜು, ದಕ್ಷಿಣ ಕೊರಿಯಾ (ಪಿಟಿಐ): ಭಾರತ ಪುರುಷರ ಕಂಪೌಂಡ್ ಆರ್ಚರಿ ತಂಡವು ವಿಶ್ವಕಪ್ (ಸ್ಟೇಜ್ 2) ಆರ್ಚರಿಯಲ್ಲಿ ಚಿನ್ನದ ಪದಕ ಜಯಿಸಿತು. ವೈಯಕ್ತಿಕ ವಿಭಾಗದಲ್ಲಿ ಮೋಹನ್ ಭಾರದ್ವಾಜ್ ಬೆಳ್ಳಿ ಪದಕ ಗೆದ್ದರು. ಶನಿವಾರ ಮುಕ್ತಾಯವಾದ ಚಾಂಪಿಯನ್‌ಷಿಪ್‌ನಲ್ಲಿ ಭಾರತವು ಒಟ್ಟು ಐದು ಪದಕಗಳನ್ನು ಗೆದ್ದುಕೊಂಡಿದೆ.

14


ಒಳ ಪುಟ



ಬಾಂಗ್ಲಾದೇಶ: ಭಾರಿ ಮಳೆ 20 ಲಕ್ಷ ಜನರು ಅತಂತ್ರ 12

ಚಿನಕುರಳಿ

ಪ್ರಕಾಶ್ ಶೆಟ್ಟಿ



ಈರುಳ್ಳಿ: ಕೊಯ್ಲು ಮಾಡಿದ ಕೂಲಿಯೂ ಸಿಗದ ಸ್ಥಿತಿ

ದರ ಕುಸಿತ: ಬೆಳೆಗಾರರು ಕಂಗಾಲು

• ಸುವರ್ಣಾ ಬಸವರಾಜ್

ಪ್ರಜಾವಾಣಿ ವಿಶೇಷ

ಹಿರಿಯೂರು(ಚಿತ್ರದುರ್ಗ): ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಈರುಳ್ಳಿ ಬೆಲೆ ಭಾರಿ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ರೈತರನ್ನು ಕಂಗಾಲಾಗುವಂತೆ ಮಾಡಿದೆ. ಒಂದು ಎಕರೆ ಜಮೀನಿನಲ್ಲಿ ಸುಮಾರು ₹ 60 ಸಾವಿರದಷ್ಟು ಖರ್ಚು ಮಾಡಿ ಬೆಳೆದ ಈರುಳ್ಳಿಗೆ ಕೆ.ಜಿ.ಗೆ ₹ 2ರಷ್ಟು ಬೆಲೆಯೂ ದೊರೆಯದ ಸ್ಥಿತಿ ಎದುರಾಗಿರುವುದು ರೈತರನ್ನು ಚಿಂತೆಗೀಡು ಮಾಡಿದೆ.

'ಬೇಸಿಗೆಯಲ್ಲಿ ಕೊಳವೆಬಾವಿ ನೀರು ಬಳಸಿ ಈರುಳ್ಳಿ ನಾಟಿ ಮಾಡಿದ್ದೆ. ಮುಂಗಾರು ಮಳೆ ಆರಂಭಕ್ಕೂ ಮೊದಲೇ ಬೆಳೆ ಕೊಯ್ಲಿಗೆ ಬರುವ ಕಾರಣ ಉತ್ತಮ ದರ ಸಿಗುತ್ತದೆ ಎಂದು ಕನಸು ಕಂಡಿದ್ದೆ. ಮಳೆಯ ಕಾರಣಕ್ಕೆ 45 ಚೀಲ ಈರುಳ್ಳಿ ಕೊಳೆತು ಹೋಗಿದೆ. ಉಳಿದ 55 ಚೀಲ ಈರುಳ್ಳಿಯನ್ನು ಹೊಲದಲ್ಲಿಟ್ಟು ಕಾಯುತ್ತಿದ್ದೇನೆ. 60ರಿಂದ 65 ಕೆ.ಜಿ ಈರುಳ್ಳಿ ತುಂಬಿರುವ ಚೀಲವೊಂದಕ್ಕೆ ವರ್ತಕರು ₹ 100ರಿಂದ ₹ 150 ಕೇಳುತ್ತಿದ್ದಾರೆ' ಎಂದು ಹಿರಿಯೂರು ತಾಲ್ಲೂಕಿನ ದಿಂಡಾವರ ಗ್ರಾಮದ ರೈತ ತಿಮ್ಮಯ್ಯ ಅಳಲು ತೋಡಿಕೊಂಡರು.

'₹ 2 ಸಾವಿರಕ್ಕೆ ಒಂದು ಕೆ.ಜಿ.ಯಂತೆ ಈರುಳ್ಳಿ ಬೀಜ ಖರೀದಿಸಿ ತಂದಿದ್ದೆ. ಬಿತ್ತನೆ ಬೀಜ, ಗೊಬ್ಬರ, ಕಳೆ, ಔಷಧ ಸಿಂಪಡಣೆ ಎಲ್ಲಾ ಸೇರಿ ಎಕರೆಗೆ ₹ 60 ಸಾವಿರ ಖರ್ಚಾಗಿತ್ತು. ಬೆಳೆ ಉತ್ತಮವಾಗಿ ಬಂದಿತ್ತು. ಈಗ ಕೆ.ಜಿಗೆ ₹ 1, ₹ 2ರಂತೆ ಕೇಳುತ್ತಿದ್ದಾರೆ' ಎಂದು ಅವರು ಬೇಸರದಿಂದ ಹೇಳಿದರು.

'ಈರುಳ್ಳಿ ತುಂಬುವ ಚೀಲವೊಂದಕ್ಕೆ ₹ 15 ಇದೆ. ಒಂದು ಚೀಲ ಈರುಳ್ಳಿ ಕೊಯ್ಯಲು ₹ 35, ಈರುಳ್ಳಿಯನ್ನು ಆರಿಸಲು (ಗ್ರೇಡಿಂಗ್) ಚೀಲವೊಂದಕ್ಕೆ ₹ 35 ಖರ್ಚಾಗುತ್ತದೆ. ಅದನ್ನು ಚೀಲಕ್ಕೆ ತುಂಬಲು, ಗ್ರೇಡಿಂಗ್ ಮಾಡಲು ಬರುವ ಗಂಡಾಳಿಗೆ ದಿನಕ್ಕೆ ₹ 500, ಹೆಣ್ಣಾಳಿಗೆ ₹ 250 ಕೂಲಿ ಕೊಡಬೇಕು. ₹ 100ರಿಂದ ₹ 150ಕ್ಕೆ ಒಂದು ಚೀಲ ಈರುಳ್ಳಿ ಮಾರಿದರೆ ಕೊಯ್ಲಿನ ನಂತರದ ಖರ್ಚೂ ಬರುವುದಿಲ್ಲ' ಎಂದು ದಿಂಡಾವರ ಗ್ರಾಮದ ಲೋಕೇಶ್, ಕರೇಗೌಡ, ಕರಿಬಾಲಪ್ಪ ಸಂಕಟ ಹೇಳಿಕೊಂಡರು.

'ಮಳೆಯ ಅಭಾವ, ಕೊಳವೆಬಾವಿಗಳಲ್ಲಿ ಅಲ್ಪಸ್ವಲ್ಪ ಸಿಗುವ ನೀರು, ದುಬಾರಿ ಬಿತ್ತನೆ ಬೀಜ, ಗೊಬ್ಬರ, ಕೂಲಿ, ರೋಗ... ಇಂತಹ ಎಲ್ಲ ಸಮಸ್ಯೆಗಳನ್ನು ಮೆಟ್ಟಿ ನಿಂತು ಬೆಳೆ ತೆಗೆದರೆ ಬೆಲೆ ಪಾತಾಳಕ್ಕೆ ಕುಸಿದಿದೆ. ಒಂದು ಕೆ.ಜಿ ಈರುಳ್ಳಿಗೆ ಕನಿಷ್ಠ ₹ 15 ಬೆಲೆ ಸಿಕ್ಕರೂ ಬಂಡವಾಳ ಮರಳಿ ಬರುತ್ತದೆ. ಒಂದೂವರೆ, ಎರಡು ರೂಪಾಯಿಗೆ ಕೇಳಿದರೆ ಏನು ಮಾಡುವುದು' ಎಂದು ಒಂದು ಎಕರೆಯಲ್ಲಿ ಈರುಳ್ಳಿ ಬೆಳೆದ ಗ್ರಾಮದ ರಂಗರಾಜು, ಕೃಷ್ಣಮೂರ್ತಿ ಕಣ್ಣೀರು ಹಾಕಿದರು.

> **ಈರುಳ್ಳಿಗೆ ಬೆಲೆ ಇಲ್ಲದೇ ರೈತರು ಕಂಗಾಲಾಗಿದ್ದಾರೆ. ಸರ್ಕಾರ ಬೆಂಬಲ ಬೆಲೆ ಘೋಷಿಸಬೇಕು**
>
> **ತಿಮ್ಮಯ್ಯ**
> ಈರುಳ್ಳಿ ಬೆಳೆಗಾರ, ದಿಂಡಾವರ ಗ್ರಾಮ

> **ಮೇ ಮೊದಲ ವಾರದಲ್ಲಿ ಜಿಲ್ಲೆಯಲ್ಲಿ 400 ಹೆಕ್ಟೇರ್‌ನಲ್ಲಿ ಈರುಳ್ಳಿ ಬಿತ್ತನೆಯಾಗಿದೆ. ನೀರಾವರಿಯಲ್ಲಿ ಬೆಳೆದ ಬೆಳೆಗೆ ಹೆಚ್ಚಿನ ನಷ್ಟವಾಗಿಲ್ಲ**
>
> **ಸವಿತಾ,** ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ

ಮಾಲ್ ಕಟ್ಟಡದಿಂದ ಬಿದ್ದು ಯುವತಿ ಸಾವು

ಬೆಂಗಳೂರು: ಬ್ರಿಗೇಡ್ ರಸ್ತೆಯ '5 ಅವೆನ್ಯೂ' ಶಾಪಿಂಗ್ ಮಾಲ್ ಕಟ್ಟಡದ ಎರಡನೇ ಮಹಡಿಯಿಂದ ಸ್ನೇಹಿತರಿಬ್ಬರು ಆಯತಪ್ಪಿ ಬಿದ್ದಿದ್ದು, ಲಿಯಾ (20) ಎಂಬುವರು ಮೃತಪಟ್ಟಿದ್ದಾರೆ. ಸ್ನೇಹಿತ ಕ್ರಿಸ್ ಪೀಟರ್ ಕಾಲಿಗೆ ತೀವ್ರ ಪೆಟ್ಟಾಗಿದೆ.

'ಆಂಧ್ರಪ್ರದೇಶದ ಲಿಯಾ, ನಗರದ ಕಾಲೇಜೊಂದರಲ್ಲಿ ಬಿ.ಕಾಂ ವ್ಯಾಸಂಗ ಮಾಡುತ್ತಿದ್ದರು. ಕಾಕ್ಸ್‌ಟೌನ್‌ನಲ್ಲಿ ನೆಲೆಸಿದ್ದರು. ಎಚ್‌ಎಎಲ್ ನಿವಾಸಿ, ಸ್ನೇಹಿತ ಕ್ರಿಸ್ ಪೀಟರ್ ಜೊತೆ ಶನಿವಾರ ಶಾಪಿಂಗ್‌ಗೆ ಹೋಗಿದ್ದಾಗ ಅವಘಡ ಸಂಭವಿಸಿದೆ' ಎಂದು ಕಬ್ಬನ್ ಪಾರ್ಕ್ ಠಾಣೆಯ ಪೊಲೀಸರು ತಿಳಿಸಿದರು.

'ಎರಡನೇ ಮಹಡಿಯ ತೆರೆದ ಕಿಟಕಿ ಬಳಿ ಲಿಯಾ ಹಾಗೂ ಪೀಟರ್ ನಿಂತಿದ್ದರು. ಏಕಾಏಕಿ ಲಿಯಾ ಆಯತಪ್ಪಿ ಬಿದ್ದಿದ್ದರು. ಅವರ ಕೈ ಹಿಡಿದು ರಕ್ಷಿಸಲು ಯತ್ನಿಸಿ ಪೀಟರ್ ಸಹ ನೆಲಮಹಡಿಗೆ ಬಿದ್ದಿದ್ದರು. ತೀವ್ರ ಗಾಯಗೊಂಡಿದ್ದ ಲಿಯಾ ಅಸುನೀಗಿದರು' ಎಂದೂ ಹೇಳಿದರು.

ಇನ್ನೊಂದು ಸುದ್ದಿ 4

ಪುರುಷರ ಆರೋಗ್ಯ ಪ್ರೋತ್ಸಾಹಕ್ಕೆ ಮಣಿಪಾಲ್ ಆಸ್ಪತ್ರೆಯಿಂದ ಬೈಕ್ ರ‍್ಯಾಲಿ

ಬೆಂಗಳೂರು: ಪುರುಷರ ಆರೋಗ್ಯ ಪ್ರೋತ್ಸಾಹಿಸಲು ಮಣಿಪಾಲ್ ಆಸ್ಪತ್ರೆ ಭಾನುವಾರ ಬೆಳಿಗ್ಗೆ 7 ಗಂಟೆಯಿಂದ ನಗರದ ವಿವಿಧೆಡೆ ಬೈಕ್ ರ‍್ಯಾಲಿ ಹಮ್ಮಿಕೊಂಡಿದೆ.

ಭಾರತ್ ಬಿಯರ್ಡ್ ಕ್ಲಬ್ ಸಹಯೋಗದೊಂದಿಗೆ ನಡೆಯುವ ಈ ರ‍್ಯಾಲಿಗೆ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಯಲ್ಲಿ ಚಾಲನೆ ದೊರೆಯಲಿದೆ. ಆಸ್ಪತ್ರೆಯ ವಿವಿಧ ವಿಭಾಗಗಳ ತಜ್ಞ ವೈದ್ಯರು ರ‍್ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ಟ್ರಿನಿಟಿ ವೃತ್ತ, ಕಬ್ಬನ್ ಉದ್ಯಾನ, ಸ್ಯಾಂಕಿ ರಸ್ತೆ ಮತ್ತು ದೊಡ್ಡಬಳ್ಳಾಪುರದ ಮೂಲಕ ಸಾಗಿ, ಎಂಬೆಸಿ ಇಂಟರ್‌ನ್ಯಾಷನಲ್ ರೈಡಿಂಗ್ ಸ್ಕೂಲ್‌ನಲ್ಲಿ ಕೊನೆಗೊಳ್ಳಲಿದೆ.

'ಈ ರ‍್ಯಾಲಿಯಲ್ಲಿ ಒಟ್ಟಾರೆ 35 ಕಿ.ಮೀ. ದೂರ ಕ್ರಮಿಸಲಾಗುತ್ತದೆ. ಪ್ರೊಸ್ಟೇಟ್ ಕ್ಯಾನ್ಸರ್, ಮಾನಸಿಕ ಆರೋಗ್ಯ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ತಿಳಿಸಿ, ಜಾಗೃತಿ ಮೂಡಿಸಲಾಗುತ್ತದೆ' ಎಂದು ಆಸ್ಪತ್ರೆಯ ಮುಖ್ಯ ಕಾರ್ಯಾಚರಣೆ ಅಧಿಕಾರಿ ಕಾರ್ತಿಕ್ ರಾಜಗೋಪಾಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯದ ಸಂಸದರಿಗೆ ಕನ್ನಡ ಗೆಳೆಯರ ಬಳಗ ಆಗ್ರಹ

'ಸಂಸತ್ ಅಧಿವೇಶನದಲ್ಲಿ ಕನ್ನಡದಲ್ಲಿ ಮಾತನಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆನಡಾ ಸಂಸತ್ತಿನಲ್ಲಿ ಕನ್ನಡದಲ್ಲಿ ಮಾತನಾಡಿದ ಚಂದ್ರ ಆರ್ಯ ಅವರನ್ನು ನಮ್ಮ ಸಂಸದರು ಅನುಸರಿಸಿ, ಸಂಸತ್ ಅಧಿವೇಶನದಲ್ಲಿ ಆಗಾಗ ಕನ್ನಡದಲ್ಲಿ ಭಾಷಣ ಮಾಡಬೇಕು. ಈ ಮೂಲಕ ಕನ್ನಡ ನಾಡು-ನುಡಿಯ ಹಿತ ಕಾಪಾಡುವ ಕೆಲಸ ಮಾಡಬೇಕು' ಎಂದು ಕನ್ನಡ ಗೆಳೆಯರ ಬಳಗ ಆಗ್ರಹಿಸಿದೆ.

'ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನ ನೀಡಿ 14 ವರ್ಷಗಳಾಗಿವೆ. ಇಂದಿಗೂ ಕನ್ನಡಕ್ಕೆ ಸ್ವಾಯತ್ತತೆ ಮತ್ತು ಸವಲತ್ತುಗಳು ದೊರೆತಿಲ್ಲ. ಶಾಸ್ತ್ರೀಯ ಉನ್ನತ ಅಧ್ಯಯನ ಕೇಂದ್ರಕ್ಕೆ ಸ್ವಂತ ಕಟ್ಟಡವೂ ಇಲ್ಲ. ರಾಜ್ಯವನ್ನು ಪ್ರತಿನಿಧಿಸುವ ಎಲ್ಲ ಸಂಸದರೂ ಒಗ್ಗಟ್ಟಿನಿಂದ ಮಳೆಗಾಲದ ಅಧಿವೇಶನದಲ್ಲಿ ಧ್ವನಿಯೆತ್ತಿ, ಶಾಸ್ತ್ರೀಯ ಕನ್ನಡ ಭಾಷೆಯ ವನವಾಸವನ್ನು ಕೊನೆಗೊಳಿಸಬೇಕು. ನಮ್ಮ ಸಂಸದರು ಚಂದ್ರ ಆರ್ಯ ಅವರನ್ನು ಅಭಿನಂದಿಸಿದರೆ ಸಾಲದು, ಅವರನ್ನು ಅನುಸರಿಸಬೇಕು' ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಒತ್ತಾಯಿಸಿದ್ದಾರೆ.

'ರಾಜಸ್ಥಾನದ ಜೈಪುರದಲ್ಲಿ ನಡೆದ ಬಿಜೆಪಿ ಪದಾಧಿಕಾರಿಗಳ ರಾಷ್ಟ್ರ ಮಟ್ಟದ ಸಭೆಯಲ್ಲಿ 'ಭಾಷಾ ವೈವಿಧ್ಯವು ದೇಶದ ಹೆಮ್ಮೆ ಹಾಗೂ ಸ್ಫೂರ್ತಿಯಾಗಿದೆ. ಪ್ರಾದೇಶಿಕ ಭಾಷೆಗಳಲ್ಲಿ ದೇಶದ ಸಿರಿವಂತ ಸಂಸ್ಕೃತಿಯ ಪ್ರತಿಬಿಂಬ ಕಾಣುತ್ತೇವೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿರುವುದು ಶ್ಲಾಘನೀಯ. ಇದಕ್ಕೆ ಪೂರಕವಾಗಿ ಸಂವಿಧಾನದ 8ನೇ ಪರಿಚ್ಛೇದದ ಎಲ್ಲ ಭಾಷೆಗಳನ್ನೂ ರಾಷ್ಟ್ರಭಾಷೆಗಳು ಎಂದು ಘೋಷಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ದೇಶದ ಎಲ್ಲ ಭಾಷೆಗಳಿಗೆ ಸಮಾನ ಅವಕಾಶ ಮತ್ತು ಸವಲತ್ತುಗಳನ್ನು ನೀಡಬೇಕು. ಕೇಂದ್ರ ಸರ್ಕಾರ ನಡೆಸುವ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳು ಎಲ್ಲ ಭಾಷೆಗಳಲ್ಲಿಯೂ ನಡೆಯುವಂತಾಗಬೇಕು. ಶಾಲ ಶಿಕ್ಷಣವನ್ನು ರಾಷ್ಟ್ರೀಕರಣಗೊಳಿಸಿ, ಮಾತೃಭಾಷೆ ಮಾಧ್ಯಮದ ಏಕರೂಪ ಶಿಕ್ಷಣವನ್ನು ರೂಪಿಸಿ, ಜಾರಿಗೊಳಿಸಬೇಕು' ಎಂದು ಅವರು ಮನವಿ ಮಾಡಿಕೊಂಡಿದ್ದಾರೆ.

ಚುನಾವಣಾ ಆಯೋಗದ ಸೂಚನೆ

‘ವಾರ್ಡ್ ವಿಂಗಡಣೆ: 8 ವಾರದಲ್ಲಿ ಪೂರ್ಣಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹಾಗೂ ವಿಜಯಪುರ ಮಹಾನಗರ ಪಾಲಿಕೆಗಳ ವಾರ್ಡ್‌ಗಳ ಮರುವಿಂಗಡಣೆ ಹಾಗೂ ಮೀಸಲಾತಿ ನಿಗದಿ ಕಾರ್ಯವನ್ನು ಎಂಟು ವಾರಗಳ ಒಳಗೆ ಪೂರ್ಣಗೊಳಿಸಿ, ಸಲ್ಲಿಸಬೇಕು ಎಂದು ರಾಜ್ಯ ಚುನಾವಣಾ ಆಯುಕ್ತ ಬಿ.ಬಸವರಾಜು ಅವರು ನಗರಾಭಿವೃದ್ಧಿ ಇಲಾಖೆಗೆ ಸೂಚಿಸಿದ್ದಾರೆ.

ಆಯುಕ್ತರ ಸೂಚನೆ ಮೇರೆಗೆ ಆಯೋಗದ ಕಾರ್ಯದರ್ಶಿ ಎಸ್. ಹೊನ್ನಾಂಬ ಅವರು ಈ ಕುರಿತು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಶನಿವಾರ ಪತ್ರ ಬರೆದಿದ್ದಾರೆ.

‘ಬಿಬಿಎಂಪಿ ಚುನಾವಣೆ ಸಂಬಂಧ ದಾಖಲಾಗಿದ್ದ ಪ್ರಕರಣ ಸಂಬಂಧ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠವು ಮೇ 20ರಂದು ಹೊರಡಿಸಿರುವ ಆದೇಶದ ಪ್ರಕಾರ 2020ರ ಬಿಬಿಎಂಪಿ ಕಾಯ್ದೆಗೆ ಅನುಗುಣವಾಗಿಯೇ ವಾರ್ಡ್‌ಗಳ ಪುನರ್ವಿಂಗಡಣೆ ಮಾಡಬೇಕು. ಮೀಸಲಾತಿಯ ಅಧಿಸೂಚನೆಗಳನ್ನು ಎಂಟು ವಾರಗಳ ಒಳಗೆ ಪೂರ್ಣಗೊಳಿಸಿ ಅಧಿಸೂಚನೆ ಹೊರಡಿಸಬೇಕು. ನಂತರ ಚುನಾವಣೆ ನಡೆಸಲು ಸಿದ್ಧತೆಗಳನ್ನು ಪ್ರಾರಂಭಿಸಬೇಕು’ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

‘ವಿಜಯಪುರ ಮಹಾನಗರ ಪಾಲಿಕೆಯ ಚುನಾವಣೆಯನ್ನು ರಾಜ್ಯದ ಹೈಕೋರ್ಟ್ 2020ರ ಡಿ.10ರಂದು ನೀಡಿದ್ದ ಆದೇಶದಂತೆ ನಡೆಸಬೇಕಿದೆ. ಬಿಬಿಎಂಪಿ ಚುನಾವಣೆಗೆ ನಿಗದಿಪಡಿಸಿದಷ್ಟೇ ಕಾಲಮಿತಿಯು ವಿಜಯಪುರ ಪಾಲಿಕೆ ಚುನಾವಣೆಗೂ ಅನ್ವಯವಾಗುತ್ತದೆ. ಇದರ ಕ್ಷೇತ್ರ ಮರು ವಿಂಗಡಣೆಗಾಗಿ ಪ್ರತ್ಯೇಕ ಆಯೋಗವನ್ನು ರಚಿಸುವ ಅವಶ್ಯಕತೆ ಇಲ್ಲ. ಸರ್ಕಾರವೇ ಕೇತ್ರ ಮರುವಿಂಗಡಣೆ ಕಾರ್ಯವನ್ನು ಪೂರ್ಣಗೊಳಿಸಿ ಅಂತಿಮ ಅಧಿಸೂಚನೆಯ ಪ್ರತಿಯನ್ನು ಶೀಘ್ರವೇ ಒದಗಿಸಬೇಕು. ಮತದಾರರ ಪಟ್ಟಿ ತಯಾರಿಸಲು ಇದು ಸಹಕಾರಿಯಾಗಲಿದೆ’ ಎಂದೂ ಅವರು ತಿಳಿಸಿದ್ದಾರೆ.

ಬಿಬಿಎಂಪಿ: ಪ್ರಮುಖರ ಸಭೆ ನಡೆಸಿದ ಕುಮಾರಸ್ವಾಮಿ

ಚುನಾವಣೆಗೆ ಜೆಡಿಎಸ್ ತಯಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಚುನಾವಣೆ ನಡೆಸುವಂತೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿದ ಬೆನ್ನಲ್ಲೇ, ಜೆಡಿಎಸ್ ಪಕ್ಷವು ಚುನಾವಣೆ ತಯಾರಿ ಆರಂಭಿಸಿದೆ.

ಪಕ್ಷದ ಕಚೇರಿಯಲ್ಲಿ ಶನಿವಾರ ಸಭೆ ನಡೆಸಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರು ಸಂಘಟನೆ ಬಲಪಡಿಸುವ ಬಗ್ಗೆ ನಿರ್ದೇಶನ ನೀಡಿದರು.

‘ಸದ್ಯದಲ್ಲೇ ಬಿಬಿಎಂಪಿ ಚುನಾವಣೆ ಬರುತ್ತಿದೆ. ಈ ಹೊತ್ತಿನಲ್ಲಿ ಜೆಡಿಎಸ್ ಬಗ್ಗೆ ಇರುವ ಜನರಲ್ಲಿ ಇರುವ ವಿಶ್ವಾಸವನ್ನು ಹೆಚ್ಚಿಸುವ ಕೆಲಸ ಮಾಡಬೇಕಾಗಿದೆ. ಎರಡೂ ರಾಷ್ಟ್ರೀಯ ಪಕ್ಷಗಳಿಂದ ಜನ ಬೇಸತ್ತಿದ್ದಾರೆ. ಪ್ರತಿ ವಾರ್ಡ್ ನಲ್ಲೂ ಪಕ್ಷ ಸಂಘಟಿಸುವ ಕೆಲಸ ಆಗಬೇಕು. ಜನರನ್ನು ಪಕ್ಷದ ಕಡೆ ಸೆಳೆಯುವ ಕೆಲಸ ಮಾಡಬೇಕು’ ಎಂದು ಕುಮಾರಸ್ವಾಮಿ ತಾಕೀತು ಮಾಡಿದರು.

‘ಜೆಡಿಎಸ್ ಕಾರ್ಯಕರ್ತರು ಕೇವಲ ವಿಸಿಟಿಂಗ್ ಕಾರ್ಡ್ ಮತ್ತು ಹೆಸರು ಹಾಕಿಸಿಕೊಳ್ಳುವುದಕ್ಕಷ್ಟೇ ಸೀಮಿತವಾಗಬಾರದು. ಜನರಿಗಾಗಿ ಕೆಲಸ ಮಾಡಿದರೆ ತಾನಾಗಿಯೇ ಹುದ್ದೆ, ಅಧಿಕಾರ ಎಲ್ಲವೂ ಸಿಗುತ್ತದೆ’ ಎಂದರು.

ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಬೆಂಗಳೂರು ನಗರಕ್ಕೆ ನಾನು ಮಾತ್ರ ಸಾರಥಿ ಅಲ್ಲ. ಕಾರ್ಯಕರ್ತರ ಜೊತೆಗೆ ಸೇರಿ ಕೆಲಸ ಮಾಡುತ್ತೇನೆ. ನಗರದಲ್ಲಿ ಒಳ್ಳೆಯ ಕಾರ್ಯಕರ್ತರು ಇದ್ದಾರೆ. ಅವರಿಗೆ ಅವಕಾಶ ಸಿಕ್ಕಿಲ್ಲ. ಬಿಬಿಎಂಪಿ ಚುನಾವಣೆಯಲ್ಲಿ ಕೆಲಸ ಮಾಡುವವರಿಗೆ ಪ್ರೋತ್ಸಾಹ ಕೊಡುವೆ’ ಎಂದರು.

‘ನಗರದ ಪ್ರತಿ ಬಡಾವಣೆ ಜನರ ಸಮಸ್ಯೆ ಕೇಳುವ ಬಗ್ಗೆ ಚರ್ಚೆ ನಡೆದಿದೆ. ಇದರ ಜೊತೆಗೆ ಯಾವ ರೀತಿ ಕೆಲಸ ಆಗಬೇಕು. ಜನರ ಅಪೇಕ್ಷೆ ಏನಿದೆ ಎಂಬ ಬಗ್ಗೆ ತಿಳಿದುಕೊಳ್ಳಲು ಆಂದೋಲನ ಮಾಡುತ್ತೇವೆ’ ಎಂದರು.

‘ಅಭಿವೃದ್ಧಿಯಲ್ಲಿ ತಾರತಮ್ಯ ದೇಶದ್ರೋಹ’

‘ನಾಡಪ್ರಭು ಕೆಂಪೇಗೌಡರು ಕಟ್ಟಿದ ಬೆಂಗಳೂರಿನ ಯಲಹಂಕ ಕ್ಷೇತ್ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ವಿಚಾರದಲ್ಲಿ ನಿರ್ದಿಷ್ಟ ಒಂದು ಸಮುದಾಯವನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಲಾಗಿದೆ’ ಎಂದು ಕುಮಾರಸ್ವಾಮಿ ಆರೋಪಿಸಿದರು.

ಮಳೆಯಿಂದ ಹಾನಿಗೆ ತುತ್ತಾಗಿರುವ ಬ್ಯಾಟರಾಯನಪುರ, ಹೆಬ್ಬಾಳ ಮತ್ತು ಯಲಹಂಕ ವಿಧಾನಸಭೆ ಕ್ಷೇತ್ರಗಳಿಗೆ ಶನಿವಾರ ಭೇಟಿ ನೀಡಿ ಜನರ ಅಹವಾಲು ಆಲಿಸಿದ ಬಳಿಕ ಮಾತನಾಡಿದ ಅವರು, ಯಲಹಂಕ ಕ್ಷೇತ್ರದ ಚಿಕ್ಕಬೆಟ್ಟಹಳ್ಳಿಯ ಜನರು ಚುನಾವಣೆಯಲ್ಲಿ ಮತ ಕೊಡಲಿಲ್ಲ ಅಂತ ಯಾವುದೇ ಕೆಲಸ ಮಾಡಿಕೊಡುತ್ತಿಲ್ಲ. ಇಷ್ಟೊಂದು ಕೀಳು ಮಟ್ಟದ ರಾಜಕಾರಣ ಮಾಡಬಾರದು. ಅಭಿವೃದ್ಧಿಯಲ್ಲಿ ತಾರತಮ್ಯ ಮಾಡುತ್ತಿರುವುದು ದೇಶದ್ರೋಹ ಎಂದರು.

‘ಬ್ಯಾಟರಾಯನಪುರದಲ್ಲಿ ಕೆಲ ಪ್ರದೇಶಗಳನ್ನು ಕಂಡು ನನಗೆ ಬಹಳ ಆಶ್ಚರ್ಯ ಆಗಿದೆ. ಕನಿಷ್ಠ ಮೂಲಸೌಕರ್ಯವೂ ಇದುವರೆಗೂ ಜನರಿಗೆ ದೊರಕಿಲ್ಲ’ ಎಂದು ದೂರಿದರು.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ವಿದ್ಯುತ್ ಕಾಮಗಾರಿ ಕೈಗೊಂಡಿರುವುದರಿಂದ ನಗರದ ವಿವಿಧೆಡೆ ಮೇ 22ರಂದು ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಮಹದೇಶ್ವರ ನಗರ, ಪ್ರಸನ್ನ ಬಡಾವಣೆ, ಹೊಸಹಳ್ಳಿ, ಕೆಂಪೇಗೌಡ ನಗರ, ಗೊಲ್ಲರಹಟ್ಟಿ, ನಡೆಕೇರಪ್ಪ, ಇಂಡಸ್ಟ್ರಿಯಲ್ ಏರಿಕಾ, ಹೇರೋಹಳ್ಳಿ, ತುಂಗಾನಗರ, ವಿಘ್ನೇಶ್ವರ ನಗರ, ಅಂಜನಾನಗರ, ಅನ್ನಪೂರ್ಣೇಶ್ವರಿ ನಗರ, ಸುಂಕದಕಟ್ಟೆ, ನೀಲಗಿರಿ ತೋಪು, ಹೆಗ್ಗನಹಳ್ಳಿ ಸುತ್ತಮುತ್ತ ಪ್ರದೇಶಗಳು

ಯಶವಂತಪುರ ವಿಧಾನಸಭಾ ಕ್ಷೇತ್ರ • ಮೂಲಸೌಕರ್ಯ ಕೊರತೆ • ಅಹವಾಲು ತೋಡಿಕೊಂಡ ಜನತೆ: ಸಚಿವ ಎಸ್‌.ಟಿ.ಸೋಮಶೇಖರ್ ಸಮರ್ಪಕ ಉತ್ತರ

ಹೊಸ ಬಡಾವಣೆ–ಹಲವು ಸಮಸ್ಯೆ: ಹೊಸ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪಶ್ಚಿಮದ ಅಂಚಿನಲ್ಲಿ ಚಾಚಿಕೊಂಡಿರುವ ಯಶವಂತಪುರ ವಿಧಾನಸಭಾ ಕ್ಷೇತ್ರದ ಹಳ್ಳಿಗಳು ನಗರವಾಗಿ ರೂಪಾಂತರಗೊಳ್ಳುತ್ತಿರುವ ಸಂದರ್ಭದಲ್ಲಿ ಹುಟ್ಟಿಕೊಂಡಿರುವ ಬಡಾವಣೆಗಳು ಹೊಸ ಹೊಸ ಸಮಸ್ಯೆಗಳನ್ನು ಎದುರಿಸುತ್ತಿವೆ. ಇವುಗಳು ಶೀಘ್ರದಲ್ಲೇ ಬಗೆಹರಿಯುವ ಭರವಸೆ ಇಲ್ಲಿನ ನಿವಾಸಿಗಳಲ್ಲಿ ಮೂಡಿದೆ.

ಇಂತಹದ್ದೊಂದು ಆಶಾಕಿರಣ ಮೂಡಲು ಕಾರಣವಾಗಿದ್ದು, ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಶನಿವಾರ ಆಯೋಜಿಸಿದ್ದ ‘ಜನಸ್ಪಂದನ’ ಕಾರ್ಯಕ್ರಮ. ಜನರ ಅಹವಾಲುಗಳನ್ನು ಸಮಾಧಾನದಿಂದ ಆಲಿಸಿದ ಕ್ಷೇತ್ರದ ಶಾಸಕರೂ ಆಗಿರುವ ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್, ಕೆಲವನ್ನು ಸ್ಥಳದಲ್ಲೇ ಬಗೆಹರಿಸುವ ಪ್ರಯತ್ನ ಮಾಡಿದರು.

ತುಮಕೂರು ರಸ್ತೆಯ ದೊಡ್ಡಬಿದರಕಲ್ಲಿನಿಂದ ಆರಂಭವಾಗುವ ಯಶವಂತಪುರ ವಿಧಾನಸಭಾ ಕ್ಷೇತ್ರದ ಅಂದ್ರಹಳ್ಳಿ, ಹೇರೋಹಳ್ಳಿ, ಉಲ್ಲಾಳು, ಕೆಂಗೇರಿ, ಹೆಮ್ಮಿಗೆಪುರ ಅಲ್ಲದೇ ರಾಮೋಹಳ್ಳಿ, ಸೂಲಿಕೆರೆ ಸೇರಿ ಹಲವು ಗ್ರಾಮ ಪಂಚಾಯಿತಿಗಳ ನಿವಾಸಿಗಳು ಸಮಸ್ಯೆಗಳನ್ನು ಹೇಳಿಕೊಂಡರು.

ಬಿಡಿಎ ಅಭಿವೃದ್ಧಿಪಡಿಸಿರುವ ಬಡಾವಣೆಗಳ ಹಾಗೂ ಖಾಸಗಿ ಬಡಾವಣೆಗಳಲ್ಲಿ ಮೂಲಸೌಕರ್ಯ ಕೊರತೆ ಬಗ್ಗೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪ್ರತಿನಿಧಿಗಳು ಗಮನ ಸೆಳೆದರು. ಬನಶಂಕರಿ 6ನೇ ಹಂತ, ನಾಡಪ್ರಭು ಕೆಂಪೇಗೌಡ ಬಡಾವಣೆ, ವಿಶ್ವೇಶ್ವರಯ್ಯ ಬಡವಣೆ, ಸಪ್ತಗಿರಿ ಬಡಾವಣೆ, ಕದಂಬ ಬಡಾವಣೆ, ಮುನೇಶ್ವರ ಬಡಾವಣೆ, ಕ್ಲಾಸಿಕ್ ಕೌಂಟಿ, ಗ್ರೀನ್ ವ್ಯಾಲಿ ಟೌನ್‌ಶಿಪ್, ಮಾತೃಶ್ರೀ ಬಡಾವಣೆಗಳಲ್ಲಿನ ಮೂಲಸೌಕರ್ಯದ ಸಮಸ್ಯೆಗಳ ಬಗ್ಗೆ ನಿವಾಸಿಗಳು ಬೆಳಕು ಚೆಲ್ಲಿದರು.

ಬಿಡಿಎ ಅಭಿವೃದ್ಧಿಪಡಿಸಿರುವ ವಲಗೇರಹಳ್ಳಿ ವಸತಿ ಸಮುಚ್ಚಯದಲ್ಲಿ ನೀರು ಮತ್ತು ವಿದ್ಯುತ್ ಸಮಸ್ಯೆಗಳನ್ನು ಬಗೆಹರಿಸುವಂತೆ ನಿವಾಸಿಗಳು ಕೋರಿದರು. ಏಜೀಸ್ ಬಡಾವಣೆಯಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿ ಸೌಕರ್ಯ ಇಲ್ಲದಿರುವುದು, ತಿಪ್ಪೇನಹಳ್ಳಿ ಬಳಿಯ ಕಸ ಸಂಸ್ಕರಣಾ ಘಟಕದಿಂದ ಉಂಟಾಗಿರುವ ಅನಾರೋಗ್ಯಕರ ವಾತಾವರಣ, ಕೆಂಗೇರಿ ಉಪನಗರದಿಂದ ಉಲ್ಲಾಳು ಮಾರ್ಗದಲ್ಲಿ ಮಾಗಡಿ ರಸ್ತೆ ಸಂಪರ್ಕಿಸುವ 80 ಅಡಿ ರಸ್ತೆ ಹಾಳಾಗಿರುವುದು, ಮಾಗಡಿ ರಸ್ತೆ ಡಾಂಬರೀಕರಣಗೊಳ್ಳದ ಕಾರಣ ಆಗುತ್ತಿರುವ ಬವಣೆಗಳನ್ನೂ ಬಿಚ್ಚಿಟ್ಟರು.

ಎಲ್ಲ ಸಮಸ್ಯೆಗಳನ್ನು ಅತ್ಯಂತ ಸಹನೆಯಿಂದ ಆಲಿಸಿದ ಸಚಿವ ಎಸ್‌.ಟಿ.ಸೋಮಶೇಖರ್, ‘ಬಿಡಿಎ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿನ ಮೂಲಸೌಕರ್ಯ ಕೊರತೆ ಬಗ್ಗೆ ಸಂಪೂರ್ಣ ಅರಿವಿದೆ. ಅಭಿವೃದ್ಧಿ ಕೈಗೆತ್ತಿಕೊಳ್ಳಲು ಬಿಡಿಎ ಈ ಬಾರಿ ಅನುದಾನ ಮೀಸಲಿಟ್ಟಿದೆ. ಹಂತ–ಹಂತವಾಗಿ ಸಮಸ್ಯೆಗಳು ಬಗೆಹರಿಯಲಿವೆ’ ಎಂದು ಭರವಸೆ ನೀಡಿದರು.

‘ಬಿಬಿಎಂಪಿಗೆ ಸೇರ್ಪಡೆಯಾಗಿರುವ ಹಳ್ಳಿಗಳಿಗೆ ಕಾವೇರಿ ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವ ಕಾಮಗಾರಿ ನಡೆಯುತ್ತಿದೆ. ಎರಡು ತಿಂಗಳಲ್ಲಿ ಎಲ್ಲಾ ಕಾಮಗಾರಿ ಪೂರ್ಣಗೊಳ್ಳಲಿದೆ. ಮಾಗಡಿ ರಸ್ತೆಯಲ್ಲಿ ಮೆಟ್ರೊ ರೈಲು ಮಾರ್ಗ ನಿರ್ಮಾಣಗೊಳ್ಳಲಿದ್ದು, ಈಗ ಡಾಂಬರ್ ಹಾಕಿದರೆ ಮತ್ತೆ ಹಾಳಾಗಲಿದೆ. ಆದ್ದರಿಂದ ದುರಸ್ತಿ ಕಾಮಗಾರಿ ನಿರ್ವಹಿಸಲಾಗಿದೆ’ ಎಂದು ಸಮಜಾಯಿಷಿ ಹೇಳಿದರು.

ಬಿಡಿಎ, ಬಿಬಿಎಂಪಿ, ಜಲಮಂಡಳಿ, ಬಿಎಂಟಿಸಿ ಬೆಸ್ಕಾಂಗೆ ಸಂಬಂಧಿಸಿದ ಸಮಸ್ಯೆ ಬಗೆಹರಿಸುವ ಬಗ್ಗೆ ಅಧಿಕಾರಿಗಳು ಭರವಸೆ ನೀಡಿದರು. ಅಧಿಕಾರಿಗಳು ಸ್ಥಳಕ್ಕೆ ಹೋಗಿ ಖುದ್ದು ಪರಿಶೀಲನೆ ನಡೆಸಿ ವರದಿ ನೀಡಬೇಕು ಎಂದೂ ಸಚಿವರು ಸೂಚಿಸಿದರು.

‘ಜನರ ಎಲ್ಲ ಅಹವಾಲುಗಳನ್ನು ಪಡೆದುಕೊಂಡಿದ್ದೇವೆ. ಅವುಗಳನ್ನು ಪರಿಶೀಲಿಸಿ ಸ್ಥಳಕ್ಕೆ ಹೋಗಿ ಸ್ಥಳೀಯರ ಜತೆ ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸುತ್ತೇನೆ. ಈ ರೀತಿಯ ಕಾರ್ಯಕ್ರಮ ಆಯೋಜಿಸುವ ಮೂಲಕ ಜನ, ಜನಪ್ರತಿನಿಧಿ ಹಾಗೂ ಅಧಿಕಾರಿಗಳ ನಡುವೆ ಸೇತುವೆಯಾದ ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ಗೆ ಧನ್ಯವಾದ’ ಎಂದೂ ಸಚಿವರು ಹೇಳಿದರು.



ಜನಸ್ಪಂದನ ಕಾರ್ಯಕ್ರಮದಲ್ಲಿ ಜನಸ್ತೋಮ –ಪ್ರಜಾವಾಣಿ ಚಿತ್ರಗಳು

ಜನಸ್ಪಂದನ ಸಿಟಿಜ಼ನ್ಸ್ ಫಾರ್ ಚೇಂಜ್

₹402 ಕೋಟಿ ವೆಚ್ಚದಲ್ಲಿ ರಸ್ತೆ ದುರಸ್ತಿ

‘ಕ್ಷೇತ್ರ ವ್ಯಾಪ್ತಿಯ ರಸ್ತೆ ದುರಸ್ತಿಗೆ ₹402 ಕೋಟಿ ಅನುದಾನವನ್ನು ಸರ್ಕಾರ ನೀಡಿದೆ’ ಎಂದು ಎಸ್‌.ಟಿ.ಸೋಮಶೇಖರ್ ಹೇಳಿದರು.

‘ರಾಜಕಾಲುವೆ ಅಭಿವೃದ್ಧಿಗೆ ₹110 ಕೋಟಿ, ಮುಖ್ಯ ರಸ್ತೆಗಳ ಅಭಿವೃದ್ಧಿಗೆ ₹44 ಕೋಟಿ ಅನುದಾನ ತಂದಿದ್ದೇನೆ. ಮಳೆ ಬಿಡುವ ನೀಡಿದರೆ ಕಾಮಗಾರಿ ಪೂರ್ಣಗೊಳಿಸಲಾಗುತ್ತದೆ’ ಎಂದರು.

‘ನಮ್ಮ ಕ್ಷೇತ್ರದ ನಾಲ್ಕು ವಾರ್ಡ್‌ಗಳು ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಯಾದವುಗಳೇ ಆಗಿವೆ. ಅಲ್ಲಿ ಕಾವೇರಿ ನೀರು ಮತ್ತು ಒಳಚರಂಡಿ ಸಂಪರ್ಕ ಕಾಮಗಾರಿ ಪ್ರಗತಿಯಲ್ಲಿದೆ. ಇನ್ನು 10 ಕಿ.ಮೀ. ಮಾತ್ರ ಕಾಮಗಾರಿ ಬಾಕಿ ಇದ್ದು, ಪೂರ್ಣಗೊಂಡರೆ ನೀರು ಮತ್ತು ಒಳಚರಂಡಿ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಲಿದೆ. ಮಳೆ ಬಂದಿದ್ದರಿಂದ ಕಾಮಗಾರಿ ಸ್ವಲ್ಪ ವಿಳಂಬವಾಗಿದೆ’ ಎಂದು ಹೇಳಿದರು.

ಕಾವೇರಿ 4ನೇ ಹಂತದ ಯೋಜನೆಗೆ ಮುಖ್ಯ ಕೊಳವೆ ಮಾರ್ಗವೂ ಕ್ಷೇತ್ರದಲ್ಲಿ ಹಾದುಹೋಗುತ್ತಿದ್ದು, ಕೆಂಗೇರಿ–ಉಲ್ಲಾಳು ಮುಖ್ಯ ರಸ್ತೆ ಡಾಂಬರ್ ಹಾಕಲು ಸಾಧ್ಯವಾಗದೆ ತೊಂದರೆಯಾಗಿದೆ. ಕಾಮಗಾರಿ ಪೂರ್ಣಗೊಂಡ ಕೂಡಲೇ ರಸ್ತೆ ಅಭಿವೃದ್ಧಿ ಆಗಲಿದೆ ಎಂದರು.

‘ವಿಶ್ವೇಶ್ವರಯ್ಯ ಬಡಾವಣೆ ಮೂಲಸೌಕರ್ಯಕ್ಕೆ ಬೇಕಿರುವ ಅನುದಾನ ಬಿಡುಗಡೆ ಮಾಡಿಸಿದ್ದೇನೆ. ಬನಶಂಕರಿ 6ನೇ ಹಂತ ಬಿಬಿಎಂಪಿಗೆ ಹಸ್ತಾಂತರ ಆಗಬೇಕಿದ್ದು, ಅದಕ್ಕೆ ಬೇಕಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಮೂರು ಎಕರೆ ಜಾಗದಲ್ಲಿ ಹೈಟೆಕ್ ಆಸ್ಪತ್ರೆ ನಿರ್ಮಿಸಲು ತಯಾರಿ ನಡೆಯುತ್ತಿದೆ’ ಎಂದು ಮಾಹಿತಿ ನೀಡಿದರು.

ಮಂಚನಬೆಲೆಯಿಂದ 61 ಹಳ್ಳಿಗಳಿಗೆ ಶಾಶ್ವತ ಕುಡಿಯುವ ನೀರಿನ ಸೌಕರ್ಯ ಕಲ್ಪಿಸಲು ₹169 ಕೋಟಿ ಮೊತ್ತದಲ್ಲಿ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಇದು ಪೂರ್ಣಗೊಂಡರೆ ಮನೆ ಮನೆಗೆ ನೀರು ತಲುಪಲಿದೆ. 102 ಕೆರೆಗಳಿಗೆ ನೀರು ಹರಿಯಲಿದೆ ಎಂದರು.

ಕೆಂಗೇರಿ ಮತ್ತು ಉಲ್ಲಾಳ ವಾರ್ಡ್‌ಗಳನ್ನು ಮಾದಕ ವಸ್ತು ಮುಕ್ತ ಮಾಡಲು ಪೊಲೀಸರು ದಿಟ್ಟ ಕ್ರಮ ಕೈಗೊಂಡಿದ್ದಾರೆ. 20ರಿಂದ 30 ಪ್ರಕರಣಗಳನ್ನು ದಾಖಲಿಸಿ ಕಠಿಣ ಕ್ರಮ ಕೈಗೊಂಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



‘ಜನಸ್ಪಂದನ’ ಕಾರ್ಯಕ್ರಮದಲ್ಲಿ ಸಚಿವ ಎಸ್‌ಟಿ ಸೋಮಶೇಖರ್ ಮಾತನಾಡಿದರು. (ಕುಳಿತವರು ಎಡದಿಂದ)ಬಿಬಿಎಂಪಿ ಮುಖ್ಯ ಎಂಜಿನಿಯರ್ (ಆರ್‌ಆರ್ ನಗರ ವಲಯ) ವಿಜಯಕುಮಾರ್ ಎಸ್‌, ಜಂಟಿ ಆಯುಕ್ತ (ಆರ್‌ಆರ್ ನಗರ ವಲಯ) ಎಸ್‌ ನಾಗರಾಜು, ವಲಯ ಆಯುಕ್ತ ಶರತ್ ಬಿ. ಮತ್ತು ಡಿವೈಎಸ್ಪಿ ಓಂಪ್ರಕಾಶ್ ಹಾಗೂ ಇತರರು ಇದ್ದಾರೆ

ಹಲವು ಅಹವಾಲು: ಸ್ಥಳದಲ್ಲೇ ಪರಿಹಾರ

ಜನಸ್ಪಂದನ ಕಾರ್ಯಕ್ರಮದಲ್ಲಿ ಪ್ರಸ್ತಾಪವಾದ ಆಯ್ದ ಕೆಲವು ಅಹವಾಲುಗಳ ವಿವರ ಇಲ್ಲಿದೆ.

• **ಅವಿನಾಶ್,** ಭವಾನಿನಗರ

ನಮ್ಮ ಬಡಾವಣೆಯಲ್ಲಿ ಖಾಸಗಿ ಕಂಪನಿ ಪಕ್ಕದಲ್ಲಿ ಚರಂಡಿ ಕಿರಿದುಗೊಳಿಸಿದೆ. ಇದರಿಂದ ಪ್ರವಾಹ ಉಂಟಾಗುತ್ತಿದೆ. ಚರಂಡಿ ತಡೆಗೋಡೆ ಎತ್ತರಿಸುವ ಜತೆಗೆ ಒತ್ತುವರಿ ತೆರವು ಮಾಡಬೇಕು.



ಅವಿನಾಶ್

ಸಚಿವ ಎಸ್‌.ಟಿ.ಸೋಮಶೇಖರ್: ರಾಜಕಾಲುವೆ ವಿಸ್ತರಿಸಲು ಖಾಸಗಿ ಕಂಪನಿ ಒಪ್ಪುತ್ತಿಲ್ಲ. ಸದ್ಯದಲ್ಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕ್ಷೇತ್ರಕ್ಕೆ ಭೇಟಿ ನೀಡುವ ಕಾರ್ಯಕ್ರಮ ಇದೆ. ಅವರನ್ನೇ ಸ್ಥಳಕ್ಕೆ ಕರೆದುಕೊಂಡು ಹೋಗಿ ಸಮಸ್ಯೆ ಬಗೆಹರಿಸುತ್ತೇನೆ.

• **ಭಾಗ್ಯಲಕ್ಷ್ಮಿ,** ದೊಡ್ಡಬಿದರಕಲ್ಲು

ಒಂಟಿ ಮನೆ ಯೋಜನೆ ಪ್ರಯೋಜನ ಪಡೆಯಲು ಹಲವು ವರ್ಷಗಳಿಂದ ಜನ ಕಾದಿದ್ದಾರೆ. ಅದಕ್ಕೆ ಬೇಕಿರುವ ಅನುದಾನ ಬಿಡುಗಡೆ ಮಾಡಿಸಬೇಕು.



ಭಾಗ್ಯಲಕ್ಷ್ಮಿ

ಬಿಬಿಎಂಪಿ ಅಧಿಕಾರಿ: ಲೋಕಾಯುಕ್ತ ತನಿಖೆ ನಡೆಯುತ್ತಿದ್ದುದರಿಂದ ಯೋಜನೆ ಅನುಷ್ಠಾನ ವಿಳಂಬವಾಗಿತ್ತು. 15 ದಿನಗಳಲ್ಲಿ ಯೋಜನೆಯ ಪ್ರಯೋಜನವು ಫಲಾನುಭವಿಗಳಿಗೆ ದೊರಕಲಿದೆ.

• **ಸಿದ್ದಗಂಗಪ್ಪ,** ಗಂಗೋತ್ರಿನಗರ

ಒಳಚರಂಡಿ, ವಿದ್ಯುಚ್ಛಕ್ತಿ, ಬಸ್ ವ್ಯವಸ್ಥೆ ಸಮರ್ಪಕವಾಗಿಲ್ಲ, ಸಮಸ್ಯೆ ಪರಿಹರಿಸಬೇಕು.



ಸಿದ್ಧಗಂಗಪ್ಪ

ಬಿಬಿಎಂಪಿ ಮತ್ತು ಬೆಸ್ಕಾಂ ಅಧಿಕಾರಿಗಳು: ಸ್ಥಳಕ್ಕೆ ಭೇಟಿ ನೀಡಿ ಎಲ್ಲಾ ಸಮಸ್ಯೆಗಳನ್ನೂ ಕೂಡಲೇ ಬಗೆಹರಿಸುತ್ತೇವೆ.

• **ಎ.ಆರ್.ಸುಂದರೇಶ್,** ರಾಜರಾಜೇಶ್ವರಿ ಬಡಾವಣೆ

ನಮ್ಮ ಬಡಾವಣೆಯ ರಸ್ತೆ ಎರಡು ವರ್ಷಗಳಿಂದ ಹಾಳಾಗಿದ್ದು, ರಸ್ತೆ ಗುಂಡಿಗೆ ಬಿದ್ದು ಹಲವರು ತೊಂದರೆ ಅನುಭವಿಸಿದ್ದಾರೆ.



ಎ.ಆರ್‌. ಸುಂದರೇಶ್

ಅಧಿಕಾರಿ: ರಸ್ತೆ ಗುಂಡಿ ಮುಚ್ಚಲು ಅನುದಾನ ಈಗ ಬಂದಿದ್ದು, ಕೂಡಲೇ ಕಾಮಗಾರಿ ಆರಂಭಿಸಲಾಗುವುದು.

• **ಪ್ರಭಾಕರ್,** ಜ್ಞಾನಭಾರತಿ ಬಡಾವಣೆ

ಎರಡರಿಂದ ಐದು ನಿಮಿಷ ಮಳೆ ಬಂದರೆ ನಮ್ಮ ಬಡಾವಣೆಯಲ್ಲಿ ಮನೆಗಳಿಗೆ ನೀರು ನುಗ್ಗುತ್ತಿದೆ. ದೂರು ನೀಡಿದರೂ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ.



ಪ್ರಭಾಕರ್

ಸಚಿವ: ನಾನೇ ಖುದ್ದು ನಿಮ್ಮ ಬಡಾವಣೆಗೆ ಭೇಟಿ ನೀಡುತ್ತೇನೆ. ಸ್ಥಳ ಪರಿಶೀಲನೆ ನಡೆಸಲು ಸಮಸ್ಯೆ ಬಗೆಹರಿಸುತ್ತೇನೆ.

‘ರಾಜಕೀಯಕ್ಕಾಗಿ ಧರ್ಮದ ಸಮಸ್ಯೆ ಮುನ್ನೆಲೆಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕೀಯ ಪಕ್ಷಗಳು ತಮ್ಮ ಲಾಭಕ್ಕಾಗಿ ಧರ್ಮ, ಜಾತಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಮುನ್ನೆಲೆಗೆ ತಂದು, ನೈಜ ಸಮಸ್ಯೆಗಳನ್ನು ಮರೆ ಮಾಚುವ ಕೆಲಸ ಮಾಡುತ್ತಿವೆ’ ಎಂದು ವಿಮರ್ಶಕ ಎಚ್‌.ಎಸ್‌. ರಾಘವೇಂದ್ರ ರಾವ್ ಬೇಸರ ವ್ಯಕ್ತಪಡಿಸಿದರು.

ಬೆಳಗಾವಿಯ ಬಸವರಾಜ ಕಟ್ಟೀಮನಿ ಪ್ರತಿಷ್ಠಾನ ಮತ್ತು ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ ಜಂಟಿಯಾಗಿ ನಗರದಲ್ಲಿ ಈಚೆಗೆ ಆಯೋಜಿಸಿದ್ದ ‘ಕನ್ನಡ ಪ್ರಗತಿಶೀಲ ಘಟ್ಟ ಮತ್ತು ಬಸವರಾಜ ಕಟ್ಟೀಮನಿ’ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು. ‘ರಾಜಕೀಯ ಪಕ್ಷಗಳು ಜನರನ್ನು ಮರುಳು ಮಾಡಿ, ಆರ್ಥಿಕ ಸಮಸ್ಯೆಗಳನ್ನು ಪಕ್ಕಕ್ಕೆ ತಳ್ಳುತ್ತಿವೆ’ ಎಂದರು.

‘ಪ್ರಗತಿಶೀಲತೆ ಎಲ್ಲ ಕಾಲದ ಗುಣ ಆಗಿರಬೇಕು. ಆದರೆ, ಈಚಿನ 20 ವರ್ಷಗಳಲ್ಲಿ ಪ್ರಗತಿಶೀಲತೆ ಇಲ್ಲವಾಗಿದೆ. ಕಟ್ಟೀಮನಿ ಅವರು ಕಾದಂಬರಿ ಬರೆದಾಗ ಅನಕ್ಷರತೆಯಿಂದಾಗಿ ಕೆಲವರಿಗೆ ಅದನ್ನು ಓದಲು ಸಾಧ್ಯವಾಗಲಿಲ್ಲ. ಅಕ್ಷರಸ್ಥರು ಓದಲು ಪ್ರಾರಂಭಿಸಿದಾಗ ಕೃತಿಗಳು ದೊರೆಯದಂತೆ ಪಿತೂರಿ ಮಾಡಲಾಯಿತು’ ಎಂದರು.

ಸಾಹಿತಿ ಬರಗೂರು ರಾಮಚಂದ್ರಪ್ಪ, ‘ಪ್ರಗತಿಶೀಲ ಕಾಲಘಟ್ಟ ಈ ಸಮಾಜದ ಮೇಲೆ ಮಹತ್ವದ ಪರಿಣಾಮ ಬೀರಿದೆ. ಈ ಕಾಲಘಟ್ಟ ಮೌನಕ್ಕೆ ಮಾತು ಕೊಟ್ಟಿತು. ಸ್ವಾತಂತ್ರ್ಯೋತ್ತರ ಬೆಳವಣಿಗೆ ಹಾಗೂ ಸ್ವಾತಂತ್ರ್ಯ ಪೂರ್ವದ ಆಶಯಗಳು ಇದಕ್ಕೆ ಪ್ರಮುಖ ಕಾರಣ. ಪ್ರಗತಿಶೀಲ ಸಾಹಿತ್ಯದ ಪ್ರಮುಖ ಕೃತಿಗಳ ಪುಸ್ತಕ ಮಾಲೆಯನ್ನು ಸರ್ಕಾರ ಹೊರತರಬೇಕು. ಯುವಪೀಳಿಗೆ ಅದನ್ನು ಓದುವಂತಾಗಬೇಕು’ ಎಂದರು.

ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕದ ಕಾರ್ಯದರ್ಶಿ ಪ್ರೊ. ಎಸ್‌.ಎನ್‌. ನಾಗರಾಜರೆಡ್ಡಿ, ‘ಇವತ್ತಿನ ಕಾಲಘಟ್ಟದಲ್ಲಿ ಪ್ರಗತಿಶೀಲ ಸಾಹಿತ್ಯದ ಬಗ್ಗೆ ತಿಳಿದುಕೊಳ್ಳಬೇಕಿದೆ. ಈಗಿನ ಸನ್ನಿವೇಶ ನೋಡಿದರೆ ಸಮಾಜ ವಿನಾಶದತ್ತ ಸಾಗುತ್ತಿದೆಯೇ ಎಂಬ ಪ್ರಶ್ನೆ ಕಾಡುತ್ತಿದೆ’ ಎಂದು ಕಳವಳ ವ್ಯಕ್ತಪಡಿಸಿದರು.



ವಿಚಾರಸಂಕಿರಣದಲ್ಲಿ ಎಸ್‌.ಎನ್‌. ನಾಗರಾಜರೆಡ್ಡಿ ಹಾಗೂ ಬರಗೂರು ರಾಮಚಂದ್ರಪ್ಪ ಚರ್ಚಿಸಿದರು. ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಅಧ್ಯಕ್ಷ ಮಲ್ಲಿಕಾರ್ಜುನ ಹಿರೇಮಠ, ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕದ ಅಧ್ಯಕ್ಷ ಎ.ಎಚ್‌. ರಾಮರಾವ್, ಎಚ್‌.ಎಸ್‌. ರಾಘವೇಂದ್ರ ರಾವ್ ಮತ್ತು ಪ್ರತಿಷ್ಠಾನದ ಸದಸ್ಯ ಬಸವರಾಜ ಸಾದರ ಇದ್ದಾರೆ –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಭಾರತ ಪರಿಕ್ರಮ ಯಾತ್ರೆ ಅಂಗವಾಗಿ ಬೈಕ್ ರ‍್ಯಾಲಿ: ಅತಿಥಿಗಳು–ಬಿ.ಎಸ್.ಕನ್ವರ್, ಬಿ.ಸಿ.ರಮೇಶ್, ಅಧ್ಯಕ್ಷತೆ–ಪಿ.ಶ್ಯಾಮರಾಜು, ಆಯೋಜನೆ–ಕ್ರೀಡಾ ಭಾರತಿ ಮತ್ತು ರೇವಾ ವಿಶ್ವವಿದ್ಯಾಲಯ, ಸ್ಥಳ–ಸೌಗಂಧಿಕ, ರೇವಾ ವಿಶ್ವವಿದ್ಯಾಲಯ–ಬೆಳಿಗ್ಗೆ 8.

50ನೇ ವರ್ಷದ ಕರಗ ಮತ್ತು ಕೊಂಡ ನಡೆತ ಮಹೋತ್ಸವಕ್ಕೆ ಚಾಲನೆ: ಭಾಗವಹಿಸುವವರು–ರಾಮಲಿಂಗಾ ರೆಡ್ಡಿ, ಸೌಮ್ಯ ರೆಡ್ಡಿ, ತೇಜಸ್ವಿ ಸೂರ್ಯ, ಉದಯ್ ಬಿ.ಗರುಡಾಚಾರ್, ಆಯೋಜನೆ–ಮಹಾಶಕ್ತಿ ಮಾರಿ ಅಮ್ಮನ ದೇವಸ್ಥಾನ ಸಮಿತಿ, ಸ್ಥಳ– ತಿಲಕನಗರ–ಬೆಳಿಗ್ಗೆ 8.

ರಾಷ್ಟ್ರೀಯ ಅಂಗವಿಕಲರ ಕ್ರೀಡಾಕೂಟಕ್ಕೆ ಚಾಲನೆ: ಆಯೋಜನೆ–ರೋಟರಿ ಬೆಂಗಳೂರು ಸದಾಶಿವನಗರ, ರೋಟರಿ ಬೆಂಗಳೂರು ಮಾಲ್ಗುಡಿ, ಕ್ಲಬ್ ಸರ್ವಿಸ್ ಟೀಮ್ ರೋಟರಿ ಡಿಸ್ಟ್ರಿಕ್ಟ್ 3190, ಸ್ಥಳ–ಐಐಎಸ್‌ಸಿ ಜಿಮ್ಖಾನ–8.30.

ಡಾ.ಬಿ.ಆರ್. ಅಂಬೇಡ್ಕರ್ 131ನೇ ಜಯಂತ್ಯೋತ್ಸವ ಮತ್ತು ಪೌರಕಾರ್ಮಿಕರಿಗೆ ‘ಜಲಗಾರಶ್ರೀ’ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಸುಭಾಷ್ ಭರಣಿ, ಅಧ್ಯಕ್ಷತೆ: ಟಿ.ಎಚ್.ಆಂಜನಪ್ಪ, ಪ್ರಶಸ್ತಿ ಪ್ರದಾನ: ಅಶೋಕ್ ಎನ್.ಛಲವಾದಿ, ಆಯೋಜನೆ: ದಲಿತ ಸಂಘರ್ಷ ಸಮಿತಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ–ಬೆಳಿಗ್ಗೆ 10

ಕಂಟೋನ್ಮೆಂಟ್ ಶಾಖೆಯ ಕಟ್ಟಡ ಉದ್ಘಾಟನೆ: ಸಾನ್ನಿಧ್ಯ: ಗೋಪಾಲ ತುಕಾರಾಮ ವಾಸ್‌ಕರ್ ಮಹಾರಾಜ್, ಕಟ್ಟಡ ಉದ್ಘಾಟನೆ: ಎಸ್‌.ಟಿ.ಸೋಮಶೇಖರ್, ಮಾಹಿತಿ ತಂತ್ರಜ್ಞಾನ ವಿಭಾಗ ಉದ್ಘಾಟನೆ: ರಿಜ್ವಾನ್ ಅರ್ಷದ್, ಅಧ್ಯಕ್ಷತೆ: ಕೆ.ಜಿ.ಅನಂತ್ ಕುಮಾರ್, ಆಯೋಜನೆ: ಭಾವಸಾರ ಬ್ಯಾಂಕ್, ಸ್ಥಳ: ಸಹಕಾರ ಶತಾಬ್ದಿ, ನಂ.205, ಕೆ.ಕಾಮರಾಜ ರಸ್ತೆ–ಬೆಳಿಗ್ಗೆ–10.30

ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿ: ಉದ್ಘಾಟನೆ: ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಅಧ್ಯಕ್ಷತೆ: ಎಸ್‌.ಆರ್.ರಾಜಾ ನಾಯಕ್, ಅತಿಥಿಗಳು: ಬಿ.ಟಿ.ಲಲಿತಾ ನಾಯಕ್, ಪಿ.ರಾಜೀವ್, ಪ್ರಕಾಶ್ ರಾಥೋಡ್, ಎ.ಆರ್.ಗೋವಿಂದ ಸ್ವಾಮಿ, ಕುಮಾರ್ ನಾಯಕ್, ಆಯೋಜನೆ: ಆಲ್ ಇಂಡಿಯಾ ಬಂಜಾರ ಸೇವಾ ಸಂಘ, ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘ, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ, ಬಂಜಾರ ಸಂಘ–ಸಂಸ್ಥೆಗಳ ಒಕ್ಕೂಟ, ಸ್ಥಳ: ಬಂಜಾರ ಭವನ, ವಸಂತನಗರ– ಬೆಳಿಗ್ಗೆ 10.30

‘ಕದಂಬರು ಕನ್ನಡದ ಮೊದಲ ಅರಸು ಮನೆತನ’ ಕುರಿತು ಉಪನ್ಯಾಸ: ಉಪನ್ಯಾಸಕರು–ಲಕ್ಷ್ಮೀಶ್ ಹೆಗಡೆ ಸೋಂದಾ, ಆಯೋಜನೆ–ಸುಚಿತ್ರ ಟೌನ್‌ಹಾಲ್, ಸ್ಥಳ–ನಾಣಿ ಅಂಗಳ, ಸುಚಿತ್ರ, ಬನಶಂಕರಿ 2ನೇ ಹಂತ–10.30.

ಸಿಬಿಚೆನ್ ಕೆ.ಮ್ಯಾಥ್ಯೂ ಅವರ ‘ಎ ರೈಟರ್ಸ್ ಜರ್ನಿ’ ಪುಸ್ತಕದ ಕುರಿತು ಚರ್ಚೆ: ಭಾಗವಹಿಸುವವರು– ಅಶೋಕ್ ಬಿ.ಹಿಂಚಿಗೇರಿ, ಐ.ಎಸ್.ಪ್ರಸಾದ್, ಅಭಿಜಿತ್ ಬಾಧುರಿ, ಸಿ.ಪಿ.ರಾಧಾಕೃಷ್ಣನ್, ಆಯೋಜನೆ–ಐಐಎಂ ಬೆಂಗಳೂರು ಅಲುಮ್ನಿ ಅಸೋಸಿಯೇಷನ್ ಮತ್ತು ಕೇರಳ ಸಮಾಜ ಬೆಂಗಳೂರು, ಸ್ಥಳ–ಸೇಂಟ್ ಜೋಸೆಫ್ಸ್ ಬಾಲಕರ ಪ್ರೌಢಶಾಲೆ, ಮ್ಯೂಸಿಯಂ ರಸ್ತೆ–ಸಂಜೆ 4.

ಭರತನಾಟ್ಯ ರಂಗಪ್ರವೇಶ: ಕೆ.ವಿ.ಅಶ್ವಿನಿ ಸುರೇಶ್, ಸ್ಮೃತಿ ಎಸ್., ಆಯೋಜನೆ–ಆರಾಧನಾ ನೃತ್ಯ ಶಾಲೆ, ಸ್ಥಳ– ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ–ಸಂಜೆ 6.

‘ದಿ ವಾರ್ ಇನ್ ಉಕ್ರೇನ್; ರೀಜನಲ್ ಆ್ಯಂಡ್ ಗ್ಲೋಬಲ್ ಫಾಲೌಟ್ಸ್’ ರಾಷ್ಟ್ರೀಯ ಕಾರ್ಯಾಗಾರಕ್ಕೆ ಚಾಲನೆ: ಮಾತನಾಡುವವರು–ಶೈಲೇಶ್ ನಾಯಕ್, ಆಯೋಜನೆ–ನಿಯಾಸ್ ಯುರೋಪ್ ಸ್ಟಡೀಸ್, ಕ್ರಿಸ್ತು ಜಯಂತಿ ಕಾಲೇಜು, ಕೆಎಎಸ್–ಇಂಡಿಯಾ ಆಫೀಸ್, ಸ್ಥಳ–ಸಭಾ ಭವನ, ಕ್ರಿಸ್ತು ಜಯಂತಿ ಕಾಲೇಜು–ಸಂಜೆ 6

ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಬಸವೇಶ್ವರ ಜಯಂತ್ಯೋತ್ಸವ: ಉದ್ಘಾಟನೆ: ನ್ಯಾ.ನಾಗಮೋಹನ್ ದಾಸ್, ಅಧ್ಯಕ್ಷತೆ: ಕೆ.ಗೋಪಾಲಯ್ಯ, ಸಾನ್ನಿಧ್ಯ: ಜ್ಞಾನಪ್ರಕಾಶ ಸ್ವಾಮೀಜಿ, ಆಯೋಜನೆ: ಅಬಕಾರಿ ಇಲಾಖೆ, ಸ್ಥಳ: ಯವನಿಕ ಸಭಾಂಗಣ, ನೃಪತುಂಗ ರಸ್ತೆ–ಬೆಳಿಗ್ಗೆ 10.30

ಬೆಂಗಳೂರು ವಿ.ವಿ: ನೂತನ ಕುಲಪತಿ ನೇಮಕ ಪ್ರಕ್ರಿಯೆ ಆರಂಭ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ನೂತನ ಕುಲಪತಿ ನೇಮಕಕ್ಕೆ ಉನ್ನತ ಶಿಕ್ಷಣ ಇಲಾಖೆ ಪ್ರಕ್ರಿಯೆ ಆರಂಭಿಸಿದೆ.

ಹಾಲಿ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಅವರು ಜೂನ್ 12ರಂದು ನಿವೃತ್ತರಾಗಲಿದ್ದಾರೆ. ಹೀಗಾಗಿ, ಉನ್ನತ ಶಿಕ್ಷಣ ಇಲಾಖೆಯು ಕುಲಪತಿ ಹುದ್ದೆಗೆ ಹೊಸಬರ ನೇಮಕಕ್ಕೆ ಶುಕ್ರವಾರ ಪ್ರಕಟಣೆ ಹೊರಡಿಸಿದೆ.


ವಿಶ್ವವಿದ್ಯಾಲಯಗಳಲ್ಲಿ ಕನಿಷ್ಠ 10 ವರ್ಷಗಳ ಸೇವೆ ಸಲ್ಲಿಸಿದ ಅಥವಾ ಸಂಶೋಧನಾ ಅಥವಾ ಶೈಕ್ಷಣಿಕ ಆಡಳಿತ ಸಂಸ್ಥೆಗಳಲ್ಲಿ 10 ವರ್ಷಗಳ ಕಾಲ ಕಾರ್ಯನಿರ್ವಹಿಸಿದ ಅನುಭವ ಹೊಂದಿರಬೇಕು ಎಂಬುದೂ ಸೇರಿದಂತೆ ಹಲವು ಮಾನದಂಡಗಳನ್ನು ಕುಲಪತಿ ಹುದ್ದೆಯ ನೇಮಕಾತಿಗೆ ನಿಗದಿಪಡಿಸಲಾಗಿದೆ.

ಹೊಸ ಕುಲಪತಿಯ ಆಯ್ಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ರಚಿಸುವ ಶೋಧನಾ ಸಮಿತಿಗೆ ನೃಪತುಂಗ ವಿಶ್ವವಿದ್ಯಾಲಯದ ಪ್ರೊ. ಶ್ರೀನಿವಾಸ್ ಎಸ್‌. ಬಾಲಿ ಅವರನ್ನು ನಾಮನಿರ್ದೇಶನ ಮಾಡಲು ಏಪ್ರಿಲ್ 11ರಂದು ನಡೆದ ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ನಿರ್ಧರಿಸಲಾಗಿತ್ತು.

ಎಸ್‌ಎಸ್‌ಎಲ್‌ಸಿ: ಉಜ್ವಲಾ ಸಾಧನೆ

ಬೆಂಗಳೂರು: ಬಿಬಿಎಂಪಿ ಶ್ರೀರಾಮಪುರ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿ ಎಂ.ಸಿ. ಉಜ್ವಲಾ ಅವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 616 ಅಂಕಗಳನ್ನು ಗಳಿಸಿದ್ದಾರೆ.

ಪಾಲಿಕೆಯ ಪ್ರೌಢಶಾಲೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಪೈಕಿ ಉಜ್ವಲಾ ಅವರು ಅಗ್ರಸ್ಥಾನ ಪಡೆದಿದ್ದಾರೆ. ಇವರ ಸಾಧನೆ ಎಲ್ಲ ವಿದ್ಯಾರ್ಥಿಗಳಿಗೂ ಮಾದರಿ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಭಿನಂದಿಸಿದ್ದಾರೆ.



ಎಂ.ಸಿ. ಉಜ್ವಲಾ

‘ಮನೆಯಲ್ಲೇ ಇದ್ದರೆ ಗೆಳತಿ ಉಳಿಯುತ್ತಿದ್ದಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರಿಗೇಡ್ ರಸ್ತೆಯಲ್ಲಿರುವ ‘5 ಅವೆನ್ಯೂ’ ಮಾಲ್ ಕಟ್ಟಡದ ಎರಡನೇ ಮಹಡಿಯಿಂದ ಆಯತಪ್ಪಿ ಬಿದ್ದು ಲಿಯಾ (20) ಮೃತಪಟ್ಟ ಪ್ರಕರಣ ಸಂಬಂಧ, ಸ್ನೇಹಿತ ಕ್ರಿಸ್ ಪೀಟರ್ ಅವರಿಂದ ಪೊಲೀಸರು ಹೇಳಿಕೆ ಪಡೆದಿದ್ದಾರೆ.

‘ಬೇಜಾರು ಆಯಿತೆಂದು ಮಾಲ್‌ಗೆ ಬಂದು ಗೆಳತಿ ಕಳೆದುಕೊಂಡೆ. ಮನೆಯಲ್ಲೇ ಇದ್ದಿದ್ದರೆ, ಗೆಳತಿ ಉಳಿಯುತ್ತಿದ್ದಳು’ ಎಂದು ಕ್ರಿಸ್ ಪೀಟರ್ ಹೇಳಿಕೆಯಲ್ಲಿ ಹೇಳಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಲಿಯಾ ಅವರನ್ನು ರಕ್ಷಿಸಲು ಹೋಗಿ ಪೀಟರ್ ಸಹ ಕಟ್ಟಡದಿಂದ ಬಿದ್ದಿದ್ದರು. ಅವರ ಕಾಲಿಗೆ ತೀವ್ರ ಪೆಟ್ಟಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆ ಹೇಗಾಯಿತು ಎಂಬ ಬಗ್ಗೆ ಅವರಿಂದ ಹೇಳಿಕೆ ಪಡೆಯಲಾಗಿದೆ. ಸಾವಿನ ಬಗ್ಗೆ ಕೆಲ ಅನುಮಾನಗಳಿದ್ದು, ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ’ ಎಂದೂ ಮೂಲಗಳು ಹೇಳಿವೆ.



ಲಿಯಾ ಹಾಗೂ ಕ್ರಿಸ್ ಪೀಟರ್

ಹೇಳಿಕೆ ವಿವರ: ‘ನಾನು ಹಾಗೂ ಲಿಯಾ, ಬಿ.ಕಾಂ ಪದವಿ ಎರಡನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದೆವು. ಇಬ್ಬರೂ ಪರಸ್ಪರ ಇಷ್ಟಪಡುತ್ತಿದ್ದೆವು. ಸಲುಗೆಯೂ ಇತ್ತು. ಎಲ್ಲಾದರೂ ಹೋಗುವುದಿದ್ದರೆ, ಇಬ್ಬರೂ ಒಟ್ಟಿಗೇ ಹೋಗುತ್ತಿದ್ದೆವು’ ಎಂದು ಪೀಟರ್ ಹೇಳಿರುವುದಾಗಿ ಮೂಲಗಳು ತಿಳಿಸಿವೆ.

‘ಕಾಲೇಜಿಗೆ ಶನಿವಾರ ರಜೆ ಇತ್ತು. ಜೊತೆಗೆ, ಸ್ನೇಹಿತರೊಬ್ಬರ ಹುಟ್ಟುಹಬ್ಬದ ಸಲುವಾಗಿ ಎಂ.ಜಿ.ರಸ್ತೆಯ ಪಬ್ ಒಂದರಲ್ಲಿ ಸಂಜೆ ಪಾರ್ಟಿಯನ್ನೂ ಆಯೋಜಿಸಲಾಗಿತ್ತು. ಪಾರ್ಟಿಗೆ ಒಟ್ಟಿಗೆ ಹೋಗಬೇಕೆಂದು ನಾವಿಬ್ಬರೂ ಮಾತನಾಡಿಕೊಂಡಿದ್ದೆವು. ಇಬ್ಬರೂ ಸೇರಿ ಬೆಳಿಗ್ಗೆ 11 ಗಂಟೆ ಸುಮಾರಿಗೆ ಬ್ರಿಗೇಡ್ ರಸ್ತೆಗೆ ಬಂದಿದ್ದೆವು. ಸಂಜೆಯವರೆಗೂ ಶಾಪಿಂಗ್ ಮಾಡಿ, ನಂತರ ಪಾರ್ಟಿಗೆ ಹೋಗಲು ಯೋಚಿಸಿದ್ದೆವು’ ಎಂದೂ ಪೀಟರ್ ತಿಳಿಸಿದ್ದಾರೆ.

‘ಕೆಲ ವಸ್ತುಗಳನ್ನು ಖರೀದಿಸಲೆಂದು ನಾವಿಬ್ಬರು, ‘5 ಅವೆನ್ಯೂ’ ಮಾಲ್‌ಗೆ ಹೋಗಿದ್ದೆವು. ಮಾಲ್ ಕೆಳ ಮಹಡಿಯಲ್ಲೇ ಖರೀದಿಸಿದ್ದ ಜ್ಯೂಸ್ ಕುಡಿಯುತ್ತ ಮಾಲ್‌ನಲ್ಲಿ ಓಡಾಡುತ್ತಿದ್ದೆವು. ಎರಡನೇ ಮಹಡಿಯಲ್ಲಿ ಇರುವಾಗ ಜ್ಯೂಸ್ ಬಾಟಲಿ ಕೈಯಲ್ಲಿ ಹಿಡಿದುಕೊಂಡೇ ಲಿಯಾ ಆಯತಪ್ಪಿ ಬಿದ್ದಳು. ಅವಳನ್ನು ಹಿಡಿದುಕೊಳ್ಳಲು ಹೋಗಿ ನಾನು ಬಿದ್ದೆ’ ಎಂದು ಕ್ರಿಸ್ ಹೇಳಿದ್ದಾರೆ.

ಬಾಣಸವಾಡಿ ಹುಕ್ಕಾ ಬಾರ್ ಮೇಲೆ ದಾಳಿ

ಬೆಂಗಳೂರು: ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿರುವ ಹುಕ್ಕಾ ಬಾರ್‌ವೊಂದರ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಇಬ್ಬರನ್ನು ಬಂಧಿಸಿದ್ದಾರೆ.

‘ಅಕ್ರಮವಾಗಿ ಹುಕ್ಕಾ ಬಾರ್ ಆರಂಭಿಸಿದ್ದ ಬಗ್ಗೆ ಮಾಹಿತಿ ಬಂದಿತ್ತು. ದಾಳಿ ಮಾಡಿ, ₹50 ಸಾವಿರ ಮೌಲ್ಯದ 8 ಚಿಲುಮೆಗಳು ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಕಾಲೇಜು ಯುವಕ–ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಹುಕ್ಕಾ ಬಾರ್‌ಗೆ ಬರುತ್ತಿದ್ದರು. ಅಪ್ರಾಪ್ತರಿಗೂ ಹುಕ್ಕಾ ಕೊಟ್ಟು ವ್ಯಸನಿಗಳನ್ನಾಗಿ ಮಾಡಲಾಗುತ್ತಿತ್ತು’ ಎಂದೂ ತಿಳಿಸಿದರು.



ಆರೋಪಿಗಳಿಂದ ಜಪ್ತಿ ಮಾಡಿದ ಚಿನ್ನಾಭರಣ

ಹಗಲಿನಲ್ಲಿ ಮನೆ ಗುರುತು: ರಾತ್ರಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹಗಲು ಸುತ್ತಾಡಿ ಮನೆಗಳನ್ನು ಗುರುತಿಸಿ, ರಾತ್ರಿ ಕಳ್ಳತನ ಮಾಡುತ್ತಿದ್ದ ಆರೋಪದಡಿ ಮೂವರನ್ನು ವಿದ್ಯಾರಣ್ಯಪುರ ಪೊಲೀಸರು ಬಂಧಿಸಿದ್ದಾರೆ.

‘ಯಶವಂತಪುರ ವಿನಾಯಕ ನಗರದ ಶ್ರೀನಿವಾಸ್ ಅಲಿಯಾಸ್ ಸಿಲಿಂಡರ್ (38), ರಾಜಾನುಕುಂಟೆಯ ಸತೀಶ್‌ಕುಮಾರ್ ಅಲಿಯಾಸ್ ಕೊಕ್ಕರೆ (34) ಹಾಗೂ ಹೊಸಕೋಟೆ ನಂದಗುಡಿಯ ಶಿವನಪುರದ ರಾಜಣ್ಣ ಅಲಿಯಾಸ್ ಕರಡಿ (38) ಬಂಧಿತ. ಇವರಿಂದ 824 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ವಿದ್ಯಾರಣ್ಯಪುರದ ಮುನೇಶ್ವರ ಬಡಾವಣೆ ಹಾಗೂ ದೇವಪ್ಪ ಬಡಾವಣೆಯ ಎರಡು ಮನೆಗಳಲ್ಲಿ ಇತ್ತೀಚೆಗೆ ಕಳ್ಳತನವಾಗಿತ್ತು. ಈ ಬಗ್ಗೆ ದಾಖಲಾಗಿದ್ದ ಪ್ರಕರಣದ ತನಿಖೆ ಕೈಗೊಂಡಾಗ ಆರೋಪಿಗಳ ಸುಳಿವು ಸಿಕ್ಕಿತ್ತು’ ಎಂದೂ ತಿಳಿಸಿದರು.

26 ಪ್ರಕರಣದಲ್ಲಿ ಆರೋಪಿ: ‘ಬಂಧಿತ ಆರೋಪಿ ಶ್ರೀನಿವಾಸ್, ಪದೇ ಪದೇ ಅಪರಾಧ ಕೃತ್ಯ ಎಸಗುತ್ತಿದ್ದ. ಈತನ ವಿರುದ್ಧ ಬೆಂಗಳೂರಿನ ವಿವಿಧ ಠಾಣೆಗಳಲ್ಲಿ 26 ಪ್ರಕರಣಗಳು ದಾಖಲಾಗಿದ್ದವು’ ಎಂದು ಪೊಲೀಸರು ಹೇಳಿದರು.

‘ಇನ್ನೊಬ್ಬ ಆರೋಪಿ ಸತೀಶ್ ವಿರುದ್ಧವೂ 20 ಪ್ರಕರಣಗಳು ದಾಖಲಾಗಿದ್ದವು. ಮತ್ತೊಬ್ಬ ಆರೋಪಿ ರಾಜಣ್ಣ, ಎರಡು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಮೂವರು ತಂಡ ಕಟ್ಟಿಕೊಂಡು ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದರು’ ಎಂದೂ ತಿಳಿಸಿದರು.

‘ನಗರದ ಹಲವೆಡೆ ಹಗಲಿನಲ್ಲಿ ಆರೋಪಿಗಳು ಸಂಚರಿಸುತ್ತಿದ್ದರು. ಬೀಗ ಹಾಕಿರುತ್ತಿದ್ದ, ಅಂಗಣದಲ್ಲಿ ಕಸ ಬಿದ್ದಿರುತ್ತಿದ್ದ ಹಾಗೂ ರಂಗೋಲಿ ಹಾಕಿರದ ಮನೆಗಳನ್ನು ಗುರುತಿಸುತ್ತಿದ್ದರು. ಮನೆಯಲ್ಲಿ ಯಾರೂ ಇಲ್ಲದ್ದನ್ನು ಖಚಿತಪಡಿಸಿಕೊಳ್ಳುತ್ತಿದ್ದರು. ರಾತ್ರಿ ಮನೆಗಳ ಬೀಗ ಮುರಿದು ಒಳಗೆ ನುಗ್ಗುತ್ತಿದ್ದರು. ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದರು’ ಎಂದೂ ಹೇಳಿದರು.

ತಲಘಟ್ಟಪುರ: ₹1.22 ಕೋಟಿ ಮೌಲ್ಯದ ಆಭರಣ ಜಪ್ತಿ

ಕಳ್ಳತನ: ‘ಓಜಿಕುಪ್ಪಂ’ ದಂಪತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರಿನ ಗಾಜು ಒಡೆದು ಚಿನ್ನಾಭರಣವಿದ್ದ ಬ್ಯಾಗ್ ಕದ್ದಿದ್ದ ಆರೋಪದಡಿ ರತ್ನಕುಮಾರ್ ಅಲಿಯಾಸ್ ರೆಡ್ಡಿ (40) ಹಾಗೂ ಆತನ ಪತ್ನಿ ತಾಸಿನ್ ಫಾತಿಮಾ ಅಲಿಯಾಸ್ ತನು (36) ಅವರನ್ನು ತಲಘಟ್ಟಪುರ ಪೊಲೀಸರು ಬಂಧಿಸಿದ್ದಾರೆ.

‘ಆಂಧ್ರಪ್ರದೇಶದ ‘ಓಜಿಕುಪ್ಪಂ’ ನಿವಾಸಿಗಳಾದ ಆರೋಪಿಗಳು, ತಮ್ಮದೇ ತಂಡ ಕಟ್ಟಿಕೊಂಡು ಕೃತ್ಯ ಎಸಗುತ್ತಿದ್ದರು. ಇವರಿಬ್ಬರಿಂದ ₹ 1.22 ಕೋಟಿ ಮೌಲ್ಯದ ಚಿನ್ನ ಹಾಗೂ ವಜ್ರದ ಆಭರಣ ಜಪ್ತಿ ಮಾಡಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಹೇಳಿದರು.

‘ಉದ್ಯಮಿಯೊಬ್ಬರು ತಲಘಟ್ಟಪುರ ರಘುವನಹಳ್ಳಿಯ ಯೂನಿಯನ್ ಬ್ಯಾಂಕ್ ಇಂಡಿಯಾ ಶಾಖೆಯ ಲಾಕರ್‌ನಲ್ಲಿ ಚಿನ್ನ ಹಾಗೂ ವಜ್ರದ ಆಭರಣ ಇರಿಸಿದ್ದರು. ಕಾರ್ಯಕ್ರಮ ನಿಮಿತ್ತ ಏಪ್ರಿಲ್ 28ರಂದು ಬ್ಯಾಂಕ್‌ನ ಲಾಕರ್‌ನಲ್ಲಿದ್ದ ಆಭರಣಗಳನ್ನು ಬಿಡಿಸಿಕೊಂಡಿದ್ದರು. ಬಳಿಕ ಆಭರಣವಿದ್ದ ಬ್ಯಾಗ್ ಕಾರಿನಲ್ಲಿರಿಸಿದ್ದರು.’

‘ಬ್ಯಾಂಕ್ ಮುಂದೆಯೇ ಕಾರು ನಿಲ್ಲಿಸಿದ್ದ ಉದ್ಯಮಿ, ಕೆಲಸ ನಿಮಿತ್ತ ಸಮೀಪದಲ್ಲಿದ್ದ ನರ್ಸರಿಗೆ ಹೋಗಿದ್ದರು. ಅದೇ ಸಂದರ್ಭದಲ್ಲೇ ಆರೋಪಿಗಳು, ಕಾರಿನ ಗಾಜು ಒಡೆದು ಆಭರಣಗಳಿದ್ದ ಬ್ಯಾಗ್ ಅನ್ನು ಕದ್ದುಕೊಂಡು ಹೋಗಿದ್ದರು. ನರ್ಸರಿಯಿಂದ ವಾಪಸ್ ಉದ್ಯಮಿ ಸ್ಥಳಕ್ಕೆ ಬಂದಾಗ ಆಭರಣಗಳು ಕಳ್ಳತನವಾಗಿರುವ ವಿಷಯ ಗೊತ್ತಾಗಿತ್ತು’ ಎಂದೂ ತಿಳಿಸಿದರು.



ಆರೋಪಿಗಳಿಂದ ಪೊಲೀಸರು ಜಪ್ತಿ ಮಾಡಿದ ವಜ್ರದ ಆಭರಣಗಳನ್ನು ದೂರುದಾರರಿಗೆ ಶನಿವಾರ ಹಿಂದಿರುಗಿಸಲಾಯಿತು. ಕಮಿಷನರ್ ಪ್ರತಾಪ್ ರೆಡ್ಡಿ, ಜಂಟಿ ಕಮಿಷನರ್ ಸಂದೀಪ್ ಪಾಟೀಲ ಹಾಗೂ ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ ಚಿತ್ರದಲ್ಲಿದ್ದಾರೆ – ಪ್ರಜಾವಾಣಿ ಚಿತ್ರ

ಆಭರಣ ಮಾರಾಟದ ಸುಳಿವು: ‘ಆಭರಣ ಸಮೇತ ಪರಾರಿಯಾಗಿದ್ದ ಆರೋಪಿಗಳು, ತಮಿಳುನಾಡಿನ ಚೆನ್ನೈನಲ್ಲಿ ನೆಲೆಸಿದ್ದರು. ಕದ್ದ ಆಭರಣಗಳನ್ನು ಮಾರಿ, ಫ್ಲ್ಯಾಟ್‌ನಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದರು’ ಎಂದೂ ಪೊಲೀಸರು ಹೇಳಿದರು.

‘ಚೆನ್ನೈನ ಮೊಹಮ್ಮದ್ ಹರ್ಷದ್ ನದೀಮ್ ಎಂಬಾತನ ಮೂಲಕ ಕಳ್ಳರು ಆಭರಣ ಮಾರಿಸಿದ್ದ ಬಗ್ಗೆ ಮಾಹಿತಿ ಸಿಕ್ಕಿತ್ತು. ನದೀಮ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿತ್ತು. ಆತ, ಆರೋಪಿ ತಾಸಿನ್ ತಮ್ಮನೆಂಬುದು ಗೊತ್ತಾಯಿತು. ಆತನೇ ಆರೋಪಿಗಳು ಎಲ್ಲಿದ್ದಾರೆ ಎಂಬುದರ ಬಗ್ಗೆ ಸುಳಿವು ನೀಡಿದ್ದ’ ಎಂದೂ ತಿಳಿಸಿದರು.

‘ಫ್ಲ್ಯಾಟ್ ಮೇಲೆ ದಾಳಿ ಮಾಡಿ ದಂಪತಿಯನ್ನು ಬಂಧಿಸಿ, 978 ಗ್ರಾಂ ತೂಕದ ಚಿನ್ನಾಭರಣ, 176 ಗ್ರಾಂ ವಜ್ರದ ಆಭರಣ ಜಪ್ತಿ ಮಾಡಲಾಯಿತು’ ಎಂದೂ ಹೇಳಿದರು.

ಗಮನ ಬೇರೆಡೆ ಸೆಳೆದು ಕೃತ್ಯ: ‘ಓಜಿಕುಪ್ಪಂ ತಂಡದ ಸದಸ್ಯನಾಗಿದ್ದ ರತ್ನಕುಮಾರ್, ಆಗಾಗ ಬೆಂಗಳೂರಿಗೆ ಬರುತ್ತಿದ್ದ. ಬ್ಯಾಂಕ್‌ಗೆ ಬಂದು ಹೋಗುತ್ತಿದ್ದ ಸಾರ್ವಜನಿಕರ ಮೇಲೆ ಕಣ್ಣಿಟ್ಟು, ಅವರ ಗಮನ ಬೇರೆಡೆ ಸೆಳೆದು ಕಳ್ಳತನ ಮಾಡುತ್ತಿದ್ದ. ಈತನ ವಿರುದ್ಧ ವಿವಿಧ ಠಾಣೆಗಳಲ್ಲಿ 26 ಪ್ರಕರಣಗಳು ದಾಖಲಾಗಿದ್ದವು’ ಎಂದು ಪೊಲೀಸರು ಮಾಹಿತಿ ನೀಡಿದರು.

‘ರತ್ನಕುಮಾರ್ ಕೃತ್ಯಕ್ಕೆ ಪತ್ನಿ ತಾಸಿನ್ ಸಹಕಾರ ನೀಡುತ್ತಿದ್ದಳು. ಇವರ ಜೊತೆ ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿರುವ ಅನುಮಾನವಿದೆ’ ಎಂದೂ ಹೇಳಿದರು.

ಗೋಡೆ ಕೊರೆದು ಚಿನ್ನಾಭರಣ ಕಳವು: 10 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಪಿ.ನಗರ ಠಾಣೆ ವ್ಯಾಪ್ತಿಯಲ್ಲಿರುವ ಪ್ರಿಯದರ್ಶಿನಿ ಮಳಿಗೆಯ ಗೋಡೆ ಕೊರೆದು ಚಿನ್ನಾಭರಣ ಕದ್ದೊಯ್ದಿದ್ದ ಆರೋಪದಡಿ 10 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

‘ಜಾರ್ಖಂಡ್‌ನ ಆದಿಲ್ ಮನರುಲ್ಲಾ ಹುಕ್, ಸುಲೇಮಾನ್ ಶೇಖ್, ಅಜೀಜುರ್ ರೆಹಮಾನ್, ರಮೇಶ್ ಬಿಷ್ಠ, ಸದ್ದಾಂ, ಮನರುಲ್ ಶೇಖ್, ಸಲೀಂ ಶೇಖ್, ಸೈಫುದ್ದೀನ್ ಶೇಖ್, ಅನಾರುಲ್ಲಾ ಶೇಖ್ ಹಾಗೂ ಮಹಿಳೆ ಶೈನೂರ್ ಬೇಬಿ ಬಂಧಿತರು. ಇವರಿಂದ ₹55 ಲಕ್ಷ ಮೌಲ್ಯದ 1 ಕೆ.ಜಿ 100 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದ ಆರೋಪಿಗಳು, ಪ್ರಿಯದರ್ಶಿನಿ ಮಳಿಗೆ ಕಟ್ಟಡಕ್ಕೆ ಹೊಂದಿಕೊಂಡಿರುವ ಮನೆಯಲ್ಲಿ ಬಾಡಿಗೆಗೆ ಇದ್ದರು. ಮಳಿಗೆ ಮೇಲೆ ಕಣ್ಣಿಟ್ಟು, ಅಲ್ಲಿ ನಡೆಯುವ ವ್ಯವಹಾರ ಹಾಗೂ ಕೆಲಸಗಾರರ ಬಗ್ಗೆ ಮಾಹಿತಿ ತಿಳಿದುಕೊಂಡಿದ್ದರು.’

‘ನಿತ್ಯವೂ ವ್ಯಾಪಾರ ಮುಗಿದ ಬಳಿಕ ಮಾಲೀಕರು, ಲಾಕರ್‌ನಲ್ಲಿ ಚಿನ್ನಾಭರಣ ಇರಿಸಿ ಮಳಿಗೆಗೆ ಬೀಗ ಹಾಕಿಕೊಂಡು ಮನೆಗೆ ಹೋಗುತ್ತಿದ್ದರು. ಈ ಬಗ್ಗೆ ತಿಳಿದುಕೊಂಡಿದ್ದ ಆರೋಪಿಗಳು, ಕಳ್ಳತನ ಮಾಡಲು ಸಂಚು ರೂಪಿಸಿದ್ದರು’ ಎಂದೂ ತಿಳಿಸಿದರು.

ಗೋಡೆ ಕೊರೆದು ಕೃತ್ಯ: ‘ಏಪ್ರಿಲ್ 17ರಂದು ತಡರಾತ್ರಿ ಗೋಡೆ ಕೊರೆದು ಮಳಿಗೆಯೊಳಗೆ ಆರೋಪಿಗಳು ನುಗ್ಗಿದ್ದರು. ಗ್ಯಾಸ್ ಕಟರ್‌ನಿಂದ ಲಾಕರ್ ಕತ್ತರಿಸಿ, ₹ 2.50 ಕೋಟಿ ಮೌಲ್ಯದ 5 ಕೆ.ಜಿ ಚಿನ್ನಾಭರಣ ಕದ್ದೊಯ್ದಿದ್ದರು. ಈ ಬಗ್ಗೆ ಮಾಲೀಕರು ದೂರು ನೀಡಿದ್ದರು’ ಎಂದು ಪೊಲೀಸರು ಹೇಳಿದರು.

‘ಕದ್ದ ಆಭರಣಗಳನ್ನು ಮಾರಿರುವ ಆರೋಪಿಗಳು, ಬಂದ ಹಣವನ್ನು ಹಂಚಿಕೊಂಡಿದ್ದಾರೆ. ಸದ್ಯ 1 ಕೆ.ಜಿ 100 ಗ್ರಾಂ ಚಿನ್ನಾಭರಣ ಮಾತ್ರ ಸಿಕ್ಕಿದ್ದು, ಉಳಿದ ಆಭರಣ ಪತ್ತೆ ಮಾಡಬೇಕಿದೆ’ ಎಂದೂ ತಿಳಿಸಿದರು.

ಗಾಂಜಾ ಮಾರಾಟ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆರೆಯ ರಾಜ್ಯ ಆಂಧ್ರ ಪ್ರದೇಶದಿಂದ ನಗರಕ್ಕೆ ಗಾಂಜಾ ತಂದು ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಅರಮನೆ ರಸ್ತೆಯ ಕಾಲೇಜೊಂದರ ಬಳಿ ಆಟೊದಲ್ಲಿ ಆರೋಪಿಗಳು ಗಾಂಜಾ ಮಾರುತ್ತಿದ್ದರು. ಗಾಂಜಾ ಮಾರಾಟದ ಮಾಹಿತಿ ಬರುತ್ತಿದ್ದಂತೆಯೇ ದಾಳಿ ಮಾಡಿ, ಇಬ್ಬರನ್ನೂ ಬಂಧಿಸಲಾಯಿತು. ಅವರಿಂದ ₹5.20 ಲಕ್ಷ ಮೌಲ್ಯದ 8 ಕೆ.ಜಿ 850 ಗ್ರಾಂ ಗಾಂಜಾ, ಆಟೊ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆಂಧ್ರಪ್ರದೇಶದ ನಿವಾಸಿಗಳಾದ ಆರೋಪಿಗಳು, ತಮ್ಮೂರಿನಿಂದಲೇ ನಗರಕ್ಕೆ ಗಾಂಜಾ ತರುತ್ತಿದ್ದರು. ಕೆಲವು ಕಾಲೇಜು ವಿದ್ಯಾರ್ಥಿ ಗಳಿಗೆ ಹಾಗೂ ಖಾಸಗಿ ಕಂಪನಿ ಉದ್ಯೋಗಿಗಳಿಗೆ ಮಾರುತ್ತಿದ್ದರು. ಇದರಿಂದ ಹಣ ಸಂಪಾದಿಸಿ, ಐಷಾರಾಮಿ ಜೀವನ ನಡೆಸು ತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಎನ್‌ಡಿಪಿಎಸ್ ಕಾಯ್ದೆಯಡಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕೃತ್ಯದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದೆ’ ಎಂದೂ ಹೇಳಿದರು.

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123. ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/32/2021–22 ದಿನಾಂಕ: 18–05–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **“ವ್ಯವಸಾಯ”** ವಲಯದಿಂದ **“ವಸತಿ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಪೃಥ್ವಿರಾಜ್. ಬಿ. ಬಿನ್ ಲೇಟ್ ಎಸ್.ಎ. ಭೈರಪ್ಪ	ನೆಲಮಂಗಲ	ಕಸಬಾ	ಗೊಲ್ಲಹಳ್ಳಿ	41/2	02–16 (00–02 ‘ಅ’ ಖರಾಬು ಸೇರಿ)	ವ್ಯವಸಾಯ	ವಸತಿ
					ಒಟ್ಟು	02-16		

ಷರಾ:– ಪ್ರಶ್ನಿತ ಸರ್ವೆ ನಂಬರ್ ಜಮೀನಿನಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆದು, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ಸುಸಜ್ಜಿತವಾದ ವಸತಿ ಬಡಾವಣೆಯನ್ನು ನಿರ್ಮಿಸಿ, ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿ ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಇದರಲ್ಲಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **“ವ್ಯವಸಾಯ”** ವಲಯದಿಂದ **“ವಸತಿ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಪಡಿಸಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/605/ಅಡ್ವರ್ಟೋರ್/2022–23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, (ಸಿ.ವಿ. ರಾಮನ್‌ನಗರ ವಿಭಾಗ), 8ನೇ ಅಡ್ಡರಸ್ತೆ, 12ನೇ ಎ ಮುಖ್ಯರಸ್ತೆ, ಹೆಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೆಂಗಳೂರು–560038.

ಸಂಖ್ಯೆ: ಕಾಪಾಅ/ಸಿವಿರಾನಗರ/ಇ–ಪ್ರೊಕ್/ದರಪಟ್ಟಿ/01/2022–23 ದಿನಾಂಕ: 21.05.2022

ದರಗಳಿಗಾಗಿ ಅಲ್ಪಾವಧಿ ದರಪಟ್ಟಿ ಪ್ರಕಟಣೆ

ಕೆಳಗಿನ ಸಹಿದಾರರು ವಲಯ ಆಯುಕ್ತರು, ಬೃ.ಬೆಂ.ಮ.ಪಾಲಿಕೆ ಇವರ ಪರವಾಗಿ ಸಿ.ವಿ.ರಾಮನ್‌ನಗರ ವಿಭಾಗದ ಬೃ.ಬೆಂ.ಮ.ಪಾಲಿಕೆ ಆವರಣದಲ್ಲಿ ಪ್ರತಿಮೆಗಳನ್ನು **ಒದಗಿಸುವುದು, ಕ್ಯಾಸ್ಟಿಂಗ್, ಎರೆಕ್ಷನ್ ಮತ್ತು ಅಳವಡಿಸಲು ಹೆಸರಾಂತ ಏಜೆನ್ಸಿಗಳು/ಸರಬರಾಜುದಾರರು/ವಿತರಕರು/ಗುತ್ತಿಗೆದಾರರಿಂದ ದರಪಟ್ಟಿಗಳನ್ನು ಆಹ್ವಾನಿಸಿದ್ದಾರೆ.** ಆಸಕ್ತ ಸರಬರಾಜುದಾರರು /ಏಜೆನ್ಸಿಗಳು ತಮ್ಮ ತಮ್ಮ ದರಪಟ್ಟಿಗಳನ್ನು **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: https://eproc.karnataka.gov.in ಮೂಲಕ** ಈ ಕೆಳಕಂಡ ಪಟ್ಟಿಯಲ್ಲಿ ವಿವರಿಸಿರುವಂತೆ ದಿನಾಂಕ: **30.05.2022**ರ ಸಂಜೆ **5:00** ಗಂಟೆಯೊಳಗೆ ದರಪಟ್ಟಿಗಳನ್ನು ಸಲ್ಲಿಸಲು ಕೋರಲಾಗಿದೆ, ಸ್ವೀಕೃತ ದರಪಟ್ಟಿಗಳನ್ನು ದಿನಾಂಕ: **31.05.2022**ರ ಸಂಜೆ **5:30** ಗಂಟೆಗೆ ತೆರೆಯಲಾಗುವುದು.

ಕ್ರ. ಸಂ.	ವಿವರಗಳು	ಯೂನಿಟ್	ಪ್ರಮಾಣ
1.	Supply, Casting, erection and fixing KITTURU RANI CHENNAMMA in Horse riding posture of height 9'0" height Bronze statue on 2' 0" Bronze pedestal over 4' 0" stone pedestal on suitable foundation. The thickness of Bronze 6 to 8mm and the total weight of statue will be 800 Kgs, the rate including all labours, Artists, moulds, suitable foundation cost & materials with all lead and lift and to get an approval of concerned official before moulding and after moulding and as directed by the Engineer in charge of the work.	Each	1.00
2.	Supply, Casting, erection and fixing SRI. JAYACHAMARAJENDRA ODEYAR in standing posture of height 12' 0" height Bronze statue on 2' 0" Bronze pedestal over 4' 0" stone pedestal on suitable foundation. The thickness of Bronze 6 to 8mm and the total weight of statue will be 1400 Kgs, the rate including all labours, Artists, moulds, suitable foundation cost & materials with all lead and lift and to get an approval of concerned official before moulding and after moulding and as directed by the Engineer in charge of the work.	Each	1.00
3.	Supply, Casting, erection and fixing DR.B.R.AMBEDKAR in standing posture of height 12'0" height Bronze statue on 2' 0" Bronze pedestal over 4' 0" stone pedestal on suitable foundation. The thickness of Bronze 6 to 8mm and the total weight of statue will be 1400 Kgs, the rate including all labours, Artists, moulds, suitable foundation cost & materials with all lead and lift and to get an approval of concerned official before moulding and after moulding and as directed by the Engineer in charge of the work.	Each	1.00
4.	Design supplying erection of structural steel support complete including preparation of membrane shop drawing of PVC tensioned membrane roof structure consisting of flying mesh out of IS mark including fixtures Galvanized cable as per Indian standard the tensile membrane made from Germany make mahler valmex FR 900 - type -II with 100% white colour PVDF lacquer on both side protected against micro ball and fungal attack UV protected with weight of 900 Grams per Sqm with 25 Years warranty with primer 2 coats of epoxy painting with necessary fixtures transportaion site supervision and commissioning of tensioned membrane structure all inclusive of all taxes.	Sqm	1.00
5.	Supply & fixing Supreme Bench Made out of Sadarahally Grey Stone with two stands with strong base with back slab (Supports) with machine cutting top slab mirror polish with 300mm seating slab with 4 line finishing.	Each	1.00

ಷರತ್ತು ಮತ್ತು ನಿಬಂಧನೆಗಳು

1) ಏಜೆನ್ಸಿಗಳು ದರಗಳನ್ನು ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಮತ್ತು ರೇಖಾ ಚಿತ್ರದಂತೆಯೇ ಸಲ್ಲಿಸತಕ್ಕದ್ದು.
2) ಸಲ್ಲಿಸುವ ದರಗಳು ಅವಶ್ಯಕ ಸಾಮಗ್ರಿಗಳು, ಕಾರ್ಮಿಕರು, ಫ್ಯಾಬ್ರಿಕೇಷನ್, ಸಾಗಾಣಿಕೆ ಇತರೆಗಳನ್ನು ಒಳಗೊಂಡಿರಬೇಕು ಮತ್ತು ಜಿ.ಎಸ್.ಟಿ ಹೊರತಾಗಿರಬೇಕು.
3) ಆಹ್ವಾನಿಸಿರುವ ದರಪಟ್ಟಿಗಳನ್ನು ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಳ್ಳಲು ಆಯಾವ್ಯಯಕ್ಕೆ ಬಳಸಿಕೊಳ್ಳಲಾಗುವುದು.
4) ಏಜೆನ್ಸಿಗಳು ತಮ್ಮ ಕಾಮಗಾರಿಯ ಹೊಣೆಗಾರಿಕೆಗಳಿಗೆ ಯಾವುದೇ ಕ್ಲೈಮ್ ಹೊಂದಿರುವುದಿಲ್ಲ.
5) ಇತರೆ ಯಾವುದೇ ಮಾಹಿತಿಗಳನ್ನು ಕೆಳಗಿನ ಸಹಿದಾರರ ಕಚೇರಿಯಲ್ಲಿ ಕಚೇರಿ ಅವಧಿಯಲ್ಲಿ ಅಥವಾ ಸಂಪರ್ಕ ಸಂಖ್ಯೆ: 9480688268 ರಲ್ಲಿ ಪಡೆದುಕೊಳ್ಳಬಹುದು.
6) ಕಾರಣಗಳನ್ನು ನಿಯೋಜಿಸದೆ ಭಾಗಶಃ ಅಥವಾ ಎಲ್ಲಾ ದರಪಟ್ಟಿಗಳನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬೃ.ಬೆಂ.ಮ.ಪಾಲಿಕೆ ಕಾಯ್ದಿರಿಸಿಕೊಂಡಿದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು – ಸಿ.ವಿ.ರಾಮನ್‌ನಗರ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರಸಭಾ ಕಾರ್ಯಾಲಯ, ರಾಬರ್ಟ್‌ಸನ್‌ಪೇಟೆ, ಕೆ.ಜಿ.ಎಫ್–563 122

ದೂರವಾಣಿ: 08153–260256, ಇ–ಮೇಲ್: itstaff_ulb_robertsonpet@yahoo.com

ನಂ: ನಸರಾ/ಸ.ಅ/ಇ–ಪ್ರೊಕ್/ಸಿಆರ್/02/2022–23 ದಿನಾಂಕ: 09.05.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)

ರಾಬರ್ಟ್‌ಸನ್ ಪೇಟೆ ನಗರಸಭಾ ವ್ಯಾಪ್ತಿಯಲ್ಲಿ 14ನೇ ಹಣಕಾಸು, 15ನೇ ಹಣಕಾಸು ಅನುದಾನದ ಅಡಿಯಲ್ಲಿ ಘನತ್ಯಾಜ್ಯ ವಿಲೇವಾರಿ ನಿರ್ವಹಣೆ ಕೆಲಸಗಳಿಗೆ ಅಗತ್ಯವಿರುವ ಸಾಮಗ್ರಿಗಳು ಮತ್ತು ಯಂತ್ರೋಪಕರಣಗಳನ್ನು ಅಳವಡಿಸಿ ಅನುಷ್ಠಾನಗೊಳಿಸಲು ಅರ್ಹ ನೊಂದಾಯಿತ ಅಧಿಕೃತ ಏಜೆನ್ಸಿಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ.–1999 ನಿಯಮಗಳು 2000) ಅನ್ವಯ ಐಟಂವಾರು ದರಗಳ ದ್ವಿ–ಲಕೋಟೆ ಪದ್ಧತಿ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಟೆಂಡರ್‌ಗಳನ್ನು **ದಿನಾಂಕ:27.05.2022ರ ಅಪರಾಹ್ನ 5.30 (17.30) ಗಂಟೆ ಒಳಗೆ** ಸಲ್ಲಿಸತಕ್ಕದ್ದು. ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು **ದಿನಾಂಕ:30.05.2022 ರಂದು ಸಂಜೆ 5.30 (17.30) ಗಂಟೆಗೆ** ತೆರೆಯಲಾಗುವುದು. ಸದರಿ ಟೆಂಡರ್‌ನ ಆರ್ಥಿಕ ಬಿಡ್‌ನ್ನು **ದಿನಾಂಕ:31.05.2022ರಂದು ಸಂಜೆ 12.00 ಗಂಟೆಗೆ (12.00)** (ಸಾಧ್ಯವಾದಲ್ಲಿ) ತೆರೆಯಲಾಗುವುದು. ಆಯಾ ಕಾಮಗಾರಿಗಳಿಗೆ ಅನ್ವಯಿಸುವ ಟೆಂಡರ್ ದಾಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ತಾಂತ್ರಿಕ ಶಾಖೆ ನಗರಸಭೆ ರಾಬರ್ಟ್‌ಸನ್ ಪೇಟೆ ರವರನ್ನು ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂ:08153–260256.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ.ಮೊತ್ತ (ರೂ.ಗಳಲ್ಲಿ)	ಅನ್ವಯಿಸುವ ದಾಸ್ತಾವೇಜು	ಗುತ್ತಿಗೆದಾರರ ದರ್ಜೆ/ಮೀಸಲಾತಿ
1	DMA/2021-22/IND13615/Call-3	90.00	1,80,000/-	KG-2	Approved Agency
1	DMA/2021-22/IND13609/Call-3	6.32	16,000/-	KG-1	Approved Agency
3	DMA/2021-22/IND13607/Call-2	75.00	1,50,000/-	KG-2	Approved Agency
4	DMA/2021-22/RD/WORK_INDENT129298	13.81	35,000/-	KW-1	Class IV and above
5	DMA/2022-23/OW/WORK_INDENT 130756	9.81	25,000/-	KW-1	Class IV and above
6	DMA/2022-23/OW/WORK_INDENT130938	31.99	32,000/-	KW-2	Class III and above (SC)
7	DMA/2022-23/OW/WORK_INDENT131723	9.17	11,500/-	KW-1	Class IV and above (SC)
8	DMA/2021-22/RD/WORK_INDENT129298/ Call-2	13.81	35,000/-	KW-1	Class IV and above


ಸೂಚನೆ: ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವಜನಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾದಿನದ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಿಕೊಳ್ಳತಕ್ಕದ್ದು. ಹಾಗೂ ಮೇಲ್ಕಂಡ ಟೆಂಡರ್‌ಗಳಿಗೆ ನಿಗಧಿಪಡಿಸಿದ ಸಮಯದಲ್ಲಿ ಯಾರೂ ಭಾಗವಹಿಸದಿದ್ದ ಸಂದರ್ಭದಲ್ಲಿ ಏಳು ದಿನಗಳ ಅಧಿಕ ಅವಧಿಯನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಳವಡಿಸಿದೆ. ತಿದ್ದುಪಡಿ ಪ್ರಕಟಣೆಗಳು ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–	ಸಹಿ/–	ಸಹಿ/–
(ಡಾ.ವಳ್ಳಲ್ ಮುನಿಸ್ವಾಮಿ)	(ಶ್ರೀಮತಿ ದೇವಿ)	(ಶ್ರೀ ಜಿ.ನವೀನ ಚಂದ್ರ)
ಅಧ್ಯಕ್ಷರು	ಉಪಾಧ್ಯಕ್ಷರು	ಪೌರಾಯುಕ್ತರು
ನಗರಸಭೆ, ರಾಬರ್ಟ್‌ಸನ್‌ಪೇಟೆ	ನಗರಸಭೆ, ರಾಬರ್ಟ್‌ಸನ್‌ಪೇಟೆ	ನಗರಸಭೆ, ರಾಬರ್ಟ್‌ಸನ್‌ಪೇಟೆ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ91/ಎಂ.ಸಿ.ಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಮಹದೇವಪುರ ವಲಯ: ಅಭಿವೃದ್ಧಿ ಕಾಮಗಾರಿ ಪರಿಶೀಲನೆ

ಹೊರಮಾವು: ರಾಜಕಾಲುವೆ ಒತ್ತುವರಿ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರಮಾವು ವಾರ್ಡ್ ವ್ಯಾಪ್ತಿಯ ರಾಜಕಾಲುವೆಗಳನ್ನು ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡಿರುವುದನ್ನು ಗುರುತಿಸಿ, ಕೂಡಲೆ ತೆರವು ಕಾರ್ಯ ಪ್ರಾರಂಭಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚಿಸಿದರು.

ಮಹದೇವಪುರ ವಲಯದಲ್ಲಿ ಮಳೆ ಸಂತ್ರಸ್ತ ಪ್ರದೇಶಗಳನ್ನು ಶನಿವಾರ ಪರಿಶೀಲಿಸಿದ ಅವರು ಹೊರಮಾವು ವಾರ್ಡ್‌ಗೂ ಭೇಟಿ ನೀಡಿದರು. ಇಲ್ಲಿನ ಪಾಮ್ ಬೀಚ್ ಅಪಾರ್ಟ್‌ಮೆಂಟ್ ಸಮುಚ್ಚಯದ ಬಳಿಯ ರಸ್ತೆಯಲ್ಲಿ ಮಳೆ ನೀರು ನಿಂತು ವಾಹನ ಸಂಚಾರಕ್ಕೆ ಸಮಸ್ಯೆಯಾಗುತ್ತಿತ್ತು. ಅದನ್ನು ತಡೆಯಲು ಕಚ್ಚಾ ರಾಜಕಾಲುವೆಯನ್ನು ದುರಸ್ತಿಪಡಿಸಲಾಗುತ್ತಿದೆ. ಅದರ ಬದಲು ಕಾಲುವೆಯನ್ನು ವಿಸ್ತರಿಸಿ ಸದೃಢವಾದ ಕಾಲುವೆ ನಿರ್ಮಿಸುವಂತೆ ಮುಖ್ಯ ಆಯುಕ್ತರು ಅಧಿಕಾರಿಗಳಿಗೆ ಸಲಹೆ ನೀಡಿದರು.

ಕೆ.ಆರ್.ಪುರ ವಾರ್ಡ್‌ನಲ್ಲಿ ಹಳೆ ಮದ್ರಾಸ್ ರಸ್ತೆಯ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ ಜಲಾವೃತವಾಗುವ ಪ್ರದೇಶದಲ್ಲಿ ಚರಂಡಿಯು ರಸ್ತೆ ಮಟ್ಟಕ್ಕಿಂತ ಎತ್ತರದಲ್ಲಿದೆ. ಹಾಗಾಗಿ ಮಳೆನೀರು ಚರಂಡಿಯಲ್ಲಿ ಸರಾಗವಾಗಿ ಹರಿಯದೇ ರಸ್ತೆಯಲ್ಲೇ ನಿಲ್ಲುತ್ತಿದೆ.



ಕೆರೆ ಅಭಿವೃದ್ಧಿ ಕಾಮಗಾರಿಯನ್ನು ತುಷಾರ್ ಗಿರಿನಾಥ್ ವೀಕ್ಷಿಸಿದರು. ವಲಯ ಆಯುಕ್ತ ಡಾ.ಕೆ.ವಿ.ತ್ರಿಲೋಕಚಂದ್ರ ಇದ್ದಾರೆ

‘ಚರಂಡಿ ವಿನ್ಯಾಸವನ್ನು ಬದಲಿಸಿ, ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಬೇಕು. ಕೆಲವೆಡೆ ಮಳೆನೀರು ಹರಿಯುವ ಚರಂಡಿಗೆ ಕೊಳಚೆ ನೀರು ಸೇರುತ್ತಿದೆ. ಇದನ್ನು ತಡೆಯಲು ಕ್ರಮಕೈಗೊಳ್ಳಬೇಕು’ ಎಂದು ಮುಖ್ಯ ಆಯುಕ್ತರು ಸೂಚನೆ ನೀಡಿದರು.

ನಾರಾಯಣಪುರ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಪರಿಶೀಲಿಸಿದ ಅವರು, ಕೆರೆಯ ಕಾಲುವೆಗೆ ಕಸ ಎಸೆಯದಂತೆ ತಡೆಯಲು ಬೇಲಿ ನಿರ್ಮಿಸುವಂತೆ ನಿರ್ದೇಶನ ನೀಡಿದರು.

ಹಳೆ ವಿಮಾನ ನಿಲ್ದಾಣ ರಸ್ತೆಯ ಯಮಲೂರು ಜಂಕ್ಷನ್‌ನಿಂದ ಹೊರ ವರ್ತುಲ ರಸ್ತೆಗೆ ಸಂಪರ್ಕ ಕಲ್ಪಿಸುವ 2.9 ಕಿ.ಮೀ ರಸ್ತೆ ವಿಸ್ತರಣೆ ಕಾಮಗಾರಿಯನ್ನು ಪರಿಶೀಲಿಸಿದರು. ₹ 7 ಕೋಟಿ ಮೊತ್ತದಲ್ಲಿ ಕಾಮಗಾರಿ ನಡೆಸಲಾಗುತ್ತಿದೆ.

ಮಾರತ್ತಹಳ್ಳಿ ಬಳಿ ರೈಲ್ವೆ ಮೇಲ್ಸೇತುವೆಯ ಕೆಳಗೆ ಎಚ್.ಎ.ಎಲ್ ಕಡೆಯಿಂದ ಬರುವವರು ವರ್ತುಲ ರಸ್ತೆಗೆ ಯು-ಟರ್ನ್ ತೆಗೆದುಕೊಳ್ಳಲು ₹ 6 ಕೋಟಿ ವೆಚ್ಚದಲ್ಲಿ ಕೆಳ ಸೇತುವೆ ನಿರ್ಮಿಸಲಾಗುತ್ತಿದೆ. ಕಾಮಗಾರಿಯನ್ನು ಪರಿಶೀಲಿಸಿದ ಮುಖ್ಯ ಆಯುಕ್ತರು, ‘ಭೂಸ್ವಾಧೀನ ಸಮಸ್ಯೆ ಇತ್ಯರ್ಥಪಡಿಸಿಕೊಂಡು ಬಾಕಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ’ ಎಂದು ನಿರ್ದೇಶನ ನೀಡಿದರು.

ಕುಂದಲಹಳ್ಳಿ ಜಂಕ್ಷನ್ ಬಳಿ ₹ 19.50 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಕೆಳಸೇತುವೆ ಕಾಮಗಾರಿಯನ್ನು ಪರೀಶೀಲನೆ ನಡೆಸಿದರು. ನಾಲ್ಕು ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಬಾಕಿಯಾಗಿದ್ದರಿಂದ ಸಮಸ್ಯೆ ಎದುರಾಗಿದೆ. ಭೂಸ್ವಾಧೀನ ಸಮಸ್ಯೆ ಇತ್ಯರ್ಥಪಡಿಸಿ 15 ದಿನಗಳಲ್ಲಿ ಬಾಕಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಿದರು.

ವರ್ತೂರು ರಸ್ತೆ ವಿಸ್ತರಣೆ ಕಾಮಗಾರಿಯಿಂದ ವಾಹನ ಸಂಚಾರಕ್ಕೆ ಸಮಸ್ಯೆ ಆಗದಂತೆ ಎಚ್ಚರ ವಹಿಸಬೇಕು. ಕೆಲಸವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ವಲಯ ಆಯುಕ್ತರಾದ ಡಾ.ತ್ರಿಲೋಕಚಂದ್ರ, ಜಂಟಿ ಆಯುಕ್ತ ವೆಂಕಟಾಚಲಪತಿ, ಮುಖ್ಯ ಎಂಜಿನಿಯರ್‌ಗಳಾದ ಪರಮೇಶ್ವರಯ್ಯ, ಬಿ.ಎಸ್. ಪ್ರಹ್ಲಾದ್ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.



ಸಂಸದ ಪಿ.ಸಿ.ಮೋಹನ್ ಅವರು ರೈಲ್ವೆ ಕಾಮಗಾರಿಯ ರೂಪುರೇಷೆ ಪರಿಶೀಲಿಸಿದರು. ಶ್ಯಾಮ್ ಸಿಂಗ್ ಹಾಗೂ ಸಂಜೀವ್ ಕಿಶೋರ್ ಇದ್ದಾರೆ

ವಿಮಾನ ನಿಲ್ದಾಣಕ್ಕೆ ರೈಲು ಸೇವೆ ಹೆಚ್ಚಿಸಿ: ಸಂಸದ ಪಿ.ಸಿ. ಮೋಹನ್

ಬೆಂಗಳೂರು: ‘ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರೈಲು ಸೇವೆ ಹೆಚ್ಚಿಸುವ ಸಂಬಂಧ ನಿಲ್ದಾಣದ ಆಡಳಿತದ ಜೊತೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಿ’ ಎಂದು ಸಂಸದ ಪಿ.ಸಿ. ಮೋಹನ್ ಅವರು ರೈಲ್ವೆ ಅಧಿಕಾರಿಗಳಿಗೆ ಸೂಚಿಸಿದರು.

ನೈಋತ್ಯ ರೈಲ್ವೆ ಅಧಿಕಾರಿಗಳೊಂದಿಗೆ ಶನಿವಾರ ಸಭೆ ನಡೆಸಿದ ಅವರು ಕಾಮಗಾರಿಗಳ ಪ್ರಗತಿಯ ಕುರಿತು ಮಾಹಿತಿ ಪಡೆದರು.

‘ಕಾರ್ಮೆಲರಾಮ್ ಬಳಿಯ ರಸ್ತೆಯಲ್ಲಿ ಅಂದಾಜು ₹48.16 ಕೋಟಿ ವೆಚ್ಚದಲ್ಲಿ ರೈಲ್ವೆ ಮೇಲ್ಸೇತುವೆ ನಿರ್ಮಾಣ ಮಾಡಲು ಅನುಮೋದನೆ ದೊರೆತಿದೆ. ಇದಕ್ಕಾಗಿ 2,465 ಚ.ಮೀ ಜಮೀನಿನ ಅಗತ್ಯವಿದ್ದು, ಬಿಬಿಎಂಪಿ ಜೊತೆ ಚರ್ಚಿಸಿ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಲಾಗುತ್ತದೆ. ಈ ತಿಂಗಳ ಅಂತ್ಯದೊಳಗೆ ಟೆಂಡರ್ ಕೂಡ ಕರೆಯಲಾಗುತ್ತದೆ’ ಎಂದು ಅಧಿಕಾರಿಗಳು ತಿಳಿಸಿದರು.

‘ಭೂಸ್ವಾಧೀನ ಕುರಿತು ಸ್ಥಳೀಯ ಶಾಸಕರು ಹಾಗೂ ಬಿಬಿಎಂಪಿ ಅಧಿಕಾರಿಗಳ ಜೊತೆ ಚರ್ಚಿಸುತ್ತೇನೆ. ಈ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಕೈಗೊಳ್ಳಲು ಅಗತ್ಯ ಸಹಕಾರ ನೀಡುವಂತೆ ಸೂಚಿಸುತ್ತೇನೆ’ ಎಂದು ಅಧಿಕಾರಿಗಳಿಗೆ ಭರವಸೆ ನೀಡಿದರು.

ನೈಋತ್ಯ ರೈಲ್ವೆ ವ್ಯವಸ್ಥಾಪಕ ನಿರ್ದೇಶಕ ಸಂಜೀವ್ ಕಿಶೋರ್, ಡಿಆರ್‌ಎಂ ಶ್ಯಾಮ್ ಸಿಂಗ್, ಎಚ್.ಎಸ್. ವರ್ಮಾ, ಆರ್.ಎಲ್.ಮೀನಾ ಇದ್ದರು.

ಮೈದುಂಬಿದ ಭರಚುಕ್ಕಿ ಜಲಪಾತ

ಕೊಳ್ಳೇಗಾಲ: ಕೊಡಗು ಸೇರಿ ಕಾವೇರಿ ನದಿ ಅಚ್ಚುಕಟ್ಟು ಪ್ರದೇಶದಲ್ಲಿ ಹಲವು ದಿನಗಳಿಂದ ಸುರಿಯುತ್ತಿರುವ ಮಳೆಗೆ ಕಾವೇರಿ ನದಿಯಲ್ಲಿ ನೀರಿನಮಟ್ಟ ಹೆಚ್ಚಾಗಿದ್ದು, ಪ್ರಸಿದ್ಧ ಭರಚುಕ್ಕಿ ಜಲಪಾತ ಭೋರ್ಗರೆಯಲು ಆರಂಭಿಸಿದೆ.

ಮೂರು ದಿನಗಳಿಂದ ಜಲಪಾತದಲ್ಲಿ ಹೆಚ್ಚು ನೀರು ಕಂಡು ಬಂದಿದ್ದು, ಪ್ರವಾಸಿಗರು ಕೂಡ ಕೊರಕಲು ಕಲ್ಲಿನ ಮೂಲಕ ಧುಮ್ಮಿಕ್ಕುವ ಜಲಧಾರೆಯ ವೀಕ್ಷಣೆಗೆ ಬರುತ್ತಿದ್ದಾರೆ.

ಸಾಮಾನ್ಯವಾಗಿ ಮಳೆಗಾಲ ಆರಂಭಗೊಂಡ ಒಂದು ತಿಂಗಳ ನಂತರ, ಜುಲೈನಲ್ಲಿ ಜಲಪಾತಕ್ಕೆ ಜೀವಕಳೆ ಬರುತ್ತಿತ್ತು. ಆಗಸ್ಟ್‌ನಲ್ಲಿ ಭೋರ್ಗರೆಯಲು ಆರಂಭಿಸುತ್ತದೆ. ಈ ಬಾರಿ ಮೇ ಮಧ್ಯಭಾಗದಲ್ಲೇ ಜಲಧಾರೆ ಮೈತುಂಬಿದೆ.

ನದಿಯಲ್ಲೂ ನೀರು: ವಾರದಿಂದೀಚೆಗೆ ಕಾವೇರಿ ನದಿಯಲ್ಲೂ ನೀರಿನ ಹರಿವು ಹೆಚ್ಚಾಗಿದೆ. ಮಳೆಯಿಂದಾಗಿ ಮಣ್ಣು ಮಿಶ್ರಿತ ಕೆಂಬಣ್ಣದ ನೀರು ಹರಿಯುತ್ತಿದೆ. ನದಿ ನೀರಿನ ರಭಸಕ್ಕೆ ಹಳೆ ಬಟ್ಟೆ, ಮಡಕೆ, ಮರದ ಚೆಕ್ಕೆ, ಕಸ ಹಾಗೂ ಪಾಸ್ಟಿಕ್ ತ್ಯಾಜ್ಯಗಳು ಕೊಚ್ಚಿಕೊಂಡು ಹೋಗುತ್ತಿವೆ. ತಾಲ್ಲೂಕಿನ ಶಿವನ ಸಮುದ್ರದ ಬಳಿಯ ವೆಸ್ಲಿ ಸೇತುವೆ ಬಳಿ ತ್ಯಾಜ್ಯಗಳು ನಿಂತಿವೆ.

ನಿರ್ಬಂಧ: ನೀರಿನ ಮಟ್ಟ ಹೆಚ್ಚಾಗಿರುವುದರಿಂದ ಸಾರ್ವಜನಿಕರು ನದಿ ನೀರಿಗೆ ಇಳಿಯುವುದಕ್ಕೆ ತಾಲ್ಲೂಕು ಆಡಳಿತ ನಿರ್ಬಂಧ ವಿಧಿಸಿದೆ. ವೆಸ್ಲಿ ಸೇತುವೆಯ ಕೆಳಗೆ ಇಳಿಯಬಾರದು ಎಂದು ಪ್ರವಾಸಿಗರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.



ನಿರಂತರ ಮಳೆಯಿಂದಾಗಿ ಕೊಳ್ಳೇಗಾಲ ತಾಲ್ಲೂಕಿನ ಶಿವನಸಮುದ್ರದಲ್ಲಿರುವ ಭರಚುಕ್ಕಿ ಜಲಪಾತಕ್ಕೆ ಜೀವ ಕಳೆ ಬಂದಿದ್ದು, ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ

ಕುಮಾರಸ್ವಾಮಿ ಆರೋಗ್ಯ ಕೆಣಕಿದ ಸಚಿವ

ಎಚ್‌ಡಿಕೆ –ಸೋಮಣ್ಣ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಳೆಯಿಂದ ಹಾನಿಗೀಡಾಗಿರುವ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸುವ ವಿಚಾರದಲ್ಲಿ ವಸತಿ ಸಚಿವ ವಿ. ಸೋಮಣ್ಣ ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ನಡುವೆ ಶನಿವಾರ ತೀವ್ರ ವಾಕ್ಸಮರ ನಡೆದಿದೆ.

ಕುಮಾರಸ್ವಾಮಿ ಅವರು ವಿವಿಧ ಪ್ರದೇಶಗಳಿಗೆ ಭೇಟಿ ನೀಡುತ್ತಿರುವ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸೋಮಣ್ಣ ಅವರು, ‘ಕುಮಾರಸ್ವಾಮಿ ಅವರು ನಡೆದಷ್ಟೂ ಆರೋಗ್ಯಕ್ಕೆ ಒಳ್ಳೆಯದು. ಅವರು ನಡೆಯಲಿ, ಜನರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಲಿ. ಒಂದಷ್ಟು ಆರೋಗ್ಯವೂ ಸುಧಾರಿಸುತ್ತದೆ’ ಎಂದು ಹೇಳಿದರು.

‘ಅವರು ಎರಡು ಬಾರಿ ಮುಖ್ಯಮಂತ್ರಿ ಆಗಿದ್ದರು. ಸಿದ್ದರಾಮಯ್ಯ ಅವರೂ ಮುಖ್ಯಮಂತ್ರಿ ಆಗಿದ್ದರು. ಯಾರ ಕಾಲದಲ್ಲಿ ಏನೇನು ಆಗಿದೆ ಎಂಬುದು ನಮಗೆ ಚೆನ್ನಾಗಿ ಗೊತ್ತಿದೆ. ಅವರು ಓಡಾಡಿ ಆರೋಗ್ಯವನ್ನು ಸರಿ ಮಾಡಿಕೊಳ್ಳಲಿ. ಎಲ್ಲವನ್ನೂ ಸರಿಪಡಿಸಿದ್ದೇವೆ ಎಂಬ ದುರಹಂಕಾರದ ಮಾತನ್ನು ನಾವು ಆಡುವುದಿಲ್ಲ. ಅವರ ಅಮೂಲ್ಯವಾದ ಸಲಹೆಗಳನ್ನು ಸ್ವೀಕರಿಸಲು ಸಿದ್ಧರಿದ್ದೇವೆ’ ಎಂದು ಸೋಮಣ್ಣ ಹೇಳಿದರು.

‘ನಮ್ಮ ಬಗ್ಗೆ ಕಾಳಜಿ ಬೇಡ’: ಸೋಮಣ್ಣ ಹೇಳಿಕೆ ಕುರಿತು ಪ್ರತಿಕ್ರಿಯೆ ನೀಡಿದ ಕುಮಾರಸ್ವಾಮಿ, ‘ನಮ್ಮ ಆರೋಗ್ಯದ ಬಗ್ಗೆ ಸೋಮಣ್ಣ ಅವರಿಗೆ ಕಾಳಜಿ ಬೇಡ. ಆರೋಗ್ಯ ಯಾವ ರೀತಿ ಇಟ್ಟುಕೊಳ್ಳಬೇಕು ಎಂಬುದನ್ನು ವೈದ್ಯರು ನಮಗೆ ಹೇಳಿದ್ದಾರೆ. ನಿಮಗೆ ಯೋಗ್ಯತೆ ಇದ್ದರೆ ಬೆಂಗಳೂರು ನಗರದ ಆರೋಗ್ಯ ಸರಿಪಡಿಸಿ’ ಎಂದರು.

‘ಸೋಮಣ್ಣ ಜೆಡಿಎಸ್ ಪಕ್ಷದಲ್ಲಿದ್ದು, ದೇವೇಗೌಡರ ಹೆಸರು ಬಳಸಿಕೊಂಡು ಯಾವ ರೀತಿ ಬೆಳೆದರು ಎಂಬುದು ಗೊತ್ತಿದೆ. ಹಿಂದಿನಿಂದ ನೀರು ನಿಲ್ಲಿಸಲು ಅಧಿಕಾರಿಗಳಿಗೆ ಹೇಳಿ, ಜನರ ಮುಂದೆ ಬಂದು ಅಧಿಕಾರಿಗಳಿಗೆ ಬೈಯ್ಯುವ ಕೆಲಸವನ್ನು ನಾನು ಮಾಡುವುದಿಲ್ಲ. ರಾಜಕಾಲುವೆ, ರಸ್ತೆ ಕಾಮಗಾರಿ ಮಾಡದೆ ಕೋಟ್ಯಂತರ ರೂಪಾಯಿ ಲೂಟಿ ಮಾಡಿರುವುದೂ ಗೊತ್ತು’ ಎಂದು ಹೇಳಿದರು.

ನಿಧನ ವಾರ್ತೆ

ಬಿ.ನಾಗರಾಜು




ನೆಲಮಂಗಲ: ನಿವೃತ್ತ ಜೀವ ವಿಮಾ ಅಭಿವೃದ್ಧಿ ಅಧಿಕಾರಿಬಿ. ನಾಗರಾಜು (75) ಅವರು ಶನಿವಾರ ಮಧ್ಯಾಹ್ನ ನಿಧನರಾಗಿದ್ದಾರೆ. ಶಾನುಭೋಗರಾಗಿ, ಬಸವನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ, ಲಯನ್ಸ್ ಸಂಸ್ಥೆ ಅಧ್ಯಕ್ಷರಾಗಿ ಮತ್ತು ಹಲವು ಸಂಘ ಸಂಸ್ಥೆಗಳ ಪದಾಧಿಕಾರಿಯಾಗಿ ಅವರು ಸೇವೆ ಸಲ್ಲಿಸಿದ್ದರು.

ಭಾನುವಾರ ಬೆಳಿಗ್ಗೆ 10ಕ್ಕೆ ಬಸವನಹಳ್ಳಿಯ ತಮ್ಮ ಜಮೀನಿನಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ. ಇವರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ.

ಸಂಪರ್ಕಕ್ಕೆ: 93429 93599

ಚಿತ್ರಾವಳಿ



ಭರವಸೆ ಚಾರಿಟಬಲ್ ಫೌಂಡೇಷನ್ ನಗರದಲ್ಲಿ ಶನಿವಾರ ಆಯೋಜಿಸಿದ ಗ್ರಾಮೀಣ ಆರೋಗ್ಯ ಮಿಷನ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಕುಕ್ಕೆ ಸುಬ್ರಹ್ಮಣ್ಯ ಮಠದ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ ಹಾಗೂ ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ.ಕೆ.ವಿ.ತ್ರಿಲೋಕಚಂದ್ರ ಚರ್ಚಿಸಿದರು. ಫೌಂಡೇಷನ್ ಸಂಸ್ಥಾಪನಾ ಅಧ್ಯಕ್ಷೆ ಡಾ. ಪದ್ಮಿನಿ ಪ್ರಸಾದ್, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಇದ್ದಾರೆ – ಪ್ರಜಾವಾಣಿ ಚಿತ್ರ



ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ಮೋಹನ ಶಾಂತನಗೌಡರ ಸಂಸ್ಮರಣಾ ಕಾರ್ಯಕ್ರಮ ಶನಿವಾರ ಧಾರವಾಡದ ಕೃಷಿ ವಿಶ್ವವಿದ್ಯಾಲಯ ಆವರಣದ ರೈತ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ನಡೆಯಿತು. ಹೈಕೋರ್ಟ್ ಮುಖ್ಯನ್ಯಾಯಮೂರ್ತಿ ಋತುರಾಜ್ ಅವಸ್ಥಿ ಅವರು ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ದಿನೇಶ ಮಾಹೇಶ್ವರಿ, ಎ.ಎಸ್. ಬೋಪಣ್ಣ, ವಿನೀತ್ ಶರಣ, ಬಿ.ಆರ್.ಗವಾಯಿ ಇದ್ದಾರೆ

ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆ: ಆರೋಪಿ ಜಾಮೀನು ತಿರಸ್ಕೃತ

ಬೆಂಗಳೂರು: ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆ ಹಾಕಿದ್ದ ಪ್ರಕರಣದಲ್ಲಿ ಬಂಧಿಸಲಾಗಿರುವ ಆರೋಪಿ ರೆಹಮತ್–ಉಲ್ಲಾ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು 67ನೇ ಸಿಸಿಎಚ್ ನ್ಯಾಯಾಲಯ ಶನಿವಾರ ತಿರಸ್ಕರಿಸಿದೆ.

ಹಿಜಾಬ್ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್ ನ್ಯಾಯಮೂರ್ತಿಗಳು ತೀರ್ಪು ನೀಡಿದ್ದರು. ಅದನ್ನು ವಿರೋಧಿಸಿದ್ದ ತಮಿಳುನಾಡಿನ ತೌಹೀದ್ ಜಮಾತ್ (ಟಿ.ಎನ್.ಟಿ.ಜೆ) ಮುಸ್ಲಿಂ ಸಂಘಟನೆ ಮುಖಂಡ ಆರ್. ರಹಮತ್–ಉಲ್ಲಾ, ಮಾರ್ಚ್ 17ರಂದು ಮಧುರೈನಲ್ಲಿ ನಡೆದ ಸಮಾವೇಶದಲ್ಲಿ ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆಯೊಡ್ಡಿದ್ದ. ವಿಡಿಯೊ ಆಧರಿಸಿ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ರೆಹಮತ್– ಉಲ್ಲಾನನ್ನು ತಮಿಳುನಾಡಿನಲ್ಲಿ ಬಂಧಿಸಿ ಕರೆತಂದಿದ್ದ ಪೊಲೀಸರು, ನ್ಯಾಯಾಂಗ ಬಂಧನಕ್ಕೆ ನೀಡಿದ್ದರು. ಜಾಮೀನು ಕೋರಿ ಆರೋಪಿ ಇತ್ತೀಚೆಗೆ ಅರ್ಜಿ ಸಲ್ಲಿಸಿದ್ದ.

ಜಾರ್ಖಂಡ್ ಮಾದರಿಯಲ್ಲಿ ಕೊಲೆ ಬೆದರಿಕೆ: ಜಾಮೀನಿಗೆ ಆಕ್ಷೇಪಣೆ ಸಲ್ಲಿಸಿದ್ದ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎಸ್.ಪಾಟೀಲ, ‘ಜಾರ್ಖಂಡ್‌ನಲ್ಲಿ ನ್ಯಾಯಾಧೀಶರೊಬ್ಬರನ್ನು ಕೊಲೆ ಮಾಡಿದ ರೀತಿಯಲ್ಲೇ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳನ್ನು ಕೊಲೆ ಮಾಡುವುದಾಗಿ ಆರೋಪಿ ಬೆದರಿಕೆ ಹಾಕಿದ್ದ. ಕಾನೂನು ಬಾಹಿರ ಚಟುವಟಿಕೆಗಳ ತಡೆ (ಯುಎಪಿ) ಕಾಯ್ದೆಯಡಿ ಆರೋಪಿ ವಿರುದ್ಧ ಪ್ರಕರಣ ದಾಖಲಾಗಿದೆ. ಹೀಗಾಗಿ, ಜಾಮೀನು ನೀಡಬಾರದು’ ಎಂದು ಹೇಳಿದ್ದರು. ‘ನ್ಯಾಯಮೂರ್ತಿಗಳನ್ನು ಕೊಲೆ ಮಾಡುವುದು ಹೇಗೆ ? ಅವರಿಗೆ ಇರುವ ಭದ್ರತೆಗಳೇನು? ಎಂಬುದನ್ನು ತಿಳಿದುಕೊಳ್ಳಲು ಆರೋಪಿ, ಯೂಟ್ಯೂಬ್ ಹಾಗೂ ಇತರೆ ಸಾಮಾಜಿಕ ಮಾಧ್ಯಮಗಳಲ್ಲಿ ಹುಡುಕಾಡಿದ್ದ’ ಎಂದೂ ಪಾಟೀಲ ವಾದಿಸಿದ್ದರು.



ರೆಹಮತ್–ಉಲ್ಲಾ

ದರ ಏರಿಕೆಯಿಂದ ಜನ ಕಂಗಾಲು ● ಸೇವೆ ಬಗ್ಗೆ ಅಸಮಾಧಾನ

ಪ್ರಯಾಣಿಕರ ಮೇಲೆ ಓಲಾ, ಉಬರ್ 'ಸವಾರಿ'

● ಜಿ.ಶಿವಕುಮಾರ

ಪ್ರಜಾವಾಣಿ ವಿಶೇಷ

ಬೆಂಗಳೂರು: ಆ್ಯಪ್ ಆಧಾರಿತ ಆಟೊ, ಟ್ಯಾಕ್ಸಿ ಒದಗಿಸುವ ಓಲಾ, ಉಬರ್ ಕಂಪನಿಗಳು 'ಸಮಯ–ಸಂದರ್ಭಕ್ಕೆ' ಅನುಗುಣವಾಗಿ ಮನಸೋ ಇಚ್ಛೆ ದರ ಏರಿಕೆ ಮಾಡುತ್ತಿದ್ದು, ಇದರಿಂದ ಪ್ರಯಾಣಿಕರು ತೊಂದರೆ ಅನುಭವಿಸು-ವಂತಾಗಿದೆ.

ಗ್ರಾಹಕರನ್ನು ಆಕರ್ಷಿಸುವ ಸಲುವಾಗಿ ಮೊದಲು ಹಲವು ರಿಯಾಯಿತಿಗಳ ಜೊತೆಗೆ ಗುಣಮಟ್ಟದ ಸೇವೆ ಒದಗಿಸುತ್ತಿದ್ದ ಈ ಸಂಸ್ಥೆಗಳು ಈಗ ಪ್ರಯಾಣಿಕರ ಹಿತ ಕಡೆಗಣಿಸುತ್ತಿ-ರುವ ಆರೋಪ ಕೇಳಿಬಂದಿದೆ. ದರ ಏರಿಕೆ ಮೂಲಕ ಪ್ರಯಾಣಿಕ-ರನ್ನು ಸುಲಿಗೆ ಮಾಡುತ್ತಿರು-ವುದಕ್ಕೆ ಆಕ್ರೋಶವೂ ವ್ಯಕ್ತವಾಗುತ್ತಿದೆ.

'ಹನುಮಂತನಗರದಿಂದ ಮೆಜೆಸ್ಟಿಕ್‌ಗೆ ಆಗಾಗ ಆ್ಯಪ್ ಆಧಾರಿತ ಸೇವೆ ಒದಗಿಸುವ ಆಟೊದಲ್ಲಿ ಓಡಾಡುತ್ತಿದ್ದೆ. ಕೆಲ ದಿನಗಳ ಹಿಂದೆ ₹40 ಇದ್ದ ದರ ಈಗ ₹70ಕ್ಕೆ ಹೆಚ್ಚಿಸಲಾಗಿದೆ. ಈ ಬಗ್ಗೆ ಚಾಲಕರನ್ನು ಪ್ರಶ್ನಿಸಿದರೆ ನಮಗೇನೂ ಗೊತ್ತಿಲ್ಲ ಎಂದು ಹೇಳುತ್ತಾರೆ. ತುರ್ತು ಕೆಲಸಗಳಿಗಾಗಿ ಆ್ಯಪ್ ಆಧಾರಿತ ಆಟೊ ಹಾಗೂ ಟ್ಯಾಕ್ಸಿ ಸೇವೆ ಅವಲಂಬಿಸುವುದು ಅನಿವಾರ್ಯ. ಇದನ್ನೇ ಅಸ್ತ್ರವಾಗಿಟ್ಟುಕೊಂಡು ಸುಲಿಗೆಗೆ ಇಳಿದರೆ ನಾಗರಿಕರ ಪಾಡೇನು' ಎನ್ನುತ್ತಾರೆ ಐಟಿ ಉದ್ಯೋಗಿ ವಿನೋದ್ ಗೌಡ.

'ತುರ್ತು ಸಂದರ್ಭದಲ್ಲಿ ಕಚೇರಿ, ಮನೆ ಅಥವಾ ಇತರ ಸ್ಥಳಗಳಿಗೆ ಹೋಗಲು ಜನರು ಓಲಾ, ಉಬರ್ ಮೊರೆ ಹೋಗುತ್ತಾರೆ. ತಾವಿರುವಲ್ಲಿಗೆ ಆಟೊ ಬಂದೇ ಬಿಟ್ಟಿತು ಅನ್ನುವಷ್ಟರಲ್ಲಿ 'ಟ್ರಿಪ್' ಕ್ಯಾನ್ಸಲ್ ಎಂಬ ಸಂದೇಶ ಬರುತ್ತದೆ. ಬಳಿಕ ಮತ್ತೊಂದು ಆಟೊ ಅಥವಾ ಟ್ಯಾಕ್ಸಿ ಕಾಯ್ದಿರಿಸಬೇಕು. ಅದು ಬರುವವರೆಗೂ ಕಾಯಬೇಕು. ಈ ಪ್ರಕ್ರಿಯೆಯಲ್ಲೇ ಸಮಯ ವ್ಯರ್ಥವಾಗುತ್ತದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಮಳೆ ಬಂದರೆ ಓಲಾ, ಉಬರ್ ಕಂಪನಿಗಳಿಗೆ ಹಬ್ಬ! ಅದನ್ನೇ ನೆಪವಾಗಿಟ್ಟುಕೊಂಡು ಪ್ರಯಾಣ ದರ ಏರಿಕೆ ಮಾಡುತ್ತವೆ. ನಾಗರಿಕರು ವಿಧಿ ಇಲ್ಲದೆ ಅಷ್ಟು ಮೊತ್ತ ಪಾವತಿಸಿ ನಿಗದಿತ ಸ್ಥಳಗಳಿಗೆ ತಲುಪಬೇಕು' ಎಂದು ಶ್ರೀನಿವಾಸನಗರದ ರವಿ ಹೇಳಿದರು.

'ಕೋರಮಂಗಲದಿಂದ ಎಂ.ಜಿ. ರಸ್ತೆಗೆ ಹೋಗಲು ಬೆಳಿಗ್ಗೆ ಆಟೊ ಬುಕಿಂಗ್ ಮಾಡಿದರೆ ಆ್ಯಪ್‌ನಲ್ಲಿ ₹200 ರಿಂದ ₹300 ಮೊತ್ತ ತೋರಿಸುತ್ತದೆ. ಸಂಜೆ 7 ಗಂಟೆ ವೇಳೆಗೆ ಅದು ₹600 ರಿಂದ ₹700 ಎಂದಾಗಿರುತ್ತದೆ. ಮಳೆ ಬಂದರೆ ₹900 ಮೊತ್ತ ತೋರಿಸುತ್ತದೆ. ಹೀಗೆ ಸಂದರ್ಭಕ್ಕೆ ಅನುಗುಣವಾಗಿ ದರ ನಿಗದಿ ಮಾಡುವುದು ಕಂಪನಿಗಳು. ಆದರೆ ಪ್ರಯಾಣಿಕರು ನಮ್ಮ ಮೇಲೆ ಬೇಸರ ಮಾಡಿಕೊಳ್ಳುತ್ತಾರೆ' ಎಂದು ಚಾಲಕರೊಬ್ಬರು ತಿಳಿಸಿದರು.

'ಕಿ.ಮೀ.ಗೆ ₹21 ರಿಂದ ₹41ರವರೆಗೂ ದರ ನಿಗದಿ ಮಾಡಬಹುದೆಂಬ ನಿಯಮವಿದೆ. ಕಂಪನಿಯವರು ದುರ್ಬಳಕೆ ಮಾಡಿ-ಕೊಳ್ಳುತ್ತಿದ್ದಾರೆ. ಜನರ ಜೊತೆಗೆ ಚಾಲಕರಿಗೂ ತೊಂದರೆ ಕೊಡುತ್ತಿದ್ದಾರೆ' ಎಂದು ದೂರಿದರು.



'ನಿಯಮ ಪಾಲನೆ ಆಗುತ್ತಿಲ್ಲ'

'ರಾಜ್ಯ ಸರ್ಕಾರವು ಹೋದ ವರ್ಷ ಓಲಾ, ಉಬರ್ ಪ್ರಯಾಣ ದರ ಪರಿಷ್ಕರಿಸಿ ಆದೇಶ ಹೊರಡಿಸಿತ್ತು. ಇದು ಸರಿಯಾಗಿ ಪಾಲನೆಯಾಗುತ್ತಿಲ್ಲ. ಕಂಪನಿಗಳು ಅನುಕೂಲಕ್ಕೆ ತಕ್ಕಂತೆ ದರ ಇಳಿಸುವ ಹಾಗೂ ಏರಿಸುವ ನಿರ್ಧಾರ ಕೈಗೊಳ್ಳುತ್ತವೆ. ಹೀಗಾಗಿ ಜನ ಸಂಕಷ್ಟ ಎದುರಿಸುವಂತಾಗಿದೆ' ಎಂದು ಓಲಾ ಮತ್ತು ಉಬರ್ ಚಾಲಕರು ಮತ್ತು ಮಾಲೀಕರ ಸಂಘದ ಅಧ್ಯಕ್ಷ ತನ್ವೀರ್ ಪಾಷಾ ಹೇಳಿದರು.

'ಕಂಪನಿಗಳು ವಿಪರೀತ 'ಸರ್ ಚಾರ್ಜ್' ವಿಧಿಸುತ್ತವೆ. ಚಾಲಕರಿಗೆ ಕಿ.ಮೀ.ಗೆ ಇಂತಿಷ್ಟು ಹಣ ನೀಡಿ ಉಳಿದ ಮೊತ್ತವನ್ನು ಅವರೇ ಲಪಟಾಯಿಸುತ್ತಾರೆ. ಕಮಿಷನ್ ರೂಪದಲ್ಲಿ ಶೇ 25 ಹಾಗೂ ಶೇ5 ಜಿಎಸ್‌ಟಿ ಹಣವೂ ಅವರ ಬೊಕ್ಕಸ ಸೇರುತ್ತದೆ. ಇದರಿಂದ ಕಷ್ಟಪಟ್ಟು ದುಡಿಯುವ ಚಾಲಕರಿಗೆ ಅನ್ಯಾಯವಾಗುತ್ತಿದೆ' ಎಂದು ತಿಳಿಸಿದರು.

ಜೂಜಾಟ: ಸಿಸಿಬಿ ದಾಳಿ

ಬೆಂಗಳೂರು: ಬನಶಂಕರಿ 3ನೇ ಹಂತದ ವೀರಭದ್ರನಗರದಲ್ಲಿ ಜೂಜಾಟ ನಡೆಯುತ್ತಿದ್ದ ಸ್ಥಳದ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ₹1.50 ಲಕ್ಷ ಜಪ್ತಿ ಮಾಡಿದ್ದಾರೆ.

'100 ಅಡಿ ರಸ್ತೆಯ ಕಟ್ಟಡವೊಂದರಲ್ಲಿ ಸ್ಥಳೀಯ ವ್ಯಕ್ತಿಗಳೇ ಜೂಜಾಟ ಆಡುತ್ತಿದ್ದರು. ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ, 10 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ವಿಮಾ ಪಿಂಚಣಿದಾರರ ಸಮ್ಮೇಳನ 29 ರಿಂದ

ಬೆಂಗಳೂರು: ಅಖಿಲ ಭಾರತ ವಿಮಾ ಪಿಂಚಣಿದಾರರ ಸಂಘ ಆಯೋಜಿಸಿರುವ 8ನೇ ಸಮ್ಮೇಳನವು ಇದೇ 29 ರಿಂದ 31ರವರೆಗೆ ಮೆಜೆಸ್ಟಿಕ್‌ನ ಸಿಟಿ ಸೆಂಟರ್ ಹೋಟೆಲ್‌ನ ಸಭಾ ಭವನದಲ್ಲಿ ನಡೆಯಲಿದೆ.

ಈ ಕುರಿತು ಮಾತನಾಡಿದ ಸಂಘದ ಅಧ್ಯಕ್ಷ ಬಿ.ಸುರೇಶ್, 'ನಿವೃತ್ತಿಯಾದ ವಿಮಾ ಪಿಂಚಣಿದಾರರ ಹಲವು ಸಮಸ್ಯೆಗಳ ಕುರಿತು ಚರ್ಚಿಸಿ ಪರಿಹಾರಗಳನ್ನು ಕಂಡುಕೊಳ್ಳುವುದು ಈ ಸಮ್ಮೇಳನದ ಆಶಯ' ಎಂದು ಹೇಳಿದ್ದಾರೆ.

ದಂಡಿ ವಿಶ್ವವಿದ್ಯಾಲಯಕ್ಕೆ ಅಶ್ವತ್ಥನಾರಾಯಣ ಭೇಟಿ

ಜೀವವಿಜ್ಞಾನ ಅಧ್ಯಯನಕ್ಕೆ ಸಹಭಾಗಿತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವವಿಜ್ಞಾನ ಕ್ಷೇತ್ರದ ಅಧ್ಯಯನ ಮತ್ತು ಸಂಶೋಧನೆಯಲ್ಲಿ ಜಾಗತಿಕ ಮಟ್ಟದಲ್ಲಿ ಖ್ಯಾತಿ ಪಡೆದಿರುವ ಸ್ಕಾಟ್ಲೆಂಡ್‌ನ ದಂಡಿ ವಿಶ್ವ ವಿದ್ಯಾಲಯದ ಜೀವವಿಜ್ಞಾನ ವಿಭಾಗ ಮತ್ತು ಅತ್ಯಾಧುನಿಕ ಪ್ರಯೋಗಾಲಯ-ಗಳಿಗೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಶನಿವಾರ ಭೇಟಿ ನೀಡಿದರು.

ಸಚಿವರೊಂದಿಗೆ ಮಾತನಾಡಿದ ವಿಶ್ವವಿದ್ಯಾಲಯದ ಉನ್ನತಾಧಿಕಾರಿಗಳ ನಿಯೋಗವು, 'ನಮ್ಮ ತಂಡವು ಬರುವ ಸೆಪ್ಟೆಂಬರ್‌ನಲ್ಲಿ ಭಾರತಕ್ಕೆ ಭೇಟಿ ನೀಡಲಿದೆ. ಕರ್ನಾಟಕ ಸರ್ಕಾರವು ಆಸಕ್ತಿ ವಹಿಸಿದರೆ ಜೀವವಿಜ್ಞಾನ ಅಧ್ಯಯನಕ್ಕೆ ಸಹಭಾಗಿತ್ವ ಒಪ್ಪಂದ ಮಾಡಿಕೊಳ್ಳಲು ಸಿದ್ಧರಿದ್ದೇವೆ. ಇಂತಹ ಕೇಂದ್ರಗಳನ್ನು ರಾಜ್ಯದ ಹಲವು ವಿಶ್ವವಿದ್ಯಾಲಯಗಳ-ಲ್ಲಿ ತೆರೆಯಬಹುದು' ಎಂದು ಪ್ರಸ್ತಾಪ ಮುಂದಿಟ್ಟಿತು.

'ದಂಡಿ ವಿಶ್ವವಿದ್ಯಾಲಯದಲ್ಲಿ ದುಬಾರಿ ಮತ್ತು ಅತ್ಯಾಧುನಿಕ ಜೀವವಿಜ್ಞಾನ ಸಾಧನಗಳಿವೆ. ಇಲ್ಲಿ ಇಮೇಜ್ ಅನಾಲಿಸಿಸ್, ಡೇಟಾ ಕಮ್ಯುನಿಕೇಷನ್, ಸೈನ್ಸ್ ಕಮ್ಯುನಿಕೇಷನ್, ಡೇಟಾ ಸೈನ್ಸ್, ಮಷೀನ್ ಲರ್ನಿಂಗ್ ಕೋರ್ಸ್‌ಗಳಿವೆ. ಇದರಿಂದ ಕರ್ನಾಟಕದ ವಿದ್ಯಾರ್ಥಿಗಳ ಸಾಮರ್ಥ್ಯ ವೃದ್ಧಿಗೆ ಹೇರಳ ಅವಕಾಶಗಳು ಸಿಗಲಿವೆ. ಜತೆಗೆ, ನಾವು ಪದವಿ, ಸ್ನಾತಕೋತ್ತರ ಮತ್ತು ಪಿಎಚ್.ಡಿ. ಸಂಶೋಧನಾ ಕ್ರಮಗಳ ವಿನ್ಯಾಸವನ್ನೂ ಅಭಿವೃದ್ಧಿಪಡಿಸಿ ಕೊಡಲಿದ್ದೇವೆ' ಎಂದು ನಿಯೋಗವು ತಿಳಿಸಿದೆ.

ಇದಕ್ಕೆ ಸ್ಪಂದಿಸಿದ ಸಚಿವರು, ಒಪ್ಪಂದ ಮಾಡಿಕೊಳ್ಳುವ ಸಾಧ್ಯತೆ ಗಳನ್ನು ಪರಿಶೀಲಿಸುವುದಾಗಿ ಹೇಳಿದರು.

ರಾಜ್ಯ ಸರ್ಕಾರದ ನಿಯೋಗದಲ್ಲಿ ಸಚಿವರ ಜತೆಗೆ ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ. ಕುಮಾರ್ ನಾಯಕ್, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತ ಪಿ.ಪ್ರದೀಪ್, ಡಾ.ಬಿ.ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ ಕುಲಪತಿ ಡಾ.ಭಾನುಮೂರ್ತಿ, ಉನ್ನತ ಶಿಕ್ಷಣ ಪರಿಷತ್ತಿನ ಗೋಪಾಲಕೃಷ್ಣ ಜೋಶಿ, ಆಡಳಿತಾಧಿಕಾರಿ ತಾಂಡವ ಗೌಡ ಇದ್ದರು.



ಸ್ಕಾಟ್ಲೆಂಡ್‌ನ ದಂಡಿ ವಿಶ್ವವಿದ್ಯಾಲಯದ ಜೀವವಿಜ್ಞಾನ ವಿಭಾಗ ಮತ್ತು ಅತ್ಯಾಧುನಿಕ ಪ್ರಯೋಗಾಲಯಕ್ಕೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಶನಿವಾರ ಭೇಟಿ ನೀಡಿದರು

ಬಿಡಿಎ: ಕನ್ನಡ ಅನುಷ್ಠಾನದಲ್ಲಿ ಹಿನ್ನಡೆ

ಪ್ರಗತಿ ಪರಿಶೀಲನೆ ಸಭೆಯಲ್ಲಿ ನಾಗಾಭರಣ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಎಂಜಿನಿಯರಿಂಗ್ ವಿಭಾಗ ಮತ್ತು ನಗರ ಯೋಜನೆ ವಿಭಾಗದಲ್ಲಿ ಕೆಲವು ಟಿಪ್ಪಣಿಗಳು, ಪತ್ರ ವ್ಯವಹಾರಗಳು, ದರ ಪಟ್ಟಿ, ಅಂದಾಜು ಪಟ್ಟಿಗಳು ಇಂಗ್ಲಿ-ಷ್‌ನಲ್ಲಿರುವುದಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಟಿ.ಎಸ್.ನಾಗಾಭರಣ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬಿಡಿಎ ಆಯುಕ್ತರ ಕಚೇರಿಯಲ್ಲಿ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಅವರು, ಬಿಡಿಎ ಅಧಿಕಾರಿಗಳಿಂದ ಕನ್ನಡ ಅನುಷ್ಠಾನದ ಬಗ್ಗೆ ಮಾಹಿತಿ ಪಡೆದುಕೊಂಡರು. 'ಇಂಗ್ಲಿಷ್‌ನಲ್ಲಿ-ರುವ ದರಪಟ್ಟಿ, ಅಂದಾಜುಪಟ್ಟಿಗಳು ಸೇರಿದಂತೆ ವಿವಿಧ ದಾಖಲಾತಿಗಳನ್ನು ಶೀಘ್ರವೇ ಕನ್ನಡಕ್ಕೆ ಅನುವಾದ ಮಾಡಿ, ಇವುಗಳು ಕನ್ನಡದಲ್ಲಿಯೇ ಇರುವಂತೆ ಸಂಬಂಧಪಟ್ಟವರಿಗೆ ಆದೇಶಿಸಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ಇಂಗ್ಲಿಷ್‌ನಲ್ಲಿ ಜಾಹೀರಾತು ನೀಡಿರುವ ಬಗ್ಗೆ ಪ್ರಾಧಿಕಾರ ಶಿಸ್ತುಕ್ರಮಕ್ಕೆ ಶಿಫಾರಸ್ಸು ಮಾಡಿದ್ದರೂ ಅಧಿಕಾರಿಗಳು ಎಚ್ಚೆತ್ತುಕೊಂಡಿಲ್ಲ. ಪುನಃ ಕನ್ನಡದ ದಿನಪತ್ರಿಕೆಗಳಲ್ಲೇ ಇಂಗ್ಲಿಷ್‌ನಲ್ಲೇ ಜಾಹೀರಾತು ನೀಡುತ್ತಿರುವುದು ಅಧಿಕಾರಿಗಳ ಬೇಜವಾಬ್ದಾರಿ ನಡೆ. ಜಾಹೀರಾತುಗಳು, ನಾಮಫಲಕಗಳು, ನಕ್ಷೆಗಳು, ರಶೀದಿಗಳು, ನಿವೇಶನ ಹಂಚಿಕೆಯ ಆದೇಶಗಳು, ಸೇವಾ ಸಿಂಧು ಸಕಾಲ ಅರ್ಜಿ ನಮೂನೆಗಳು, ಬಿಡಿಎ ನೀತಿಗಳು ಇಂಗ್ಲಿಷ್‌ನಲ್ಲಿಯೇ ಇವೆ. ಇದನ್ನು ಕೂಡಲೇ ತಿದ್ದುಪಡಿ ಮಾಡಬೇಕು. 15 ದಿನಗಳಲ್ಲಿ ಸಂಪೂರ್ಣವಾಗಿ ಕನ್ನಡ ಅನುಷ್ಠಾನ-ಗೊಳಿಸಿ, ವರದಿಯನ್ನು ಪ್ರಾಧಿಕಾರಕ್ಕೆ ಕಳುಹಿಸಬೇಕು' ಎಂದು ಆದೇಶಿಸಿದರು.

'ಬಿಡಿಎ, ಬಿಬಿಎಂಪಿ ಹಾಗೂ ಬೆಂಗಳೂರು ನಗರ ಜಿಲ್ಲೆ ಅಧಿಕಾರಿಗಳು ಜಂಟಿಯಾಗಿ ಕನ್ನಡ ಅನುಷ್ಠಾನಕ್ಕೆ ಯೋಜನೆ ಸಿದ್ಧಪಡಿಸಬೇಕು' ಎಂದರು.

'ಕಾಲಕಾಲಕ್ಕೆ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನೆ ಮಾಡಿ, ಸಲಹೆ ಸೂಚನೆಗಳನ್ನು ನೀಡಿದ್ದರೂ ತಂತ್ರಾಂಶದಲ್ಲಿ ಕನ್ನಡ ಅನುಷ್ಠಾನಕ್ಕೆ ಹಿನ್ನಡೆಯಾಗಿದೆ. ಸಾಮಾಜಿಕ ಜಾಲತಾಣ, ಆ್ಯಪ್‌ಗಳು ಮತ್ತು ಸಂದೇಶಗಳು ಕಡ್ಡಾಯವಾಗಿ ಕನ್ನ-ಡದಲ್ಲಿಯೇ ಇರಬೇಕು' ಎಂದು ಸೂಚಿಸಿದರು.



ಟಿ.ಎಸ್. ನಾಗಾಭರಣ ಅವರು ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನೆ ಸಭೆ ನಡೆಸಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಹಾಗೂ ಬಿಡಿಎ ಅಧಿಕಾರಿ ಇದ್ದಾರೆ

'ಕನ್ನಡದಲ್ಲಿ ಕರಡು ನೀಡಿ'

'ರಾಜಧಾನಿಯ ಭವಿಷ್ಯ ನಿರ್ಧರಿಸುವ ಪರಿಷ್ಕೃತ ನಗರ ಮಹಾ ಯೋಜನೆಯ ಕರಡು ಆಂಗ್ಲ ಭಾಷೆಯಲ್ಲಿದೆ. 2041 ರವರೆಗೆ ನಗರದ ಬೆಳವಣಿಗೆ ಯಾವ ದಿಸೆಯಲ್ಲಿ ಸಾಗಬೇಕು ಎಂಬ ರೂಪುರೇಷೆಗಳನ್ನು ನಿರ್ಧರಿಸಲು ಕರಡು ಪ್ರಸ್ತಾವವು ಆಂಗ್ಲಭಾಷೆಯಲ್ಲಿ ಇರಬೇಕೆಂದು ಬಿಡಿಎ ಷರತ್ತು ವಿಧಿಸಿರುವುದು ಸರಿಯಲ್ಲ. ಭವಿಷ್ಯದ ಪೀಳಿಗೆಗೆ ಅನುಕೂಲವಾಗುವ ಪರಿಷ್ಕೃತ ನಗರ ಮಹಾ ಯೋಜನೆಯ ಕರಡು ಕನ್ನಡದಲ್ಲಿಯೇ ಇರಬೇಕು. ಬೆಂಗಳೂರು ನಗರಾಭಿವೃ-ದ್ಧಿಗೆ ಸಂಬಂಧಪಟ್ಟ ವಿಚಾರಗಳನ್ನು ಆಡಳಿತ ಭಾಷೆಯಲ್ಲಿ ತಿಳಿದುಕೊಳ್ಳುವುದು ಪ್ರತಿಯೊಬ್ಬ ಕನ್ನಡಿಗನ ಹಕ್ಕು' ಎಂದು ನಾಗಾಭರಣ ಹೇಳಿದರು.

'ಎನ್‌ಇಪಿ ಅಡಿ ಎಲ್ಲವೂ ರಾಷ್ಟ್ರೀಯ ಭಾಷೆಗಳೇ'

ಶಿಲ್ಲಾಂಗ್: ಎಲ್ಲ ಸ್ಥಳೀಯ ಭಾಷೆಗಳೂ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅಡಿ ರಾಷ್ಟ್ರೀಯ ಭಾಷೆಗಳೇ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಶನಿವಾರ ಹೇಳಿದ್ದಾರೆ.



ಧರ್ಮೇಂದ್ರ ಪ್ರಧಾನ್

'ನಾರ್ತ್ ಈಸ್ಟ್ ಹಿಲ್ ವಿಶ್ವ ವಿದ್ಯಾಲಯ'ದ 27ನೇ ಪದವಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಧರ್ಮೇಂದ್ರ ಪ್ರಧಾನ್, 'ಸ್ಥಳೀಯ ಭಾಷೆಗಳು ದೇಶದಲ್ಲಿ ಬಳಕೆ-ಯಲ್ಲಿರುವ ಯಾವುದೇ ಭಾಷೆಗಿಂತಲೂ (ಅದು ಹಿಂದಿ ಇರಬಹುದು, ಇಂಗ್ಲಿಷ್ ಇರಬಹುದು) ಕಡಿಮೆಯದಾದ ಮಹತ್ವ ಹೊಂದಿಲ್ಲ. ಇದುವೇ ರಾಷ್ಟ್ರೀಯ ಶಿಕ್ಷಣ ನೀತಿಯ ಮುಖ್ಯ ಲಕ್ಷಣ' ಎಂದು ಹೇಳಿದ್ದಾರೆ.

'ಎಲ್ಲ ಸ್ಥಳೀಯ ಭಾಷೆಗಳಿಗೆ ಮಹತ್ವ ನೀಡುವುದಕ್ಕಾ-ಗಿಯೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲಾಗಿದೆ. ಹೊಸ ನೀತಿಯಡಿ ಎಲ್ಲ ಸ್ಥಳೀಯ ಭಾಷೆಗಳನ್ನೂ ರಾಷ್ಟ್ರೀಯ ಭಾಷೆ ಎಂದೇ ಪರಿಗಣಿಸುವಂತೆ ಪ್ರಧಾನಿ ನರೇಂದ್ರ ಮೋದಿ ಕಡ್ಡಾಯಗೊಳಿಸಿದ್ದಾರೆ. ಹೀಗಾಗಿ ಗಾರೊ, ಖಾಸಿ, ಜೈಂತಿಯಾ (ಮೇಘಾಲಯದ ಸ್ಥಳೀಯ ಭಾಷೆಗಳು) ಕೂಡ ರಾಷ್ಟ್ರೀಯ ಭಾಷೆಗಳೇ ಆಗುತ್ತವೆ' ಎಂದು ಧರ್ಮೇಂದ್ರ ಪ್ರಧಾನ್ ಅವರು ಹೇಳಿದ್ದಾರೆ.

ಮಹಡಿಯಿಂದ ಬಿದ್ದ ವಿದ್ಯಾರ್ಥಿ

ರಬಕವಿ – ಬನಹಟ್ಟಿ: ಶಾಲೆ ಮಹಡಿ ಸ್ವಚ್ಛಗೊಳಿಸುವ ವೇಳೆ ವಿದ್ಯುತ್ ತಂತಿ ತಗುಲಿದ ಪರಿಣಾಮ ವಿದ್ಯಾರ್ಥಿ ಕೆಳಗೆ ಬಿದ್ದು ಗಾಯಗೊಂಡಿರುವ ಘಟನೆ ಲಕ್ಷ್ಮಿನಗರ ಬಡಾವಣೆಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ನಡೆದಿದೆ.

ವಿದ್ಯಾರ್ಥಿ ಆಕಾಶ ಮಾಳಿಯ ತೊಡೆ ಮತ್ತು ಕಾಲುಗಳಿಗೆ ತೀವ್ರ ರೀತಿಯ ಗಾಯವಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ ಎಂದು ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದ ವೈದ್ಯರು ತಿಳಿಸಿದರು.

ಪ್ರೇಮಿಗಳ ಆತ್ಮಹತ್ಯೆ: 6 ತಿಂಗಳ ನಂತರ ಯುವಕನ ಶವ ಪತ್ತೆ

ಪ್ರಜಾವಾಣಿ ವಾರ್ತೆ

ಕುಣಿಗಲ್: ಪ್ರೀತಿಸಿದ ಯುವತಿಯ ಆತ್ಮಹತ್ಯೆ ಸುದ್ದಿ ತಿಳಿದು ಆತ್ಮಹತ್ಯೆ ಮಾಡಿಕೊಂಡಿದ್ದ ಪ್ರಿಯಕರನ ಅಸ್ತಿಪಂಜರ ಆರು ತಿಂಗಳ ನಂತರ ತಾಲ್ಲೂಕಿನ ಹುಲಿಯೂರು ದುರ್ಗದಿಂದ ಮಾಗಡಿಗೆ ಹೋಗುವ ಮಾರ್ಗ ಮಧ್ಯದ ಕಾಡಿನಲ್ಲಿ ಶುಕ್ರವಾರ ಸಂಜೆ ಪತ್ತೆಯಾಗಿದೆ.

ಕಾಡುಶನೇಶ್ವರಸ್ವಾಮಿ ದೇವಾಲಯ ಹಿಂಭಾಗದ ಕಾಡಿನ ಬಂಡೆ ಬಳಿ ಶುಕ್ರವಾರ ಬೈಕ್ ಪತ್ತೆಯಾಗಿದ್ದು, ಅರಣ್ಯ ಇಲಾಖೆಯವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಪರಿಶೀಲಿಸಿದಾಗ ಬೈಕ್ ಪಕ್ಕದಲ್ಲಿ ವಿಷದ ಬಾಟಲಿ ಮತ್ತು ಅಸ್ತಿಪಂಜರ ಸಿಕ್ಕಿದೆ. ಬೈಕ್ ಸಂಖ್ಯೆ ಆಧರಿಸಿ ಮೃತನ ವಿಳಾಸ ಪತ್ತೆಮಾಡಲಾಗಿದೆ.

ಮೃತರನ್ನು ತಾಲ್ಲೂಕಿನ ಅರಮನೆ ಹೊನ್ನಮಾಚನಹಳ್ಳಿಯ ಸಂತೋಷ (30) ಎಂದು ಗುರುತಿಸಲಾಗಿದ್ದು, ಇವರು ಬೆಂಗಳೂರು ಹೊಯ್ಸಳ ನಗರದಲ್ಲಿ ವಾಸವಿದ್ದರು.

ಸಂತೋಷ, ತಾಲ್ಲೂಕಿನ ಕೆಬ್ಬಳಿಯ ಶಾಲಿನಿಯನ್ನು ಪ್ರೀತಿಸುತ್ತಿದ್ದರು. ವಿವಾಹಕ್ಕೆ ಪೋಷಕರು ನಿರಾಕರಿಸಿದ ಕಾರಣ ಶಾಲಿನಿ ಕಳೆದ ನವೆಂಬರ್ 25ರಂದು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಅಸ್ವಸ್ಥರಾಗಿದ್ದ ಶಾಲಿನಿ ಅವರು ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ನವೆಂಬರ್ 27ರಂದು ಮೃತಪಟ್ಟಿದ್ದರು.

ಶಾಲಿನಿಯ ಸಾವಿನ ಸುದ್ದಿ ತಿಳಿದು ಸಂತೋಷ ಸಹ ಆತ್ಮಹತ್ಯೆಗೆ ಯತ್ನಿಸಿದ್ದು, ಪೋಷಕರು ಚಿಕಿತ್ಸೆ ಕೊಡಿಸಿದ್ದರು. ನಂತರ ನವೆಂಬರ್ 28ರಂದು ಬೆಂಗಳೂರಿನಿಂದ ಬಂದಿದ್ದ ಸಂತೋಷ, ಕಾಡಿನ ಬಂಡೆ ಬಳಿ ಬೈಕ್ ನಿಲ್ಲಿಸಿ ಆತ್ಮಹತ್ಯೆ ಮಾಡಿಕೊಂಡಿದ್ದು, ಶುಕ್ರವಾರ ಸಂಜೆ ಪ್ರಕರಣ ಬೆಳಕಿಗೆ ಬಂದಿದೆ ಎಂದು ಹುಲಿಯೂರುದುರ್ಗ ಪೊಲೀಸರು ತಿಳಿಸಿದ್ದಾರೆ.

ಮಳೆಯಿಂದ ಹಾನಿಗೊಳಗಾದ ಪ್ರದೇಶಗಳ ಸಮೀಕ್ಷೆ, ಪರಿಹಾರಕ್ಕಾಗಿ ಈ ಕ್ರಮ

ಅಧಿಕಾರಿಗಳಿಗೆ 15 ದಿನ ರಜೆ ಇಲ್ಲ: ಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಳೆಯಿಂದ ಹಾನಿಗೊಳಗಾಗಿರುವ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸುವುದು ಮತ್ತು ಸಂತ್ರಸ್ತರಿಗೆ ತುರ್ತಾಗಿ ಪರಿಹಾರ ಒದಗಿಸುವ ಉದ್ದೇಶದಿಂದ ಎಲ್ಲ ಹಂತದ ಅಧಿಕಾರಿಗಳು ಮುಂದಿನ 15 ದಿನ ರಜೆ ಪಡೆಯದೇ ಕೆಲಸ ಮಾಡಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೂಚನೆ ನೀಡಿದರು.

ಮಳೆಹಾನಿ ಕುರಿತು ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಜತೆ ವಿಡಿಯೊ ಕಾನ್ಫರೆನ್ಸ್ ಮೂಲಕ ಶನಿವಾರ ಸಭೆ ನಡೆಸಿದ ಅವರು, 'ಮಳೆಯಿಂದ ಆಗಿರುವ ಪ್ರಾಣ ಹಾನಿ, ಆಸ್ತಿ ಹಾನಿ, ಬೆಳೆ ಹಾನಿ, ಮನೆ ಕುಸಿತ ಕುರಿತು ತ್ವರಿತವಾಗಿ ಪರಿಶೀಲನೆ ನಡೆಸಿ, ವರದಿ ಸಲ್ಲಿಸಬೇಕು' ಎಂದು ನಿರ್ದೇಶನ ನೀಡಿದರು.

ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕಡ್ಡಾಯವಾಗಿ ಕೇಂದ್ರ ಸ್ಥಾನದಲ್ಲಿರಬೇಕು. ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ಛಾಯಾಗ್ರಾಹಕರ ಜತೆ ಮನೆ ಕುಸಿದಿರುವ ಸ್ಥಳಕ್ಕೆ ಭೇಟಿ ನೀಡಿ, ಫೋಟೊ ಸಹಿತ ವರದಿ ಮಾಡಬೇಕು. ಪೂರ್ಣ ಹಾನಿಯಾಗಿರುವ ಮನೆಗಳಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ ಮಾರ್ಗಸೂಚಿ ಪ್ರಕಾರ ತಕ್ಷಣ ಪರಿಹಾರವೇ ಬಿಡುಗಡೆ ಮಾಡಬೇಕು ಎಂದು ಸೂಚಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿಗಳು ಮತ್ತು ಕೃಷಿ ಇಲಾಖೆ ಅಧಿಕಾರಿಗಳು ಮೂರು ದಿನಗಳೊಳಗೆ ಮಳೆಯಿಂದ ಹಾನಿಯಾದ ಪ್ರದೇಶಗಳಿಗೆ ಭೇಟಿ ನೀಡಬೇಕು. ಬಳಿಕ ಮುಖ್ಯ ಕಾರ್ಯದರ್ಶಿಯವರಿಗೆ ಕಡ್ಡಾಯವಾಗಿ ವರದಿ ಸಲ್ಲಿಸಬೇಕು. ಜಿಲ್ಲಾಧಿಕಾರಿಗಳ ವೈಯಕ್ತಿಕ (ಪಿ.ಡಿ) ಖಾತೆಯಲ್ಲಿ ₹ 728.85 ಕೋಟಿ ಲಭ್ಯವಿದ್ದು, ಸಂತ್ರಸ್ತರಿಗೆ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸಲು ಬಳಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ತಾಕೀತು ಮಾಡಿದರು.

ಈವರೆಗಿನ ಮಳೆ ಹಾನಿ ವಿವರ	
ಮನುಷ್ಯರ ಸಾವು	12
ಜಾನುವಾರು ಸಾವು	430
ಮನೆಗಳಿಗೆ ಭಾಗಶಃ ಹಾನಿ	4,242
ಮನೆಗಳಿಗೆ ನೀರು ನುಗ್ಗಿರುವುದು	1,431
ಕೃಷಿ ಬೆಳೆ ಹಾನಿ	7,010 ಹೆಕ್ಟೇರ್
ತೋಟಗಾರಿಕಾ ಬೆಳೆ ಹಾನಿ	5,736 ಹೆಕ್ಟೇರ್

ಮುನ್ನೆಚ್ಚರಿಕೆಗೆ ಸೂಚನೆ: ಅಣೆಕಟ್ಟೆಗಳಿಂದ ಹೆಚ್ಚುವರಿ ನೀರನ್ನು ಹೊರ ಬಿಡುವ ಮುನ್ನ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಅಣೆಕಟ್ಟೆಯ ಕೆಳಭಾಗದ ಪ್ರದೇಶಗಳಲ್ಲಿ ದ್ವೀಪಗಳಾಗುವ ಗ್ರಾಮಗಳ ಜನರಿಗೆ ಸರಿಯಾಗಿ ಮಾಹಿತಿ ನೀಡಬೇಕು ಎಂದು ನಿರ್ದೇಶನ ನೀಡಿದರು.

ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ವ್ಯಾಪ್ತಿಯಲ್ಲಿ ಭೂಕುಸಿತ ಸಂಭವಿಸಬಹುದಾದ ಪ್ರದೇಶಗಳನ್ನು ಗುರುತಿಸಿ ಅಲ್ಲಿನ ಜನರನ್ನು ಸ್ಥಳಾಂತರಿಸುವ ಮೂಲಕ ಸಾವು, ನೋವು ಸಂಭವಿಸದಂತೆ ಎಚ್ಚರಿಕೆ ವಹಿಸಬೇಕು ಎಂದು ಸೂಚಿಸಿದರು.

ಪ್ರವಾಹ, ಭೂಕುಸಿತ ಉಂಟಾದ ಸ್ಥಳಗಳಲ್ಲಿ ಪರಿಹಾರ ಕಾರ್ಯಾಚರಣೆಗೆ ರಾಜ್ಯ ವಿಪತ್ತು ನಿರ್ವಹಣಾ ತಂಡದ ಎರಡು ಹೆಚ್ಚುವರಿ ತಂಡ ರಚಿಸಬೇಕು. ಮಳೆಹಾನಿ, ಪ್ರವಾಹ ಸಂತ್ರಸ್ತರಿಗೆ ನೆರವಾಗಲು ಎಲ್ಲ ಇಲಾಖೆಗಳೂ ಸಮನ್ವಯದಿಂದ ಕೆಲಸ ಮಾಡಬೇಕು ಎಂದರು.

ಯೋಗ ದಿನ ಮೈಸೂರಿಗೆ ಪ್ರಧಾನಿ



ಮೈಸೂರು: ಅಂತರರಾಷ್ಟ್ರೀಯ ಯೋಗ ದಿನಾಚರಣೆ ಸಂದರ್ಭದಲ್ಲಿ ಜೂನ್ 21 ರಂದು ಮೈಸೂರಿನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದು, ಸಾಂಸ್ಕೃತಿಕ ನಗರಿಯಲ್ಲಿ ಸಂಭ್ರಮ ಗರಿಗೆದರಿದೆ.

ಪ್ರಧಾನಿ ಭೇಟಿಗೆ ಅಗತ್ಯವಿರುವ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಅಯುಷ್ ಇಲಾಖೆ ಕಾರ್ಯದರ್ಶಿ ರಾಜೇಶ್ ಕೊಟೇಚಾ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ನಿಶ್ಚಿತಾರ್ಥ ಮುಗಿಸಿ ಮನೆಗೆ ಮರಳುತ್ತಿದ್ದಾಗ ಧಾರವಾಡದ ಬಳಿ ಅವಘಡ

ಭೀಕರ ಅಪಘಾತ: 9 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಧಾರವಾಡ: ತಾಲ್ಲೂಕಿನ ನಿಗದಿ ಬಳಿ ಶನಿವಾರ ನಸುಕಿನಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಒಂಬತ್ತು ಮಂದಿ ಮೃತಪಟ್ಟಿದ್ದಾರೆ. ಅವಘಡದಲ್ಲಿ ಗಾಯಗೊಂಡಿರುವ 13 ಮಂದಿಯನ್ನು ಹುಬ್ಬಳ್ಳಿ ಕಿಮ್ಸ್‌ಗೆ ದಾಖಲಿಸಲಾಗಿದೆ.

ನಿಶ್ಚಿತಾರ್ಥದಲ್ಲಿ ಪಾಲ್ಗೊಂಡು ಕ್ರೂಸರ್‌ನಲ್ಲಿ ಮನೆಗೆ ಹಿಂದಿರುಗುತ್ತಿದ್ದ ವೇಳೆ ವಾಹನ ಮರಕ್ಕೆ ಡಿಕ್ಕಿ ಹೊಡೆದಿದೆ. ಮೃತರಲ್ಲಿ ಮೂವರು ಮಕ್ಕಳು ನಾಲ್ವರು ಮಹಿಳೆಯರು ಸೇರಿದ್ದಾರೆ.

ಐದು ವರ್ಷದ ಆರಾಧ್ಯಾ, 13 ವರ್ಷದ ಮುತ್ತು ಮರಿಗೌಡರ, 13 ವರ್ಷದ ಸಾಗರ ದಾಸನಕೊಪ್ಪ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಚಾಲಕ ವಿನಾಯಕ ಕಮ್ಮಾರ ಧಾರವಾಡದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಕ್ರೂಸರ್ ಬೆನಕನಕಟ್ಟಿ ಗ್ರಾಮದ ವ್ಯಕ್ತಿಯೊಬ್ಬರಿಗೆ ಸೇರಿದ್ದಾಗಿದೆ. ಊಟಕ್ಕೆ ಕುಳಿತಿದ್ದ ಮಾಲೀಕನಿಂದ ಬಲವಂತವಾಗಿ ಕೀಲಿಕೈ ಪಡೆದ ವಿನಾಯಕ ವಾಹನ ಚಾಲನೆ ಮಾಡುತ್ತಿದ್ದ. ವಾಹನವೊಂದನ್ನು ಹಿಂದಿಕ್ಕುವ ಭರದಲ್ಲಿ ಬಲಭಾಗದಲ್ಲಿದ್ದ ಮರಕ್ಕೆ ಡಿಕ್ಕಿ ಹೊಡೆದಿದ್ದಾನೆ. ಅಪಘಾತದ ತೀವ್ರತೆ ಎಷ್ಟಿತ್ತು ಎಂದರೆ ವಾಹನ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಕೆಲವೊಂದು ಬಿಡಿಭಾಗಗಳು ವಾಹನದಿಂದ ಬೇರ್ಪಟ್ಟಿವೆ.

ಘಟನಾ ಸ್ಥಳಕ್ಕೆ ಗ್ರಾಮೀಣ ಠಾಣೆ ಪೊಲೀಸರು ಭೇಟಿ ನೀಡಿ ಗ್ರಾಮಸ್ಥರ ನೆರವಿನೊಂದಿಗೆ ಮೃತದೇಹ ಮತ್ತು ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಿದರು. ಸ್ಥಳಕ್ಕೆ ಭೇಟಿ ನೀಡಿದ ಪೊಲೀಸ್ ವರಿಷ್ಠಾಧಿಕಾರಿ ಪಿ.ಕೃಷ್ಣಕಾಂತ ಪ್ರತಿಕ್ರಿಯಿಸಿ, 'ರಾತ್ರಿ 1.30ರ ಸಂದರ್ಭದಲ್ಲಿ ಅಪಘಾತ ಸಂಭವಿಸಿದೆ. ತನಿಖೆ ನಡೆಸಿ ಅಪಘಾತಕ್ಕೆ ಕಾರಣ ಪತ್ತೆ ಮಾಡಲಾಗುವುದು' ಎಂದು ತಿಳಿಸಿದರು.

ಮೃತರ ವಿವರ: ಮನುಶ್ರೀ ದಾಸನಕೊಪ್ಪ (16) ದೊಡ್ಡವಾಡದ ಅನನ್ಯಾ ಹುತಮಲ್ಲವರ (14), ಧಾರವಾಡದ ಹರೀಶ ಅಂಗಡಿ (13), ಗೋವನಕೊಪ್ಪದ ಮಹೇಶ್ವರ ತೋಟದ (11), ಮಧುಶ್ರೀ ದಾಸನಕೊಪ್ಪ (20), ಶಿಲ್ಪಾ ದಾಸನಕೊಪ್ಪ (34), ನೀಲವ್ವ ದಾಸನಕೊಪ್ಪ (60), ಶಂಭುಲಿಂಗಯ್ಯ ಹಿರೇಮಠ (35) ಸ್ಥಳದಲ್ಲೇ ಮೃತಪಟ್ಟರೆ, ಚೆನ್ನವ್ವ ಬಂಕಾಪುರ (45) ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಮೃತಪಟ್ಟರು.

ಆಲಮಟ್ಟಿ; ಒಳಹರಿವು ಶುರು

ಆಲಮಟ್ಟಿ: ಮುಂಗಾರು ಪೂರ್ವ ಮಳೆ ಸುರಿದ ಪರಿಣಾಮ ಆಲಮಟ್ಟಿ ಜಲಾಶಯಕ್ಕೆ ಒಳಹರಿವು ಆರಂಭವಾಗಿದೆ. ಶನಿವಾರ ಜಲಾಶಯಕ್ಕೆ 1897 ಕ್ಯುಸೆಕ್ ನೀರು ಹರಿದುಬಂದಿದೆ.

ಕೃಷ್ಣಾ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯಲ್ಲಿ ಸುರಿದ ಮಳೆಯಿಂದಾಗಿ ಈ ಒಳಹರಿವು ಆರಂಭವಾಗಿದೆ. ಇದು ತಾತ್ಕಾಲಿಕ. ಮಹಾರಾಷ್ಟ್ರದಲ್ಲಿ ಮಳೆ ಆರಂಭವಾಗಿಲ್ಲ, ಜೂನ್ ವೇಳೆಗೆ ಒಳಹರಿವು ಇನ್ನೂ ಹೆಚ್ಚಲಿದೆ ಎಂದು ಜಲಾಶಯದ ಅಧಿಕಾರಿಗಳು ಅಂದಾಜಿಸಿದ್ದಾರೆ.

'ಕಾರ್ಯಕರ್ತರಿಂದ ಹತ್ತತ್ತು ವೋಟು...'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಪ ಚುನಾವಣೆಯೊಂದರಲ್ಲಿ ಸಾವಿರ ಜನ ಕಾರ್ಯಕರ್ತರು ಐದೈದು, ಹತ್ತತ್ತು ಓಟ್ ಹಾಕಿದ್ದರು' ಎಂದು ಬಿಜೆಪಿ ಮಾಜಿ ಶಾಸಕ ಎಸ್. ಮುನಿರಾಜು ಹೇಳುತ್ತಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ಶನಿವಾರ ಏರ್ಪಡಿಸಲಾಗಿದ್ದ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಪ್ರಮುಖ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಹಿಂದಿನ ಚುನಾವಣೆಯೊಂದನ್ನು ಉಲ್ಲೇಖಿಸಿದ್ದರು. 1998 ರಲ್ಲಿ ಉತ್ತರಹಳ್ಳಿ ಕ್ಷೇತ್ರದಲ್ಲಿ ನಡೆದ ಚುನಾವಣೆಯಲ್ಲಿ ಒಂದು ಸಾವಿರ ಜನ ಕಾರ್ಯಕರ್ತರು ಬಂದು ಹೀಗೆ ವೋಟು ಹಾಕಿಸಿದ್ದರು. ಕಾರ್ಯಕರ್ತರ ಶ್ರಮ ಇದರ ಹಿಂದೆ ಇದೆ ಎಂದು ಹೇಳಿದ್ದರು.

ಮುನಿರಾಜು ಆಡಿರುವ ಮಾತನ್ನು ಟೀಕಿಸಿರುವ ವಿಧಾನಸಭೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಏನಿದು ಎಂದು ಬಿಜೆಪಿ ನಾಯಕರನ್ನು ಪ್ರಶ್ನಿಸಿದ್ದಾರೆ.

ಮುನಿರಾಜು ಹೇಳಿಕೆಯನ್ನು ಟ್ವೀಟ್‌ನಲ್ಲಿ ಉಲ್ಲೇಖಿಸಿರುವ ಸಿದ್ದರಾಮಯ್ಯ, 'ಏನಿದು ರಹಸ್ಯ? ಅಸಹ್ಯ?' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರನ್ನು ಪ್ರಶ್ನಿಸಿದ್ದಾರೆ.

ಸಾಮ್ರಾಟರ ಬೆತ್ತಲೆ ಸತ್ಯ ಬಿಚ್ಚಿಟ್ಟ ಮುನಿರಾಜು: ಕುಮಾರಸ್ವಾಮಿ

'ಅಶೋಕ ಅವರು ಸಾಮ್ರಾಟರಾಗಿ ಬೆಳೆಯಲು ಕಾರಣವಾದ 'ಬೆತ್ತಲೆ ಸತ್ಯ'ದ ಹುತ್ತ ಬಿಚ್ಚಿಕೊಂಡಿದ್ದು, ಇದಕ್ಕೇನು ಹೇಳುತ್ತೀರಿ ಸಾಮ್ರಾಟರೇ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, '1998ರ ವಿಧಾನಸಭೆ ಉಪ ಚುನಾವಣೆಯಲ್ಲಿ ಉತ್ತರಹಳ್ಳಿ ಕ್ಷೇತ್ರದಿಂದ ಹಾಲಿ ಕಂದಾಯ ಸಚಿವ ಆರ್. ಅಶೋಕ ಅವರು ಸ್ಪರ್ಧಿಸಿದಾಗ ಯಲಹಂಕದಿಂದ ಬಂದಿದ್ದ 1,000 ಕಾರ್ಯಕರ್ತರು ತಲಾ 5ರಿಂದ 10 ಕಳ್ಳವೋಟು ಹಾಕಿ ಅವರನ್ನು ಗೆಲ್ಲಿಸಿದ್ದರು. ಅಂಥ ಕೃತ್ಯಗಳಿಂದಲೇ ಇಂದು ಬಿಜೆಪಿ ಗೆದ್ದು ಬಹುಮತದಿಂದ ಅಧಿಕಾರಕ್ಕೆ ಬಂದಿದೆ ಎಂದು ಮುನಿರಾಜು ತಮ್ಮ ಪಂಚೇಂದ್ರಿಯಗಳ ಸಾಕ್ಷಿಯಾಗಿ ತುಂಬಿದ ಕಾರ್ಯಕರ್ತರ ಸಭೆಯಲ್ಲೇ ಹೇಳಿದ್ದಾರೆ' ಎಂದಿದ್ದಾರೆ. 'ರಾಜ್ಯದ ಮೇಲೆ ರಾಜ್ಯ ಗೆಲ್ಲುತ್ತಿರುವ ಬಿಜೆಪಿ ಗೆಲುವಿನ ಗುಟ್ಟು ಈಗ ರಟ್ಟು. ಅಡ್ಡದಾರಿಯ ಕೊಚ್ಚೆಯಲ್ಲಿ ಅರಳುವ ಕಮಲವನ್ನು ಮುಡಿದುಕೊಂಡು ಬೀಗುವವರ 'ಕಳ್ಳವೋಟಿನ ಕಥೆ' ನಿಮ್ಮ ಮಾಜಿ ಶಾಸಕರೇ ಬಯಲು ಮಾಡಿದ್ದಾರೆ' ಎಂದವರು ಹೇಳಿದ್ದಾರೆ.

ಪಿಎಸ್‌ಐ ನೇಮಕಾತಿ ಅಕ್ರಮ: 19 ಆರೋಪಿಗಳ ಜಾಮೀನು ತಿರಸ್ಕೃತ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿಸಲಾಗಿರುವ 19 ಆರೋಪಿಗಳ ಜಾಮೀನು ಅರ್ಜಿಯನ್ನು ನಗರದ ಒಂದನೇ ಎಸಿಎಂಎಂ ನ್ಯಾಯಾಲಯ ಶನಿವಾರ ತಿರಸ್ಕರಿಸಿದೆ.

ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಅಭ್ಯರ್ಥಿಗಳಾದ ಎಸ್.ಮಮತೇಶ್ ಗೌಡ, ಬಿ.ಗಜೇಂದ್ರ, ಸೋಮನಾಥ್ ಹಿರೇಮಠ, ಎಚ್.ಯು.ರಘುವೀರ್, ಯಶವಂತಗೌಡ, ಸಿ.ಎಸ್.ನಾಗೇಶ್‌ಗೌಡ, ಸಿ.ಎಸ್. ನಾರಾಯಣ, ಯಶವಂತ್ ದೀಪ್, ಜಿ.ಸಿ. ರಾಘವೇಂದ್ರ ಹಾಗೂ ಮಧ್ಯವರ್ತಿಗಳಾದ ಕೇಶವಮೂರ್ತಿ, ಶಶಿಧರ್, ಶರತ್ ಸೇರಿ ಹಲವರನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದಾರೆ. ವಿಚಾರಣೆ ನಡೆಸಿದ ನ್ಯಾಯಾಧೀಶ ಆನಂದ್ ಚವ್ಹಾಣ್, ಎಲ್ಲರ ಜಾಮೀನು ಅರ್ಜಿಗಳನ್ನು ತಿರಸ್ಕರಿಸಿದ್ದಾರೆ.

ಜಾಮೀನಿಗೆ ಆಕ್ಷೇಪಣೆ ಸಲ್ಲಿಸಿದ್ದ ತನಿಖಾಧಿಕಾರಿ, ಸಿಐಡಿ ಡಿವೈಎಸ್ಪಿ ಬಿ.ಕೆ.ಶೇಖರ್ ಅವರು, 'ನೇಮಕಾತಿ ವಿಭಾಗದ ಅಧಿಕಾರಿಗಳ ಜೊತೆ ಸೇರಿ ಅಕ್ರಮ ಎಸಗಲಾಗಿದೆ. ಇದು, ಗಂಭೀರ ಪ್ರಕರಣ. ಸಾಕ್ಷ್ಯ ನಾಶಗೊಳಿಸುವ ಸಾಧ್ಯತೆ ಇರುವ ಕಾರಣ ಜಾಮೀನು ನೀಡಬಾರದು' ಎಂದು ಕೋರಿದ್ದರು.

ಜಪ್ತಿ ಮಾಡಿದ್ದ ಹಣ ನ್ಯಾಯಾಲಯಕ್ಕೆ: 'ಬಂಧಿತರಿಂದ ಜಪ್ತಿ ಮಾಡಿರುವ ₹ 2.46 ಕೋಟಿಯನ್ನು ನ್ಯಾಯಾಲಯದ ಸುಪರ್ದಿಗೆ ನೀಡಲು ಕಾನೂನು ಪ್ರಕ್ರಿಯೆ ಆರಂಭಿಸಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಈ ಪ್ರಕರಣದ ನಾಲ್ವರು ಅಭ್ಯರ್ಥಿಗಳು ಹಾಗೂ ಇತರರು ತಲೆಮರೆಸಿಕೊಂಡಿದ್ದು, ಪತ್ತೆಗೆ ಶೋಧ ನಡೆದಿದ್ದು, ವಿಶೇಷ ತಂಡ ರಚಿಸಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

ಸುಗಮವಾಗಿ ನಡೆದ ಸಿಇಟಿ

ಬೆಂಗಳೂರು: ಪ್ರಾಥಮಿಕ ಶಾಲಾ ಶಿಕ್ಷಕರ (ಪದವೀಧರ) ಹುದ್ದೆಗಳ ನೇಮಕಾತಿಗೆ ಶನಿವಾರ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಸುಗಮವಾಗಿ ನಡೆದಿದ್ದು, 69,159 ಅಭ್ಯರ್ಥಿಗಳು ಹಾಜರಾಗಿದ್ದರು.

15 ಸಾವಿರ ಹುದ್ದೆಗಳಿಗೆ ನಡೆದ ಪರೀಕ್ಷೆಗೆ ಕಟ್ಟುನಿಟ್ಟಿನ ಕ್ರಮಗಳನ್ನು ಶಿಕ್ಷಣ ಇಲಾಖೆ ಕೈಗೊಂಡಿತ್ತು. ಪರೀಕ್ಷೆಗೆ 1.06 ಲಕ್ಷ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದರು. ಇವರಲ್ಲಿ 31,967 ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದರು. ಹೀಗಾಗಿ, 74,116 ಅರ್ಜಿಗಳನ್ನು ಪರೀಕ್ಷೆಗೆ ಪರಿಗಣಿಸಲಾಗಿತ್ತು.

2 ದಿನಗಳ ಪರೀಕ್ಷೆಯ ಮೊದಲ ದಿನವಾದ ಶನಿವಾರ 4,857 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು. ಅಭ್ಯರ್ಥಿಗಳಿಗೆ ಮೊಬೈಲ್ ದೂರವಾಣಿ, ಬ್ಲ್ಯೂಟೂಥ್, ಕೈಗಡಿಯಾರ ಸೇರಿ ಯಾವುದೇ ರೀತಿ ಎಲೆಕ್ಟ್ರಾನಿಕ್ ಸಾಧನಗಳನ್ನು ನಿರ್ಬಂಧ ವಿಧಿಸಲಾಗಿತ್ತು. ಪರೀಕ್ಷಾ ಕೊಠಡಿಗೆ ತೆರಳುವ ಮುನ್ನ ಅಭ್ಯರ್ಥಿಗಳನ್ನು ಸಂಪೂರ್ಣವಾಗಿ ತಪಾಸಣೆಗೆ ಒಳಪಡಿಸಲಾಯಿತು.

ರಾಜ್ಯದ 435 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು.

ಆನಂದ ಮೇತ್ರಿ ಜಾಮೀನು ಅರ್ಜಿ ತಿರಸ್ಕೃತ

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಬಂಧನದಲ್ಲಿರುವ, ಬೆರಳಚ್ಚು ವಿಭಾಗದಲ್ಲಿ ಸಿಪಿಐ ಆಗಿದ್ದ ಆನಂದ ಮೇತ್ರಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಇಲ್ಲಿನ 3ನೇ ಜೆಎಂಎಫ್‌ಸಿ ಕೋರ್ಟ್ ಶನಿವಾರ ತಿರಸ್ಕರಿಸಿದೆ.

ಪ್ರಕರಣದ ಮುಖ್ಯ ಆರೋಪಿ ಆರ್.ಡಿ. ಪಾಟೀಲ ಜೊತೆ ನಿಕಟ ಸಂಬಂಧ ಹೊಂದಿದ್ದ ಮೇತ್ರಿ ಪರೀಕ್ಷಾ ಕೇಂದ್ರಗಳಿಗೆ ಉತ್ತರ ಪತ್ರಿಕೆಗಳನ್ನು ಪೂರೈಸುತ್ತಿದ್ದ ಎಂಬ ಆರೋಪ ಕೇಳಿ ಬಂದಿತ್ತು. ಮೇತ್ರಿಗೆ ಬಂಧಿಸಿದ ಸಿಐಡಿ ಅಧಿಕಾರಿಗಳು ವಿಚಾರಣೆ ನಡೆಸಿ ಮಹತ್ವದ ಮಾಹಿತಿ ಪಡೆದಿದ್ದರು.

ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶ ಬಸವರಾಜ ನೇಸರಗಿ ಅವರು ಪ್ರಕರಣದಲ್ಲಿ 27ನೇ ಆರೋಪಿಯಾದ ಆನಂದ ಮೇತ್ರಿ ಅರ್ಜಿ ತಿರಸ್ಕರಿಸಿದರು.

ರೈತರು– ಕಂಪನಿಗಳ ಒಪ್ಪಂದದಲ್ಲಿ ಬಿರುಕು; ಕಳಪೆ ಬಿತ್ತನೆ ಬೀಜಗಳ ಹಾವಳಿ

ಬೀಜೋತ್ಪಾದನೆಯ ಮೇಲೆ ಕರಿನೆರಳು

• ಸಿದ್ದು ಆರ್.ಜಿ.ಹಳ್ಳಿ/ ಮುಕ್ತೇಶ್ವರ ಕೂರಗುಂದ ಮಠ

ರಾಣೆಬೆನ್ನೂರು (ಹಾವೇರಿ): ಮಣ್ಣಿನ ಫಲವತ್ತತೆ, ಅಧಿಕ ಇಳುವರಿಯಿಂದ ಗುಣಮಟ್ಟದ ಬಿತ್ತನೆ ಬೀಜಗಳಿಗಾಗಿ ಏಷ್ಯಾ ಖಂಡದಲ್ಲೇ ಹೆಸರುವಾಸಿಯಾಗಿರುವ ಹಾವೇರಿ ಜಿಲ್ಲೆಯ ರಾಣೆಬೆನ್ನೂರು 'ಬೀಜೋತ್ಪಾದನೆಯ ತೊಟ್ಟಿಲು' ಎನಿಸಿದೆ.

ಏಳೆಂಟು ವರ್ಷಗಳ ಹಿಂದೆ 300ಕ್ಕೂ ಅಧಿಕ ಬೀಜೋತ್ಪಾದನಾ ಕಂಪನಿಗಳು ರಾಣೆಬೆನ್ನೂರಿನಲ್ಲಿ ನೆಲೆಯೂರಿದ್ದವು. ವರ್ಷದಿಂದ ವರ್ಷಕ್ಕೆ ಅವುಗಳ ಸಂಖ್ಯೆ ಕಡಿಮೆಯಾಗಿ ಪ್ರಸ್ತುತ 100ರಿಂದ 120 ಕಂಪನಿಗಳು ಮಾತ್ರ ಸಕ್ರಿಯವಾಗಿವೆ.

ಬೀಜೋತ್ಪಾದನಾ ಕಂಪನಿಗಳು ರೈತರೊಂದಿಗೆ ಒಪ್ಪಂದ ಮಾಡಿಕೊಂಡು 'ಫೌಂಡೇಶನ್ ಸೀಡ್ಸ್' (ತಾಯಿ ಬೀಜ) ಕೊಟ್ಟು, ಫಸಲು ಬಂದ ನಂತರ ಬೀಜಗಳನ್ನು ಖರೀದಿಸುತ್ತವೆ. ರೈತರು 10–20 ಗುಂಟೆ ಜಮೀನಿನಲ್ಲಿ ಲಕ್ಷಗಟ್ಟಲೆ ರೂಪಾಯಿ ಲಾಭ ಪಡೆಯಬಹುದು ಎಂಬ ಆಮಿಷವನ್ನು ಕಂಪನಿಗಳು ಒಡ್ಡುತ್ತವೆ. ಕೆಲವು ರೈತರು ಬೀಜೋತ್ಪಾದನೆ ಮಾಡಿ ಲಾಭ ಮಾಡಿಕೊಂಡಿದ್ದೂ ಇದೆ.

ಮಣ್ಣಿನ ಫಲವತ್ತತೆ ನಾಶ: 'ಹವಾಮಾನ ವೈಪರೀತ್ಯ, ಮಣ್ಣಿನ ಫಲವತ್ತತೆ ನಾಶ, ಕಾರ್ಮಿಕರ ಕೊರತೆ ಮುಂತಾದ ಕಾರಣಗಳಿಂದ ಗುಣಮಟ್ಟದ ಬೀಜೋತ್ಪಾದನೆ ಕಡಿಮೆಯಾಗಿದೆ. ಅತಿಯಾದ ರಸಗೊಬ್ಬರ, ಕೀಟನಾಶಕಗಳ ಬಳಕೆ ಹಾಗೂ ಏಕಬೆಳೆ ಪದ್ಧತಿಯಿಂದ ಮಣ್ಣಿನ ಸತ್ವ ನಾಶವಾಗುತ್ತಿದೆ. ಅವೈಜ್ಞಾನಿಕ ನೀರಿನ ಬಳಕೆಯಿಂದ ಭೂಮಿ ಸವಳಾಗುತ್ತಿದೆ. ಮಣ್ಣಿನಲ್ಲಿ ಪೋಷಕಾಂಶಗಳ ಕೊರತೆಯಿಂದ ಬೆಳೆಗಳು ರೋಗ ಮತ್ತು ಕೀಟಬಾಧೆಗೆ ತುತ್ತಾಗುತ್ತಿವೆ. ಎರೆ ಗೊಬ್ಬರ ಮತ್ತು ಸಾವಯವ ಗೊಬ್ಬರ ಬಳಕೆಯಿಂದ ಮಣ್ಣಿನ ಫಲವತ್ತತೆ ಹೆಚ್ಚಿಸಬಹುದು' ಎನ್ನುತ್ತಾರೆ ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ.ಪಿ.ಅಶೋಕ.

ರೈತರಿಗೆ ವಂಚನೆ: 'ಕೆಲವು ಕಂಪನಿಗಳು ಒಪ್ಪಂದದಂತೆ ನಡೆದುಕೊಳ್ಳದೆ, ಉತ್ತಮ ದರ ನೀಡದೇ ವಂಚಿಸಿದವು. ಖರೀದಿಸಿದ ಬೀಜಗಳ ಹಣವನ್ನು ಕೊಡದೇ ಸತಾಯಿಸಿದವು. ಈ ಎಲ್ಲ ಕಾರಣಗಳಿಂದ ರೈತರು ಬೀಜೋತ್ಪಾದನೆ ಕಂಪನಿಗಳ ವಿರುದ್ಧ ಹೋರಾಟಕ್ಕೆ ಇಳಿದರು. ಕೆಲವು ಕಂಪನಿಗಳು ಬಾಗಿಲು ಮುಚ್ಚಿದವು. ಮತ್ತಷ್ಟು ಕಂಪನಿಗಳು ಬೇರೆ ಕಡೆ ಸ್ಥಳಾಂತರಗೊಂಡವು' ಎನ್ನುತ್ತಾರೆ ರೈತ ಮುಖಂಡ ಮಲ್ಲಿಕಾರ್ಜುನ ಬಳ್ಳಾರಿ.

'ಕೇಂದ್ರ ಸರ್ಕಾರದ ಮಟ್ಟದಲ್ಲಿ ನೋಂದಣಿ ಮಾಡಿಕೊಂಡು ರಾಜ್ಯಕ್ಕೆ ಬರುವ ಬೀಜೋತ್ಪಾದನಾ ಕಂಪನಿಗಳ ಮೇಲೆ ಸ್ಥಳೀಯ ಕೃಷಿ ಇಲಾಖೆಗಳಿಗೆ ನಿಯಂತ್ರಣವಿಲ್ಲ. ಇಂಥ ಕಂಪನಿಗಳ ಅಂಕಿಅಂಶ ಜಿಲ್ಲಾಡಳಿತದ ಬಳಿಯೂ ಲಭ್ಯವಿಲ್ಲ. ರಾಜ್ಯ ಸರ್ಕಾರದ ಮಟ್ಟದಲ್ಲೂ ನೋಂದಣಿ ಮಾಡುವುದನ್ನು ಕಡ್ಡಾಯಗೊಳಿಸಬೇಕು. ಆಗ ರೈತರು ತಮಗೆ ಅನ್ಯಾಯವಾದರೆ ಪರಿಹಾರ ಕೇಳಬಹುದು' ಎನ್ನುತ್ತಾರೆ ರೈತ ಮುಖಂಡರು.

'ಬೀಜೋತ್ಪಾದನೆಯಲ್ಲಿ ಹಾವೇರಿ ಜಿಲ್ಲೆ ರಾಜ್ಯದಲ್ಲಿಯೇ ಮೊದಲನೇ ಸ್ಥಾನದಲ್ಲಿತ್ತು. ಈಗ ಐದನೇ ಸ್ಥಾನಕ್ಕೆ ಕುಸಿದಿದೆ. ಶೇ 50ರಷ್ಟು ಉತ್ಪಾದನೆ ಕಡಿಮೆಯಾಗಿದೆ. ವಿಜ್ಞಾನಿಗಳಿಗಿಂತ ಉತ್ತಮ ಪ್ರಾಯೋಗಿಕ ಜ್ಞಾನ ಹೊಂದಿರುವ ರೈತರು ನಮ್ಮಲ್ಲಿದ್ದಾರೆ. ಸರ್ಕಾರ ರೈತರ ಸಮಸ್ಯೆಗಳನ್ನು ನಿವಾರಿಸಿ, ಪ್ರೋತ್ಸಾಹ ನೀಡಿದರೆ ಬೀಜೋತ್ಪಾದನೆಯಲ್ಲಿ ಪುನಃ ಅಗ್ರಸ್ಥಾನ ಪಡೆಯುವಲ್ಲಿ ಸಂದೇಹವಿಲ್ಲ' ಎನ್ನುತ್ತಾರೆ ಕೃಷಿ ಪದವೀಧರರ ಸಂಘದ ಅಧ್ಯಕ್ಷ ದೇವಕುಮಾರ ಎಚ್.ಎನ್.

ಕಳಪೆ ಬೀಜ ಮಾರಾಟ: 'ಸರ್ಕಾರ ಹಾಗೂ ಕೃಷಿ ಇಲಾಖೆಯಿಂದ ಬೀಜಗಳ ಮೊಳಕೆ ಪ್ರಮಾಣದ (ಜೆರ್ಮಿನೇಶನ್ ಕೌಂಟ್) ಪ್ರಯೋಗ ಪರೀಕ್ಷೆ (ಲ್ಯಾಬ್ ಟೆಸ್ಟಿಂಗ್) ನಡೆಸಲಾಗುತ್ತದೆ. ಇಂತಹ ಸಂದರ್ಭದಲ್ಲಿ ಕೂಡ ತಿರಸ್ಕೃತ ಬೀಜಗಳನ್ನು ಮಾರಾಟ ಮಾಡುವ ಮಾಫಿಯಾದಿಂದ ಜಿಲ್ಲೆಗೆ ಕೆಟ್ಟ ಹೆಸರು ಬಂದಿದೆ. ಕಳಪೆ ಬೀಜ ಮಾರಾಟಕ್ಕೆ ಮುಂದಾಗಿರುವುದು ದುರಂತದ ಸಂಗತಿ. ತಪ್ಪಿಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸುತ್ತಾರೆ ರೈತ ಮುಖಂಡ ರವೀಂದ್ರಗೌಡ ಪಾಟೀಲ.

ಹಳಸಿದ ಸಂಬಂಧ: ಬೀಜೋತ್ಪಾದನೆ ಕಂಪನಿಗಳ ಅಧಿಕಾರಿಗಳು ಮತ್ತು ಏಜೆಂಟರು, ರೈತರಿಂದ ಬಿತ್ತನೆ ಬೀಜಗಳನ್ನು ಉಪಾಯದಿಂದ ತೆಗೆದುಕೊಂಡು ಹೋಗಿ ನಿಮ್ಮಿಂದ ಪಡೆದ ಬಿತ್ತನೆ ಬೀಜಗಳು ತಿರಸ್ಕೃತವಾಗಿವೆ ಎಂದು ಮೋಸ ಮಾಡುತ್ತಾರೆ. ಅವೇ ಬೀಜಗಳನ್ನು ಬೇರೆ ಕಂಪನಿಗೆ ಮಾರುತ್ತಾರೆ. ಮತ್ತೆ ಬೀಜ ವಾಪಸ್ ಕೊಡುವುದಿಲ್ಲ. ಇದನ್ನು ತಿಳಿದ ರೈತರು ತಾವು ಬೆಳೆದ ಎಲ್ಲ ಬೀಜಗಳನ್ನು ಕಂಪನಿಗೆ ಕೊಡುವುದಿಲ್ಲ. ಅರ್ಧದಷ್ಟನ್ನು ಬೇರೆಯವರಿಗೆ ಮಾರುತ್ತಾರೆ. ರೈತರು ಮತ್ತು ಬೀಜೋತ್ಪಾದನೆ ಕಂಪನಿಗಳ ನಡುವೆ ಸಂಬಂಧ ಹಳಸಿದ್ದರಿಂದ ಬೀಜೋತ್ಪಾದನೆ ಮೇಲೆ ಕರಿನೆರಳು ಕವಿದಿದೆ.

110 ಲಕ್ಷ ಹೆಕ್ಟೇರ್ ಕೃಷಿ ಚಟುವಟಿಕೆ ನಡೆಯುವ ಪ್ರದೇಶ

8.30 ಲಕ್ಷ ಕ್ವಿಂಟಲ್ ಬಿತ್ತನೆ ಬೀಜ ದಾಸ್ತಾನು

ಜಾಗೃತ ದಳದ ಕಡಿವಾಣ

ಇಡೀ ದೇಶದಲ್ಲೇ ಮೊದಲ ಬಾರಿಗೆ ಜಾಗೃತ ದಳ ಜಾರಿಗೆ ತಂದ ಪರಿಣಾಮ ರಾಜ್ಯದಲ್ಲಿ ಕಳಪೆ ಬೀಜಗಳ ಮಾರಾಟ ಜಾಲಕ್ಕೆ ಕಡಿವಾಣ ಬಿದ್ದಿದೆ. 2019ರಿಂದ 21ರವರೆಗೆ ನಿರಂತರವಾಗಿ ದಾಳಿಗಳನ್ನು ನಡೆಸಿ ಪ್ರಕರಣ ದಾಖಲಿಸಲಾಗಿದೆ. 15 ಪ್ರಕರಣಗಳಲ್ಲಿ ಇಲಾಖೆ ಪರವಾಗಿಯೇ ತೀರ್ಪುಗಳು ಬಂದಿವೆ. ಈಗಲೂ ಅಪರೂಪಕ್ಕೆ ಪ್ರಕರಣಗಳು ಕಂಡುಬರುತ್ತಿವೆ. ಜಾಗೃತ ದಳ ಈಗಾಗಲೇ ಒಂದು ಸುತ್ತಿನ ತಪಾಸಣೆ ಕಾರ್ಯ ಪೂರ್ಣಗೊಳಿಸಿದೆ. ನಮ್ಮ ಈ ಕಾರ್ಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿರುವ ಕೃಷಿ ಇಲಾಖೆಯ ಸಿಬ್ಬಂದಿಯ ಸಹಕಾರ ದೊರೆತಲ್ಲಿ ಕಳಪೆ ಬೀಜ, ಗೊಬ್ಬರ ಹಾಗೂ ಕೀಟನಾಶಕದ ಜಾಲವನ್ನು ಬೇರುಸಹಿತ ಕಿತ್ತೊಗೆಯಬಹುದು.

ಡಾ. ಎಚ್.ಕೆ.ಶಿವಕುಮಾರ, ಪ್ರಭಾರ ಅಪರ ಕೃಷಿ ನಿರ್ದೇಶಕ, ಜಾಗೃತ ದಳ

ಬಿತ್ತನೆ ಬೀಜ ಉತ್ಪಾದನೆಗೆ ರಾಜ್ಯದ ಯೋಜನೆ ಇಲ್ಲ

ಬೆಂಗಳೂರು: ಬೀಜೋತ್ಪಾದನೆ ಪ್ರೋತ್ಸಾಹಕ್ಕೆಂದು ರಾಜ್ಯ ಸರ್ಕಾರ ಯಾವುದೇ ವಿಶೇಷ ಕಾರ್ಯಕ್ರಮ ಅಥವಾ ಯೋಜನೆಗಳನ್ನು ಹಮ್ಮಿಕೊಂಡಿಲ್ಲ. ಆದರೆ, ಬೀಜ ವಿತರಣೆಗಾಗಿ ಸಹಾಯಧನವನ್ನಷ್ಟೇ ನೀಡುತ್ತಿದೆ.

'ಕೇಂದ್ರ ಸರ್ಕಾರ 'ರಾಷ್ಟ್ರೀಯ ಆಹಾರ ಭದ್ರತಾ ಮಿಷನ್' ಅಡಿ ವಿಶೇಷವಾಗಿ ಬೇಳೆ–ಕಾಳುಗಳಿಗೆ ದ್ವಿದಳ ಯೋಜನೆಯಡಿ ನೆರವು ನೀಡುತ್ತದೆ. ಕರ್ನಾಟಕ ರಾಜ್ಯ ಬೀಜ ಉತ್ಪಾದನಾ ನಿಗಮ ಮತ್ತು ಕರ್ನಾಟಕ ಆಯಿಲ್ ಫೆಡರೇಷನ್ ಜತೆ ನೋಂದಣಿ ಮಾಡಿಕೊಂಡ ಬೀಜೋತ್ಪಾದನೆ ಮಾಡುವ ರೈತರಿಗೆ ನೆರವು ನೀಡಲಾಗುತ್ತದೆ' ಎಂದು ಕೃಷಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಲ್ಲದೆ, ಕರ್ನಾಟಕ ರಾಜ್ಯ ಬೀಜ ನಿಗಮವೂ ಬೀಜ ತಯಾರಿಸುವ ರೈತರನ್ನು ಗುರುತಿಸಿ ಅವರ ಮೂಲಕ ಬೀಜ ಉತ್ಪಾದನೆ ಮಾಡುತ್ತಿದೆ. ಇದರಲ್ಲಿ ರೈತರು ಪಾಲುದಾರರಾಗಿರುತ್ತಾರೆ. ರೈತರು ಬೆಳೆದ ಬೀಜವನ್ನು ನಿಗಮವೇ ಖರೀದಿಸಿ ಮಾರಾಟಕ್ಕೆ ವ್ಯವಸ್ಥೆ ಮಾಡುತ್ತದೆ. ಉದಾಹರಣೆಗೆ ನಿರ್ದಿಷ್ಟ ಬಿತ್ತನೆ ಬೀಜ ಕ್ವಿಂಟಲ್‌ಗೆ ₹3,000 ದರ ಇದ್ದರೆ ಅಷ್ಟೂ ಮೊತ್ತವನ್ನು ನೀಡಿ ಖರೀದಿಸುತ್ತದೆ. ಅದನ್ನು ಪ್ಯಾಕಿಂಗ್ ಮಾಡಿ ಕಳುಹಿಸುತ್ತದೆ ಎನ್ನುತ್ತಾರೆ ಅವರು.

ಕೇಂದ್ರ ಸರ್ಕಾರದ 'ಬೀಜಗ್ರಾಮ' ಯೋಜನೆ ಹೆಚ್ಚು ಜನಪ್ರಿಯವಾಗಿದೆ. ಪರಂಪರಾಗತವಾಗಿ ರೈತರು ಬಿತ್ತನೆಗಾಗಿ ಸಂಗ್ರಹಿಸುವ ಬೀಜದ ಗುಣಮಟ್ಟವನ್ನು ಹೆಚ್ಚಿಸಲು ಪ್ರೋತ್ಸಾಹಿಸುವುದಕ್ಕಾಗಿಯೇ ರೈತರಿಗೆ ನೆರವು ನೀಡಲಾಗುತ್ತದೆ. ಶೇ 80 ರಿಂದ ಶೇ 85 ರಷ್ಟನ್ನು ಕೃಷಿ ಉತ್ಪಾದನೆ ಕಾರ್ಯಕ್ರಮದಲ್ಲಿ ಇದನ್ನು ಬಳಸಲಾಗುತ್ತದೆ. ತರಬೇತಿ, ತಯಾರಿಕೆ ಮತ್ತು ವಿತರಣೆಗೆ ಕೇಂದ್ರ ಸರ್ಕಾರ ನೆರವು ನೀಡುತ್ತದೆ. ಬೀಜಗ್ರಾಮಗಳಲ್ಲಿ ತಯಾರಿಸಿದ ಬೀಜಗಳನ್ನು ಸಂಗ್ರಹಿಸಿ, ಸಂರಕ್ಷಿಸಲಾಗುತ್ತದೆ. ಈ ರೀತಿ ಸಂಗ್ರಹಿಸಿದ ಬಿತ್ತನೆ ಬೀಜವನ್ನು ಮುಂದಿನ ಹಂಗಾಮಿಗೆ ಬಳಸಲಾಗುತ್ತದೆ. ಬೀಜ ಉತ್ಪಾದನೆಗೆ ಖಾಸಗಿ ಕಂಪನಿಯವರಿಗೂ ಉತ್ತೇಜನ ನೀಡಲಾಗುತ್ತದೆ.

ಇದಲ್ಲದೇ 'ರಾಷ್ಟ್ರೀಯ ಆಹಾರ ಭದ್ರತಾ ಮಿಷನ್' ಅಡಿ ರಾಜ್ಯದಲ್ಲಿ ವಿವಿಧ ರೀತಿಯ ಬೇಳೆ– ಕಾಳುಗಳು, ಎಣ್ಣೆಕಾಳುಗಳು ಮತ್ತು ಭತ್ತದ ಉತ್ಪಾದನೆ ಹೆಚ್ಚಿಸುವುದರ ಭಾಗವಾಗಿ ಕೇಂದ್ರ ಸರ್ಕಾರ ನೆರವು ನೀಡುತ್ತದೆ.

ರಾಜ್ಯದಲ್ಲಿ ಉತ್ತಮ ಗುಣಮಟ್ಟದ ಬಿತ್ತನೆ ಬೀಜ ಬೆಳೆಯುವವರನ್ನು ಗುರುತಿಸಿ, ಅವರಿಂದ ಹೆಸರು, ಉದ್ದು, ಕಡ್ಲೆಕಾಳು, ಕಡ್ಲೆ ಬೇಳೆ, ಶೇಂಗಾ ಮತ್ತು ಭತ್ತದ ಬಿತ್ತನೆ ಬೀಜಗಳನ್ನು ಬೆಳೆಯಲು ರಾಜ್ಯದ ರೈತರಿಗೆ ನೆರವು ನೀಡಲಾಗುತ್ತಿದೆ. ಬಿತ್ತನೆ ಬೀಜವನ್ನು ಉತ್ಪಾದಿಸುತ್ತಿದೆ. 2021–22 ರ ಸಾಲಿಗಾಗಿ ಕರ್ನಾಟಕ ಸರ್ಕಾರ ಕಳುಹಿಸಿದ ₹114.08 ಕೋಟಿ ಕ್ರಿಯಾ ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಇದರಲ್ಲಿ ಕೇಂದ್ರ ಸರ್ಕಾರ₹ 68.45 ಕೋಟಿ ಮತ್ತು ರಾಜ್ಯ ಸರ್ಕಾರ ₹45.63 ಕೋಟಿ ನೀಡಲಿವೆ. ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ ಯೋಜನೆಯಡಿ ಇಳುವರಿಯನ್ನು ಹೆಚ್ಚಿಸಲು ವಿವಿಧ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಅದರಲ್ಲಿ ಬಿತ್ತನೆ ಬೀಜ ಉತ್ಪಾದನೆಯೂ ಸೇರಿದೆ.

ತಳಿ ಸಂರಕ್ಷಣೆಗೆ ಕಂಕಣ

• ಸದಾಶಿವ ಎಂ.ಎಸ್.

ಕಾರವಾರ: ಉತ್ತರ ಕನ್ನಡದಲ್ಲಿ ಒಂದೆಡೆ ಭತ್ತದ ಬೇಸಾಯದ ಪ್ರದೇಶ ಇಳಿಕೆಯಾಗುತ್ತಿದ್ದರೆ, ಮತ್ತೊಂದೆಡೆ ಕೆಲವರು ಸಾಂಪ್ರದಾಯಿಕವಾಗಿ ಬೀಜಗಳನ್ನು ಸಂಗ್ರಹಿಸುತ್ತಿದ್ದಾರೆ. ಅವುಗಳನ್ನೇ ಬಳಕೆ ಮಾಡಿ ಇತರರಿಗೂ ಪ್ರೇರೇಪಿಸುತ್ತಿದ್ದಾರೆ.

265 ತಳಿ ಸಂರಕ್ಷಕ: ಶಿರಸಿ ತಾಲ್ಲೂಕಿನ ದೇವತೆಮನೆ ಗ್ರಾಮದ ರಾಮಕೃಷ್ಣ ಭಟ್ ಎಂಬುವವರು, 265 ಬಗೆಯ ಪಾರಂಪರಿಕ ತಳಿಗಳನ್ನು ನಾಟಿ ಮಾಡುತ್ತಾರೆ. ವಿಶೇಷವೆಂದರೆ ಅವರು ಅದಕ್ಕೆ ಕೇವಲ ನಾಲ್ಕು ಗುಂಟೆ ಜಮೀನು ಬಳಕೆ ಮಾಡಿಕೊಳ್ಳುತ್ತಾರೆ.

ಪ್ರತಿ ತಳಿಯ ಸಸಿಯನ್ನು ಗುರುತಿಸಲು ಪ್ರತ್ಯೇಕ ಸಂಖ್ಯೆ ನೀಡಿ ಅಂಟಿಸಿಡುತ್ತಾರೆ. ಅದನ್ನು ಆಧರಿಸಿ ನೊಂದಣಿ ಪುಸ್ತಕದಲ್ಲಿ ಮಾಹಿತಿ ದಾಖಲಿಸುತ್ತಾರೆ. 200ಕ್ಕಿಂತ ಹೆಚ್ಚು ಭತ್ತ ತಳಿಗಳ ಮಾಹಿತಿ ಅವರ ಬಳಿ ಸದ್ಯಕ್ಕೆ ಲಭ್ಯವಿದೆ. 65 ತಳಿಗಳ ಬಗ್ಗೆ ಅಧ್ಯಯನ ನಡೆಸುತ್ತಿದ್ದಾರೆ.

ಕಳವೆ, ಮಟ್ಟಳಗ, ಹೊನ್ನಕಟ್ಟು, ಜೇನುಗೂಡು, ಗೌಡರ ಭತ್ತ, ದೊಡ್ಡ ಭತ್ತ, ಜಿಗ್ಗ ವರಟಿಗ, ನೀರ ಮುಳುಗ, ಕರಿ ಕಂಟಕ, ಲಿಂಬೆ ಮೊಹರಿ ಸೇರಿದಂತೆ ಹಲವು ಸ್ಥಳೀಯ ತಳಿಯ ಮತ್ತು ನೇಪಾಳ, ಥಾಯ್ಲೆಂಡ್ ಭಾಗದಲ್ಲಿ ಬೆಳೆಯುವ ವಿದೇಶಿ ತಳಿಯ ಭತ್ತಗಳು ಅವರ ಬಳಿಯಿವೆ.

'ಇವೆಲ್ಲವನ್ನು ಬೆಳೆಯಲು ತಜ್ಞರ ಸಲಹೆ ಪಡೆಯುತ್ತಿಲ್ಲ. ಹಲವು ಕೃಷಿ ವಿಜ್ಞಾನಿಗಳು ಭೇಟಿ ನೀಡಿ ಅಧ್ಯಯನ ನಡೆಸುತ್ತಾರೆ' ಎಂದು ಅವರು ಹೇಳುತ್ತಾರೆ.

ಕೊಯ್ಲಿನ ಬಳಿಕ ಬೀಜಗಳನ್ನು ಮುಂದಿನ ವರ್ಷದ ನಾಟಿಗೆ ಮೀಸಲಿಡುತ್ತಾರೆ. ಉಳಿದ ಭತ್ತವನ್ನು ಅಧ್ಯಯನ ಆಸಕ್ತರಿಗೆ, ಒಂದಷ್ಟು ಕೃಷಿಕರಿಗೆ ಉಚಿತವಾಗಿ ಕೊಡುತ್ತಾರೆ.

'ತಳಿ ಸಂರಕ್ಷಣೆ ಆಗಬೇಕು ಎಂಬುದೇ ನನ್ನ ಕಾಳಜಿ' ಎಂದು ಅವರು ಹೇಳುತ್ತಾರೆ.





ನಾಗರಾಜ

ಮನೆಯಂಗಳದಲ್ಲೇ ಮಡಿಗೆ ಸಿದ್ಧತೆ: ಕುಮಟಾ ತಾಲ್ಲೂಕು ಕಾಗಾಲ ಗ್ರಾಮದ ಯುವ ಕೃಷಿಕ ನಾಗರಾಜ ನಾಯ್ಕ ಅಂಥವರಲ್ಲಿ ಒಬ್ಬರು. ಅವರು 170 ಬಗೆಯ ಭತ್ತದ ತಳಿಗಳನ್ನು ಬೆಳೆಸುತ್ತಿದ್ದಾರೆ. ಅಳಿವಿನ ಅಂಚಿನಲ್ಲಿರುವ ವಿವಿಧ ಪ್ರಭೇದಗಳನ್ನು ಸಂರಕ್ಷಿಸುತ್ತಿದ್ದಾರೆ.

ಜಿಲ್ಲೆಯ ಗಜನಿ ಭೂಮಿಯಲ್ಲಿ ಬೆಳೆಯುವ ಬಿಳಿ ಕಗ್ಗ, ಕರಿ ಕಗ್ಗ ತಳಿಗಳೂ ಅವರ ಸಂಗ್ರಹದಲ್ಲಿವೆ. ಜ್ಯೋತಿ, ಮಹಾವೀರ, ರಾಜಮುಡಿ, ಜಯಪದ್ಮ, ಸೇಲಂ, ಗೋವಾಧನ-1, 2, 3, 4 ಪ್ರಭೇದಗಳು, ರಾಜಭೋಗ, ನಾಗಭತ್ತ, ಶಕ್ತಿ, ಪಲಗಾರ, ರತ್ನಚೂಡ, ಭೂತನಾಥ, ಮೈಸೂರು ಮಲ್ಲಿಗೆ, ಕಜೆ ಜಯ, ಕೆಂಪು ಭತ್ತ, ಕಂದು ಭತ್ತ, ಔಷಧಿಯುಕ್ತ ಭತ್ತ ಹಾಗೂ ಉಪ್ಪು ನೀರು, ಆಳ ನೀರಿನಲ್ಲಿ ಬೆಳೆಯುವ ಭತ್ತದ ಬೀಜಗಳು ಅವರ ಬಳಿಯಿವೆ.

ತಮ್ಮ ಮನೆಯಂಗಳದಲ್ಲೇ ವಿವಿಧ ತಳಿಗಳ ಮಡಿಗಳನ್ನು ತಯಾರಿಸುತ್ತಾರೆ. ಅವುಗಳನ್ನು ತಮ್ಮ ಪರಿಚಯದವರ ಪಾಳುಬಿದ್ದ ಗದ್ದೆಯಲ್ಲಿ ಬೇಸಾಯ ಮಾಡುತ್ತಾರೆ. ಪ್ರಾಯೋಗಿಕವಾಗಿ ಮಾಡುವ ಕಾರಣ ಎಲ್ಲ ತಳಿಯ ಸುಮಾರು ಐದು ಕೆ.ಜಿ.ಗಳಷ್ಟು ಬೀಜಗಳನ್ನು ಬಿತ್ತನೆ ಮಾಡುತ್ತಿದ್ದಾರೆ.

'ಅಸ್ಸಾಂನ 'ಮೌದಾಮಣಿ' ತಳಿಯನ್ನು ಕರಾವಳಿ ಪ್ರದೇಶದಲ್ಲಿ ಪ್ರಾಯೋಗಿಕವಾಗಿ ನಾಟಿ ಮಾಡಿದ್ದೆ. ಅವು ಉತ್ತಮ ಫಲಿತಾಂಶ ಕೊಟ್ಟಿತ್ತು. ಒಂದು ತೆನೆಯಲ್ಲಿ 500ರಿಂದ 600 ಕಾಳು ಕಟ್ಟುವುದು ಇದರ ವಿಶೇಷ. ಇದರಿಂದ ಸ್ಫೂರ್ತಿ ಪಡೆದು ಇತರ ತಳಿಗಳ ಸಂರಕ್ಷಣೆಗೆ ಮುಂದಾದೆ' ಎಂದು 'ಪ್ರಜಾವಾಣಿ' ಜೊತೆ ಅವರು ಅನುಭವ ಹಂಚಿಕೊಂಡರು.

'ಕಗ್ಗ' ಭತ್ತ ಬಿತ್ತನೆ

ಕುಮಟಾ ತಾಲ್ಲೂಕಿನ 'ಮಾಣಿಕಟ್ಟಾ ಕಗ್ಗ ಭತ್ತ ಬೆಳೆಗಾರರ ಸಂಘ'ವು ಅಪರೂಪದ ದೇಸಿ ತಳಿ 'ಕಗ್ಗ'ದ ಸಂರಕ್ಷಣೆಗೆ ಮಹತ್ವದ ಕಾರ್ಯ ನಡೆಸುತ್ತಿದೆ. ಪ್ರತಿ ವರ್ಷ ಸಹಕಾರ ತತ್ವದ ಅಡಿಯಲ್ಲಿ ಸುಮಾರು 30 ಎಕರೆ ಪ್ರದೇಶದಲ್ಲಿ ಈ ತಳಿಯ ಭತ್ತವನ್ನು ಬಿತ್ತನೆ ಮಾಡಲಾಗುತ್ತದೆ. ಗಜನಿ (ಖಾರ್ಲೆಂಡ್) ಗದ್ದೆಯ ಸುತ್ತಮುತ್ತಲಿನ ಸುಮಾರು 200 ರೈತರು ಇದರಲ್ಲಿ ಭಾಗವಹಿಸುತ್ತಾರೆ.



ಪೌಷ್ಟಿಕಾಂಶದ ಭದ್ರತೆ ಅವಶ್ಯ

ದೇಶದಲ್ಲಿ ಆಹಾರದ ಭದ್ರತೆ ವೃದ್ಧಿಸುವ ಉದ್ದೇಶದಿಂದ ಕೃಷಿ ಇಳುವರಿ ಹೆಚ್ಚಳಕ್ಕೆ ಸಂಶೋಧನೆಗಳು ನಡೆದಿವೆ. ಆದರೆ, ಸದ್ಯಕ್ಕೆ ಪೌಷ್ಟಿಕಾಂಶದ ಭದ್ರತೆಗೂ ಆದ್ಯತೆ ನೀಡಬೇಕಿದೆ. ಪೌಷ್ಟಿಕಾಂಶಯುತ್ತ ಮತ್ತು ಹೆಚ್ಚು ಇಳುವರಿ ಕೊಡುವ ತಳಿಗಳನ್ನು ಅಭಿವೃದ್ಧಿಪಡಿಸುವ ಸಂಶೋಧನೆಗಳು ಈಗ ಆರಂಭವಾಗಿವೆ. ಹೈಬ್ರಿಡ್ ಮತ್ತು ಮಿಶ್ರತಳಿಗಳಿಂದ ಖಂಡಿತವಾಗಿ ದೇಶಕ್ಕೆ ಅನುಕೂಲವಾಗಿದೆ. ಜನರಲ್ಲಿ ರೋಗ ನಿರೋಧಕ ಶಕ್ತಿ ಪ್ರಮಾಣ ಹೆಚ್ಚಿಸಲು ಕೂಡ ಸಾಧ್ಯವಾಗಿದೆ.

ಡಾ.ಜಯಪ್ರಕಾಶ ನಿಡಗುಂದಿ, ಮುಖ್ಯಸ್ಥ
ಆನುವಂಶಿಕತೆ ಮತ್ತು ತಳಿ ಅಭಿವೃದ್ಧಿ ವಿಭಾಗ, ರಾಯಚೂರು ಕೃಷಿ ವಿಶ್ವವಿದ್ಯಾಲಯ

ಮೊಳಕೆಯೊಡೆಯುವ ಪರೀಕ್ಷೆ ಕಡ್ಡಾಯ

ಯಾವುದೇ ಬೀಜವಾಗಲೀ ಮೊಳಕೆಯೊಡೆಯುವ ಪ್ರಮಾಣವನ್ನು ಆಧರಿಸಿ ಅವುಗಳ ಗುಣಮಟ್ಟವನ್ನು ಅಳೆಯಲಾಗುತ್ತದೆ. ರೈತರೇ ಸಂಸ್ಕರಿಸಿದ ಅಥವಾ ವಿಶ್ವವಿದ್ಯಾಲಯ, ಬೀಜ ನಿಗಮ ಅಥವಾ ಖಾಸಗಿ ಕಂಪನಿಗಳ ಬೀಜಗಳೇ ಆದಲ್ಲಿ ಅವುಗಳ ಮೊಳಕೆಯೊಡೆಯುವಿಕೆ ಪರೀಕ್ಷೆ ನಡೆಸಬೇಕು. ರೈತರು ತಾವೇ ಮನೆಯಲ್ಲಿ ಮಾಡಬಹುದು. ಅಥವಾ ವಿಶ್ವವಿದ್ಯಾಲಯ ಮತ್ತು ಬೀಜ ತಂತ್ರಜ್ಞಾನ ಕೇಂದ್ರಗಳಲ್ಲಿಯೂ ರಿಯಾಯಿತಿ ದರದಲ್ಲಿ ಪರೀಕ್ಷೆ ಮಾಡಿಸಬಹುದು. ಗುಣಮಟ್ಟ ಖಾತ್ರಿಯಾದ ನಂತರವೇ ಬೀಜವನ್ನು ಬಿತ್ತುವುದು ಸೂಕ್ತ. ಪ್ರಮಾಣೀಕೃತ ಬೀಜ (ನೀಲಿ ಬಣ್ಣದ ಚೀಟಿ) ಗುಣಮಟ್ಟ ಪರೀಕ್ಷೆಯನ್ನು ನಡೆಸಿ ಅದರ ಪ್ರಮಾಣವನ್ನು ಚೀಟಿ ಮೇಲೆ ಅಂಟಿಸಲಾಗಿರುತ್ತದೆ. ಇದಕ್ಕೆ ಒಂಬತ್ತು ತಿಂಗಳ ಕಾಲಾವಕಾಶ ಇರುತ್ತದೆ. ಆದರೆ ಬಹಳಷ್ಟು ಖಾಸಗಿ ಕಂಪನಿಗಳು ತಾವೇ ಗುಣಮಟ್ಟ ಪರೀಕ್ಷೆಗಳನ್ನು ನಡೆಸುವುದರಿಂದ ನಿಜಗುಣ ಬೀಜವನ್ನು (ಹಸಿರು ಬಣ್ಣದ ಚೀಟಿ) ಮಾರುತ್ತವೆ. ಇವುಗಳ ಗುಣಮಟ್ಟದ ಖಾತ್ರಿ ಇರುವುದಿಲ್ಲ

ಡಾ. ವಿಜಯಕುಮಾರ
ಧಾರವಾಡ ಕೃಷಿ ವಿಶ್ವವಿದ್ಯಾಲಯದ ಬೀಜ ತಯಾರಿಕಾ ಘಟಕದ ಮುಖ್ಯಾಧಿಕಾರಿ

ಸರ್ಕಾರ ಗಟ್ಟಿ ಇದ್ದರೆ ಹಿಂಗ್ಯಾಕ ಆಗತೈತಿ?

ಖಾಸಗಿ ಕಂಪನಿಗಳಿಗೆ ಅನುಕೂಲವಾಗುವಂಥ ಕಾನೂನೇ ಮಾಡ್ತಾರ. ಬೇಡಿಕೆ ಹೆಚ್ಚಾದಂಗ ಕಳಪೆ ಬೀಜಗಳ ಮಾರಾಟನೇ ಹೆಚ್ಚು ಮಾಡ್ತಾರ. ಕೃತಕ ಅಭಾವ ಸೃಷ್ಟಿಸ್ತಾರ. ಸರ್ಕಾರ, ಅಧಿಕಾರಿಗಳೂ ಶಾಮೀಲಾಗ್ಯಾರ. ಹಿಂಗಾದ್ರ ರೈತರ ಹಿತ ಕಾಯೋರು ಯಾರು? ಸರ್ಕಾರ ಕೊಡೋ ಬೀಜದ ಬೆಲಿ, ನೂರು ರೂಪಾಯಿ ಕಡಿಮಿ ಇರ್ತದ ಖರೆ. ಆದ್ರ ಇಳುವರಿ ಹೆಚ್ಚು ಬರಾಂಗಿಲ್ಲ. ಹಿಂಗಾಗಿ ಖಾಸಗಿ ಕಂಪನಿ ಬೀಜನೇ ರೈತರು ಕೇಳ್ತಾರ. ಆದ್ರ ಸಂತಿಗೆ ಬರುವ ಬೀಜದ ಗುಣಮಟ್ಟ ಖಾತ್ರಿ ಮಾಡುವ ಜವಾಬ್ದಾರಿ ಸರ್ಕಾರದ್ದು ಅಲ್ಲೇನು?

ಬಸವರಾಜ ಸಾಬಳೆ
ರೈತ ಮುಖಂಡ, ಗದಗ

ಹೈಬ್ರಿಡ್ ತಳಿಗಳಿರಲಿ

ನೆಲದ ಗುಣ, ನೀರಿನ ಲಭ್ಯತೆ, ಮಳೆ, ಗಾಳಿಯ ಪ್ರಮಾಣ, ಒಂದು ಪ್ರದೇಶದ ಹವಾಮಾನದ ಸ್ಥಿತಿಗತಿಗಳ ಆಧಾರದಲ್ಲಿ ಹೈಬ್ರಿಡ್ ತಳಿಗಳನ್ನು ಅಭಿವೃದ್ಧಿಪಡಿಸುತ್ತೇವೆ. ರೋಗನಿರೋಧಕ ಶಕ್ತಿ ಹೆಚ್ಚಿರುವ ಕಾರಣ ಬೆಳೆ ನಷ್ಟ ಕಡಿಮೆ.

ಸಾಂಪ್ರದಾಯಿಕ ತಳಿಗಳು ನೀರು ಹೆಚ್ಚಾದರೂ, ಕಡಿಮೆಯಾದರೂ ಸಹಿಸಿಕೊಳ್ಳುವುದಿಲ್ಲ. ರಭಸವಾಗಿ ಬೀಸುವ ಗಾಳಿಗೂ ನೆಲಕ್ಕೆ ಉರುಳುತ್ತವೆ. ಹೈಬ್ರಿಡ್ ತಳಿಗಳು ಇಂತಹ ಪ್ರತಿಕೂಲ ಸ್ಥಿತಿ ನಿಭಾಯಿಸುವ ಗುಣ ಹೊಂದಿರುತ್ತವೆ. ಭತ್ತ, ರಾಗಿ, ಜೋಳ, ದ್ವಿದಳ ಧಾನ್ಯ ಸೇರಿದಂತೆ ಇಂತಹ ಹಲವು ತಳಿಯನ್ನು ಅಭಿವೃದ್ಧಿ ಪಡಿಸಿದ್ದೇವೆ. ಒಂದೇ ಬೆಳೆಯಲ್ಲಿ ಬೆಳೆಹಾನಿ, ಬೆಲೆ ಕುಸಿತದ ಅಪಾಯವಿರುತ್ತದೆ. ಮಿಶ್ರ ಬೆಳೆ ರೈತರ ಕೈಹಿಡಿಯುತ್ತವೆ. ಆರ್ಥಿಕ ನಷ್ಟ ಇರುವುದಿಲ್ಲ.

ಎಂ.ಹನುಮಂತಪ್ಪ
ಕುಲಪತಿ, ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ

ಬಿತ್ತನೆ ಬೀಜದ ಆದ್ಯತೆ ಬದಲು

ಹಸಿರು ಕ್ರಾಂತಿ ಮತ್ತು ಆ ಬಳಿಕ ಆಹಾರ ಧಾನ್ಯಗಳ ಉತ್ಪಾದಕತೆ ಹೆಚ್ಚಿಸಲು ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಅದರಲ್ಲಿ ಸ್ವಾವಲಂಬನೆ ಸಾಧಿಸಲಾಗಿದೆ. ನಮ್ಮ ಹಿಂದಿನ ದೇಸಿ ತಳಿಗಳ ಬೀಜಗಳಲ್ಲಿ ಉತ್ಪಾದಕತೆ ಕಡಿಮೆ ಇದ್ದರೂ ಪೌಷ್ಟಿಕತೆ, ವಿಟಮಿನ್, ಖನಿಜದ ಅಂಶಗಳು ಉತ್ತಮ ಗುಣಮಟ್ಟದ್ದಾಗಿದ್ದವು. ಬೀಜ ತಂತ್ರಜ್ಞಾನದಲ್ಲಿ ಉತ್ಪಾದಕತೆಗೆ ಹೆಚ್ಚಿನ ಆದ್ಯತೆ ನೀಡಿದಾಗ ಬೀಜದಲ್ಲಿ ಪೌಷ್ಟಿಕತೆ, ಖನಿಜದ ಅಂಶಗಳು ಕಡಿಮೆ ಆಗುತ್ತಿದ್ದವು. ಇದೀಗ ಪೌಷ್ಟಿಕತೆ, ಖನಿಜ, ವಿಟಮಿನ್, ಪ್ರೋಟಿನ್ ಅಂಶವುಳ್ಳ ಬಿತ್ತನೆ ಬೀಜಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಅಲ್ಲದೆ, ಉತ್ಪಾದಕತೆ ಮತ್ತು ತಳಿಗಳಲ್ಲಿ ರೋಗ ನಿರೋಧ ಶಕ್ತಿಯನ್ನು ಹೊಂದಿರುವುದನ್ನು ಸಮನ್ವಯಗೊಳಿಸಿ ಬಿತ್ತನೆ ಬೀಜ ಅಭಿವೃದ್ಧಿಪಡಿಸುವತ್ತ ಗಮನಹರಿಸಲಾಗಿದೆ.

ಡಾ. ಟಿ.ಎಂ. ರಮಣಪ್ಪ, ವಿಶೇಷ ಅಧಿಕಾರಿ (ಬೀಜ), ರಾಷ್ಟ್ರೀಯ ಬೀಜ ಯೋಜನೆ, ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಂಗಳೂರು

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 22-5-1997

• ಮೇವು ಹಗರಣ: ಸಿಬಿಐ ಸ್ಪಷ್ಟನೆ ಬಳಿಕ ನಿರ್ಧಾರ– ಕಿದ್ವಾಯಿ

ಪಾಟ್ನಾ, ಮೇ 21 (ಪಿಟಿಐ)– ಸಿಬಿಐನಿಂದ ಕೆಲವು ಸ್ಪಷ್ಟೀಕರಣಗಳು ಬರಬೇಕಾಗಿದ್ದು, ಅವು ಬಂದ ಬಳಿಕ ಮೇವು ಹಗರಣದಲ್ಲಿ ಮುಖ್ಯಮಂತ್ರಿ ಲಾಲೂ ಯಾದವ್ ಅವರ ವಿರುದ್ಧ ತನಿಖೆಗೆ ಅನುಮತಿ ನೀಡುವ ಬಗ್ಗೆ ನಿರ್ಧರಿಸಲಾಗುವುದು ಎಂದು ಬಿಹಾರದ ರಾಜ್ಯಪಾಲರಾದ ಡಾ. ಎ.ಆರ್. ಕಿದ್ವಾಯಿ ಅವರು ಇಂದು ಇಲ್ಲಿ ಹೇಳಿದ್ದಾರೆ.

ಕೆಲವು ಪ್ರಮುಖ ಅಂಶಗಳ ಬಗ್ಗೆ ಸಿಬಿಐನಿಂದ ಸ್ಪಷ್ಟೀಕರಣ ಕೇಳಿದ್ದೇನೆ. ಆ ಸ್ಪಷ್ಟೀಕರಣಗಳು ನನ್ನ ಕೈ ಸೇರಿದ ಬಳಿಕವಷ್ಟೇ ನಿರ್ಧಾರ ಕೈಗೊಳ್ಳಲು ನಾನು ಸಮರ್ಥನಾಗುತ್ತೇನೆ' ಎಂದು ರಾಜ್ಯಪಾಲರು ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಸೋಮವಾರ, 22-5-1972

• ಪಂಜಾಬ್‌ನಲ್ಲಿ ಪಾಕ್ ಅತಿಕ್ರಮಣ: 3 ಸಾವು

ಚಂಡೀಘಡ, ಮೇ 21– ಪಂಜಾಬಿನ ಖಾಲ್ರಾ ವಿಭಾಗದಲ್ಲಿ ಇಂದು ಮತ್ತು ನಿನ್ನೆ ಪಾಕಿಸ್ತಾನಿ ಸೈನಿಕರು ಏಕ ಪ್ರಕಾರವಾಗಿ ನಡೆಸಿದ ಕದನ ವಿರಾಮ ಉಲ್ಲಂಘನೆಗಳಲ್ಲಿ ಇಬ್ಬರು ಪಾಕಿಸ್ತಾನಿ ಸೈನಿಕರು ಮತ್ತು ನಮ್ಮ ಗಡಿ ಭದ್ರತಾ ಪಡೆಯ ಒಬ್ಬ ಯೋಧ ಮೃತಪಟ್ಟಿದ್ದಾರೆ ಪಾಕಿಸ್ತಾನಿ ಸೈನ್ಯ ಪಹರೆ ದಳಗಳು ನಿನ್ನೆ ಈ ವಿಭಾಗದಲ್ಲಿ 2 ಭಾರಿ ಅತಿಕ್ರಮಣ ನಡೆಸಿದವು. ಆಗ ಅವರಿಗೆ ವಾಪಾಸು ಹೋಗುವಂತೆ ಹೇಳಲಾಯಿತು. ಆದರೆ ಹಿಂತಿರುಗಲು ನಿರಾಕರಿಸಿದ ಪಾಕಿಸ್ತಾನಿ ಸೈನಿಕರು ಗುಂಡು ಹಾರಿಸಿದರು. ಇದಕ್ಕೆ ಗಡಿ ಭದ್ರತಾ ಪಡೆ ತಕ್ಕ ಉತ್ತರ ನೀಡಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಮೇ22, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಕೃಷ್ಣಸಪ್ತಮಿ ಗಂ. 13-00 ನಕ್ಷತ್ರ: ಧನಿಷ್ಠಾ ಗಂ. 22-47 ಯೋಗ: ಬ್ರಹ್ಮ ಗಂ. 05-21, ಐಂದ್ರ ಗಂ. 26-59 ಕರಣ: ಬವ ಗಂ. 13-00, ವೃಷಭ ಮಾಸದ 07 ನೇ ದಿನ.
ರಾಹುಕಾಲ : ಸಾಯಂಕಾಲ 04:30 - 06:00
ಸೂರ್ಯೋದಯ : 06-07 ಸೂರ್ಯಾಸ್ತ : 06-48
ಮುಸ್ಲಿಂ ದಿನಾಂಕ : 20 ಶವ್ವಾಲ್
ಅದೃಷ್ಟ ಸಂಖ್ಯೆ : 1, 5

ಮೇಷ: ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ. ನಿಮ್ಮ ಯೋಜನೆಗಳು ಕಾರ್ಯಗತಗೊಳ್ಳಲು ಹೆಚ್ಚಿನ ಪ್ರಯತ್ನ ನಡೆಸಬೇಕಾಗುವುದು. ದಿನಾಂತ್ಯದಲ್ಲಿ ಶಿರೋವೇದನೆ.

ವೃಷಭ: ಮನೆಯಲ್ಲಿ ಶಾಂತ ವಾತಾವರಣ ಕಾಪಾಡಿಕೊಳ್ಳುವುದು ನಿಮಗೆ ಬಿಟ್ಟ ವಿಚಾರ. ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು. ಮುಕ್ತ ಮಾತುಕತೆ ಮೂಲಕ ಕಾರ್ಮಿಕರಲ್ಲಿನ ಸಮಸ್ಯೆ ಬಗೆಹರಿಸಿಕೊಳ್ಳಿರಿ.

ಮಿಥುನ: ಈ ಹಿಂದೆ ಮಾಡಿದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿ. ವೆಚ್ಚಗಳಲ್ಲಿ ಮಿತ ವ್ಯಯಕ್ಕೆ ಯತ್ನಿಸಿ. ಸ್ವತ್ತು ವಿಚಾರದಲ್ಲಿ ಮಾತುಗಳು ಬರಲಿದ್ದು ತಂದೆಯವರ ಮಾತಿನಂತೆ ನಡೆಯುವುದರಿಂದ ಶ್ರೇಯಸ್ಸು.

ಕರ್ಕಾಟಕ: ದೇವತಾ ಕಾರ್ಯಗಳಿಗಾಗಿ ಪ್ರಯಾಣ ಮಾಡಬೇಕಾಗಲಿದೆ. ಕುಟುಂಬ ವರ್ಗದಲ್ಲಿ ಆರೋಗ್ಯ ಉತ್ತಮ. ಸಿವಿಲ್ ಇಂಜಿನಿಯರುಗಳಿಗೆ ಉತ್ತಮ ಅವಕಾಶಗಳು ಸಿಗುವುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಉತ್ತಮ ಪ್ರಗತಿ.

ಸಿಂಹ: ಸ್ನೇಹಪರ ಸ್ವಭಾವದಿಂದ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ಅವಿರೋಧ ಆಯ್ಕೆಗೆ ಒಲವು ತೋರಿದ್ದರಿಂದ ನೀವು ಸುಲಭವಾಗಿ ಸ್ಥಾನ ಗಳಿಸುವಿರಿ. ಸಮೀಪವರ್ತಿಗಳ ದುರ್ಬುದ್ಧಿಯಿಂದ ವಾಹಿವಾಟುಗಳಲ್ಲಿ ವಂಚನೆ.

ಕನ್ಯಾ: ನಿಮ್ಮ ಸಾಮರ್ಥ್ಯ, ದಕ್ಷತೆ, ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆ ನಿಮ್ಮದಾಗಲಿದೆ. ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವಿರಿ. ಹೊಸ ವಾಹನ ಕೊಳ್ಳುವವರಿಗೆ ಸಕಾಲ.

ತುಲಾ: ನಿಮ್ಮ ಪ್ರಯತ್ನಗಳು ಫಲಕಾರಿಯಾಗಿ ಅನುಕೂಲ ಉಂಟಾಗುವುದು. ತಂದೆ ತಾಯಿಯವರ ಕೋರಿಕೆಯಂತೆ ಮನೆಯಲ್ಲಿ ದೇವತಾ ಕಾರ್ಯ ನಡೆಸುವಿರಿ. ಉದ್ಯೋಗದಲ್ಲಿ ಸಮತೋಲನತೆ ತಪ್ಪುವಂತೆ ಆಗಲಿದೆ.

ವೃಶ್ಚಿಕ: ಆಧ್ಯಾತ್ಮಿಕ ವಿಚಾರಗಳ ಪುಸ್ತಕಗಳನ್ನು ಕೊಳ್ಳಲು ಧನ ವಿನಿಯೋಗ. ರಸ ಪದಾರ್ಥಗಳ ವ್ಯಾಪಾರಸ್ಥರಿಗೆ ಅಧಿಕ ಲಾಭ ಬರುವುದು. ಕೃಷಿಯ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ ಉಂಟಾಗುವುದು.

ಧನು: ಮನೆಯ ಪರಿಸ್ಥಿತಿಗಳನ್ನು ಸುಧಾರಣೆಗೆ ತರುವ ಪ್ರಯತ್ನದಿಂದ ಕೆಲಸದ ಕಡೆಗೆ ಹೆಚ್ಚಿನ ಗಮನ ಕೊಡಲು ಸಾಧ್ಯವಾಗದಂತಾಗಲಿದೆ. ಯಾರಿಗೂ ಯಾವುದೇ ತರಹದ ಭರವಸೆಯನ್ನೂ ನೀಡಬೇಡಿ.

ಮಕರ: ನಿಮ್ಮ ಸಮಸ್ಯೆಗಳನ್ನು ಸೌಹಾರ್ದಯುತ ಮತ್ತು ನ್ಯಾಯ ಸಮ್ಮತವಾಗಿ ಬಗೆಹರಿಸಿಕೊಳ್ಳುವಿರಿ. ಕಂಪ್ಯೂಟರ್ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿ ಕಾಣಬಹುದು. ನಿವೇಶನ ಮಾರುವ ಪರಿಸ್ಥಿತಿ ಎದುರಾದರೂ ಉತ್ತಮ ಲಾಭ.

ಕುಂಭ: ಶ್ವಾಸಕೋಶಕ್ಕೆ ಸಂಬಂಧ ಪಟ್ಟ ಕಾಯಿಲೆಗಳ ಬಗ್ಗೆ ನಿಗಾ ಇರಲಿ. ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಾಗಿ ಮನಸ್ಸಿಗೆ ಆಘಾತವಾಗಲಿದೆ. ಆದಾಯ ವೆಚ್ಚಗಳು ಸರಿ ಸಮಾನ. ದೂರ ಪ್ರಯಾಣ ಮಾಡಬೇಕಾಗಲಿದೆ.


ಮೀನ: ಅವಿವಾಹಿತರಿಗೆ ಉತ್ತಮ ಸಂಬಂಧ ಬರುವುದು. ಹೊಸದನ್ನು ಕಲಿಯುವ ಆಸೆಗಳು ಹೆಚ್ಚಲಿವೆ. ನಿಮ್ಮ ಬೇಡಿಕೆಯ ಅರ್ಜಿಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಗುವುದು. ಅಧ್ಯಯನಕ್ಕೆ ಇದು ಸಕಾಲ.

ಪದಬಂಧ 4965

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹರನ ಮುಂದಿರಿಸಿದ ಮಣ್ಣಿನ ಬಾನಿ (3)
3.ಊಟ ಮಾಡದಿರುವುದು (4)
5.ಕಠೋರವಾಗಿ ಕಾಣುತ್ತಿರುವ ಕೈ! (2)
6.ಮತಿ ಇಟ್ಟುಕೊಂಡೇ ನೀಡಿದ ಒಪ್ಪಿಗೆ (4)
8.ಕೊಡು ಕೊಡು ಎನ್ನುತ್ತಿರುವ ಅಜ್ಜ! (2)
9.ಉಮೇದುವಾರನಿಗಿರುವ ಹುರುಪು (3)
10.ವರನಿಗೆ ಜೋಡಿಯಾದ ಮದುವೆ ಹೆಣ್ಣು (2)
11.ಕಾನನದಲ್ಲಿನ ವಾಸ (4)
12.ಮಂಗಳ ಕಾರ್ಯದಲ್ಲಿ ನುಸುಳಿದ ಕೋತಿ (2)
14.ದಿನವೆಲ್ಲಾ ಕಾಲಕಳೆದ ಹೊಳೆದಂಡೆ (4)
15.ಉತ್ತರದವರ ವಿಪುಲತೆ (3)

ಮೇಲಿಂದ ಕೆಳಕ್ಕೆ
1.ಹಲಗೆ ಹತ್ತಿರವೇ ಉಳುವ ಸಾಧನವಿದೆ (2)
2. ಹೆಂಡತಿಯನ್ನು ಕಳೆದುಕೊಂಡವನು (3)
4.ಸತಿಗೆ ಸಿಕ್ಕಿರುವ ಒಳ್ಳೆಯ ಗತಿ (3)
5.ಕೈಯನ್ನು ತಟ್ಟುವಿಕೆ (5)
6.ಆ ಮದುವೆಗೆಂದು ತರಿಸಿಕೊಂಡ ವಸ್ತು (3)
7.ಲಗ್ನ ಮಾಡಿಕೊಳ್ಳುತ್ತಿರುವವನು (5)
9.ಮೇಲುಸಿರು ಬಿಡುವವನಿಗೆ ಗೂರಲು ರೋಗ (3)
11.ದನದ ಕಡೆ ತಿರುಗಿಸಿರುವ ಮುಖ (3)
12.ಮಂದಿ ಹೊಕ್ಕಿರುವ ಗುಡಿ (3)
13.ಆಡುತ್ತಿರುವಾಗ ಮೇಕೆ ಕಂಡೀತೇ? (2)



4964ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬಹಿಷ್ಕಾರ 3.ನರುಗಂಪು 5.ಸದರ 7.ಪರ 9.ಗುರು 12.ಮಾರ 13.ನಿಜ 15.ಶಂಕರ 17.ತೆಗಳಿಕೆ 18.ತಿಲಾಂಜಲಿ.
ಮೇಲಿಂದ ಕೆಳಕ್ಕೆ: 1.ಬಳಪ 2.ರಸ 3.ನರ 4.ಪುಕಾರು 6.ದಣಿವು 8.ರಕ್ತಸಂಚಾರ 9.ಗುಪ್ತಗಾಮಿನಿ 11.ಬಾಲಕ 12.ಮಾನ್ಯತೆ 14.ಜಗಲಿ 15.ಶಂಕೆ 16.ರತಿ

ಸುಡೊಕು 5351

	3		6		2		4	
6		2				8		
			3		9		1	
4		8			5		2	
						4		7
2		5	4				6	
	5		8		3		9	
7		3				6		5
	8		7		6		3	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5350 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **'Deccan Herald-Prajavani Relief Trust'** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು **dept.finc@printersmysore.co.in** ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ವಿದ್ಯಾರ್ಥಿಗಳ ಅನಿಸಿಕೆ

ಕಾಲೇಜು ಶುಲ್ಕ ಕಟ್ಟಿದ್ದೇನೆ



ಕಾಲೇಜು ಪ್ರವೇಶ ಶುಲ್ಕ ಕಟ್ಟಲು 'ಪ್ರಜಾವಾಣಿ'ಯ ವಿದ್ಯಾರ್ಥಿ ವೇತನ ನೆರವಾಗಿದೆ. ಶುಲ್ಕದ ಜೊತೆಗೆ ಒಂದಿಷ್ಟು ಪುಸ್ತಕಗಳನ್ನು ಖರೀದಿ ಮಾಡಿದ್ದೇನೆ. ಪತ್ರಿಕೆಯ ಈ ಪ್ರೋತ್ಸಾಹ ಉತ್ತಮವಾಗಿ ವಿದ್ಯಾಭ್ಯಾಸ ಮಾಡಲು ಪ್ರೇರಣೆ ನೀಡುತ್ತದೆ. ಮುಂದೆ ಏನಾದರೂ ಸಾಧನೆ ಮಾಡಬೇಕು ಎನ್ನುವ ಹಂಬಲ ಹೆಚ್ಚಾಗಿದೆ. ವಿದ್ಯಾರ್ಥಿ ವೇತನವನ್ನು ಸಂಪೂರ್ಣವಾಗಿ ವಿದ್ಯಾಭ್ಯಾಸಕ್ಕೆ ಖರ್ಚು ಮಾಡಿದ್ದೇನೆ.

ಎಂ.ತರುಣ್‌ಕುಮಾರ್, ತುಮಕೂರು

ಸಿಇಟಿ ಪುಸ್ತಕ ಖರೀದಿ



ಈಗಷ್ಟೇ ಪ್ರಥಮ ವರ್ಷದ ಪಿಯು ಮುಗಿದಿದ್ದು, ದ್ವಿತೀಯ ಪಿಯುಗೆ ಪ್ರವೇಶ ಪಡೆಯುವ ಮುನ್ನ ಸಿಇಟಿ ಪರೀಕ್ಷೆಗೆ ತರಬೇತಿ ಪಡೆಯುತ್ತಿದ್ದೇನೆ. ತರಬೇತಿಯಲ್ಲಿ ಬೇಕಾದ ಅಗತ್ಯ ಪುಸ್ತಕಗಳ ಖರೀದಿಗೆ 'ಪ್ರಜಾವಾಣಿ'ಯ ವಿದ್ಯಾರ್ಥಿ ವೇತನ ಬಳಕೆ ಮಾಡಿಕೊಂಡಿದ್ದೇನೆ. ಇಂತಹ ವಿದ್ಯಾರ್ಥಿ ವೇತನಗಳು ದೊರೆತರೆ ಮನೆಯವರ ಹೊಣೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತದೆ. ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವುದರಿಂದ ಹಲವು ಶೈಕ್ಷಣಿಕ ಖರ್ಚು ವೆಚ್ಚಕ್ಕೆ ವಿದ್ಯಾರ್ಥಿ ವೇತನ ನೆರವಾಗಿದೆ.

ಟಿ.ಎಂ.ನಿತಿನ್, ತುಮಕೂರು

ವರ್ಷಕ್ಕೊಮ್ಮೆ ದ್ವಾರಾಳು ಗ್ರಾಮಕ್ಕೆ ಭೇಟಿ • ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಟ್ರಸ್ಟ್ ಮೂಲಕ ನೆರವು

ಚಂದ್ರ ಕನ್ನಡಾಭಿಮಾನಕ್ಕೆ ಗ್ರಾಮಸ್ಥರ ಹೆಮ್ಮೆ

• ಮೈಲಾರಿ ಲಿಂಗಪ್ಪ

ತುಮಕೂರು: ಚಂದ್ರ ಆರ್ಯ ಅವರ ಸರಳತೆ, ತನ್ನೂರಿನ ಪ್ರೀತಿ, ಕನ್ನಡ ಭಾಷೆಯ ಅಭಿಮಾನ ಕೆನಡಾದ ಸಂಸತ್ ಭವನದಲ್ಲಿ ಕನ್ನಡದ ಕಂಪು ಹರಡುವಂತೆ ಮಾಡಿದೆ.

– ಹೀಗೆಂದು ಅಭಿಮಾನದ ಮಾತುಗಳನ್ನಾಡಿದವರು ಕೆನಡಾದ ಸಂಸದ ಚಂದ್ರ ಆರ್ಯ ಅವರ ಬಾಲ್ಯದ ಸ್ನೇಹಿತ ದಯಾನಂದ್.

ಕೆನಡಾ ಸಂಸತ್ತಿನಲ್ಲಿ ಕನ್ನಡದಲ್ಲಿ ಮಾತನಾಡಿ ಇಡೀ ರಾಜ್ಯದ ಗಮನ ಸೆಳೆಯುವಂತೆ ಮಾಡಿದ ಜಿಲ್ಲೆಯ ಶಿರಾ ತಾಲ್ಲೂಕಿನ ದ್ವಾರಾಳು ಗ್ರಾಮದ ಚಂದ್ರ ಆರ್ಯ ಅವರ ಮೇಲಿನ ಅಭಿಮಾನ ಊರಿನಲ್ಲಿ ಮತ್ತಷ್ಟು ಹೆಚ್ಚಾಗಿದೆ. ಸುಮಾರು 150 ಮನೆಗಳಿರುವ ಪುಟ್ಟ ಹಳ್ಳಿ ದ್ವಾರಾಳು. ವ್ಯವಸಾಯ ಕುಟುಂಬದಲ್ಲಿ ಹುಟ್ಟಿದ ಆರ್ಯ ಅವರು ಕೆನಡಾ ಸಂಸತ್ ಪ್ರವೇಶಿಸುವವರೆಗಿನ ಪಯಣ ಅದ್ಭುತ. ಅವರು ಊರಿಗೆ ಬಂದಾಗ ಪ್ರತಿ ಬಾರಿ ನಮ್ಮೊಂದಿಗೆ ಸಮಯ ಕಳೆಯುತ್ತಾರೆ. ಬಾಲ್ಯದಲ್ಲಿ ಹೇಗಿದ್ದರೊ, ಇಂದಿಗೂ ಹಾಗೆಯೇ ನಡೆದುಕೊಳ್ಳುತ್ತಾರೆ. ಅವರು ಇತರರಿಗೆ ಮಾದರಿ ಎಂದು ದಯಾನಂದ್ ನೆನಪಿಸಿಕೊಂಡರು.



ಶಿರಾ ತಾಲ್ಲೂಕು ದ್ವಾರಾಳು ಗ್ರಾಮದಲ್ಲಿರುವ ಚಂದ್ರ ಆರ್ಯ ಅವರ ಮನೆ. ಆರ್ಯ ಅವರ ಚಿಕ್ಕಪ್ಪ ಇಲ್ಲಿ ವಾಸವಿದ್ದಾರೆ

ವಿದ್ಯಾಭ್ಯಾಸ: ಆರ್ಯ ಅವರು ದ್ವಾರಾಳುವಿನಲ್ಲಿ ಹುಟ್ಟಿದರೂ ಹೆಚ್ಚು ಕಾಲ ಗ್ರಾಮದಲ್ಲಿ ಉಳಿಯಲಿಲ್ಲ. ಅವರ ತಂದೆ ಗೋವಿಂದಪ್ಪ ವಾಣಿಜ್ಯ ತೆರಿಗೆ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಕಾರಣ ಚಿಕ್ಕ ವಯಸ್ಸಿನಲ್ಲೇ ಹುಟ್ಟೂರು ಬಿಡಬೇಕಾಯಿತು. ಪಕ್ಕದ ಜಿಲ್ಲೆ ಚಿತ್ರದುರ್ಗದಲ್ಲಿ ಎಸ್ಸೆಸ್ಸೆಲ್ಸಿವರೆಗೆ ವಿದ್ಯಾಭ್ಯಾಸ ಮುಗಿಸಿ, ಬಳ್ಳಾರಿಯ ಮುನ್ಸಿಪಲ್ ಕಾಲೇಜಿನಲ್ಲಿ ಪಿಯುಸಿ ಓದಿದರು. ರಾಮನಗರದಲ್ಲಿ ಎಂಜಿನಿಯರಿಂಗ್ ಪೂರೈಸಿದರು.

ಬದುಕಿನ ಹಾದಿ: ಎಂಜಿನಿಯರಿಂಗ್ ಬಳಿಕ ಮೊದಲಿಗೆ ಭಾರತೀಯ ಸೇನೆ ಸೇರಿ ಡಿಆರ್‌ಡಿಒದಲ್ಲಿ ಕೆಲಸ ಮಾಡಿದರು. ನಂತರ ಹುದ್ದೆಗೆ ರಾಜೀನಾಮೆ ನೀಡಿ ಕೆಎಸ್‌ಎಫ್‌ಸಿಯಲ್ಲಿ ಡೆಪ್ಯುಟಿ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿದರು. ಅದಕ್ಕೂ ರಾಜೀನಾಮೆ ನೀಡಿ ಮಂಡ್ಯ ಜಿಲ್ಲೆಯ ಸೋಮನಹಳ್ಳಿಯಲ್ಲಿ ಗ್ರಾನೈಟ್ ಕಾರ್ಖಾನೆ ಆರಂಭಿಸಿ ಕೈ ಸುಟ್ಟುಕೊಂಡರು. ನಂತರ ಬೆಂಗಳೂರಿನಲ್ಲಿ ಕನ್ಸಲ್ಟೆನ್ಸಿ ಕಚೇರಿ ಆರಂಭಿಸಿದರು. ಒಂದಿಷ್ಟು ದಿನ ವ್ಯವಹಾರದಲ್ಲಿ ತೊಡಗಿಸಿಕೊಂಡರು. ಅದೂ ಬಿಟ್ಟು ಕೆಲಸ ಅರಸಿ ದೋಹಾಗೆ ಹೊರಟರು.

ದಾಂಡೇಲಿಯ ಸಂಗೀತಾ ಅವರನ್ನು 1991ರಲ್ಲಿ ವಿವಾಹವಾದರು. ನಂತರದ ದಿನಗಳಲ್ಲಿ ಸಂಗೀತಾ ಅವರು ಉದ್ಯೋಗ ನಿಮಿತ್ತ ಕೆನಡಾಗೆ ತೆರಳಿದರು. ಇದಾದ ಕೆಲವು ದಿನಗಳ ಬಳಿಕ ಚಂದ್ರ ಕೂಡ ಕೆನಡಾ ಕಡೆ ಮುಖ ಮಾಡಿದರು. ಉತ್ತಮ ಭಾಷಾ ಜ್ಞಾನ ಮತ್ತು ಅನುಭವದಿಂದಾಗಿ ಉದ್ಯೋಗ ಪಡೆದುಕೊಂಡರು. ಸಂಗೀತಾ ಅವರು ಕೆನಡಾದ ಕಾಲೇಜೊಂದರಲ್ಲಿ ಉಪನ್ಯಾಸಕಿಯಾಗಿದ್ದಾರೆ.

ಕೆನಡಾದಲ್ಲಿ ರಾಜ್ಯೋತ್ಸವ: ಕೆನಡಾದಲ್ಲಿ ಫೈನಾನ್ಶಿಯಲ್ ಅಡ್ವೈಸರ್ ಆಗಿ ಕಾರ್ಯನಿರ್ವಹಿಸುತ್ತಾ, ಕನ್ನಡ ಸಂಘ, ಸಂಸ್ಥೆಗಳ ಮೂಲಕ ಉತ್ತಮ ಕೆಲಸಗಳನ್ನು ಕೈಗೊಂಡು ಸಂಸತ್ತಿನವರೆಗೆ ಪ್ರಯಾಣ ಬೆಳೆಸಿದ್ದಾರೆ. 2015ರಲ್ಲಿ ಮೊದಲ ಬಾರಿಗೆ ಅಲ್ಲಿನ ಸಂಸತ್ ಪ್ರವೇಶಿಸಿದರು. ನಂತರ 2019ರಲ್ಲಿ ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಪಡೆದರು. ಅದೇ ವರ್ಷ ಕೆನಡಾ ಸಂಸತ್ತಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಮಾಡಿದ್ದರು.

ವರ್ಷಕ್ಕೊಮ್ಮೆ ಊರಿಗೆ: ಚಂದ್ರ ಆರ್ಯ ವರ್ಷಕ್ಕೊಮ್ಮೆಯಾದರೂ ಊರಿಗೆ ಬರುತ್ತಾರೆ. ಯಾವುದೇ ಅಹಂ ಇಲ್ಲದೆ, ಎಲ್ಲರ ಜೊತೆಗೆ ಬೆರೆಯುತ್ತಾರೆ. ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಕಾರ ನೀಡುತ್ತಾರೆ ಎಂದು ದ್ವಾರಾಳು ಗ್ರಾಮದ ಹಾಲಪ್ಪ ಹೇಳಿದರು.

'ಚಂದ್ರ ಅವರ ಕುಟುಂಬದ ಸದಸ್ಯರು 'ಗಜ್ಜಿಗರಹಳ್ಳಿ ಕರಿಯಣ್ಣ ಸೇವಾ ಟ್ರಸ್ಟ್' ಮೂಲಕ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಪ್ರತಿ ವರ್ಷ ಅನ್ನದಾಸೋಹ ಏರ್ಪಡಿಸಲಾಗುತ್ತದೆ. ಹಲವರ ಕಷ್ಟಕ್ಕೆ ಸ್ಪಂದಿಸುವ ಕೆಲಸ ಮಾಡಲಾಗುತ್ತಿದೆ' ಎಂದು ಅವರ ಚಿಕ್ಕಪ್ಪ ಕೆ.ತಿಮ್ಮಪ್ಪ ಮಾಹಿತಿ ನೀಡಿದರು.

ಇತಿಹಾಸ ಸೃಷ್ಟಿ

ನಮ್ಮದೇನೂ ಶ್ರೀಮಂತ ಕುಟುಂಬವಲ್ಲ. ಜೀವನ ನಿರ್ವಹಣೆಗಾಗಿ ನೌಕರಿ ಸೇರಿಕೊಂಡು ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಿದೆ. ಅವರೇ ಬುದ್ಧಿವಂತರಾಗಿ ತಮ್ಮದೇ ಆದ ರೀತಿ ಬದುಕು ಕಟ್ಟಿಕೊಂಡಿದ್ದಾರೆ. ರಾಜ್ಯದ ವಿವಿಧೆಡೆ ಅಲೆದಾಡಿದ್ದರಿಂದ ಚಂದ್ರ ಆರ್ಯಗೆ ಕನ್ನಡ ಭಾಷೆಯ ಬಗ್ಗೆ ಅಭಿಮಾನ ಜಾಸ್ತಿ. ತನ್ನೂರಿನ ಕುರಿತು ಅಷ್ಟೇ ಒಲವಿದೆ. ಸಂಸತ್ತಿನಲ್ಲಿ ಕನ್ನಡ ಭಾಷೆಯಲ್ಲಿ ಮಾತನಾಡುವ ಮೂಲಕ ಇತಿಹಾಸ ಸೃಷ್ಟಿಸಿದ್ದಾನೆ.

ಗೋವಿಂದಪ್ಪ, ಚಂದ್ರ ಆರ್ಯ ಅವರ ತಂದೆ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

'ಮೀಸಲಾತಿ, ಉದ್ಯೋಗ ನಾಶವೇ ಬಿಜೆಪಿ ಗುರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಡವರು, ಶೋಷಿತರಿಗೆ ಆಸರೆಯಾಗಿರುವ ಮೀಸಲಾತಿ ಹಾಗೂ ಸಾರ್ವಜನಿಕ ವಲಯದ ಉದ್ಯೋಗಗಳ ನಾಶದ ಗುರಿಯೊಂದಿಗೆ ಬಿಜೆಪಿ ರಾಜಕಾರಣ ಮಾಡುತ್ತಿದೆ' ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಶನಿವಾರ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಸ್ಮರಣೆ ಕಾರ್ಯಕ್ರಮದಲ್ಲಿ ರಾಜೀವ್ ಗಾಂಧಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಮೀಸಲಾತಿಯ ವಿರುದ್ಧ ಇದೆ. ಈ ಕಾರಣಕ್ಕಾಗಿಯೇ ಸರ್ಕಾರಿ ವಲಯದ 26 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಿಲ್ಲ' ಎಂದು ಆರೋಪಿಸಿದರು.

ಬಿಜೆಪಿ ಸರ್ಕಾರದ ಸ್ವಂತದ ಸಾಧನೆ ಏನೂ ಇಲ್ಲ. ಕಾಂಗ್ರೆಸ್ ಅವಧಿಯಲ್ಲಿನ ಯೋಜನೆಗಳ ಹೆಸರು ಬದಲಿಸಿದ್ದೇ ಸಾಧನೆ. ಕಾಂಗ್ರೆಸ್ ಆಡಳಿತದಲ್ಲಿ ಕಟ್ಟಿ ಬೆಳೆಸಿದ್ದ ಬಿಎಸ್‌ಎನ್‌ಎಲ್ ಮತ್ತಿತರ ಸಾರ್ವಜನಿಕ ಉದ್ದಿಮೆಗಳನ್ನು ಮಾರಾಟ ಮಾಡಿದ್ದೇ ಸಾಧನೆ' ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಮಾತನಾಡಿ, 'ರಾಜೀವ್ ಗಾಂಧಿಯವರ ದೂರದೃಷ್ಟಿಯ ಫಲವಾಗಿ ದೇಶ ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಬಲವಾಗಿ ಬೆಳೆದಿದೆ. ಈಗಿನ ಬಿಜೆಪಿ ಸರ್ಕಾರ ಧರ್ಮದ ಹೆಸರಿನಲ್ಲಿ ದ್ವೇಷ ಹರಡುವುದಕ್ಕೆ ಸೀಮಿತವಾಗಿದೆ' ಎಂದರು.

ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಯು.ಟಿ.ಖಾದರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಶಾಸಕ ದಿನೇಶ್ ಗುಂಡೂರಾವ್, ಮೇಲ್ಮನೆ ಸದಸ್ಯ ಅಲ್ಲಂ ವೀರಭದ್ರಪ್ಪ, ಮುಖಂಡರಾದ ಎಚ್.ಆಂಜನೇಯ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಿಲ್ಲಾಧಿಕಾರಿ ಪರವಾಗಿ ಲಂಚಕ್ಕೆ ಬೇಡಿಕೆ: ಆರೋಪ

₹5 ಲಕ್ಷ ಲಂಚ: ಡಿಸಿ ಕಚೇರಿ ವ್ಯವಸ್ಥಾಪಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮೀನು ಒಡೆತನಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದ ಪ್ರಕರಣವೊಂದರಲ್ಲಿ ಅರ್ಜಿದಾರರ ಪರ ಆದೇಶ ನೀಡಲು ₹ 5 ಲಕ್ಷ ಲಂಚ ಪಡೆಯುತ್ತಿದ್ದ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿ ವ್ಯವಸ್ಥಾಪಕ ಮಹೇಶ್ ಮತ್ತು ನ್ಯಾಯಾಲಯ ವಿಭಾಗದ ಸಹಾಯಕ ಚೇತನ್ ಕುಮಾರ್ ಅಲಿಯಾಸ್ ಚಂದ್ರು ಎಂಬುವವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಶನಿವಾರ ಬಂಧಿಸಿದೆ.

ಆನೇಕಲ್ ತಾಲ್ಲೂಕಿನ ಕೂಡ್ಲು ಗ್ರಾಮದಲ್ಲಿ 38 ಗುಂಟೆ ಜಮೀನು ಹೊಂದಿರುವ ನಗರದ ಬೇಗೂರು ನಿವಾಸಿ ಅಜಂ ಪಾಷಾ ಅವರಿಂದ ಜಿಲ್ಲಾಧಿಕಾರಿ ಕಚೇರಿಯಲ್ಲೇ ಲಂಚದ ಹಣ ಪಡೆಯುತ್ತಿದ್ದಾಗ ಇಬ್ಬರು ಸಿಕ್ಕಿಬಿದ್ದರು. ಉಪ ತಹಶೀಲ್ದಾರ್ ದರ್ಜೆಯ ಅಧಿಕಾರಿಯಾಗಿರುವ ಮಹೇಶ್, ಜಿಲ್ಲಾಧಿಕಾರಿ ಕಚೇರಿಯಲ್ಲಿ ವ್ಯವಸ್ಥಾಪಕರ ಹುದ್ದೆಯಲ್ಲಿದ್ದಾರೆ. ಆರೋಪಿಗಳು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಪರವಾಗಿ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಪಡೆದುಕೊಂಡಿರುವ ಆರೋಪವಿದೆ. ಈ ಬಗ್ಗೆ ತನಿಖೆ ನಡೆಯುತ್ತಿದೆ.

ದೂರುದಾರರು 2014ರಲ್ಲಿ ಕೂಡ್ಲು ಗ್ರಾಮದ ಸರ್ವೆ ನಂಬರ್ 190/5ರಲ್ಲಿ 38 ಗುಂಟೆ ಜಮೀನನ್ನು ನಾಗೇಶ್ ಎಂಬುವವರಿಂದ ಖರೀದಿಸಿದ್ದರು. ಅದರ ವಿರುದ್ಧ ವೆಂಕಟಸ್ವಾಮಿ ರೆಡ್ಡಿ ಎಂಬುವವರು ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಆ ಪ್ರಕರಣದಲ್ಲಿ ಅಜಂ ಪಾಷಾ ಪರ ಉಪ ವಿಭಾಗಾಧಿಕಾರಿ ನ್ಯಾಯಾಲಯ ಆದೇಶ ನೀಡಿತ್ತು. ಅದನ್ನು ಪ್ರಶ್ನಿಸಿ ವೆಂಕಟಸ್ವಾಮಿ ರೆಡ್ಡಿ ಡಿ.ಸಿ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದರು. 2022ರ ಮಾರ್ಚ್ 30ರಂದು ವಿಚಾರಣೆ ಪೂರ್ಣಗೊಳಿಸಿ ಆದೇಶ ಕಾಯ್ದಿರಿಸಲಾಗಿತ್ತು.

'ಪ್ರಕರಣದ ಆದೇಶ ಪ್ರಕಟಿಸಲು ಮನವಿ ಮಾಡಲು ಮೇ 18ರಂದು ಜಿಲ್ಲಾಧಿಕಾರಿಯವರನ್ನು ಭೇಟಿಮಾಡಿದ್ದೆ. ಅವರ ಸೂಚನೆಯಂತೆ ಮಹೇಶ್ ಅವರನ್ನು ಭೇಟಿಮಾಡಿದ್ದೆ. ಅವರು ನನ್ನ ಪರವಾಗಿ ಆದೇಶ ನೀಡಲು ಮೊದಲು ₹ 15 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ನಂತರ ₹ 8 ಲಕ್ಷ ಕೇಳಿದರು. ಚೌಕಾಸಿ ಮಾಡಿದಾಗ ₹ 5 ಲಕ್ಷ ನೀಡಿದರೆ ನನ್ನ ಪರ ಆದೇಶ ನೀಡುವುದಾಗಿ ತಿಳಿಸಿದ್ದಾರೆ' ಎಂದು ಅಜಂ ಪಾಷಾ ಎಸಿಬಿ ಬೆಂಗಳೂರು ನಗರ ಘಟಕಕ್ಕೆ ಶುಕ್ರವಾರ ದೂರು ಸಲ್ಲಿಸಿದ್ದರು.

ಜಿಲ್ಲಾಧಿಕಾರಿ ಹಾಗೂ ಮಹೇಶ್ ಜತೆಗಿನ ಸಂಭಾಷಣೆಯ ವಿವರವನ್ನು ಮೊಬೈಲ್‌ನಲ್ಲಿ ರೆಕಾರ್ಡಿಂಗ್ ಮಾಡಿಕೊಂಡಿದ್ದ ದೂರುದಾರರು ಆ ವಿವರಗಳನ್ನೂ ದೂರಿನೊಂದಿಗೆ ತನಿಖಾ ಸಂಸ್ಥೆಗೆ ನೀಡಿದ್ದರು.

ದೂರುದಾರರು ಶನಿವಾರ ಲಂಚದ ಹಣದೊಂದಿಗೆ ಮಹೇಶ್ ಅವರನ್ನು ಭೇಟಿಮಾಡಿದರು. ಅವರು ಪಕ್ಕದಲ್ಲಿದ್ದ ಚೇತನ್ ಕುಮಾರ್‌ಗೆ ನೀಡುವಂತೆ ಸೂಚಿಸಿದರು. ಅದರಂತೆ ಚೇತನ್ ಹಣ ಪಡೆದುಕೊಂಡರು. ಎಸಿಬಿ ಅಧಿಕಾರಿಗಳು ತಕ್ಷಣ ದಾಳಿ ನಡೆಸಿ, ಬಂಧಿಸಿದರು.

ಸಚಿವ ಅಶೋಕಗೆ ಕುಟುಕಿದ ಎಚ್‌ಡಿಕೆ

'ಕಂದಾಯ ಸಚಿವರೇ, ನಿಮ್ಮ ಜಿಲ್ಲಾಧಿಕಾರಿ ಕಚೇರಿಯಲ್ಲಿ ಏನ್ ನಡೀತಿದೆ ನೋಡಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಕುಟುಕಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಜಿಲ್ಲಾಧಿಕಾರಿ ಕಚೇರಿಯಲ್ಲಿ ₹5 ಲಕ್ಷ ಭ್ರಷ್ಟಾಚಾರದ ಹಣವನ್ನು ರೆಡ್ ಹ್ಯಾಂಡೆಡ್ ಆಗಿ ಹಿಡಿದಿದ್ದಾರೆ. ನಿಮ್ಮ ಇಲಾಖೆಯ ಕರ್ಮಕಾಂಡವನ್ನು ನೀವೇ ನೋಡಿ' ಎಂದು ಹಂಗಿಸಿದರು.

'ಸೋಮಣ್ಣನವರೇ, ಲೂಟಿ, ದರೋಡೆ ನೋಡಲು ಚಂಬಲ್ ಕಣಿವೆ ಅಥವಾ ಬಿಹಾರಕ್ಕೆ ಹೋಗಬೇಕಿಲ್ಲ. ಬೆಂಗಳೂರಿನಲ್ಲೇ ನೋಡಬಹುದು. ಅದಕ್ಕೂ ಮೀರಿ ಇಲ್ಲಿ ಜನರ ದುಡ್ಡನ್ನು ಕೊಳ್ಳೆ ಹೊಡೆಯುತ್ತಿದ್ದಾರೆ' ಎಂದರು.

ಸಂಕ್ಷಿಪ್ತ ಸುದ್ದಿ

ಸುರಂಗ ಕುಸಿತ: ಸಾವಿನ ಸಂಖ್ಯೆ 10ಕ್ಕೆ ಏರಿಕೆ

ಜಮ್ಮು: ರಾಂಬನ್ ಜಿಲ್ಲೆಯ ಖೂನಿ ನಲ್ಲಾ ಪ್ರದೇಶದ ಬಳಿ ಜಮ್ಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುರುವಾರ ನಿರ್ಮಾಣ ಹಂತದ ಸುರಂಗ ಕುಸಿದು ಅವಶೇಷಗಳಡಿ ಸಿಲುಕಿದ್ದ ಒಂಬತ್ತು ಮಂದಿ ಕಾರ್ಮಿಕರ ಮೃತದೇಹಗಳನ್ನು ಶನಿವಾರ ಹೊರ ತೆಗೆಯಲಾಗಿದೆ. ಹೀಗಾಗಿ ಸುರಂಗ ಕುಸಿತದಲ್ಲಿ ಸತ್ತವರ ಸಂಖ್ಯೆ 10ಕ್ಕೆ ಏರಿದಂತಾಗಿದೆ.

ಮೃತರನ್ನು ಪಶ್ಚಿಮ ಬಂಗಾಳದ ಜಾಧವ್ ರಾಯ್, ಗೌತಮ್ ರಾಯ್, ಸುಧೀರ್ ರಾಯ್, ದೀಪಕ್ ರಾಯ್ ಮತ್ತು ಪರಿಮಳ್ ರಾಯ್ ಮತ್ತು ಅಸ್ಸಾಂನ ಶಿವ ಚೌಹಾಣ್, ನೇಪಾಳದ ಪ್ರಜೆ ನವರಾಜ್ ಚೌಧರಿ ಮತ್ತು ಕುಶಿ ರಾಮ್ ಚೌಧರಿ ಮತ್ತು ಮೊಹಮ್ಮದ್ ಮುಜಾಫರ್ ಮೊಹಮ್ಮದ್ ಇಶಿರಾತ್ ಎಂದು ಗುರುತಿಸಲಾಗಿದೆ.

ಎನ್‌ಐಎ ಅಧಿಕಾರಿ ಹತ್ಯೆ, ಇಬ್ಬರಿಗೆ ಗಲ್ಲು

ಬಿಜ್ನೋರ್, ಉತ್ತರ ಪ್ರದೇಶ (ಪಿಟಿಐ): ಆರು ವರ್ಷಗಳ ಹಿಂದೆ ನಡೆದಿದ್ದ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಹಿರಿಯ ಅಧಿಕಾರಿ ತೆಂಜಿಲ್ ಅಹ್ಮದ್ ಹಾಗೂ ಅವರ ಪತ್ನಿ ಫಾರ್ಜಾನಾ ಅವರ ಹತ್ಯೆಯ ಅಪರಾಧಿಗಳಿಗೆ ಮರಣದಂಡನೆ ವಿಧಿಸಲಾಗಿದೆ.

2016 ಏಪ್ರಿಲ್ 2ರ ಮಧ್ಯರಾತ್ರಿ ಈ ಹತ್ಯೆ ನಡೆದಿತ್ತು. ಅಪರಾಧಿಗಳಾದ ಮುನೀರ್ ಹಾಗೂ ಆತನ ಸಹಚರ ರಾಯನ್ ಎಂಬುವವರಿಗೆ ಬಿಜ್ನೋರ್‌ನ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ ವಿಜಯ್ ಕುಮಾರ್ ಅವರು ಗಲ್ಲು ಶಿಕ್ಷೆ ವಿಧಿಸಿದ್ದಾರೆ.

ಪಾಕ್‌ಗೆ ರಕ್ಷಣಾ ಮಾಹಿತಿ ನೀಡಿದ ಯೋಧನ ಬಂಧನ

ಜೈಪುರ(ಪಿಟಿಐ): ಪಾಕಿಸ್ತಾನದ ಗೂಢಚಾರಿ ಮಹಿಳೆಯ ಹನಿಟ್ರ್ಯಾಪ್‌ಗೆ ಸಿಲುಕಿ ಸೇನೆಯ ರಹಸ್ಯ ಮತ್ತು ರಕ್ಷಣಾ ಮಾಹಿತಿ ಹಂಚಿಕೊಂಡ ಯೋಧನನ್ನು ಬಂಧಿಸಲಾಗಿದೆ ಎಂದು ಗುಪ್ತಚರ ವಿಭಾಗದ ಉನ್ನತ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದರು.

ಜೋಧ್‌ಪುರದಲ್ಲಿ ಕರ್ತವ್ಯದಲ್ಲಿದ್ದ ಉತ್ತರಾಖಂಡ ಮೂಲದ ಯೋಧ ಪ್ರದೀಪ್ ಕುಮಾರ್ ಬಂಧಿತ ಆರೋಪಿ. ಮೂರು ವರ್ಷಗಳ ಹಿಂದಷ್ಟೇ ಈತ ಸೇನೆ ಸೇರಿದ್ದು, ಪಾಕ್ ಗೂಢಚಾರಿ ಮಹಿಳೆಯ ಹನಿಟ್ರ್ಯಾಪ್‌ಗೆ ಸಿಲುಕಿದ್ದ. ಆತನ ಚಲನವಲನದ ಮೇಲೆ ಹಲವು ದಿನಗಳಿಂದ ಕಣ್ಗಾವಲಿರಿಸಿ, ಮೇ 18ರಂದು ಬಂಧಿಸಲಾಗಿದೆ. ತನಿಖೆ ನಡೆಯುತ್ತಿದೆ ಎಂದು ಅವರು ತಿಳಿಸಿದರು.

ಡೆಂಗಿ: ಪ್ರಕರಣ ಮತ್ತಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಯ ಹಿಂದೆಯೇ ರಾಜ್ಯದಲ್ಲಿ ಡೆಂಗಿ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದೆ. 10 ದಿನದಲ್ಲಿ 112 ಮಂದಿಗೆ ಈ ಜ್ವರ ದೃಢಪಟ್ಟಿದ್ದು, ಡೆಂಗಿ ಪೀಡಿತರ ಒಟ್ಟು ಸಂಖ್ಯೆ 1,418ಕ್ಕೆ ಏರಿಕೆಯಾಗಿದೆ.

ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. 28 ಸಾವಿರಕ್ಕೂ ಅಧಿಕ ಡೆಂಗಿ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 11 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 12,627 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದು, 302 ಮಂದಿಯಲ್ಲಿ ಜ್ವರ ದೃಢಪಟ್ಟಿದೆ. ಈ ವರ್ಷ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. 2021ರಲ್ಲಿ 7,189 ಮಂದಿ ಡೆಂಗಿ ಪೀಡಿತರಾಗಿದ್ದರು. ಅವರಲ್ಲಿ ಐವರು ಮೃತಪಟ್ಟಿದ್ದರು.

ಪ್ರಕರಣಗಳ ಸಂಖ್ಯೆ ಮೂರು ಜಿಲ್ಲೆಗಳಲ್ಲಿ ಮೂರಂಕಿ, 23 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಉಡುಪಿಯಲ್ಲಿ 157, ಮೈಸೂರಿನಲ್ಲಿ 142, ಕೊಪ್ಪಳದಲ್ಲಿ 89, ಚಿತ್ರದುರ್ಗದಲ್ಲಿ 85, ಬಳ್ಳಾರಿಯಲ್ಲಿ 76, ವಿಜಯಪುರದಲ್ಲಿ 56, ದಕ್ಷಿಣ ಕನ್ನಡದಲ್ಲಿ 55, ದಾವಣಗೆರೆಯಲ್ಲಿ 51, ಶಿವಮೊಗ್ಗದಲ್ಲಿ 48, ಕೋಲಾರದಲ್ಲಿ 44, ರಾಯಚೂರು ಹಾಗೂ ತುಮಕೂರಿನಲ್ಲಿ ತಲಾ 30, ಯಾದಗಿರಿಯಲ್ಲಿ 28, ಹಾವೇರಿಯಲ್ಲಿ 25, ಬಾಗಲಕೋಟೆಯಲ್ಲಿ 24 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ 20ಕ್ಕಿಂತ ಕಡಿಮೆ ಇವೆ.

26 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿದ್ದು, 364 ಮಂದಿ ಈ ಜ್ವರಕ್ಕೆ ಒಳಗಾಗಿದ್ದಾರೆ. ವಿಜಯಪುರದಲ್ಲಿ 68, ಕೋಲಾರದಲ್ಲಿ 63, ಬೆಂಗಳೂರು ಗ್ರಾಮಾಂತರದಲ್ಲಿ 38, ತುಮಕೂರಿನಲ್ಲಿ 33, ಚಿತ್ರದುರ್ಗದಲ್ಲಿ 24, ದಾವಣಗೆರೆಯಲ್ಲಿ 17 ಹಾಗೂ ರಾಮನಗರದಲ್ಲಿ 13 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 10ಕ್ಕಿಂತ ಕಡಿಮೆ ಇವೆ.

ಬಿಜೆಪಿ 3ನೇ ಅಭ್ಯರ್ಥಿ ಉದ್ಯಮಿ ಪ್ರಕಾಶ್ ಶೆಟ್ಟಿ?

ಒಂದನೇ ಪುಟದಿಂದ

ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದ ಕೆ.ಸಿ. ರಾಮಮೂರ್ತಿ ಅವರ ಆಯ್ಕೆಯ ಕುರಿತು ರಾಜ್ಯದ ಕೆಲವು ಮುಖಂಡರು ಆಕ್ಷೇಪ ಎತ್ತಿದ್ದರೂ, ಪಕ್ಷ ಸೇರ್ಪಡೆ ಸಂದರ್ಭ ವಾಗ್ದಾನ ಮಾಡಿದಂತೆ ಅವರನ್ನು ಮತ್ತೊಂದು ಅವಧಿಗೆ ಮುಂದುವರಿಸುವುದಕ್ಕೆ ಪಕ್ಷದ ವರಿಷ್ಠರು ಒಲವು ತೋರಿದ್ದಾರೆ ಎನ್ನಲಾಗಿದೆ.

ಕೇಂದ್ರ ಸಚಿವೆ ನಿರ್ಮಲಾ ಅವರನ್ನು ರಾಜ್ಯದಿಂದ ಪುನರಾಯ್ಕೆ ಮಾಡಿ ಕಳುಹಿಸುವ ಕುರಿತು ಯಾವುದೇ ಸಂಶಯವಿಲ್ಲ. ಇನ್ನು ಜೆಡಿಎಸ್ ಬೆಂಬಲ ನೀಡಿದಲ್ಲಿ 3ನೇ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸಂಬಂಧ ಮಾತುಕತೆ ನಡೆಸಲಾಗಿದೆ ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ತಿಳಿಸಿದರು.

ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಪಕ್ಷದಿಂದ ನಾಲ್ವರನ್ನು ಆಯ್ಕೆ ಮಾಡುವ ಅವಕಾಶ ಬಿಜೆಪಿಗಿದೆ. ಬಿ.ಎಸ್. ಯಡಿಯೂರಪ್ಪ ಪುತ್ರ ಬಿ.ವೈ. ವಿಜಯೇಂದ್ರ ಅವರನ್ನು ಪರಿಷತ್‌ಗೆ ಕಳುಹಿಸುವ ಬಗ್ಗೆ ಮಾತುಕತೆ ನಡೆಸಲಾಗಿದೆ. ಕೆಲವರು ಇದಕ್ಕೆ ಆಕ್ಷೇಪ ಎತ್ತಿದ್ದಾರೆ.

ಆದರೆ, 'ಮುಂದಿನ ವರ್ಷ ನಡೆಯಲಿರುವ ವಿಧಾನಸಭೆ ಚುನಾವಣೆಯ ದೃಷ್ಟಿಯಿಂದ ಅವರನ್ನು ಕಡೆಗಣಿಸುವುದು ಸೂಕ್ತವಲ್ಲ' ಎಂದು ಬೊಮ್ಮಾಯಿ ಮನವರಿಕೆ ಮಾಡಿದ್ದಾರೆ ಎಂದು ಅವರು ಹೇಳಿದರು. ವರಿಷ್ಠರಾದ ಅಮಿತ್ ಶಾ, ಜೆ.ಪಿ. ನಡ್ಡಾ ಹಾಗೂ ಬಿ.ಎಲ್. ಸಂತೋಷ್ ಅವರನ್ನು ಭೇಟಿ ಮಾಡಲು ಬೊಮ್ಮಾಯಿ ಶುಕ್ರವಾರ ತಡರಾತ್ರಿವರೆಗೆ ಪ್ರಯತ್ನಿಸಿದರೂ ಫಲ ದೊರೆಯಲಿಲ್ಲ. ಹಾಗಾಗಿ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಹಾಗೂ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ ಅವರು, ಬೆಳಗಿನ ಜಾವ 1 ಗಂಟೆಗೆ ಕರ್ನಾಟಕ ಭವನಕ್ಕೆ ಬಂದು ತಂಗಿದ್ದರು.

ಕೊನೆಗೆ ಅಮಿತ್ ಶಾ ಅವರು ದೂರವಾಣಿ ಕರೆಯ ಮೂಲಕ ನೀಡಿದ ಸೂಚನೆಯ ಮೇರೆಗೆ ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರನ್ನು ಶನಿವಾರ ಬೆಳಿಗ್ಗೆ ಭೇಟಿ ಮಾಡಿ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸುವ ಕುರಿತು ಚರ್ಚಿಸಿದರು.

ವರಿಷ್ಠರದ್ದೇ ಅಂತಿಮ ನಿರ್ಧಾರ: ಸಿದ್ದರಾಮಯ್ಯ

ಒಂದನೇ ಪುಟದಿಂದ

ಪಕ್ಷದಿಂದ ರಾಜ್ಯಸಭೆಗೆ ಒಬ್ಬರನ್ನು ಆಯ್ಕೆ ಮಾಡಲು ಅವಕಾಶವಿದೆ. ಅಭ್ಯರ್ಥಿ ಯಾರು ಎಂಬುದನ್ನು ವರಿಷ್ಠರೇ ನಿರ್ಧರಿಸಲಿದ್ದಾರೆ. ವಿಧಾನ ಪರಿಷತ್‌ಗೆ ಪಕ್ಷ ನಿಷ್ಠರು, ನಿರಂತರ ಸೇವೆ ಸಲ್ಲಿಸಿದವರನ್ನು ಪರಿಗಣಿಸುವುದು ಸೂಕ್ತ ಎಂದು ಸಲಹೆ ನೀಡಲಾಗಿದೆ ಎಂದು ಅವರು ಹೇಳಿದರು.

ಸಿದ್ದರಾಮಯ್ಯ ಅವರು ಎಸ್.ಆರ್. ಪಾಟೀಲ ಅವರತ್ತ ಒಲವು ಹೊಂದಿದ್ದಾರೆ. ಡಿ.ಕೆ. ಶಿವಕುಮಾರ್ ಸೂಚನೆ ಮೇರೆಗೆ ಇನ್ನೊಬ್ಬರನ್ನು ಆಯ್ಕೆ ಮಾಡಲಾಗುತ್ತದೆ. ರಾಜ್ಯಸಭೆಗೆ ಜೈರಾಮ್ ರಮೇಶ್ ಅವರನ್ನೇ ಪುನರಾಯ್ಕೆ ಮಾಡುವ ಸಾಧ್ಯತೆಗಳು ದಟ್ಟವಾಗಿವೆ ಎಂದು ಪಕ್ಷದ ಮೂಲಗಳು ಹೇಳಿವೆ.

ಪಠ್ಯಕ್ಕೆ ಸೇರಿದ ಸೂಲಿಬೆಲೆ ಪಾಠ

ಒಂದನೇ ಪುಟದಿಂದ

ನಾರಾಯಣ ಗುರು ಕುರಿತು ವಿವರಗಳು ಇರುವುದಿಲ್ಲ. ಇವರ ಕುರಿತಾದ ವಿಷಯಗಳನ್ನು ಕಡಿಮೆಗೊಳಿಸಿ ಪ್ರಸ್ತುತಪಡಿಸುವ ಪ್ರಯತ್ನ ಮಾಡಲಾಗಿದೆ ಎಂದು ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಮರು ಪರಿಷ್ಕರಿಸಿದ್ದ ಕನ್ನಡ ಪಠ್ಯಪುಸ್ತಕದ 'ಪಿಡಿಎಫ್' ಕರ್ನಾಟಕ ಪಠ್ಯಪುಸ್ತಕ ಸಂಘದ ವೆಬ್‌ಸೈಟ್‌ನಲ್ಲಿತ್ತು. ಅದನ್ನು ತೆಗೆಯಲಾಗಿದೆ.

ಮರುಮುದ್ರಣ: ಪರಿಷ್ಕರಣೆ ಸಮಿತಿಯ ಶಿಫಾರಸ್ಸಿನಂತೆ ರೂಪಿಸಲಾದ ಪಠ್ಯಪುಸ್ತಕಗಳ ಮುದ್ರಣ ಆರಂಭಿಸಲಾಗಿತ್ತು. ಆದರೆ, ಪಠ್ಯಪುಸ್ತಕ ಕುರಿತು ವಿವಾದಗಳು ಸೃಷ್ಟಿಯಾದ ಬಳಿಕ ಮುದ್ರಣ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವಂತೆ ಸೂಚಿಸಲಾಗಿತ್ತು. ಪಠ್ಯದಲ್ಲಿ ಹೊಸ ವಿಷಯಗಳನ್ನು ಸೇರ್ಪಡೆ ಮಾಡಿದ ಬಳಿಕ ಮರುಮುದ್ರಣವನ್ನು ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕನ್ನಡ ಪಠ್ಯಪುಸ್ತಕ ಮುದ್ರಿಸಲು ನೀಡಿದ್ದ ಮುದ್ರಕರಿಗೆ ನೀಡಿದ್ದ ಸಿ.ಡಿಗಳನ್ನು ಶುಕ್ರವಾರವೇ ವಾಪಸ್ ಪಡೆಯಲಾಗಿದೆ. ಎಲ್ಲ ಮುದ್ರಕರು ತಮ್ಮ ಬಳಿ ಇದ್ದ ಸಿ.ಡಿಯನ್ನು ವಾಪಸ್ ನೀಡುವಂತೆ ಪಠ್ಯಪುಸ್ತಕ ಸಂಘವು ಸೂಚಿಸಿತ್ತು. ಮುದ್ರಣವಾಗಿರುವ ಪುಸ್ತಕಗಳನ್ನು ಯಾರಿಗೂ ಕೊಡದಂತೆಯೂ ನಿರ್ದೇಶನ ನೀಡಿತ್ತು ಎಂದು ಗೊತ್ತಾಗಿದೆ.

'ಮರುಮುದ್ರಣದಿಂದ ₹2.5 ಕೋಟಿ ನಷ್ಟ'


'ಪಠ್ಯಪುಸ್ತಕಗಳನ್ನು 2022–23ನೇ ಶೈಕ್ಷಣಿಕ ವರ್ಷಕ್ಕಾಗಿ ಮುದ್ರಣ ಕೈಗೊಳ್ಳಲಾಗಿತ್ತು. ಆದರೆ, ಪಠ್ಯಪುಸ್ತಕಗಳ ಪರಿಷ್ಕರಣೆ ಮತ್ತು ಪದೇ ಪದೇ ಬದಲಾವಣೆ ಮಾಡಿ ಮುದ್ರಣ ಕೈಗೊಳ್ಳಲಾಯಿತು. ಮುದ್ರಿಸಿದ್ದ ಮತ್ತು ಹಳೆಯ ಪುಸ್ತಕಗಳು ಉಗ್ರಾಣ ಸೇರಿವೆ. ಇದರಿಂದ, ಸುಮಾರು ₹2.5 ಕೋಟಿ ನಷ್ಟವಾಗಿರಬಹುದು' ಎಂದು ಶಿಕ್ಷಣ ತಜ್ಞ ವಿ.ಪಿ.ನಿರಂಜನಾರಾಧ್ಯ ಹೇಳಿದ್ದಾರೆ.

'ಪ್ರಜಾಸತ್ತಾತ್ಮಕ ಮಾರ್ಗಗಳನ್ನು ಪರಿಷ್ಕರಣೆ ಸಂದರ್ಭದಲ್ಲಿ ಅನುಸರಿಸಿಲ್ಲ ಮತ್ತು ಪಾರದರ್ಶಕತೆಯನ್ನು ಕಾಪಾಡಿಲ್ಲ. ಪಠ್ಯಪುಸ್ತಕ ಪರಿಷ್ಕರಣೆ ಎನ್ನುವುದು ಪ್ರಹಸನವಾಗಿದ್ದು, ನಗೆಪಾಟಲಿಗೀಡಾಗಿದೆ. ಚಕ್ರವರ್ತಿ ಸೂಲಿಬೆಲೆ ಅವರ ವ್ಯಕ್ತಿತ್ವ ಎಲ್ಲರಿಗೂ ಗೊತ್ತಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.



ಇಲ್ಲಿದೆ ಉಭಯಚರಿ ಬಸ್! 9

ಮೈಸೂರು ಹುಲಿ ಮತ್ತು ಹುಲಿಮನೆ ಶಾಸ್ತ್ರಿ 10





ನಾವಿರೋದು ಆರೇ ಮಂದಿ 11

ಕನ್ನಡದ ಕಚಗುಳಿಗೆ ಸ್ಟ್ಯಾಂಡ್-ಅಪ್ ನಗೆಗುಳಿಗೆ

ನಗೆಹಬ್ಬಗಳ ಕಾಲ ಹಳೆಯದಾಯಿತು. ಈಗೇನಿದ್ದರೂ ಸ್ಟ್ಯಾಂಡ್ ಅಪ್ ಕಾಮಿಡಿಯ ಟೈಮು. ಕಾರ್ಪೋರೇಟ್ ಕಂಪನಿಗಳ ಸಭಾಂಗಣಗಳಲ್ಲಿ, ಯುಟ್ಯೂಬ್ ಚಾನೆಲ್‌ಗಳಲ್ಲಿ ತಂಡೋಪ ತಂಡಗಳಾಗಿ ಹೊಸ ತಲೆಮಾರಿನ ಹುಡುಗ ಹುಡುಗಿಯರು ನಗಿಸಲು ಪೈಪೋಟಿಗೆ ಇಳಿದಿದ್ದಾರೆ. ಏನಿದರ ಹಿಂದಿನ ಮಜಕೂರು?



ವಿಶಾಖ ಎನ್.

ಹಾಸ್ಯವಲ್ಲರಿಗೀಗ ಸ್ಟ್ಯಾಂಡ್-ಅಪ್ ಸಿರಿ. ಬೇರೆ ಭಾಷೆಗಳಿಗೆ ಇದು ಹೊಸತಲ್ಲ. ಕನ್ನಡದ ಮಟ್ಟಿಗೆ ಮೈಕ್ ಮುಂದೆ ನಿಂತು ಮಾತಿನ ಕಚಗುಳಿ ಇಡುತ್ತಿರುವವರಿಗೆ ಇದು ಒಳ್ಳೆಯ ಕಾಲ. ಅವರಲ್ಲಿ ಯುವಕ-ಯುವತಿಯರ ದನಿಗಳದ್ದೇ ಕಾರುಬಾರು. ಉತ್ತರ ಕರ್ನಾಟಕದ ಭಾಷೆಯ ಹಾಸ್ಯದ ಸ್ವೀಕೃತಿ ಕೋವಿಡ್ ಕಾಲಘಟ್ಟದಿಂದ ಗಮನಾರ್ಹ ಆಗುವಲ್ಲಿ ಮನೆಯಲ್ಲೇ ಕುಳಿತು ಯೂಟ್ಯೂಬ್‌ನಲ್ಲಿ ಅಂತಹ ಹಾಸ್ಯ ರಸಾಯನ ಉಂಡ ರಸಿಕರ ಕಾಣ್ಕೆ ಇದೆ.

ತರ್ಲೆ ಬಾಕ್ಸ್, ಲೋಲ್ ಬಾಗ್ (LoL Bag), ನಮ್ದು ಕೆ, ಒಂದು ಜೋಕ್ ಹೇಳಲಾ ಎಂಬ ಸಮೂಹಗಳು ಸ್ಟ್ಯಾಂಡ್-ಅಪ್ ವಸ್ತುವಿಷಯಗಳ ಮೂಲಕ ವ್ಯಾಪಕವಾಗಿ ಕಚಗುಳಿ ಇಡುತ್ತಿವೆ. ಅವು ಲೈವ್ ಷೋಗಳನ್ನು ನೀಡುವುದಷ್ಟೆ ಅಲ್ಲ, ಯುಟ್ಯೂಬ್, ಫೇಸ್‌ಬುಕ್‌ನಲ್ಲೂ ಚಾಲ್ತಿಯಲ್ಲಿವೆ. ಸದಾಕಾಲ ಪ್ರೇಕ್ಷಕರನ್ನು ಹಿಡಿದಿಡಬೇಕೆಂಬ ಉದ್ದೇಶದಿಂದ 'ರೀಲ್ಸ್' ಮಾಡುವುದು ಅದರ ಭಾಗವೇ. ಇಂತಹ ತಂಡಗಳಲ್ಲಿ ಇರುವ ಬಹುತೇಕರು ಬೇರೆ ಬೇರೆ ವೃತ್ತಿಗಳಲ್ಲಿ ನಿರತರು. ಬೋನಸ್ ರೂಪದಲ್ಲಿ ಹಾಸ್ಯದ ಹೊಸ ಮಾಧ್ಯಮವನ್ನು ಆಯ್ಕೆ ಮಾಡಿಕೊಂಡವರು ಅವರು.

ಕನ್ನಡದ ಮಟ್ಟಿಗೆ ಸ್ಟ್ಯಾಂಡ್-ಅಪ್ ಕಾಮಿಡಿಯ ಅಗ್ರಜ ಎನ್ನಬಹುದಾದವರು ಡ್ಯಾನಿಷ್ ಸೇಟ್. ಅವರು ಹಾಸ್ಯ ಮಾಧ್ಯಮದ ಹೊಸ ಸಾಧ್ಯತೆಗಳನ್ನೆಲ್ಲ ದುಡಿಸಿಕೊಂಡು ಅಂತರರಾಷ್ಟ್ರೀಯ ಮಟ್ಟದಲ್ಲಿ ಅಭಿಮಾನಿವೃಂದವನ್ನು ವಿಸ್ತರಿಸಿಕೊಂಡವರು. ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರಂಥವರು ಡ್ಯಾನಿಷ್ ಪ್ರತಿಭೆ ಗುರುತಿಸಿ, ಸಿನಿಮಾಗೂ ಕರೆತಂದ ಇತ್ತೀಚಿನ ಇತಿಹಾಸವನ್ನು ನಾವು ಕಂಡಿದ್ದೇವೆ.

ಡ್ಯಾನಿಷ್ ಹೇಳುವಂತೆ, 'ಕನ್ನಡದ ಸ್ಟ್ಯಾಂಡ್-ಅಪ್ ಹಾಸ್ಯದ ಸಾಧ್ಯತೆ ಉಜ್ವಲ ಎನ್ನುವಂತೆ ಕಾಣುತ್ತಿದೆ. ಸುಹಾಸ್, ನಿರೂಪ್ ತರಹದ ಕನ್ನಡದ ಹುಡುಗರನ್ನು ಭವಿಷ್ಯ ಇರುವ ಕನ್ನಡದ ಸ್ಟ್ಯಾಂಡ್-ಅಪ್ ಕಾಮಿಡಿಯನ್‌ಗಳು' ಎಂದು ಅವರು ಗುರುತಿಸುತ್ತಾರೆ.

ಕನ್ನಡವನ್ನು ಬಳಸುತ್ತಾ, ಅದಕ್ಕೆ ಹದವರಿತಂತೆ ಬೇರೆ ಭಾಷೆಯ ಉಪಧ್ವನಿಗಳನ್ನೂ ಅಳವಡಿಸುತ್ತಾ ತಾವು ಮಾಡಿದ ಪ್ರಯೋಗದ ಬಗೆಗೆ ಡ್ಯಾನಿಷ್ ಮುಕ್ತವಾಗಿ ಮಾತನಾಡಿದರು.

'ಹತ್ತು ಹನ್ನೆರಡು ವರ್ಷಗಳ ಹಿಂದೆ ನಾನು ಸ್ಟ್ಯಾಂಡ್ ಅಪ್‌ನ್ನು ಇಂಪ್ರೂವ್ ಮಾಡತೊಡಗಿದಾಗ ಪರಿಸ್ಥಿತಿ ಹೀಗಿರಲಿಲ್ಲ. 200 ರೂಪಾಯಿ ಟಿಕೆಟ್ ಇಟ್ಟರೆ ಕೊಳ್ಳುವವರು ಕಡಿಮೆ ಇದ್ದರು. ಪಬ್‌ಗಳಲ್ಲಿ ನನ್ನಂಥವರನ್ನು ಷೋ ನೀಡಲು ಕರೆಯುವವರು ಆಗ ಸುಲಭಕ್ಕೆ ಸಿಗುತ್ತಿರಲಿಲ್ಲ. ನಾನೂ ಆಗ ಸೈಕಲ್ ಹೊಡೆದೆ. ಕ್ರಮೇಣ ಈ ಹಾಸ್ಯ ಪ್ರಕಾರವನ್ನು ವ್ಯಾಪಾರದ ದೃಷ್ಟಿಯಿಂದ ಪ್ರಚುರ ಪಡಿಸುವುದು ಹೇಗೆ ಎಂದು ಯೋಚಿಸಿದೆ. ಅದು ನಿಧಾನವಾಗಿ ಕ್ಲಿಕ್ ಆಗತೊಡಗಿತು. ಈಗಿನ ಕೆಲವು ಸ್ಟ್ಯಾಂಡ್-ಅಪ್ ಕಾಮಿಡಿಯನ್‌ಗಳು ಷೋಗೆ 500 ರೂಪಾಯಿ ಟಿಕೆಟ್ ಇಡುವಷ್ಟು ಬೆಳೆದಿರುವುದನ್ನು ಕಂಡರೆ ಖುಷಿಯಾಗುತ್ತದೆ. ಚೌಡಯ್ಯ ಸ್ಮಾರಕ ಭವನದಲ್ಲಿ ಪ್ರೇಕ್ಷಕರು ತುಂಬುವಂತೆ ಮಾಡಲು ಬಹಳ ಹಿಂದೆ ನಾನು ಪಟ್ಟಿದ್ದ ಕಷ್ಟ ಈಗ ಯಶಸ್ವಿ ಮಾರ್ಕೆಟಿಂಗ್ ತಂತ್ರದ ಇತಿಹಾಸವಾಗಿದೆ' ಎನ್ನುತ್ತಾರೆ ಡ್ಯಾನಿಷ್.

ತಮ್ಮ ಹಾಸ್ಯ ಹಾಗೂ ಕನ್ನಡದ ಮಿತಿಯ ಅರಿವು ಡ್ಯಾನಿಷ್ ಅವರಿಗೆ ಇದೆ. 'ನನಗೆ ಧಾರವಾಡ ಕನ್ನಡ ಅಥವಾ ಮಂಗಳೂರು ಕನ್ನಡ ಮಾತನಾಡಲು ಬರೋದಿಲ್ಲ. ನಗರ ಕೇಂದ್ರಿತ ಪ್ರೇಕ್ಷಕರೇ ನನ್ನನ್ನು ಹೆಚ್ಚು ಫಾಲೋ ಮಾಡೋದು. ಇನ್‌ಸ್ಟಾಗ್ರಾಂನಲ್ಲಿ ಒಂದೂಕಾಲು ಲಕ್ಷ ಜನ ನನ್ನನ್ನು ಫಾಲೋ ಮಾಡುತ್ತಾರೆ. ಅವರಲ್ಲಿನ ಭಿನ್ನಾಭಿಪ್ರಾಯಗಳನ್ನೆಲ್ಲ ಸೂಕ್ಷ್ಮವಾಗಿ ನಾನು ಗಮನಿಸುವೆ. ಒಂದು ಹಾಸ್ಯ ಒಬ್ಬರಿಗೆ ರುಚಿಸಬಹುದು. ಇನ್ನೊಬ್ಬರಿಗೆ ಬಾಲಿಶ ಎನ್ನಿಸಬಹುದು. ಮತ್ತೊಬ್ಬರು ಅದರಲ್ಲಿ ಇನ್ನೂ ಏನೋ ಇದೆ ಎಂದು ಯೋಚಿಸತೊಡಗುತ್ತಾರೆ. ಈಗ ಧಾರವಾಡ ಭಾಷೆ, ಉತ್ತರ ಕರ್ನಾಟಕದ ಶೈಲಿಯ ಹಾಸ್ಯವೆಲ್ಲ ನೋಡಲು-ಕೇಳಲು ಸಿಗುತ್ತಿರುವುದು ಖುಷಿಯ ವಿಷಯ' ಎನ್ನುತ್ತಾರೆ ಅವರು.

ಕನ್ನಡದಲ್ಲಿ ಮಿಮಿಕ್ರಿ ದಯಾನಂದ್ ಅವರನ್ನೇ ಮೊದಲ ಯಶಸ್ವಿ ಸ್ಟ್ಯಾಂಡ್-ಅಪ್ ಕಲಾವಿದ ಎಂದು ಡ್ಯಾನಿಷ್ ಗುರುತಿಸುತ್ತಾರೆ. 'ಅವರ ಹಾಸ್ಯದ ಟೈಮಿಂಗ್ ಆ ಕಾಲದಲ್ಲಿ ದೊಡ್ಡ ಮಟ್ಟದಲ್ಲಿ ಯಶಸ್ವಿಯಾಗಲು ವಿಷಯಗಳನ್ನು ಪ್ರಸ್ತುತ ಪಡಿಸಿದ್ದ ರೀತಿಯೂ ಕಾರಣ. ಸಿನಿಮಾದಲ್ಲಿ ಸಾಧು ಕೋಕಿಲ ರಂಜನೆಯನ್ನು ಇಷ್ಟಪಡುವ ವರ್ಗ ಇರುವ ರೀತಿ ಸ್ಟ್ಯಾಂಡ್-ಅಪ್‌ನಲ್ಲಿ ದಯಾನಂದ್ ಅವರಿಗಿತ್ತು. ಅವರನ್ನು ಈ ವಿಷಯದಲ್ಲಿ ಆಗಿನ ಲೆಜೆಂಡ್ ಎನ್ನಬಹುದು' ಎನ್ನುವುದನ್ನೂ ಡ್ಯಾನಿಷ್ ಹಂಚಿಕೊಂಡ ನೆನಪು.

ರಾಯಲ್ ಚಾಲೆಂಜರ್ಸ್ ಬೆಂಗಳೂರು ಐಪಿಎಲ್ ಕ್ರಿಕೆಟ್ ತಂಡದೊಟ್ಟಿಗೆ ಓಡಾಡುತ್ತಾ ಸಣ್ಣ ಸಣ್ಣ ಹಾಸ್ಯ ಪ್ರಸಂಗಗಳನ್ನು ಸೃಷ್ಟಿಸುವ ಡ್ಯಾನಿಷ್, ಅಲ್ಲಿ ತಾವು ಬಳಸುವ ಪಂಚ್ ಕನ್ನಡದ ಧ್ವನಿ ವಿರಾಟ್ ಕೊಹ್ಲಿ ತರಹದವರಿಗೂ ಅರ್ಥವಾಗುವುದೊಂದು ಬೆರಗು ಎನ್ನುತ್ತಾರೆ. ಭಾಷೆ ಎನ್ನುವ ಟೂಲ್ ಅನ್ನು ನಾವು ಈ ರೀತಿ ಬ್ಲೆಂಡ್ ಮಾಡುವುದರಿಂದ ಕನ್ನಡದ ಕಂಪು ಬೇರೆ ಬೇರೆ ದೇಶಗಳಿಗೂ ಹರಡುತ್ತದೆ ಎಂದು ನಂಬಿದ್ದಾರೆ.

ಕನ್ನಡದ ಯಾವುದೇ 'ಕಂಟೆಂಟ್' ಅನ್ನು ವ್ಯಾಪಕವಾಗಿ ಬೇರೆ ದೇಶ, ಭಾಷೆಗಳಿಗೂ ತಲುಪಿಸುವ ವ್ಯಾಪಾರಿ ತಂತ್ರ ಡ್ಯಾನಿಷ್ ಪ್ರಕಾರ 'ಹಾರ್ಟ್‌ಲ್ಯಾಂಡ್‌ಗೆ ತಲುಪುವುದು'. 'ಕೆಜಿಎಫ್2' ಚಿತ್ರವನ್ನು ಯಶ್ ಆ ರೀತಿ ಹಾರ್ಟ್‌ಲ್ಯಾಂಡ್‌ಗೆ ತಲುಪಿಸಿದ್ದನ್ನು ಅವರು ಉದಾಹರಣೆಯಾಗಿ ನೀಡುತ್ತಾರೆ. ಪುನೀತ್ ರಾಜ್‌ಕುಮಾರ್ ಕೂಡ ಇಂತಹ ಸಾಧ್ಯತೆಗಳ ಶೋಧಿಸಿದ್ದನ್ನು ನೆನೆದು ಅವರು ಭಾವುಕರಾಗುತ್ತಾರೆ.

ಬೇರೆ ಬೇರೆ ಭಾಷೆಯವರು ಸ್ಟ್ಯಾಂಡ್-ಅಪ್‌ನಲ್ಲಿ ಗೊತ್ತುಪಡಿಸಿ ಇಟ್ಟಿರುವ ಯಶಸ್ಸಿನ ಮಾನದಂಡವನ್ನು ಕನ್ನಡದವರೂ ತಲುಪುವ ದಾರಿಗಳೀಗ ಗೋಚರಿಸುತ್ತಿವೆ. ಮುಂದೆ ಅಲ್ಲಿ ಭವಿಷ್ಯ ಖಂಡಿತ ಇದೆ ಎನ್ನುವ ತಮ್ಮ ಆಶಾವಾದಕ್ಕೆ ಡ್ಯಾನಿಷ್, ಸಂಗೀತದಲ್ಲಿ ರಘು ದೀಕ್ಷಿತ್ ಮಾಡಿದ ಮಾರುಕಟ್ಟೆ ತಂತ್ರವನ್ನು ಉದಾಹರಣೆಯಾಗಿ ನೀಡುತ್ತಾರೆ.

9ನೇ ಪುಟಕ್ಕೆ...




ಅಂದೇನು...ಇಂದೇನು?

ಭಾರತದಲ್ಲಿ 17ನೇ ಶತಮಾನದಲ್ಲೇ ತಿರುವನಂತಪುರದಲ್ಲಿ ಚಕ್ಯಾರ್ ಕೂತು ಎಂಬ ಸ್ಟ್ಯಾಂಡ್-ಅಪ್ ಕಾಮಿಡಿಯನ್ ಇದ್ದ ಎನ್ನಲಾಗುತ್ತದೆ. ಆದರೆ, ಅದು ನಮ್ಮ ದೇಶದಲ್ಲಿ ವ್ಯವಸ್ಥಿತ ಫಾರ್ಮ್ ಕಂಡುಕೊಂಡದ್ದು 2005ರ ನಂತರ.

1986ರಲ್ಲಿ ಹಿಂದಿ ಚಿತ್ರನಟ ಜಾನಿ ಲಿವರ್ 'ಹೋಪ್ 86' ಎಂಬ ಚಾರಿಟಿ ಶೋನಲ್ಲಿ ಸ್ಟ್ಯಾಂಡ್-ಅಪ್ ಕಾಮಿಡಿ ಪ್ರದರ್ಶಿಸಿದ್ದರು. 'ದಿ ಗ್ರೇಟ್ ಇಂಡಿಯನ್ ಲಾಫ್ಟರ್ ಚಾಲೆಂಜ್' ಟಿವಿ ಕಾರ್ಯಕ್ರಮ 2005ರಲ್ಲಿ ಪ್ರಸಾರವಾದದ್ದೇ ರಾಜು ಶ್ರೀವಾಸ್ತವ್, ಕಪಿಲ್ ಶರ್ಮ, ಸುನೀಲ್ ಪಾಲ್ ತರಹದ ಹೊಸ ಪ್ರತಿಭೆಗಳಿಗೆ ಜನಮನ್ನಣೆ ಸಿಗತೊಡಗಿತು. ಅವರೆಲ್ಲ ಹಿಂದಿಯಲ್ಲೇ ಹಾಸ್ಯ ಚಟಾಕಿಗಳನ್ನು ಹಾರಿಸಿ ರಂಜಿಸಿದವರು.

ಬಿಸ್ವ ಕಲ್ಯಾಣ್ ರಥ್, ಕೆನ್ನಿ, ಕನನ್, ಝಾಕಿರ್ ಖಾನ್, ವೀರ್ ದಾಸ್ ಇವರೆಲ್ಲ ಸ್ಟ್ಯಾಂಡ್-ಅಪ್ ಕಾಮಿಡಿಯನ್‌ಗಳಾಗಿಯೂ ಹೆಸರು ಮಾಡಿದವರು. ವೀರ್ ದಾಸ್ ಅವರು ಚಿತ್ರರಂಗದಲ್ಲೂ ಪರಿಚಿತ ಹೆಸರು. ಅದಿತಿ ಮಿತ್ತಲ್, ಸುಮುಖಿ ಸುರೇಶ್ ಕಾಮಿಡಿ ಸ್ಕೆಚ್‌ಗಳ ಮೂಲಕ ಮೊದಲು ಅಡಿಯಿಟ್ಟು, ಆಮೇಲೆ ಯುಟ್ಯೂಬ್ ಚಾನೆಲ್‌ನಲ್ಲೂ ಸದ್ದು ಮಾಡಿದವರು. ಬೆಂಗಳೂರಿನಲ್ಲೇ ಕೆಲಸ ಮಾಡುವ ಸುಮುಖಿ 'ಹಂಬಲ್ ಪೊಲಿಟಿಷಿಯನ್ ನೊಗರಾಜ್' ಕನ್ನಡ ಸಿನಿಮಾದಲ್ಲಿಯೂ ಅಭಿನಯಿಸಿದ್ದಾರೆ. 'ಬೆಹ್ತೀ ನಾಕ್...' ಹಿಂದಿ ಚುಟುಕು ಸರಣಿಗಳ ಮೂಲಕ ಅವರು ಯುಟ್ಯೂಬ್‌ನಲ್ಲೂ ಜನಪ್ರಿಯರಾಗಿ ವರ್ಷಗಳೇ ಉರುಳಿವೆ. ಮುನಾವರ್ ಫರೂಕಿ ಪ್ರಭುತ್ವದ ವಿರುದ್ಧದ ಹಾಸ್ಯ ಪ್ರಸಂಗಗಳನ್ನು ಪ್ರಸ್ತುತಪಡಿಸಿದರು ಎಂಬ ಕಾರಣಕ್ಕೆ ಅವರನ್ನು ಬಂಧಿಸಿದ್ದ ಕಾಲವಿದು. ಕುನಾಲ್ ಕಾಮ್ರಾ ಅವರಂತೂ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಮಾಡಿದ ಜೋಕ್‌ಗಳು ಅವರಿಗೆ ಜೀವ ಬೆದರಿಕೆಗಳನ್ನೇ ತಂದವು. ಸ್ಟ್ಯಾಂಡ್ ಅಪ್ ಕಾಮಿಡಿಯನ್‌ಗಳು ಈಗ ಯಾಕೆ ಮುಖ್ಯ ಎನ್ನುವುದಕ್ಕೆ ಇವೆಲ್ಲ ಕೆಲವು ಉದಾಹರಣೆಗಳಷ್ಟೆ.



ವಿಶ್ವ ಜೀವವೈವಿಧ್ಯ ದಿನ ಇಂದು

ಸೂರಕ್ಕಿಯ (ಪರ್ಪಲ್ ಸನ್‌ಬರ್ಡ್) ಕುತೂಹಲದ ನೋಟ ಚಿತ್ರ: ಶ್ರೀನಾಥ್ ಬಿದರೆ

ಬಾನಾಡಿಗಳ ಸಂಗದಲ್ಲಿ...

ಡಾ. ಸಂಧ್ಯಾ ರೆಡ್ಡಿ

1998ರಲ್ಲಿ ನಾನು ಎರಡನೇ ವರ್ಷದ ಬಿಎಸ್ಸಿ ಓದುತ್ತಿದ್ದಾಗ ನನ್ನ ಸ್ನೇಹಿತೆಯೊಂದಿಗೆ ಮೊದಲ ಬಾರಿಗೆ ವಿಶ್ವ ವನ್ಯಜೀವಿ ನಿಧಿ (ಡಬ್ಲ್ಯುಡಬ್ಲ್ಯುಎಫ್) ತಂಡದೊಂದಿಗೆ ಪಕ್ಷಿ ವೀಕ್ಷಣೆಗೆ ಕನಕಪುರದ ಹತ್ತಿರ ಇರುವ ಕಾಡಿನ ಅಂಚಿನಲ್ಲಿರುವ ಕೆರೆಗೆ ಹೋಗಿದ್ದೆ. ಅಂದು ಕಾರ್ತಿಕೇಯನ್ ಶ್ರೀನಿವಾಸನ್ ಅವರು ನಮಗೆ ಪಕ್ಷಿಗಳ ಬಗೆಗೆ -ಪಕ್ಷಿಗಳನ್ನು ಗುರುತಿಸುವುದು, ಅವುಗಳ ಆಹಾರ ಪದ್ಧತಿ, ಪರಿಸರ ವ್ಯವಸ್ಥೆಯಲ್ಲಿ ಅವುಗಳ ಪಾತ್ರ, ಅವುಗಳ ಆವಾಸಸ್ಥಾನ, ಬೇರೆ ಪ್ರದೇಶಗಳಿಗೆ ವಲಸೆ ಹೋಗುವ ಹಾಗೂ ಬೇರೆ ಪ್ರದೇಶಗಳಿಂದ ವಲಸೆ ಬರುವ ಬಾನಾಡಿಗಳ ಕುರಿತು- ವಿವರಣೆ ನೀಡಿದರು.

ಚಿಟ್ಟೆಗಳಲ್ಲಿ ಮುನ್ನೂರಕ್ಕೂ ಹೆಚ್ಚು ಪ್ರಭೇದಗಳಿವೆ ಎಂದು ಅವರು ತಿಳಿಸಿದಾಗ ನನಗೆ ಆಶ್ಚರ್ಯವಾಗಿತ್ತು. ಹೆಚ್ಚು ಚಿಟ್ಟೆಗಳಿದ್ದರೆ ಅಂತಹ ಪ್ರದೇಶದ ಮಣ್ಣಿಗೆ ಕಡಿಮೆ ರಾಸಾಯನಿಕ ಹಾನಿ ಮತ್ತು ಅಂತಹ ಪ್ರದೇಶದಲ್ಲಿ ಕಡಿಮೆ ವಾಯು ಮಾಲಿನ್ಯದ ಪ್ರಮಾಣವನ್ನು ಸೂಚಿಸುತ್ತದೆ ಎಂದು ಅವರು ಹೇಳಿದರು. ನಾವೆಲ್ಲಾ ಚಿಟ್ಟೆ, ಪಕ್ಷಿಗಳು ಎಷ್ಟೆಲ್ಲಾ ರೀತಿಯಲ್ಲಿ ಪರಿಸರದ ಪರಿಸ್ಥಿತಿಯನ್ನು ತಿಳಿದುಕೊಳ್ಳುವುದರಲ್ಲಿ ನಮಗೆ ಸಹಕಾರಿಯಾಗಿರುತ್ತವೆ ಎಂದು ಅರಿತುಕೊಂಡೆವು.

ಪಕ್ಷಿಗಳು ನಮ್ಮ ಜೀವಜಾಲದ ಪ್ರಬಲ ಕೊಂಡಿ. ಸುಂದರ ಮತ್ತು ಆಕರ್ಷಕವಾಗಿರುವ ಇವುಗಳು ಅನೇಕ ನೈಸರ್ಗಿಕ ಪ್ರಕ್ರಿಯೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಹೂವಿಂದ ಹೂವಿಗೆ ಹಾರುತ್ತಾ ಮಕರಂದ ಹೀರುತ್ತ ಪರಾಗ ಸ್ಪರ್ಶಕ್ಕೆ ಸಹಾಯ ಮಾಡುತ್ತವೆ. ಗಿಡದಿಂದ ಗಿಡಕ್ಕೆ ಹಾರುತ್ತಾ ಹಣ್ಣುಗಳನ್ನು ತಿನ್ನುತ್ತಾ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಬೀಜಗಳನ್ನು ಹಾಕಿ ಬೀಜ ಪ್ರಸರಣ ಮಾಡಿ ವೃಕ್ಷ ವೈವಿಧ್ಯಕ್ಕೆ ಕಾರಣವಾಗುತ್ತವೆ.

ಅನೇಕ ಹಕ್ಕಿಗಳು ಹುಳ ಹುಪ್ಪಟೆ ತಿಂದು ರೈತನಿಗೆ ಕೀಟ ನಿಯಂತ್ರಣದಲ್ಲಿಯೂ ಸಹಾಯ ಮಾಡುತ್ತಿವೆ. ಕಾಡಿನ ಬೆಳವಣಿಗೆಯ ವೈವಿಧ್ಯದ ಸೃಷ್ಟಿಯಲ್ಲಿ ಸೂಕ್ಷ್ಮ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತವೆ. ದೂರದೂರದ ಯಾವುದೋ ದೇಶದ ಯಾವುದೋ ಭೂ ಪ್ರದೇಶದಿಂದ ನಮ್ಮ ನಾಡನ್ನು ಪ್ರತಿವರ್ಷ ಹುಡುಕಿ ಬಂದು ಸಂತಾನೋತ್ಪತ್ತಿ ನಡೆಸಿ ಅಥವಾ ಚಳಿಗಾಲ ಕಳೆದ ನಂತರ ಊರಿಗೆ ವಾಪಸಾಗುವ ಪುಟ್ಟಹಕ್ಕಿಯ ಅಗಾಧ ಶಕ್ತಿಯ ಮುಂದೆ ಜೆಟ್ ವಿಮಾನಗಳನ್ನು ನಿವಾಳಿಸಿ ಎಸೆಯಬೇಕು.

11ನೇ ಪುಟಕ್ಕೆ...

ಕಾಡುವ ಆ 'ಕರಾಳ' ನೆನಪು

ಡಾ. ಬಿ.ಎಂ. ಪುಟ್ಟಯ್ಯ

'ಒಂದು ಕರಾಳ ನೆನಪು' ಎಂಬುದು ಒಂದು ಸರ್ವೇಸಾಮಾನ್ಯ ಹೇಳಿಕೆ. ಒಂದು ಕಾಲದಲ್ಲಿ ನಡೆದ ಘಟನೆಯು ಸಾರ್ವಜನಿಕರಿಗೆ ಕಹಿ ಅನುಭವ ನೀಡಿದ್ದರೆ ಅಂತಹ ಘಟನೆಗೆ ಇದನ್ನು ಹಚ್ಚಲಾಗುತ್ತದೆ. ಆ ಕಹಿಯನ್ನು ಕೆದಕಿ ಬೆದಕಿ ಅದು ಎಷ್ಟೊಂದು ಹಿಂಸಾತ್ಮಕವಾಗಿತ್ತು ಎಂದು ವಿವರಿಸುವುದು ಇದರ ಸ್ವರೂಪ. ರಾಷ್ಟ್ರದಲ್ಲೊ, ರಾಜ್ಯದಲ್ಲೊ ನಡೆದ ಪ್ರಸಿದ್ಧ ಘಟನೆಗಳನ್ನು ಹೀಗೆ ವಿವರಿಸಲಾಗುತ್ತದೆ. ಮತ್ತೆ ಅಂತಹ ಘಟನೆಗಳು ನಡೆಯಬಾರದು ಎಂಬ ಒಳಅಪೇಕ್ಷೆಯ ತೀವ್ರತುಡಿತ ಅದರ ಹಿಂದೆ ಕ್ರಿಯಾಶೀಲವಾಗಿರುತ್ತದೆ.

ಮೇ 22, ಇದು ರಾಷ್ಟ್ರದಲ್ಲಾಗಲಿ, ರಾಜ್ಯದಲ್ಲಾಗಲಿ ವಿಶೇಷವಾಗಿ ನೆನಪಿಸಿಕೊಳ್ಳುವ ದಿನವಲ್ಲ. ಆದರೆ ಸುಮಾರು 1970ರಿಂದ 1990ರವರೆಗೆ ಗ್ರಾಮಾಂತರ ಪ್ರದೇಶದ, ಬಡತನದಲ್ಲಿ ವಿದ್ಯಾಭ್ಯಾಸ ಮಾಡಿರುವ ಬಹುತೇಕ ಮಂದಿಗೆ ಮೇ 22 ನೆನಪಿರುವ ದಿನವಾಗಿದೆ. ಅದು ಬೇಸಿಗೆಯ ರಜೆಯ ನಂತರ ಸ್ಕೂಲ್ ಪುನರ್ ಆರಂಭವಾಗುತ್ತಿದ್ದ ದಿನ. ಏಪ್ರಿಲ್ 10 ರಜೆ ಆರಂಭವಾಗುತ್ತಿದ್ದ ದಿನ.

ರಜೆಬಿಟ್ಟ ಮಾರನೇ ದಿನದಿಂದಲೇ ನಮಗೆ ಮುಕ್ತ ಸ್ವಾತಂತ್ರ್ಯ ಸಿಗುತ್ತಿತ್ತು. ಏಪ್ರಿಲ್-ಮೇ ತಿಂಗಳಲ್ಲಿ ಮಲೆನಾಡು ಭಾಗದಲ್ಲಿ ಹಬ್ಬಗಳು, ಮದುವೆಗಳು ನಡೆಯುತ್ತವೆ. ಈಗಿನಂತೆ ಆಗ ರಜೆಯಲ್ಲೂ ಆ ಕ್ಲಾಸು, ಈ ಕ್ಲಾಸು, ಹೋಮ್‌ವರ್ಕ್ ಇತ್ಯಾದಿ ಇರಲಿಲ್ಲ. ಏಪ್ರಿಲ್ 10ನೇ ತಾರೀಖಿನಂದು ನಾವು ಪುಸ್ತಕದ ಬ್ಯಾಗಿಗೆ ಸಂತಸ ಸಂಭ್ರಮದಿಂದ ವಿದಾಯ ಹೇಳಿದರೆ, ಮತ್ತೆ ಅದು ಮೇ 22ರಂದು ಅತ್ಯಂತ ಭಯಾನಕವಾಗಿ ಎದುರಾಗುತ್ತಿತ್ತು. ಈ ನಡುವೆ ಪುಸ್ತಕಗಳಿಗೂ ನಮಗೂ ಯಾವುದೇ ಸಂಬಂಧವಿರುತ್ತಿರಲಿಲ್ಲ.

ಹೌದು, ಮೂರು ದಶಕಗಳ ಹಿಂದಿನ ಆ ಮೇ 22ರ ಕರಾಳ ನೆನಪಾದರೂ ಏನು?


ಸ್ಕೂಲು ಇದ್ದಾಗ ಹಬ್ಬ, ಮದುವೆ ಮುಂತಾದವುಗಳಿಗೆ ಹೋಗಲು ಮೇಷ್ಟ್ರ ಹತ್ತಿರ ಮುಂಚಿತವಾಗಿಯೇ ರಜೆ ಕೇಳಬೇಕಿತ್ತು. ಕೇಳಿದ ರಜೆಗಳೆಲ್ಲಾ ಮಂಜೂರು ಆಗುತ್ತಿರಲಿಲ್ಲ. ಈಗ ಇರುವಂತೆ ಆಗ ಯಾವ ಮನರಂಜನೆಯೂ ಇರಲಿಲ್ಲ. ಯಾವಾಗ ಬೇಕೆಂದರೆ ಆವಾಗ ವಿಶೇಷ ಊಟವೂ ಸಿಗುತ್ತಿರಲಿಲ್ಲ. ಹಾಗಾಗಿ ಹಬ್ಬ, ಜಾತ್ರೆ, ಮದುವೆಗಳು ನಮ್ಮನ್ನು ವಿಶೇಷವಾಗಿ ಆಕರ್ಷಿಸುತ್ತಿದ್ದವು. ಬೇಸಿಗೆ ರಜೆಯಲ್ಲಿ ಇವು ಬಂದರೆ ಅಲ್ಲಿಗೆ ಹೋಗಲು ಯಾರ ಅಪ್ಪಣೆಯನ್ನೂ ಪಡೆಯುವ ಅಗತ್ಯವಿರಲಿಲ್ಲ. ಸ್ಕೂಲು ಇದ್ದಾಗ ಇವು ಬಂದರೆ ಅಲ್ಲಿಗೆ ಹೋಗಲಾಗದೆ ಹಿಂಸೆ ತಾಳಿಕೊಳ್ಳಲು ಆಗುತ್ತಿರಲಿಲ್ಲ.

ಬೇಸಿಗೆ ರಜೆಯಲ್ಲಿ ನಮ್ಮೂರುಗಳಲ್ಲಿ ತರಾವರಿ ಆಟ ಆಡುತ್ತಿದ್ದೆವು. ಮಲೆನಾಡಿನಲ್ಲಿ ಸುಗ್ಗಿಹಬ್ಬದ ನಂತರ ಮಕ್ಕಳಾದ ನಮ್ಮ ಸುಗ್ಗಿಹಬ್ಬ ಶುರುವಾಗುತ್ತಿತ್ತು. ದೇವಸ್ಥಾನಗಳಲ್ಲಿ ದೊಡ್ಡವರು ದೇವರುಗಳನ್ನು ಕಟ್ಟಿದಂತೆಯೇ ನಾವೂ ಸಣ್ಣದಾಗಿ ಕಟ್ಟಿಕೊಳ್ಳುತ್ತಿದ್ದೆವು. ಸಣ್ಣದಾಗಿ ಕೆಂಡ ಮಾಡಿಕೊಂಡು ಕೆಂಡ ಹಾರುವ (ಹಾಯುವ) ಆಟ ನಡೆಯುತ್ತಿತ್ತು. ಆ ಅವಧಿಯಲ್ಲಿ ನಮ್ಮಂಥವರ ವಿಶೇಷ ಜವಾಬ್ದಾರಿಯ ಕೆಲಸವೆಂದರೆ ಗದ್ದೆಗಳಲ್ಲಿ ದನ ಮೇಯಿಸುವುದು. ದನ ಮೇಯಿಸುವ ಐದಾರು ಜನ ಹುಡುಗರು ಒಂದು ಕಡೆ ಒಟ್ಟಾದೆವೆಂದರೆ ಸ್ವರ್ಗವೇ ನಮ್ಮ ಅಂಗೈಗೆ ಬರುತ್ತಿತ್ತು.

ದನ ಮೇಯಿಸುವುದು ಅರ್ಧ ಕೆಲಸವಾದರೆ, ಅದರ ನಡುವೆ ಬ್ರೇಕ್ ತಗೊಂಡು ವಿವಿಧ ಆಟಗಳನ್ನು ಆಡುವುದು, ಲಗೋರಿ, ಪಿಳ್‌ಚೆಂಡು, ಕಬಡ್ಡಿ, ಚಿನ್ನಿದಾಂಡು, ಹಬ್ಬ ಮಾಡುವ ಆಟ, ಹಲಗೆ (ತಮಟೆ) ಬಡಿಯುವ ಆಟ, ಮರಕೋತಿ ಆಟ, ಸಣ್ಣ ಹಳ್ಳದಲ್ಲಿ ಈಜುವುದು, ಚಾಟಿ ಬಿಲ್ಲಿನಿಂದ ಹಕ್ಕಿಗಳನ್ನು ಶಿಕಾರಿ ಮಾಡುವುದು, ಹಳ್ಳದಲ್ಲಿ ಏಡಿ ಮೀನು ಹಿಡಿಯುವುದು, ಹಲಸಿನಕಾಯಿ, ಹಲಸಿನಹಣ್ಣು, ಮಾವಿನಹಣ್ಣು ತಿನ್ನುವುದು, ಕಳಲೆ ತರುವುದು... ಹೀಗೆ ಇದರ ಪಟ್ಟಿ ಸಾಗುತ್ತಿತ್ತು. ಇವೆಲ್ಲವೂ ಮನೆ ಹೊರಗಿನ ಸಂಪೂರ್ಣ ಮನರಂಜನೆಯ ಕೆಲಸಗಳಾಗಿದ್ದವು. ಇವಕ್ಕೆ ಯಾರ ನಿಯಂತ್ರಣವೂ ಇರಲಿಲ್ಲ. ಆ ಸ್ವಾತಂತ್ರ್ಯದ ಸುಖ ನಮ್ಮ ಅನುಭವದ ಮುಖ್ಯ ಭಾಗ. ನಮ್ಮ ಇಡೀ ಜೀವನ ಇದರಲ್ಲೇ ಸಾಗಬೇಕು ಎನಿಸುತ್ತಿತ್ತು. ಸುಖ ಸಂತೋಷ ಎಂಬುದಕ್ಕೆ ನಮಗೆ ಆ ದಿನಗಳು ಮಾತ್ರ ಏಕೈಕ ಸಾಕ್ಷಿ. ಆಗ ಮಧ್ಯಾಹ್ನ ಊಟಕ್ಕೆ ಮನೆಗೆ ಹೋಗುತ್ತಿರಲಿಲ್ಲ. ಹಲಸಿನಕಾಯಿ ಅಥವಾ ಹಲಸಿನಹಣ್ಣು ಊಟದ ಅಗತ್ಯವನ್ನು ಈಡೇರಿಸುತ್ತಿದ್ದವು. ಇನ್ನೂ ಹೇಳಬೇಕೆಂದರೆ ಕೆಲವರ ಮನೆಯಲ್ಲಿ ಊಟಕ್ಕೂ ಸಮಸ್ಯೆ ಇತ್ತು.

ಮೇ ತಿಂಗಳ ಆರಂಭದಲ್ಲೇ ಮುಂಗಾರು ಶುರುವಾಗುತ್ತಿತ್ತು. ಹಗಲು ಗದ್ದೆಗಳಲ್ಲಿ ದನ ಮೇಯಿಸುತ್ತಿರುವಾಗ ಕೆಲವು ತುಡುಗು ದನಗಳು ಕಾಡಿನ ಕಡೆಗೆ ಓಡಿಹೋಗಲು ಟ್ರೈ ಮಾಡುತ್ತಿದ್ದವು. ಅಂಥವನ್ನು ಸಾಂಘಿಕ ಪ್ರಯತ್ನದಿಂದ ನಮ್ಮ ವ್ಯಾಪ್ತಿಗೆ ತಂದುಕೊಳ್ಳುತ್ತಿದ್ದೆವು. ಸಂಜೆ ಅವನ್ನು ಗದ್ದೆಗಳಿಂದ ಹೊಡ್ಕೊಂಡು ಬಂದು ಕೊಟ್ಟಿಗೆಯಲ್ಲಿ ಕಟ್ಟುವಾಗ ಹಗಲಿನ ಸೇಡು ತೀರಿಸಲೆಂಬಂತೆ ಕೆಲವು ಇದ್ದಕ್ಕಿದ್ದಂತೆ ಓಟ ಕೀಳುತ್ತಿದ್ದವು. ಆ ಹಿಂಸೆ ಮಾತ್ರ ಸಹಿಸಲಾರದ್ದು.

10ನೇ ಪುಟಕ್ಕೆ...



ಕಲೆ: ಭಾವು ಪತ್ತಾರ್



ಇಲ್ಲಿದೆ ಉಭಯಚರಿ ಬಸ್!

ಜಿ.ನಾಗೇಂದ್ರ ಕಾವೂರು

ದಕ್ಷಿಣ ಹಾಲೆಂಡಿನ ಪ್ರಮುಖ ಬಂದರು ನಗರಿ ಹಾಗೂ ಎರಡನೇ ಅತಿದೊಡ್ಡ ನಗರ ರೋಟರ್ ಡ್ಯಾಂ, ಯುರೋಪಿಯನ್ ಒಕ್ಕೂಟದ 10ನೇ ಅತಿದೊಡ್ಡ ನಗರ ಹಾಗೂ ನೆದರ್ಲೆಂಡ್ಸ್‌ನಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ನಗರವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಎರಡನೆಯ ಜಾಗತಿಕ ಮಹಾಯುದ್ಧದಲ್ಲಿ ನಗರದ ಕೇಂದ್ರಭಾಗವು ಸಂಪೂರ್ಣ ನಾಶವಾಯಿತು. ನಂತರದ ವರ್ಷಗಳಲ್ಲಿ ಪುನರ್ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದರ ಫಲವಾಗಿ ವೈವಿಧ್ಯಮಯ ನಗರವಾಗಿ ಪರಿವರ್ತನೆಗೊಂಡಿದೆ.

ವಿಶಿಷ್ಟ ವಾಸ್ತುಶಿಲ್ಪದ ಕಟ್ಟಡಗಳು, ನದಿತಟದಲ್ಲಿರುವ ಆಕರ್ಷಕ ಭವನಗಳು ಒಂದು ಭಾಗವಾದರೆ, ಮತ್ತೊಂದು ಕಡೆ ನಗರದ ಸಾಂಸ್ಕೃತಿಕ ಜೀವನ, ಕಡಲ ಪರಂಪರೆ ಹಾಗೂ ಆಧುನಿಕ ವಾಸ್ತುಶಿಲ್ಪಕ್ಕೆ ರೋಟರ್ ಡ್ಯಾಂ ಸಾಕ್ಷಿಯಾಗಿದೆ. ನೆದರ್ಲೆಂಡ್ಸ್‌ನಲ್ಲೇ ಅತಿ ಎತ್ತರದ ಗಗನಚುಂಬಿ ಕಟ್ಟಡಗಳಿರುವ ರೋಟರ್ ಡ್ಯಾಂ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿದೆ.

ಪ್ರವಾಸ

ಉಭಯಚರಿ ಬಸ್!

ಬಸ್ಸುಗಳು ರಸ್ತೆಯಲ್ಲಿ ಹಾಗೂ ಹಡಗು ನೀರಿನಲ್ಲಿ ಚಲಿಸಬಲ್ಲ ವಿಷಯ ನಮಗೆಲ್ಲರಿಗೂ ಗೊತ್ತಿದೆ. ಆದರೆ, ರೋಟರ್ ಡ್ಯಾಂನಲ್ಲಿರುವ ಬಸ್‌ಗಳು ರಸ್ತೆಯಲ್ಲಿ ಹಾಗೂ ನೀರಿನಲ್ಲಿ ಚಲಿಸುವ ವಿನ್ಯಾಸವನ್ನು ಹೊಂದಿವೆ. ಗೈಡ್ ಸಹಿತ ರಸ್ತೆ ಹಾಗೂ ನೀರಿನಲ್ಲಿ ಚಲಿಸುವ ವಿಶಿಷ್ಟ ಬಸ್‌ಗಳು ನಗರದ ಆಕರ್ಷಣೆಯಾಗಿವೆ. 'ಸ್ಪ್ಲ್ಯಾಶ್ ಟೂರ್ಸ್' ಎಂದು ಕರೆಯಲ್ಪಡುವ ಈ ಬಸ್ ಟಿಕೆಟ್ ಪಡೆದು ಪ್ರಯಾಣಿಸಿದರೆ, ರಸ್ತೆಯಲ್ಲಿ ಸಂಚರಿಸುವಾಗ ಮಾರ್ಗದಲ್ಲಿ ಸಿಗುವ ಪ್ರಮುಖ ಕಟ್ಟಡಗಳು, ಸ್ಮಾರಕಗಳ ಬಗ್ಗೆ ವಿವರಣೆಯನ್ನು ಗೈಡ್ ನೀಡುತ್ತಾರೆ.

ರೋಟರ್ ಡ್ಯಾಂನ ಅತ್ಯಂತ ಎತ್ತರದ ಗೋಪುರವಾದ 'ಯೂರೋಮಾಸ್ಟ್' ಬಳಿಯಿರುವ 'ಪಾರ್ಕ್ ಹೇವನ್' ಪ್ರದೇಶದಿಂದ ಪ್ರಾರಂಭವಾಗುವ ಸ್ಪ್ಲ್ಯಾಶ್ ಟೂರ್ಸ್ ಬಸ್ ಮಾರ್ಕೆಟ್ ಹಾಲ್, ಕ್ಯೂಬ್ ಹೌಸಸ್, ರೈಲು ನಿಲ್ದಾಣ, ಎರಾಸ್ಮಸ್ ಸೇತುವೆ ಹಾಗೂ ಇನ್ನಿತರೆ ಪ್ರೇಕ್ಷಣೀಯ ಸ್ಥಳಗಳ ಮೂಲಕ ಹೋಗುತ್ತದೆ.



ಉಭಯಚರಿ ಬಸ್ ನೀರಿಗಿಳಿಯುವುದು ಹೀಗೆ

ಅಂತಿಮವಾಗಿ ಬಸ್ ಮ್ಯೂಸಿ ನದಿಯೊಳಗೆ ಪ್ರವೇಶಿಸುತ್ತದೆ. ಬಸ್ಸು ನದಿಯೊಳಗೆ ಪ್ರವೇಶಿಸುವಾಗ ಎಲ್ಲಾ ಕಿಟಕಿಗಳನ್ನೂ ಮುಚ್ಚಲಾಗುತ್ತದೆ, ಇಳಿಜಾರು ಪ್ರದೇಶದಲ್ಲಿ ಅತಿವೇಗವಾಗಿ ಮ್ಯೂಸಿ ನದಿಯನ್ನು ಪ್ರವೇಶಿಸುವಾಗ ರಭಸವಾಗಿ ನೀರನ್ನು ಚಿಮ್ಮುತ್ತಾ ಭಾಗಶಃ ಮುಳುಗಿದ ಬಸ್ ಹಡಗಿನಂತೆ ತೇಲುತ್ತಾ ಮುಂದೆ ಸಾಗುವ ಸಮಯದಲ್ಲಿ ಪ್ರವಾಸಿಗರು ಉತ್ಸಾಹಭರಿತರಾಗಿ ಕೇಕೆ ಹಾಕುತ್ತಾರೆ.

ಬಸ್ ನೀರಿನಲ್ಲಿ ಸಂಚರಿಸುವಾಗ ಬಂದರಿನ ಸುತ್ತಲೂ ಇರುವ ಪ್ರವಾಸಿ ತಾಣಗಳ ಹಾಗೂ ಬಂದರಿನಲ್ಲಿರುವ ಹಳೆಯ ಹಡಗುಗಳ ಇತಿಹಾಸವನ್ನು ಗೈಡ್ ತಿಳಿಸುತ್ತಾರೆ. ಈ ಉಭಯಚರಿ ಬಸ್ ಪ್ರವಾಸ ಜನಪ್ರಿಯವಾಗುತ್ತಿದ್ದು ಗೈಡ್ ಇಂಗ್ಲಿಷ್ ಹಾಗೂ ಡಚ್ ಭಾಷೆಗಳಲ್ಲಿ ಮಾಹಿತಿ ನೀಡುತ್ತಾರೆ. 'ಸ್ಪ್ಲ್ಯಾಶ್ ಟೂರ್ಸ್' ಟಿಕೆಟ್‌ಗಳನ್ನು ಆನ್‌ಲೈನ್ ಮೂಲಕ ಮುಂಗಡವಾಗಿ ಕಾಯ್ದಿರಿಸುವ ಸೌಲಭ್ಯವಿದೆ. ಸುಮಾರು ಒಂದೂವರೆ ಗಂಟೆಯ ಸ್ಪ್ಲ್ಯಾಶ್ ಟೂರ್ಸ್ ರೋಚಕ ಅನುಭವವನ್ನು ನೀಡುತ್ತದೆ.

ಕುದುರೆ ಲಾಳದ ಆಕೃತಿಯಲ್ಲಿರುವ ರೋಟರ್ ಡ್ಯಾಂನ ಅತ್ಯಂತ ಜನಪ್ರಿಯ ಸ್ಥಳ ಮಾರ್ಕೆಟ್ ಹಾಲ್. ರೋಟರ್ ಡ್ಯಾಂಗೆ ಬರುವ ಪ್ರವಾಸಿಗರು ತಪ್ಪದೆ ಭೇಟಿ ನೀಡುವ ಜನನಿಬಿಡ ಸ್ಥಳ. ವಾಸ್ತುಶಿಲ್ಪದ ಅದ್ಭುತಗಳಲ್ಲಿ ಒಂದಾದ ಮಾರ್ಕೆಟ್ ಹಾಲ್ ಮೇಲ್ಛಾವಣಿಯಲ್ಲಿ ಪ್ರಪಂಚದ ಅತಿದೊಡ್ಡ ಕಲಾಕೃತಿಗಳಲ್ಲಿ ಒಂದಾದ ಆನರ್ ಆಫ್ ಪ್ಲೆಂಟಿ ಪ್ರವಾಸಿಗರ ಗಮನ ಸೆಳೆಯುತ್ತದೆ. ಇಲ್ಲಿರುವ ಸುಮಾರು 20 ರೆಸ್ಟೋರೆಂಟ್‌ಗಳಲ್ಲಿ ಹಲವು ದೇಶಗಳ ಖಾದ್ಯಗಳು ಲಭ್ಯವಿದ್ದು ಪ್ರವಾಸಿಗರ ಬಾಯಲ್ಲಿ ನೀರೂರಿಸುತ್ತವೆ. ಮಾರ್ಕೆಟ್ ಹಾಲ್ ಒಳ ಆವರಣ ವಾಣಿಜ್ಯ ಚಟುವಟಿಕೆಗಳಿಗೆ ಮೀಸಲಾಗಿದ್ದರೆ, ಹೊರಮೈಯಲ್ಲಿ ವಸತಿ ಸಮುಚ್ಚಯವಿದೆ.



ಉಭಯಚರಿ ಬಸ್‌ನ ಹೊರನೋಟ



ರೋಟರ್ ಡ್ಯಾಂನ ಮಾರ್ಕೆಟ್ ಹಾಲ್

ಮಿತವ್ಯಯದ ಸಾರಿಗೆ

ರೋಟರ್ ಡ್ಯಾಂ ನಗರವನ್ನು ವೀಕ್ಷಿಸಲು ಟ್ರಾಂ, ಟ್ಯಾಕ್ಸಿಗಳು ಲಭ್ಯವಿದ್ದರೂ ಮಿತವ್ಯಯದಲ್ಲಿ ರೋಟರ್ ಡ್ಯಾಂ ನಗರವನ್ನು ವೀಕ್ಷಿಸಲು ಹಾಪ್ ಆನ್- ಹಾಫ್ ಆಫ್ ಬಸ್ಸು ಟಿಕೆಟ್ ಖರೀದಿಸಿ ಪ್ರವಾಸಿ ತಾಣಗಳನ್ನು ವೀಕ್ಷಿಸಬಹುದು. ಬಸ್ಸಿನಲ್ಲಿ ನೀಡುವ ಪ್ರವಾಸಿ ತಾಣಗಳ ಪಟ್ಟಿಯನ್ನು ಅನುಸರಿಸಿ ನಾವು ನೋಡಬೇಕಾದ ಪ್ರವಾಸಿ ತಾಣದ ನಿಲುಗಡೆಯಲ್ಲಿ ಇಳಿದು, ವೀಕ್ಷಿಸಿದ ನಂತರ ಬರುವ ಮತ್ತೊಂದು ಬಸ್ಸನ್ನು ಹಿಡಿದು ಮುಂದಿನ ಪ್ರವಾಸಿ ತಾಣದ ನಿಲುಗಡೆಯಲ್ಲಿ ಇಳಿಯಬಹುದು. ಹೀಗೆ ಇಡೀದಿನ ನಗರವನ್ನು ವೀಕ್ಷಿಸಬಹುದು. ಪ್ರತೀ ನಿಲುಗಡೆಯಲ್ಲಿ ಸಾಮಾನ್ಯವಾಗಿ ಅರ್ಧಗಂಟೆಗೊಂದು ಬಸ್ ಬರುತ್ತದೆ. ಒಮ್ಮೆ ಟಿಕೆಟ್ ಖರೀದಿಸಿದರೆ ಸಾಕು, ಬೆಳಿಗ್ಗೆಯಿಂದ ಸಂಜೆವರೆಗೂ ಓಡಾಡಬಹುದು.

ಎರಡನೇ ಜಾಗತಿಕ ಮಹಾಯುದ್ಧದಲ್ಲಿ ನಾಶವಾದರೂ ಮತ್ತೆ ಫೀನಿಕ್ಸ್‌ನಂತೆ ಮರು ಜನ್ಮಪಡೆದು, ಪ್ರಪಂಚವನ್ನೇ ನಿಬ್ಬೆರಗಾಗಿಸಿದ ಖ್ಯಾತಿ ರೋಟರ್ ಡ್ಯಾಂ ನಗರಕ್ಕೆ ಸಲ್ಲುತ್ತದೆ. ❖



ಕ್ಯೂಬ್ ಹೌಸ್

ಬ್ಲಾಕ್ (Blaak) ಮೆಟ್ರೊ ನಿಲ್ದಾಣದ ಓವರ್ ಬ್ಲಾಕ್ ರಸ್ತೆಯಲ್ಲಿರುವ ಕ್ಯೂಬ್ ಹೌಸ್‌ಗಳು ತಮ್ಮ ವಿಶಿಷ್ಟ ವಿನ್ಯಾಸ ಹಾಗೂ ಬಣ್ಣದಿಂದ ಪ್ರವಾಸಿಗರ ಗಮನ ಸೆಳೆಯುತ್ತವೆ. ಪ್ರಪಂಚದ ಮೂಲೆ ಮೂಲೆಗಳಿಂದ ರೋಟರ್ ಡ್ಯಾಂ ನಗರವನ್ನು ವೀಕ್ಷಿಸಲು ಬರುವ ಪ್ರತಿಯೊಬ್ಬ ಪ್ರವಾಸಿಗನೂ ಕ್ಯೂಬ್ ಹೌಸ್‌ಗಳನ್ನು ನೋಡದೆ ಹಿಂದಿರುಗುವುದಿಲ್ಲ.

ಡಚ್ ವಾಸ್ತು ಶಿಲ್ಪಿ ಪಿಯೆಟ್ ಬ್ಲಾಮ್ ವಿನ್ಯಾಸಗೊಳಿಸಿದ ಕ್ಯೂಬ್ ಆಕೃತಿಯ ಮನೆಗಳ ಸಮುಚ್ಚಯ ಪ್ರವಾಸಿಗರನ್ನು ಬೆರಗುಗೊಳಿಸುತ್ತದೆ. 1977ರಲ್ಲಿ ನಿರ್ಮಿಸಲಾದ 1,100 ಚದರ ಅಡಿ ವಿಸ್ತೀರ್ಣವುಳ್ಳ 38 ಸಣ್ಣ ಹಾಗೂ 2 ದೊಡ್ಡ, ಒಂದಕ್ಕೊಂದು ಹೊಂದಿಕೊಂಡಿರುವ ಕ್ಯೂಬ್ ಹೌಸ್‌ಗಳು ಆಧುನಿಕ ವಾಸ್ತುಶಿಲ್ಪಕ್ಕೆ ಉತ್ತಮ ಉದಾಹರಣೆಯಾಗಿವೆ. ಮನೆಯ ಜಾಗದ ಸದ್ಬಳಕೆ ಮಾಡುವುದೇ ಕ್ಯೂಬ್ ಹೌಸ್ ನಿರ್ಮಾಣದ ಮೂಲ ಉದ್ದೇಶ.

ಸಾಂಪ್ರದಾಯಿಕ ಮನೆಗಳಲ್ಲಿರುವ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ ಈ ಮನೆಗಳನ್ನು 45 ಡಿಗ್ರಿ ಘನರೂಪದ ಮನೆಗಳನ್ನಾಗಿ ನಿರ್ಮಿಸಿ ಷಟ್ಬುಜಾಕೃತಿಯು ದ್ವಾರದ ಮೇಲೆ ಇರುವಂತೆ ನೋಡಿಕೊಳ್ಳಲಾಗಿದೆ. ಮೂರು ಮಹಡಿಗಳನ್ನು ಹೊಂದಿರುವ ಮನೆಗಳ ನೆಲ ಅಂತಸ್ತಿನಲ್ಲಿ ಪ್ರವೇಶದ್ವಾರ, ಎರಡನೇ ಅಂತಸ್ತಿನಲ್ಲಿ ದೊಡ್ಡದಾದ ಹಾಲ್ ಹಾಗೂ ತೆರೆದ ಅಡುಗೆ ಮನೆಯನ್ನು ಹೊಂದಿದ್ದು, ಮೂರನೇ ಮಹಡಿಯಲ್ಲಿ ಎರಡು ಮಲಗುವ ಕೋಣೆಗಳು ಹಾಗೂ ಸ್ನಾನಗೃಹಗಳಿವೆ. ಒಂದೊಂದು ಮನೆಯೂ 1,100 ಚದರ ಅಡಿ ವಿಸ್ತೀರ್ಣವುಳ್ಳದ್ದಾಗಿದೆ.

ವಿಶಿಷ್ಟ ವಿನ್ಯಾಸವುಳ್ಳ ಮನೆಗಳನ್ನು ವೀಕ್ಷಿಸಲು ಬರುವ ಪ್ರವಾಸಿಗರಿಂದ ಮನೆಗಳಲ್ಲಿ ವಾಸಿಸುವವರಿಗೆ ಆಗುತ್ತಿರುವ ಕಿರಿಕಿರಿಯನ್ನು ತಪ್ಪಿಸಲು ಒಂದು ಮನೆಯನ್ನು ವೀಕ್ಷಣೆಗೆಂದೇ ಮೀಸಲಾಗಿರಿಸಲಾಗಿದೆ. ಶೋ ಕ್ಯೂಬ್ ಮನೆಯಲ್ಲಿ ಸಂಚರಿಸಿ, ಕಟ್ಟಡಗಳ ವಿನ್ಯಾಸ, ಇತಿಹಾಸಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು. ಬೆಳಿಗ್ಗೆ 11 ರಿಂದ ಸಂಜೆ 5ರ ವರೆಗೆ ವಾರದ ಏಳೂ ದಿನಗಳು ವೀಕ್ಷಣೆಗಾಗಿ ತೆರೆದಿರುತ್ತದೆ. ಪ್ರವೇಶದರ 3 ಯೂರೊಗಳು.

ಸುಗಮ ಸಂಗೀತದ ಸೇನಾನಿ

ಬಿ.ಆರ್.ಲಕ್ಷ್ಮಣರಾವ್

ವೈ.ಕೆ.ಮುದ್ದುಕೃಷ್ಣ ಅವರನ್ನು ನಾನು ಪ್ರೀತಿಯಿಂದ 'ಬಾಸ್' ಎಂದು ಕರೆಯುತ್ತೇನೆ. ಒಬ್ಬ ಸಹಜ ನೇತಾರನ ಗತ್ತು ಅವರ ಮಾತು ಮತ್ತು ನಡವಳಿಕೆಯಲ್ಲಿರುವುದೇ ಇದಕ್ಕೆ ಕಾರಣ. ಆದರೆ ಆ ಗತ್ತಿನಲ್ಲಿ ಅಹಂಕಾರವಿಲ್ಲ. ತನಗೆ ಸರಿ ತೋರಿದ್ದನ್ನು ಯಾವುದೇ ಅಂಜಿಕೆ, ಮುಚ್ಚುಮರೆಯಿಲ್ಲದೆ ಖಡಾಖಂಡಿತವಾಗಿ ಹೇಳಬಲ್ಲ ಸತ್ಯನಿಷ್ಠೆ ಮತ್ತು ಆತ್ಮವಿಶ್ವಾಸ ಆ ಗತ್ತಿನಲ್ಲಿವೆ. ಹಾಗೆಯೇ ತನ್ನ ನಿಲುವು ಸರಿಯಲ್ಲವೆಂದು ಅವರಿಗೇ ಮನವರಿಕೆಯಾದಾಗ ಅದನ್ನು ಒಪ್ಪಿಕೊಂಡು, ತಿದ್ದಿಕೊಳ್ಳುವ ವಿನಯವಂತಿಕೆಯೂ ಅವರಿಗಿದೆ. ಇದು ಒಬ್ಬ ಒಳ್ಳೆಯ 'ಬಾಸ್'ನಲ್ಲಿ ಇರಲೇಬೇಕಾದ ಸದ್ಗುಣವೆಂದು ನಾನು ಭಾವಿಸುತ್ತೇನೆ.

ವೈಕೆಎಂ ಅವರೊಂದಿಗೆ ನನ್ನ ಪರಿಚಯ ಮತ್ತು ನಿಕಟಸ್ನೇಹ ಮೂರು ದಶಕಗಳಷ್ಟು ಹಳೆಯದು. ರಾಜ್ಯ ಸರ್ಕಾರದ ಹಲವು ಉನ್ನತ ಅಧಿಕಾರ ಸ್ಥಾನಗಳಲ್ಲಿ ಸೇವೆ ಸಲ್ಲಿಸಿ, ಒಬ್ಬ ದಕ್ಷ, ಪ್ರಾಮಾಣಿಕ ಅಧಿಕಾರಿಯೆಂದು ಅವರು ಮಾನ್ಯರಾಗಿದ್ದರಾದರೂ ನನಗೆ ಅವರು ಹತ್ತಿರವಾದದ್ದು ಸುಗಮ ಸಂಗೀತದ ಬಗ್ಗೆ ಅವರಿಗಿದ್ದ ಅಪರಿಮಿತ ಪ್ರೀತಿ ಮತ್ತು ಕಾಳಜಿಯ ಕಾರಣವಾಗಿ. ಹಾಗೆ ನೋಡಿದರೆ, ನನಗೆ ಅವರ ಪರಿಚಯವಾದದ್ದೇ ಸುಗಮ ಸಂಗೀತದ ದಿಗ್ಗಜರಲ್ಲಿ ಒಬ್ಬರಾದ ಸಿ.ಅಶ್ವತ್ಥ್ ಅವರ ಮೂಲಕ. ಎಂಬತ್ತರ ದಶಕದಲ್ಲಿ ಅಶ್ವತ್ಥ್ ಹೊರತಂದ ಹಲವು ಭಾವಗೀತೆಗಳ ಧ್ವನಿಸುರುಳಿಗಳ ಹಿಂದೆ ವೈಕೆಎಂ ಅವರ ಒತ್ತಾಸೆ ಮತ್ತು ಸಹಕಾರ ಇದ್ದದ್ದು ಸರ್ವವಿಧಿತ ಸಂಗತಿ. ಹಾಗೆಯೇ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದ ಕಾಲದಲ್ಲಿ ಎಲ್ಲ ಪ್ರಕಾರಗಳ ಕಲಾವಿದರಿಗೂ ಮುಕ್ತ ಮನಸ್ಸಿನಿಂದ ನೆರವಾಗುತ್ತಿದ್ದದ್ದು ಹಾಗೂ ಬೆಂಗಳೂರಿನ ಭವ್ಯ, ಸುಸಜ್ಜಿತ 'ಕನ್ನಡ ಭವನ'ದ ನಿರ್ಮಾಣದ ರೂವಾರಿಯಾದದ್ದು ಈಗ ಇತಿಹಾಸ.



ವೈ.ಕೆ.ಮುದ್ದುಕೃಷ್ಣ

ಸುಗಮ ಸಂಗೀತವನ್ನು ಜನರ ಬಳಿಗೊಯ್ಯುವ ಹಾಗೂ ಅದರ ವ್ಯಾಪ್ತಿಯನ್ನು ವಿಸ್ತರಿಸುವ ಉದ್ದೇಶದಿಂದ ತೊಂಬತ್ತರ ದಶಕದಲ್ಲಿ ರೂಪುಗೊಂಡ 'ಧ್ವನಿ' ಎಂಬ ಸಂಸ್ಥೆಯ ಮುಖ್ಯ ರೂವಾರಿಯೂ ವೈಕೆಎಂ ಅವರೇ. 'ಧ್ವನಿ'ಯ ಆಶ್ರಯದಲ್ಲಿ ಪ್ರತಿವರ್ಷ ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ 'ಕಾವ್ಯ ಗಾಯನ'ದ ಅದ್ದೂರಿ ಕಾರ್ಯಕ್ರಮಗಳು ನಡೆದವು. ಇವುಗಳಲ್ಲಿ ನಾಡಿನ ಸುಪ್ರಸಿದ್ಧ ಕವಿಗಳು ಹಾಗೂ ಸುಗಮ ಸಂಗೀತದ ಗಾಯಕ, ಗಾಯಕಿಯರು ಉತ್ಸಾಹದಿಂದ ಭಾಗವಹಿಸಿದ್ದರು. ಇಂತಹ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಸುಮಧುರ ನೆನಪುಗಳು ನನಗಿವೆ. ಸುಗಮ ಸಂಗೀತದ ದಿಗ್ಗಜದ್ವಯರಾದ ಮೈಸೂರು ಅನಂತಸ್ವಾಮಿ ಮತ್ತು ಸಿ.ಅಶ್ವತ್ಥ್ ಇವುಗಳಲ್ಲಿ ಒಟ್ಟಿಗೆ ಭಾಗವಹಿಸಿದ್ದು ಒಂದು ವಿಶೇಷ ಸಂಗತಿ. ಪ್ರತಿಸ್ಪರ್ಧಿಗಳಂತಿದ್ದ ಅವರಿಬ್ಬರೂ ಆತ್ಮೀಯ ಮಿತ್ರರಾಗಲು ಕಾರಣರಾದವರೂ ವೈಕೆಎಂ ಅವರೇ ಎಂದರೆ ತಪ್ಪಾಗಲಾರದು. 'ಧ್ವನಿ' ಸಂಸ್ಥೆ ಆಯೋಜಿಸಿದ ಹಲವು ಸ್ಮರಣೀಯ ಕಾರ್ಯಕ್ರಮಗಳಲ್ಲಿ 'ಕಾವ್ಯ ಸೌರಭ' ಎಂಬ ಜೋಡಿ ಕವಿಗಳ ಗೀತ ಪ್ರಸ್ತುತಿಯ ಕಾರ್ಯಕ್ರಮ ವಿಶೇಷ ಉಲ್ಲೇಖಕ್ಕೆ ಅರ್ಹವಾಗಿದೆ.

ಕರ್ನಾಟಕದಾದ್ಯಂತ ಇರುವ ಸುಗಮ ಸಂಗೀತ ಕವಿ, ಕಲಾವಿದರನ್ನು ಒಗ್ಗೂಡಿಸುವ ಹಾಗೂ ಒಂದು ಜಾಗತಿಕ ಆಂದೋಲನದಂತೆ ಸುಗಮ ಸಂಗೀತವನ್ನು ಬೆಳೆಸುವ ಉದ್ದೇಶದಿಂದ 2003ರಲ್ಲಿ ಸ್ಥಾಪನೆಗೊಂಡದ್ದು 'ಕರ್ನಾಟಕ ಸುಗಮ ಸಂಗೀತ ಪರಿಷತ್ತು'. ಈವರೆಗೆ (ಒಂದೆರಡು ವರ್ಷಗಳ ತಮ್ಮ ಅನಾರೋಗ್ಯದ ಕಾರಣದ ಅನುಪಸ್ಥಿತಿಯ ಹೊರತಾಗಿ) ಅದರ ಅಧ್ಯಕ್ಷರಾಗಿ, ಪರಿಷತ್ತಿನ ಕನಸುಗಳನ್ನು ಯಶಸ್ವಿಯಾಗಿ ಸಾಕಾರಗೊಳಿಸುತ್ತ ಬಂದಿರುವ ಸಮರ್ಥ ನೇತಾರ ವೈಕೆಎಂ. ಕಸುಸಂಪ ಪ್ರತಿವರ್ಷ ನಿರಂತರವಾಗಿ ರಾಜ್ಯದ ಹಾಗೂ ಹೊರರಾಜ್ಯದ ವಿವಿಧ ನಗರಗಳಲ್ಲಿ ನಡೆಸುತ್ತ ಬಂದಿರುವ 'ಗೀತೋತ್ಸವ' ಎಂಬ ಸುಗಮ ಸಂಗೀತ ಸಮ್ಮೇಳನಗಳಲ್ಲಿ ಈವರೆಗೆ ಒಂದನ್ನೂ ತಪ್ಪಿಸಿಕೊಳ್ಳದೆ ಎಲ್ಲದರಲ್ಲೂ ಭಾಗವಹಿಸಿರುವ ಹೆಮ್ಮೆ ನನ್ನದು. ಜೊತೆಗೆ, 'ಕವಿಯ ನೋಡಿ, ಕವಿತೆ ಕೇಳಿ' ಎಂಬ ವಿಶಿಷ್ಟ ಕಾರ್ಯಕ್ರಮವನ್ನೂ ಸಹ ಪರಿಷತ್ತು ನಿರಂತರವಾಗಿ ನಡೆಸುತ್ತ ಬಂದಿದೆ. ಸಾಹಿತ್ಯ ಸಮ್ಮೇಳನಗಳಲ್ಲಿ, ರಾಜ್ಯ ಸರ್ಕಾರದ ವಿವಿಧ ಉತ್ಸವಗಳಲ್ಲಿ ಹಾಗೂ ದಸರಾ ಮಹೋತ್ಸವದಲ್ಲೂ ಸುಗಮ ಸಂಗೀತಕ್ಕೆ ಪ್ರಮುಖ ಸ್ಥಾನಮಾನಗಳನ್ನು ಗಳಿಸಿಕೊಡುವುದರಲ್ಲಿ ವೈಕೆಎಂ ಅವರ ಪಾತ್ರ ಮಹತ್ವದ್ದಾಗಿದೆ.

ಇದೆಲ್ಲದರ ಹೊರತಾಗಿ ವೈಕೆಎಂ ನನಗೆ ಅತ್ಯಂತ ಆಪ್ತರಾಗಿರುವುದು ಒಬ್ಬ ಆತ್ಮೀಯ ಮಿತ್ರರಾಗಿ. ನಾನು ಚಿಂತಾಮಣಿಯಲ್ಲಿದ್ದಾಗ ಹಲವಾರು ಬಾರಿ ಅವರು ನಮ್ಮ ಮನೆಗೆ ಬಂದಿದ್ದಾರೆ. ನಮ್ಮ ಕುಟುಂಬದಲ್ಲಿ ಒಬ್ಬರಾಗಿ ಬೆರೆತುಹೋಗಿದ್ದಾರೆ. ಜಾತ್ಯತೀತವಾದ ಮುಕ್ತ ಮನಸ್ಸು ಅವರದ್ದು. ಅವರಿಗೆ ಪ್ರಿಯವಾದದ್ದು ಒಂದೇ ಜಾತಿ; ಅದು ಕಲಾವಿದರ ಜಾತಿ. ಕಲಾವಿದರ ಕಷ್ಟ ನಷ್ಟಗಳಿಗೆ ಎಲ್ಲ ರೀತಿಗಳಲ್ಲೂ ಬಂದೊದಗುವ ಆಪತ್ಬಾಂಧವರು ಅವರು. ❖

ಸ್ಟ್ಯಾಂಡ್–ಅಪ್ ನಗೆಗುಳಿಗೆ...

8ನೇ ಪುಟದಿಂದ...

'ನಮ್ದು ಕೆ' ಸ್ಟ್ಯಾಂಡ್-ಅಪ್ ಟೀಮ್‌ನ ಭಾಗವಾಗಿ ಮೊದಲಿನಿಂದಲೂ ಅದನ್ನು ಬೆಳೆಸಿದ, ಯುಟ್ಯೂಬ್‌ಗೂ ವಿಡಿಯೊಗಳನ್ನು ಅಪ್‌ಲೋಡ್ ಮಾಡುತ್ತಾ ಬಂದಿರುವ ಶ್ರವಣ್ ನಾರಾಯಣ್ ಐತಾಳ್, ಡ್ಯಾನಿಷ್ ಅವರ ಅಭಿಪ್ರಾಯವನ್ನು ಸ್ವಾನುಭವದೊಂದಿಗೆ ಸಮರ್ಥಿಸುತ್ತಾರೆ. ಕೋವಿಡ್ ಲಾಕ್‌ಡೌನ್‌ನಲ್ಲಿ ತಮ್ಮ ತಂಡದ ಸ್ಟ್ಯಾಂಡ್-ಅಪ್ ವಿಡಿಯೊಗಳ ಪ್ರೇಕ್ಷಕರ ಸಂಖ್ಯೆ ಮುಪ್ಪಟ್ಟಾದಾಗ ಸಂಭ್ರಮಪಟ್ಟಿದ್ದರು. ಲಾಕ್‌ಡೌನ್ ತೆರವಾದ ಮೇಲೆ ಕೆಲವು ಷೋಗಳಿಗೆ ಬಂದ ಪ್ರೇಕ್ಷಕರನ್ನು ಕಂಡು ಆ ಖುಷಿ ಕೂಡ ಮುಪ್ಪಟ್ಟಾಗಿತ್ತು. ಈಗ ವಿಡಿಯೊಗಳನ್ನು ನೋಡುವವರ ಸಂಖ್ಯೆ ಮತ್ತೆ ಸ್ವಲ್ಪ ಕಡಿಮೆಯಾಗುತ್ತಿರುವುದು ಅವರನ್ನು ಕಾಡಲಾರಂಭಿಸಿದೆ.

'ಯುಟ್ಯೂಬ್‌ನಲ್ಲಿ ಒಂದು ವಿಡಿಯೊ ಒಂದು ಲಕ್ಷ ವ್ಯೂ ದಾಟಿದರೆ ಅದನ್ನೊಂದು ರೆವೆನ್ಯೂ ಮಾಡ್ಯೂಲ್ ಎಂದು ಪರಿಗಣಿಸಬಹುದು. ಖುದ್ದು ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ನನಗೆ ಇಲ್ಲಿನ ವಿಡಿಯೊಗಳನ್ನು ಜನಪ್ರಿಯಗೊಳಿಸುವ ಅಲ್‌ಗಾರಿದಂ ಅರ್ಥ ಮಾಡಿಕೊಳ್ಳುವುದು ಸವಾಲೆನಿಸುತ್ತಿದೆ. ಕಂಟೆಂಟ್ ಕೂಡ ಏಕರೀತಿ ಆಗಕೂಡದು. ಒಂದು ಕ್ಲಿಕ್ ಆಯಿತೆಂದರೆ ಅದನ್ನೇ ಅನುಕರಿಸಿದರೆ ಪೆಟ್ಟು. ಸಣ್ಣ ವಿಷಯಗಳ ಬಗ್ಗೆ ಸ್ಟ್ಯಾಂಡ್-ಅಪ್ ಕಾಮಿಡಿಗಳನ್ನು ನಾವೊಂಚೂರು ಉತ್ಪ್ರೇಕ್ಷೆ ಮಾಡಿ ಹೇಳುತ್ತಿರುತ್ತೇವೆ. ಇದು ಕೂಡ ಜನರಿಗೆ ಒಂದು ಹಂತದ ನಂತರ ಬೇಡವಾಗುವುದನ್ನು ಕಂಡಿದ್ದೇವೆ. ಹಾನಗಲ್ ಹುಡುಗಿ ಶ್ವೇತಾ ದೊಡ್ಡಮನಿ ತರಹದವರು ಮಾಡುವ ಅಶ್ಲೀಲವೇ ಅಲ್ಲದ ಹಾಸ್ಯ ಸರಕು ಹೊಸತೆನ್ನುವಂತೆ ಕಂಡಿದೆ. ರಾಘವೇಂದ್ರ ಆಚಾರ್ಯ ಅವರ ಶೈಲಿ ಜನರಿಗೆ ಹಿಡಿಸಿದೆ. ಇವೆಲ್ಲವೂ ಉತ್ತರ ಕರ್ನಾಟಕದ ಭಾಷೆಯ ಬಗೆಗೆ ಇದ್ದ ಸೀಮಿತವಾದ ಮಿಥ್‌ಗಳನ್ನು ಒಡೆದಿವೆ' ಎನ್ನುವುದು ಶ್ರವಣ್ ಅನುಭವದ ನುಡಿ.

ಸ್ಟ್ಯಾಂಡ್-ಅಪ್‌ನಲ್ಲಿ ಕನ್ನಡ ಇನ್ನೂ ಹೆಚ್ಚು ಬೆಳೆಯಬೇಕಾದರೆ ಜಾಗತಿಕ ಮಟ್ಟದ ವಸ್ತುವಿಷಯಗಳನ್ನು ಡ್ಯಾನಿಷ್ ಮಾದರಿಯಲ್ಲಿ ಸೃಷ್ಟಿಸಬೇಕು ಎಂದು ಹೇಳುತ್ತಾರೆ.

ಕನ್ನಡದ ವಿವಿಧ ಭಾಗಗಳ ಜನರು ಹಾಸ್ಯ ಪ್ರಸಂಗಗಳ ಯುಟ್ಯೂಬ್ ವಿಡಿಯೊಗಳನ್ನು ರೂಪಿಸುತ್ತಿದ್ದಾರೆ. ಪತಂಗ ಎನ್ನುವ ಚಾನೆಲ್ ಕುಂದಾಪುರ ಕನ್ನಡದಲ್ಲಿ ವಿಡಿಯೊಗಳನ್ನು ಮಾಡಿದರೆ, ಗಣೇಶ್ ಕಾಮತ್ ಎನ್ನುವವರು ಮಂಗಳೂರು ಭಾಷೆಯಲ್ಲಿ ಕ್ರಿಕೆಟ್‌ನ ಹಾಸ್ಯಭರಿತ ವಿಶ್ಲೇಷಣೆ ಮಾಡುತ್ತಾ, ಜೀವನಶೈಲಿಯ ಕೆಲವು ವ್ಲಾಗ್‌ಗಳನ್ನೂ ಮಾಡುತ್ತಿದ್ದಾರೆ.

ಪವನ್ ವೇಣುಗೋಪಾಲ್, ನಿರೂಪ್ ಮೋಹನ್, ರಾಘವೇಂದ್ರ ಆಚಾರ್ಯ, ಸುಬ್ರಹ್ಮಣ್ಯ ಹೆಗಡೆ, ಕಾರ್ತಿಕ್ ಪತ್ತಾರ್, ಶ್ರವಣ್ ಪಿ., ಗಣೇಶ್ ಕಶ್ಯಪ್, ಸಂದೇಶ್ ಕುಮಾರ್ ಆರ್., ನಿತಿನ್ ಕಾಮತ್, ದಿಲೀಪ್ ಶಂಕರ್, ವಾದಿರಾಜ್ ಬಬಲಾಡಿ, ಅಕ್ಷಯ್ ಕುಮಾರ್, ಗೌತಮ್ ಶ್ರವಣ್ ಕುಮಾರ್ ಇವರೆಲ್ಲ ಸ್ಟ್ಯಾಂಡ್-ಅಪ್ ಹಾಸ್ಯದ ಮೂಲಕ ಜನಮನಸೂರೆಗೊಳ್ಳಲು ತವಕಿಸುತ್ತಿರುವ ಹೊಸಕಾಲದ ಹುಡುಗರು. ಸೋನು ವೇಣುಗೋಪಾಲ್ ಅವರಂಥ ಧಾರವಾಡಿ ಶೈಲಿಯಲ್ಲಿ ಮಾತನಾಡುವ ಯುವತಿ ಸಹ ಈ ಕ್ಷೇತ್ರದಲ್ಲಿ ಛಾಪು ಮೂಡಿಸುತ್ತಿದ್ದಾರೆ.

ಸ್ಟ್ಯಾಂಡ್-ಅಪ್ ಕಾಮಿಡಿ ಯೊಂದರಿಂದಲೇ ಬದುಕು ಕಟ್ಟಿಕೊಳ್ಳಲು ಈಗ ಸಾಧ್ಯವೇ ಎಂಬ ಪ್ರಶ್ನೆಗೆ ಮಾತ್ರ ಅನೇಕರಲ್ಲಿ ಮಿಶ್ರ ಉತ್ತರಗಳಿವೆ. 'ಬಂದೇ ಬರತಾದ ಕಾಲ' ಎನ್ನುವುದು ಈ ಎಲ್ಲರ ಆಶಾವಾದ.

ಬೀಚಿ ಓದಿ ಬೆಳೆದ ರಾಘವೇಂದ್ರ: ಕೊಪ್ಪಳದ ಬಳಿಯ ಕುಷ್ಟಗಿ ಮೂಲದವರು ರಾಘವೇಂದ್ರ ಆಚಾರ್ಯ. ಬೆಳೆದದ್ದು ರಾಯಚೂರಿನಲ್ಲಿ. ಬೀಚಿ ಪುಸ್ತಕಗಳನ್ನು ಓದಿ ಅಲ್ಲಿನ ವ್ಯಂಗ್ಯೋಕ್ತಿಗಳನ್ನು ಜೀರ್ಣಿಸಿಕೊಂಡು ಸಹಜವಾಗಿಯೇ ತಮ್ಮಲ್ಲಿ ಹಾಸ್ಯಪ್ರಜ್ಞೆ ಮೂಡಿತೆನ್ನುವವರು. ಆರು ವರ್ಷ ಅವರು ಪತ್ರಕರ್ತರಾಗಿ ಕೆಲಸ ಮಾಡಿದರು. ಸಂಯುಕ್ತ ಕರ್ನಾಟಕ, ಕನ್ನಡಪ್ರಭ, ಉದಯವಾಣಿ ಪತ್ರಿಕೆಗಳಲ್ಲಿ ವಿಜ್ಞಾನ ಸಂಶೋಧನಾ ಬರಹಗಳ ವಿಷಯದಲ್ಲಿ ಸಾಣೆಗೆ ಒಡ್ಡಿಕೊಂಡರು. ಮೈಕ್ರೋಬಯಾಲಜಿ ಓದಿರುವ ಇವರಿಗೆ ಸ್ಟ್ಯಾಂಡ್-ಅಪ್ ತುಡಿತ. ಲಾಕ್‌ಡೌನ್ ಸಂದರ್ಭದಲ್ಲಿ ಯೂಟ್ಯೂಬ್‌ನಲ್ಲಿ ಇವರು ಹಾಕಿದ್ದ 'ಡೇಂಜರ್ ನಾಗ' ಎಂಬ ವಿಡಿಯೊಗೆ ಸುಮಾರು ಎಂಟು ಲಕ್ಷ ವ್ಯೂಸ್ ಬಂದಿವೆ. ವಿವಿಧೆಡೆಯ ಕನ್ನಡ ಸಂಘಗಳು ಅದನ್ನು ಕಂಡೇ ಇವರಿಗೆ ಆನ್‌ಲೈನ್ ಮೂಲಕವೇ ಹಾಸ್ಯ ರಸಾಯನ ಉಣಬಡಿಸಲು ಆಹ್ವಾನ ನೀಡಿದ್ದವು. ಪಾಕೆಟ್‌ಎಫ್‌ಎಂ ಎಂಬ ಒಟಿಟಿ ವೇದಿಕೆಯಲ್ಲಿ ಕೆಲಸ ಮಾಡುತ್ತಿರುವ ರಾಘವೇಂದ್ರ ಆಚಾರ್ಯ ಉತ್ತರ ಕರ್ನಾಟಕದ ಭಾಷೆಯಲ್ಲಿ ಹಾಸ್ಯ ಪ್ರಸಂಗಗಳನ್ನು ಹೇಳುತ್ತಾರೆ.

'ನನ್ನ ಹಾಸ್ಯದಲ್ಲಿ ಸ್ವಾನುಭವವೇ ಹೆಚ್ಚು. ಇನ್ನೊಬ್ಬರು ನಮಗೆ ಹೇಳಿದ ಜೋಕನ್ನೇ ಹೇಳಿದರೆ ಸ್ಟ್ಯಾಂಡ್-ಅಪ್‌ನಲ್ಲಿ ಗಿಟ್ಟೊಲ್ಲ. ಎಷ್ಟೆಲ್ಲ ಜನ ಉತ್ತರ ಕರ್ನಾಟಕ ಭಾಷೆಯಲ್ಲಿ ಹಾಸ್ಯ ಮಾಡಿದರಾದರೂ ಉಳಿದವರು ಪ್ರಾಣೇಶ್. ಅಂತೆಯೇ ಈಗ ಇಲ್ಲೊಂದು ಸ್ಪರ್ಧೆಯಿದೆ. ಯಾರು ಒಳ್ಳೆಯ ರಂಜನೀಯ ಹಾಸ್ಯ ಕೊಡುವರೋ ಅವರಿಗೆ ಉಳಿಗಾಲ. ಮಂಡ್ಯ, ಮಂಗಳೂರು ಹೀಗೆ ವಿವಿಧ ಶೈಲಿಯ ಕನ್ನಡದ ಸ್ಟ್ಯಾಂಡ್-ಅಪ್‌ಗಳೂ ಖಂಡಿತ ಬರಲಿವೆ. ಓಪನ್ ಮೈಕ್ ಎಂಬ ಅವಕಾಶ ನೀಡುವುದು ಈಗ ಹೆಚ್ಚಾಗಿರುವುದರಿಂದ ಥಟ್ಟನೆ ಯಾರೋ ಒಬ್ಬ ಪ್ರತಿಭೆ ಮಿಂಚುವುದು ನಡೆಯುತ್ತಿದೆ. ಬೆಂಗಳೂರು ಪ್ರೇಕ್ಷಕರು ಮುಕ್ತ ಮನಸ್ಸಿನವರಾದ್ದರಿಂದ ನಮ್ಮ ಭಾಷೆಯ ಹಾಸ್ಯವನ್ನು ಸಲೀಸಾಗಿ ಸ್ವೀಕರಿಸುತ್ತಿದ್ದಾರೆ' ಎನ್ನುತ್ತಾರೆ ರಾಘವೇಂದ್ರ ಆಚಾರ್ಯ.

ಶೈಶವಾವಸ್ಥೆಯ ಮಾಧ್ಯಮದಲ್ಲಿ ನಾನು: ತಮ್ಮ ತಾಯಿಯ ಜತೆ, ಕುಟುಂಬದವರ ಜತೆ, ಮೆಟ್ರೊ ರೈಲಿನಲ್ಲಿ ಆದ ಅನುಭವಗಳನ್ನೇ ಹಾಸ್ಯ ಪ್ರಸಂಗಗಳಾಗಿಸಿ ಧಾರವಾಡಿ ಭಾಷೆಯಲ್ಲಿ ಪ್ರಸ್ತುತಪಡಿಸಿದವರು ಸೋನು ವೇಣುಗೋಪಾಲ್. 'ಇಂಡಿಯನ್ ಪೇರೆಂಟ್ಸ್' ಎಂಬ ಇವರ ಸ್ಟ್ಯಾಂಡ್-ಅಪ್ ಕಾಮಿಡಿಯು ಯೂಟ್ಯೂಬ್‌ನಲ್ಲಿ 8 ಲಕ್ಷ ವ್ಯೂಸ್ ಪಡೆದುಕೊಂಡಿದೆ. ಸದ್ಯಕ್ಕೆ ಕೆಲವು ಬ್ರ್ಯಾಂಡ್‌ಗಳಿಗೆ ಮೀಡಿಯಾ ಪ್ರೊಮೋಷನ್ಸ್ ಮಾಡುತ್ತಿರುವ ಸೋನು, ಮನರಂಜನೆಯ ವಿವಿಧ ಮಜಲುಗಳಲ್ಲಿ ಗುರುತಾಗುತ್ತಿದ್ದಾರೆ. ಆರ್‌ಜೆ ಆಗಿ ಕೆಲಸ ಮಾಡಿದ್ದ ಇವರಿಗೆ ಕೆಟ್ಟ ಪದಗಳನ್ನು ಉಪಯೋಗಿಸದೆ ಹಾಸ್ಯ ಪ್ರಸಂಗಗಳನ್ನು ಕಟ್ಟಬೇಕೆಂಬುದು ಮಹತ್ವಾಕಾಂಕ್ಷೆ.

ಹಿಂದಿನ ಹಾಸ್ಯೋತ್ಸವಗಳಲ್ಲಿ ಯುವಕ-ಯುವತಿಯರು ಹೆಚ್ಚಾಗಿ ಇರಲಿಲ್ಲ. ಸ್ಟ್ಯಾಂಡ್-ಅಪ್ ಕಾಮಿಡಿ ಅಂತಹ ಮನಸ್ಸುಗಳನ್ನು ಹೆಚ್ಚು ಹೊರಗೆ ತರುತ್ತಿದೆ ಎನ್ನುತ್ತಾರೆ ಸೋನು.

ಕನ್ನಡದ ಮಟ್ಟಿಗೆ ಸ್ಟ್ಯಾಂಡ್-ಅಪ್ ಕಾಮಿಡಿ ಎನ್ನುವುದು ಶೈಶವಾವಸ್ಥೆಯಲ್ಲಿದೆ ಎನ್ನುವ ಸೋನು, ಹೆಣ್ಣುಮಕ್ಕಳು ತಮ್ಮ ಅನುಭವಗಳನ್ನೇ ಮುಕ್ತವಾಗಿ ನಿರ್ಭಿಡೆಯಿಂದ ಹಾಸ್ಯವಾಗಿಸಿ ಹೇಳಬಲ್ಲ ಸಾಧ್ಯತೆಯ ಬಗೆಗೆ ಹೆಮ್ಮೆಪಡುತ್ತಾರೆ.

ಬೇರೆಡೆ ಇರುವವರೂ ಸ್ಥಳೀಯ ಕನ್ನಡವನ್ನು ಬಳಸುವ, ಅದರೊಟ್ಟಿಗೆ ತಮ್ಮನ್ನು ತಾವು ಗುರುತಿಸಿಕೊಳ್ಳುವ ಮೂಲಕ ಸ್ಟ್ಯಾಂಡ್-ಅಪ್ ಕಾಮಿಡಿಯನ್ನು ವಿಸ್ತರಿಸುತ್ತಿದ್ದಾರೆ ಎನ್ನುವುದು ಅವರ ವಿಶ್ಲೇಷಣೆ. ಪ್ರದರ್ಶನ ಕಲೆಗಾರರಾಗಿ ಸದಾ ಜೀವಂತಿಕೆ ಉಳಿಸಿಕೊಂಡು ಪ್ರಸಂಗಗಳನ್ನು ರೂಪಿಸಬೇಕಾದ ಈ ಪ್ರಕಾರವನ್ನು ಅವರು ಹಚ್ಚಿಕೊಂಡಿದ್ದಾರೆ. ❖



ಕುನಾಲ್ ನುಡಿ

'ನಮ್ಮ ದೇಶದಲ್ಲಿ ಜನ ಸದಾ ಕೋಪದಿಂದಲೇ ಇರುತ್ತಾರೆ. ಮನಮೋಹನ್ ಸಿಂಗ್ ಪ್ರಧಾನಿ ಆಗಿದ್ದಾಗ ಅವರ ಮೇಲೆ ಕೋಪ. ಈಗ ಪ್ರಧಾನಿ ಮೋದಿ ಇರುವಾಗಲೂ ಇನ್ಯಾವುದಕ್ಕೋ ಕೋಪ. ಇತಿಹಾಸವನ್ನಂತೂ ಒಬ್ಬೊಬ್ಬ ರಾಜಕಾರಣಿ ಇಲ್ಲಿ ತನ್ನ ಮೂಗಿನ ನೇರಕ್ಕೆ ಬಳಸುತ್ತಾ ಇರುತ್ತಾನೆ. ನಾನು ಅದಕ್ಕೇ ನಿರ್ದಿಷ್ಟವಾದ ಪಥವನ್ನು ಆಯ್ಕೆ ಮಾಡಿಕೊಂಡೆ. ನಾನು ಮೋದಿ ವಿರೋಧಿ ಎಂದೇ ಅನೇಕರು ಬಿಂಬಿಸಿದ್ದಾರೆ. ಆದರೆ, ನನಗಿರುವುದು ಮೂಲ ಪ್ರಶ್ನೆಗಳು. ಅವಕ್ಕೆ ಉತ್ತರ ಕೊಡದೆ ಸುಮ್ಮನೆ ಜಟಾಪಟಿಗೆ ಇಳಿಯುವ ಮಂದಿಗೆ ಎಂದೂ ಹೆದರಲಿಲ್ಲ. ಅದು ಆತ್ಮವಿಶ್ವಾಸ ಹೆಚ್ಚಿಸಿತು' ಎಂದು ಕುನಾಲ್ ಪ್ರತಿಕ್ರಿಯಿಸಿದ್ದರು.

ಚಂದಾದಾರರೆಷ್ಟು?

ಡ್ಯಾನಿಷ್ ಸೇಟ್ ಅವರ ಯುಟ್ಯೂಬ್ ಚಾನೆಲ್‌ಗೆ ಎರಡೂವರೆ ಲಕ್ಷಕ್ಕೂ ಹೆಚ್ಚು ಚಂದಾದಾರರಿದ್ದಾರೆ. ಇನ್ನು ತರ್ಲೆ ಬಾಕ್ಸ್ ಚಾನೆಲ್‌ಗೆ 4.89 ಲಕ್ಷ, ಲೋಲ್ ಬಾಗ್‌ಗೆ 1.7 ಲಕ್ಷ , ಒಂದು ಜೋಕ್ ಹೇಳ್ಲಾ ಚಾನೆಲ್‌ಗೆ ಸುಮಾರು 20 ಸಾವಿರ ಚಂದಾದಾರರಿದ್ದಾರೆ. ಕೆಲವು ವಿಡಿಯೊಗಳಿಗೆ ಬರುವ ವ್ಯೂಗಳ ಸಂಖ್ಯೆಗೂ ಚಂದಾದಾರರ ಸಂಖ್ಯೆಗೂ ಸಂಬಂಧ ಇರುವುದಿಲ್ಲ. ಚಂದಾದಾರರಾಗದೆಯೂ ಹೆಚ್ಚು ಜನ ಹಾಸ್ಯ ರಸಾಯನವನ್ನು ಉಣ್ಣುತ್ತಿದ್ದಾರೆನ್ನುವುದಕ್ಕೆ ಇದೇ ಸಾಕ್ಷಿ.

ಮುನ್ನೋಟ 22-05-2022 ರಿಂದ 28-05-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ಸಾರ್ವಜನಿಕ ಕಾರ್ಯಕ್ರಮದ ಜವಾಬ್ದಾರಿಯನ್ನು ಹೊತ್ತು ಮುನ್ನಡೆಸುವ ಇರಾದೆ ಇರುತ್ತದೆ. ದೀರ್ಘಕಾಲದಿಂದ ಮಾಡಬೇಕೆಂದು ಇಚ್ಛಿಸಿದ್ದ ಕೆಲಸ ಮಾಡಲು ಸೂಕ್ತ ಮಾರ್ಗದರ್ಶನ ದೊರೆಯುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಹಣಕಾಸಿನ ವಿಷಯದಲ್ಲಿ ಸಂಗಾತಿಯೊಡನೆ ಸಾಕಷ್ಟು ಕಾವೇರಿದ ಮಾತುಗಳು ಆಗಬಹುದು.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಾಣಬಹುದು. ಮಾತಿನ ಮೇಲೆ ಸ್ವಲ್ಪ ಹಿಡಿತವಿರಲಿ. ರಾಸಾಯನಿಕ ವಸ್ತುಗಳ ವ್ಯಾಪಾರಸ್ಥರಿಗೆ ಸ್ವಲ್ಪಮಟ್ಟಿನ ಹಿನ್ನಡೆ ಇರಲಿದೆ. ಆರ್ಥಿಕ ಸ್ಥಿತಿಯು ನಿಮ್ಮ ನಿರೀಕ್ಷೆಯ ಮಟ್ಟಕ್ಕೆ ಖಂಡಿತಾ ಇರುತ್ತದೆ. ಗೃಹ ನಿರ್ಮಾಣದ ಕೆಲಸಗಳು ಶೀಘ್ರಗತಿಯಲ್ಲಿ ಸಾಗುತ್ತವೆ. ವೃತ್ತಿ ನೈಪುಣ್ಯ ಇರುವ ಕೆಲಸಗಾರರಿಗೆ ವಿಶೇಷ ಸ್ಥಾನಮಾನ ದೊರೆಯುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ನಿಮ್ಮ ಕೆಲವೊಂದು ಶತ್ರುಗಳು ತಮ್ಮ ತಪ್ಪಿನ ಅರಿವಾಗಿ ಮಿತ್ರರಾಗಿ ಬದಲಾಗುವರು. ಬಂಧುಗಳು ಮತ್ತು ಆಪ್ತರಿಂದ ಸ್ವಲ್ಪ ಕಿರಿಕಿರಿಯನ್ನು ಎದುರಿಸಬೇಕಾದೀತು. ನಿಮ್ಮ ಕೆಲವು ಯೋಜನೆಗಳಿಂದ ಇತರರಿಗೆ ಹೆಚ್ಚಿನ ಅನುಕೂಲ ಒದಗಿಬಂದು ನೀವು ಎಲ್ಲರ ಗೌರವಕ್ಕೆ ಪಾತ್ರರಾಗುವಿರಿ. ಸರ್ಕಾರಿ ಕೆಲಸದಲ್ಲಿ ಇರುವವರಿಗೆ ಸ್ಥಳ ಬದಲಾವಣೆಯ ಸಾಧ್ಯತೆ ಇದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ದೂರ ಪ್ರಯಾಣ ಹೋಗಲು ಸಾಕಷ್ಟು ತಯಾರಿ ನಡೆಸುವಿರಿ. ಬಹಳ ದಿನಗಳಿಂದ ಕಾಡುತ್ತಿದ್ದ ಕೆಲವು ತೊಂದರೆ ತಾಪತ್ರಯಗಳು ನಿವಾರಣೆಯಾಗುವ ಲಕ್ಷಣಗಳಿವೆ. ವಿದ್ಯಾರ್ಥಿಗಳಿಗೆ ತಮ್ಮ ಅಧ್ಯಯನದಲ್ಲಿ ಸಾಕಷ್ಟು ಪ್ರಗತಿ ಇರುತ್ತದೆ. ಹಟ ಬಿಡದೆ ನಿಮ್ಮ ಯೋಜನೆಗಳನ್ನು ಮುಂದುವರೆಸಿದಲ್ಲಿ ಅದಕ್ಕೆ ತಕ್ಕ ಪ್ರತಿಫಲ ಇದ್ದೇ ಇರುತ್ತದೆ. ಕೃಷಿಕರ ಫಸಲಿಗೆ ಉತ್ತಮ ಬೆಲೆ ಸಿಗುವ ಎಲ್ಲ ಲಕ್ಷಣಗಳಿವೆ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ಅನಾರೋಗ್ಯದಿಂದ ಬಳಲುತ್ತಿರುವವರ ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು. ವ್ಯವಹಾರದಲ್ಲಿ ಅನಾಸಕ್ತಿ ತೋರಿದಲ್ಲಿ ನಷ್ಟ ಅನುಭವಿಸುವ ಸಾಧ್ಯತೆ ಇದೆ. ನಿಮ್ಮ ಒರಟುತನದಿಂದಾಗಿ ಕೆಲವರು ನಿಮ್ಮನ್ನು ತಿರಸ್ಕರಿಸಬಹುದು. ಸಂಗಾತಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸಿರಿ. ನಿಮ್ಮ ಶ್ರಮಕ್ಕೆ ತಕ್ಕಂತೆ ಆದಾಯ ಇರುತ್ತದೆ. ಗುತ್ತಿಗೆ ಕೆಲಸ ಮಾಡುತ್ತಿರುವವರಿಗೆ ಹೊಸ ಗುತ್ತಿಗೆಗಳು ದೊರೆಯುವ ಸಾಧ್ಯತೆ ಇದೆ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ಬಹಳ ದಿನಗಳ ನಂತರ ಬಾಂಧವರೊಡನೆ ಸಂಬಂಧವನ್ನು ವೃದ್ಧಿಸಿಕೊಳ್ಳಲು ಪ್ರಯತ್ನ ಪಡುವಿರಿ. ವಿವಾಹ ಆಕಾಂಕ್ಷಿಗಳಿಗೆ ಸಂಬಂಧ ಒದಗಿಬರುವ ಸಾಧ್ಯತೆ ಇದೆ. ಒಳಾಂಗಣ ವಿನ್ಯಾಸವನ್ನು ಮಾಡುವವರಿಗೆ ಹೆಚ್ಚಿನ ಕೆಲಸ ದೊರೆತು ಆದಾಯ ಹೆಚ್ಚುತ್ತದೆ. ಉದ್ಯಮ ಕ್ಷೇತ್ರವನ್ನು ವಿಸ್ತರಿಸಬೇಕೆಂದು ಇರುವವರಿಗೆ ಬೇಕಾದ ಅನುಕೂಲಗಳು ದೊರೆಯುತ್ತದೆ. ಧನಾದಾಯವು ಸಾಮಾನ್ಯವಾಗಿರುತ್ತದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**

ನಿಮ್ಮ ಉದ್ದೇಶ ಸಾಧನೆಗಾಗಿ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಿ ಎಲ್ಲರ ನಿಷ್ಠೂರಕ್ಕೆ ಒಳಗಾಗುವಿರಿ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ವಾಹನ ಮಾರಾಟಗಾರರಿಗೆ ವ್ಯಾಪಾರ ಹೆಚ್ಚುತ್ತದೆ. ಷೇರು ವ್ಯವಹಾರಗಳಲ್ಲಿ ಹೆಚ್ಚಿನ ನಷ್ಟ ಸಂಭವಿಸುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ ಇರುತ್ತದೆ. ಸರ್ಕಾರಿ ಮಟ್ಟದ ಕೆಲಸಗಳಲ್ಲಿ ಹಿನ್ನಡೆ ಆಗಲಿದೆ.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**

ಹಿರಿಯರೊಡನೆ ವಾದ-ವಿವಾದಗಳು ಏರ್ಪಡುವ ಸಂಭವವಿದೆ, ಎಚ್ಚರವಹಿಸಿರಿ. ವಸ್ತ್ರ ವಿನ್ಯಾಸ ಮಾಡುವವರಿಗೆ ಹೆಚ್ಚಿನ ಮಾನ್ಯತೆ ದೊರೆತು ಆದಾಯ ಹೆಚ್ಚುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಮನೆಯವರ ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸವನ್ನು ಕಾಣಬಹುದು.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**

ಹೊಸ ವಾಹನ ಖರೀದಿಗೆ ಮುಂದಾಗುವ ಸಾಧ್ಯತೆ ಇದೆ. ಮನೆಯವರ ಒತ್ತಾಯಕ್ಕೆ ಮಣಿದು ದೇವಾಲಯ ದರ್ಶನಕ್ಕಾಗಿ ಹೊರಡುವಿರಿ. ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಮಾಡಿದ ಶ್ರಮ ಉತ್ತಮ ಫಲವನ್ನು ಕೊಡುತ್ತದೆ. ರೇಷ್ಮೆ ನೂಲು ತೆಗೆಯುವವರಿಗೆ ಉತ್ತಮ ಮಾರುಕಟ್ಟೆ ಒದಗಿಬರುತ್ತದೆ. ಕೆಲವೊಂದು ಔಷಧಿ ತಯಾರಕರಿಗೆ ಬೇಡಿಕೆ ಹೆಚ್ಚಾಗಿ ಆದಾಯ ಹೆಚ್ಚುತ್ತದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ಸರ್ಕಾರಿ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ತುರ್ತಿನ ಕೆಲಸಗಳು ಎದುರಾಗುವ ಸಾಧ್ಯತೆ ಇದೆ. ಜಾಹಿರಾತುಗಳ ಮೂಲಕ ಸರಕುಗಳ ವಹಿವಾಟನ್ನು ಹೆಚ್ಚಿಸಿಕೊಳ್ಳುವಿರಿ. ವಿದೇಶಿ ಉತ್ಪನ್ನಗಳ ಮಾರಾಟದಿಂದ ಹೆಚ್ಚು ಹಣ ಗಳಿಸುವಿರಿ. ಎಲ್ಲರೊಡನೆ ಹೊಂದಾಣಿಕೆ ಸಾಧಿಸಿಯೇ ಕಾರ್ಯ ಸಾಧನೆ ಮಾಡುವಿರಿ. ಪ್ರಚಾರ ವ್ಯವಹಾರಗಳಲ್ಲಿ ಇರುವವರಿಗೆ ವ್ಯವಹಾರದಲ್ಲಿ ಸಾಕಷ್ಟು ಪ್ರಗತಿ ಇರುತ್ತದೆ.


ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ಯುವಕರು ಮೋಜು-ಮಸ್ತಿಗಾಗಿ ಹೆಚ್ಚು ಹಣ ಖರ್ಚು ಮಾಡುವ ಲಕ್ಷಣಗಳಿವೆ. ಇದರಿಂದಾಗಿ ಮನೆಯಲ್ಲಿ ಮನಸ್ತಾಪ ಮೂಡಬಹುದು. ಕೆಲವು ರಾಜಕಾರಣಿಗಳಿಗೆ ಉನ್ನತ ಹುದ್ದೆ ಒದಗಿಬರುತ್ತದೆ. ಆಮದು ಮತ್ತು ರಫ್ತು ಮಾಡುವವರಿಗೆ ಉತ್ತಮ ವ್ಯವಹಾರ ನಡೆದು ಆದಾಯ ಹೆಚ್ಚುತ್ತದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ಅತ್ಯಂತ ಉತ್ಸಾಹದಿಂದ ಸಾಂಸ್ಕೃತಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುವಿರಿ. ನೃತ್ಯಪಟುಗಳಿಗೆ ಉತ್ತಮ ವೇದಿಕೆ ದೊರೆತು ಪ್ರದರ್ಶನ ಮಾಡುವ ಅವಕಾಶವಿರುತ್ತದೆ. ಮಕ್ಕಳಿಗಾಗಿ ಹೆಚ್ಚು ಹಣ ಖರ್ಚು ಮಾಡಲೇಬೇಕಾದ ಅನಿವಾರ್ಯ ಇರುತ್ತದೆ. ಪ್ರಭಾವಿ ವ್ಯಕ್ತಿಗಳ ಸಹವಾಸದಿಂದಾಗಿ ಹಮ್ಮು ಬೆಳೆಯುತ್ತದೆ. ಕ್ರೀಡಾಪಟುಗಳಿಗೆ ಉತ್ತಮ ಭವಿಷ್ಯವಿದೆ ಮತ್ತು ಪುರಸ್ಕಾರಗಳು ದೊರೆಯುವ ಸಾಧ್ಯತೆ ಇದೆ.

ಪದಬಂಧ 2739



ಮೇಲಿನಿಂದ ಕೆಳಕ್ಕೆ

1. ಒಳ್ಳೆ ಪರಿಮಳ 3
2. ಮೂರಳತೆಯ ಆನೆ 2
3. ವಿಜಯನಗರದ ಅರಸು ವಂಶ 2
4. ಸಪ್ತಸ್ವರಗಳಲ್ಲಿ ಬೇಡವೆನ್ನುವ ಕೊನೆಯದ್ದು 3
6. ಪತ್ರದ ಮಧ್ಯೆ ವಿಕಾರ ನುಸುಳಿ ಪಾವನಗೊಳಿಸಿದೆ 3
8. ದಿನ ಬೆಳಗಾದರೆ ಪೂರ್ವದಲ್ಲಿ ಮೂಡುವ ಮಾಲಾಧರ ಕೆಳಗಿನಿಂದ ಮೇಲೆ 3
9. ಮುಗ್ಧ, ಮೃದುವಾದ ಕೋಮಲ ಹಿಂದಿ ಹೆಣ್ಣು 3
10. ವರ್ಷಾಂತ್ಯದ ತರಗತಿಗಳ ನಂತರ ಮಕ್ಕಳಿಗಿಂತ ಪೋಷಕರಿಗೆ ಭಯ ಹುಟ್ಟಿಸುವ ದಿವಸ 5
11. ಬೆಂಗಳೂರಿನ ಬಳಿಯಿರುವ ಬಂಗಾರದಂತಹ ಪಟ್ಟಣ 5
12. ವನವನ್ನು ಒಳಗೊಂಡ ಭೂಮಿ 3
14. ಕವನದ ಹಾಗೆ ಕಥೆ ಹೇಳುವ ಕ್ರಮ 3
16. ಮಣಿಯಂತೆ ಹೊಳೆವ ಗಂಡನ ಸತಿ 3
18. ಕೊಡಲೇಬೇಕಾದ ಶುಲ್ಕ 3
20. ತಬಲಾ, ಮೃದಂಗ ಇತ್ಯಾದಿಗಳ ನುಡಿಸುವಿಕೆ 3
21. ಮಂಗಳ ಕಾರ್ಯಕ್ಕೆ ಜಲ ತುಂಬಿದ ಕುಂಭ 3
23. ನಡೆಯಲು ಒಳ್ಳೆಯ ದಾರಿ 3
24. ಯಾರಿಗೂ ಕಾಯದ ಸಮಯ 2
25. ದೇವರಾಣೆಗೂ ಇದು ಸತ್ಯ 2

ಎಡದಿಂದ ಬಲಕ್ಕೆ

1. ಕಷ್ಟವೆಲ್ಲ ಕಳೆದ ಮೇಲೆ ಆರಾಮಾದ ಆಸನದ ಅದೃಷ್ಟ 4
3. ರಾಷ್ಟ್ರ ರಾಜ್ಯಗಳ ಆಡಳಿತ ಕೇಂದ್ರ 4
5. ಸೋಲು ಗೆಲುವುಗಳ ಸುಂದರ ಸಂಧಿ 5
7. ದಕಾರದ ಮಹಾಪ್ರಾಣ ಪಡೆದ ವ್ಯಂಜನ 3
9. ಹರಿಯಿಂದ ಹರಿದು ಚಿಂದಿಯಾದ 3
10. ಬಹುಮಂದಿಯ ಕೈ ಸೇರುವ ಓಲೆ 3
12. ಇಡೀ ಭೂಮಿಯ ಒಡತಿ ಈ ಕನ್ನಡ ತಾಯಿ 5
13. ರಾಜಕೀಯದಲ್ಲಿ ಆಗಾಗ್ಗೆ ಉದಯಿಸುವ ಹೊಸ ಮುಖಂಡ 5
15. ಮಹಾಪಟ್ಟಣದ ಸಾಧರಣ ರಸ್ತೆ 5
17. ಮತ್ತೆ ಮೇಲೆದ್ದು ಬರುವುದು 5
19. ಸಪ್ತಾಹಕ್ಕೆ ಸೇರದ್ದು, ಮಂಚಕ್ಕೆ ಕಟ್ಟುವ ಪಟ್ಟಿ 3
21. ದಯೆತೋರಿ ರುಣಿಯಾಗಿಸುವವ 3
22. ಮುಸು ಮುಸು ಕೋಪ 3
24. ಬಯಕೆಯ ಕಣ್ಣುಳ್ಳ ಮನೋಹರ ಹೆಣ್ಣು 5
26. ಹಗ್ಗ ಜಗ್ಗಾಟದಲ್ಲಿ ಎರಡೂ ಕಡೆ ಇರುವ ಸರಿ ಸಮಾನ ಶಕ್ತಿ 4
27. ಪುರಿಯಲ್ಲಿ ನಿಂತ ವಿಶ್ವದೊಡೆಯ 4

ಪದಬಂಧ ಉತ್ತರ -2738

ಮೇಲಿಂದ ಕೆಳಕ್ಕೆ

1.ಕವನ 2.ನೆರಿಗೆ 3.ಪರಿಹಾ 4.ಮರಳಿ 7.ದಿಬ್ಬಣ 9.ಸುವರ್ಣ 10.ನಾವಿಕ 11.ಪ್ಪರಹ 12.ವಸುಧಾ 13.ರಸ್ಪೂರಿ 16.ಗ್ರಹಣ 18.ರಾಕ್ಷಸಿ 19.ಜನನಿ 20.ತಿರಂಗ 21.ಸನಿಹ 22.ತಿಮಿರ

ಎಡದಿಂದ ಬಲಕ್ಕೆ


1. ಕವಿಕಲ್ಪನೆ 3.ಪಟ್ಟಾಭಿರಾಮ 5.ರಿಪೇರಿ 6.ನವಬಿದಿಗೆ 8.ಹಾಸುಗಂಬಳಿ 10.ನಾರಾಯಣಪ್ಪ 12.ವರ್ಣಸಂಕರ 14.ರಮಿಸು 15.ಕಥಾಸಂಗ್ರಹ 17.ಧಾರಾನಗರಿ 19.ಜನಗಣತಿ 21.ಹಸಿರುಕ್ರಾಂತಿ 24.ನಿರುಪಯೋಗ 25.ಸತ್ಯಸುಂದರ

ಮೈಸೂರು ಹುಲಿ ಮತ್ತು ಹುಲಿಮನೆ ಶಾಸ್ತ್ರಿ


ನಾರಾಯಣ ಹೆಗಡೆ

ನಾನು ಈಗ ಹೇಳ/ಬರೆಯಹೊರಟಿರುವುದು ಕತೆಯಲ್ಲ; ಕತೆಯಾಗಿ ಬಿಡಬಹುದಾದ ಘಟನೆಗಳ ಒಂದು ಸರಣಿಯ ಕುರಿತು. ಐವತ್ತು ವರ್ಷಗಳಿಂದ ನಾನು ಅಮೆರಿಕದಲ್ಲಿ ವಾಸಮಾಡುತ್ತಿದ್ದೇನೆ. ಈ ದೇಶಕ್ಕೆ ಹೇಗೆ ಬಂದೆ, ಯಾಕೆ ಬಂದೆ ಎಂಬೆಲ್ಲ ವಿವರಗಳು ಈ ಕಥನಕ್ಕೆ ಅಪ್ರಸ್ತುತ.

ನಾನು ನನ್ನ ಕುಟುಂಬ ವಾಸವಾಗಿರುವ ಮನೆಯ ಬೀದಿಯ ಹೆಸರು ಯಾರ್ಕ್‌ಟೌನ್ ರಸ್ತೆ. ಈ ರಸ್ತೆ ದಾಟಿದರೆ ವಾಷಿಂಗ್ಟನ್ ಅವೆನ್ಯೂ. ಎಡಕ್ಕೆ ತಿರುಗಿದರೆ ಕಾರ್ನ್‌ವಾಲೀಸ್ ರಸ್ತೆ. ಇದುವರೆಗೂ ಗಮನಿಸದ ಈ ಅಮುಖ್ಯ ವಿಷಯದತ್ತ ಚಿತ್ತಹರಿದಿದ್ದು ಇತ್ತೀಚೆಗೆ ವಾಕಿಂಗ್ ಮಾಡುವಾಗ. ಮುನ್ನೂರು ವರ್ಷಗಳ ಹಿಂದೆ ಅಮೆರಿಕ, ಬ್ರಿಟಿಷ್ ಅಧೀನದಿಂದ ಸ್ವತಂತ್ರರಾಗಲು ತೊಡಗಿದ ಯುದ್ಧಗಳಲ್ಲಿ ಮುಖ್ಯಪಾತ್ರವಹಿಸಿದ್ದ ವ್ಯಕ್ತಿಗಳ ಅಥವಾ ಸ್ಥಳಗಳ ಹೆಸರನ್ನೇ ಬೀದಿಗಳಿಗೆ ಇಡಲಾಗಿದೆ. ಅಮೆರಿಕದ ಸಂಕ್ಷಿಪ್ತ ಇತಿಹಾಸದಲ್ಲಿ ಒಂದು ಅತ್ಯಂತ ಮಹತ್ವಪೂರ್ಣ ಸಂದರ್ಭವೆಂದರೆ, 1781ರಲ್ಲಿ ಯಾರ್ಕ್‌ಟೌನ್ ಕಾಳಗದಲ್ಲಿ ಜನರಲ್ ಜಾರ್ಜ್ ವಾಷಿಂಗ್ಟನ್, ಜನರಲ್ ಚಾರ್ಲ್ಸ್ ಕಾರ್ನ್‌ವಾಲೀಸ್‌ನನ್ನು ಸೋಲಿಸಿ ಅಮೆರಿಕದ ಮೇಲೆ ಬ್ರಿಟಿಷ್ ಆಡಳಿತವನ್ನು ಕೊನೆಗೊಳಿಸಿದ್ದು.


ಕಲೆ: ಗುರು ನಾವಳ್ಳಿ

ಆ ಹೆಸರನ್ನು ನಾನು ಆರೇಳು ವರ್ಷದ ಹುಡುಗನಾಗಿದ್ದಾಗ ಸಿದ್ದಾಪುರದಲ್ಲಿ ಕೇಳಿದ್ದೆ. ಕೇಳಿದ್ದೆ ಎನ್ನುವುದಕ್ಕಿಂತ, ಆ ಹೆಸರಿನ ಪಾತ್ರವೊಂದನ್ನು ನಾಟಕವೊಂದರಲ್ಲಿ ಕಂಡಿದ್ದು ನನ್ನ ಸ್ಮೃತಿಯಲ್ಲಿ ಉಳಿದಿದೆ. ಅದು, 1947 ಅಥವಾ 1948ನೇ ಇಸವಿಯಾಗಿರಬಹುದು. ನಾನು ಹುಟ್ಟಿದ ಹಳ್ಳಿ ದೊಡ್ಡಮನೆಯನ್ನು ಬಿಟ್ಟು ನನ್ನ ಅಪ್ಪ ಕುಟುಂಬವನ್ನು ಸಿದ್ದಾಪುರ ಪೇಟೆಗೆ ತಂದಿದ್ದ. ಮುಂದೆ ಅಲ್ಲಿಯೇ ಮನೆ ಕಟ್ಟುವ ಉದ್ದೇಶದಿಂದ ಊರಿನ ಮಧ್ಯದಲ್ಲಿ, ತಾಲ್ಲೂಕು ಕಚೇರಿಯ ಎದುರಿಗೆ ಇದ್ದ ಖಾಲಿ ನಿವೇಶನವನ್ನು ಖರೀದಿಸಿದ್ದ. ಅದೇ ವೇಳೆಗೆ, ಹುಲಿಮನೆ ಸೀತಾರಾಮ ಶಾಸ್ತ್ರಿಯವರ 'ಜಯಕರ್ನಾಟಕ ನಾಟಕ ಸಂಘ' ಸಿದ್ದಾಪುರದಲ್ಲಿ ಸ್ವಲ್ಪ ಕಾಲ ನಾಟಕಗಳನ್ನು ಆಡಿತೋರಿಸುವ ಸಲುವಾಗಿ ಜಾಗ ಹುಡುಕುತ್ತಿರುವಾಗ, ಅವರಿಗೆ ಮೊದಲಿನಿಂದ ಪರಿಚಯವಿದ್ದ ನನ್ನ ಅಪ್ಪ ತನ್ನ ನಿವೇಶನವನ್ನು ಬಳಸಿಕೊಳ್ಳಲು ಅನುಮತಿಯಿತ್ತ.


ಟಿಪ್ಪುಸುಲ್ತಾನ್ ಪಾತ್ರಧಾರಿಯಾಗಿ ಹುಲಿಮನೆ

ಪ್ರಯೋಗಶೀಲತೆ ಮತ್ತು ಸ್ವಯಂಪ್ರತಿಭೆಯಿಂದ ಪ್ರಸಿದ್ಧಿ ಪಡೆದಿದ್ದ ಶಾಸ್ತ್ರಿಯವರು, ದೊಡ್ಡ ಊರುಗಳಲ್ಲಿ ತಮ್ಮ ಕಂಪನಿಯ ನಾಟಕಗಳನ್ನಾಡಿಸಿ ಜಯಭೇರಿ ಹೊಡೆದವರು. ಕೆಲವೇ ದಿನಗಳಲ್ಲಿ ಜಯಕರ್ನಾಟಕ ನಾಟಕ ಸಂಘ, ಸಿದ್ದಾಪುರ ಎಂದು ಹೆಸರನ್ನು ಹೊತ್ತುಕೊಂಡ ಆಗಿನ ಕಾಲಕ್ಕೆ ಭವ್ಯವಾದ ತಂಬು ಸಿದ್ಧವಾಗಿ ನಿಂತಿತು. ಇದುವರೆಗೂ ನೋಡಿರದ ಹೊಸ ಮಾದರಿಯ ಸೀನರಿ ಹಾಗೂ ಸೆಟ್‌ಗಳನ್ನು ಹೊಂದಿದ್ದಲ್ಲದೆ ರಂಗಮಂಚವನ್ನು ಬೆಳಗಿಸಲು ಝಗಮಗಿಸುವ ವಿದ್ಯುದ್ದೀಪಗಳು ಬೇರೆ. ತಂಬಿನ ಹಿಂಭಾಗದಲ್ಲಿ ಹೊರಗೆ ಜನರೇಟರ್. ವಿದ್ಯುದ್ದೀಪವನ್ನೇ ಕಂಡಿರದ ಸಿದ್ದಾಪುರದ ಹಾಗೂ ಸುತ್ತಮುತ್ತಲಿನ ಜನರಿಗೆ ಮಾಯಾನಗರಿಯೊಂದನ್ನು ನೋಡಿದ ಅನುಭವ.

ನನಗೆ ಯಾವಾಗ ಎಂದರೆ ಆವಾಗ, ಎಷ್ಟು ಬಾರಿಯಾದರೂ ನಾಟಕಗಳನ್ನು ನೋಡಲು ಕೊಟ್ಟಿದ್ದ ಅವಕಾಶವನ್ನು ಸಂಪೂರ್ಣವಾಗಿ ಬಳಸಿಕೊಂಡೆ. ಕಂಪನಿಯ ಐದಾರು ನಾಟಕಗಳಲ್ಲಿ, ಪನ್ನಾದಾಸಿ ಅಥವಾ ವೀರ ಕುಣಾಲ್, ವರದಕ್ಷಿಣೆ, ಎಚ್ಚಮನಾಯಕ ಹಾಗೂ ಮೈಸೂರುಹುಲಿ ಟಿಪ್ಪುಸುಲ್ತಾನ್ ನನ್ನ ನೆನಪಿನಲ್ಲಿ ಉಳಿದಿವೆ. ಸ್ವಲ್ಪ ಹೆಚ್ಚು ನೆನಪಿರುವ ನಾಟಕ ಟಿಪ್ಪುಸುಲ್ತಾನ್. ಆ ನಾಟಕವನ್ನು ನಾನು ಐದಾರು ಬಾರಿ ನೋಡಿರುವುದರಿಂದಲೋ, ಮುಂದೆ ಅದೇ ನಾಟಕದಲ್ಲಿ ಪಾತ್ರ ವಹಿಸಿದ್ದರಿಂದಲೋ ಅದರ ವಿವರಗಳನ್ನೆಲ್ಲ ಮರೆತಿಲ್ಲ.

> 'ಶಾಸ್ತ್ರಿಗಳು ನಿರೂಪಿಸಿದ ಟಿಪ್ಪು ಸುಲ್ತಾನ ಪಾತ್ರ ಇನ್ನೂ ಢಾಳಾಗಿ ನೆನಪಿಗೆ ಬರುತ್ತದೆ. ಆ ಗಾಂಭೀರ್ಯ, ಆ ದುರಂತ ನಾಯಕನ ಠೀವಿ. ನಾನು 1997ರಲ್ಲಿ ಟಿಪ್ಪು ಬಗ್ಗೆ ಸಂಶೋಧನೆ ಮಾಡಿ 'ಟಿಪ್ಪೂ ಸುಲ್ತಾನ ಕಂಡ ಕನಸು' ಎಂಬ ನಾಟಕ ಬರೆದಿದ್ದೆ. ನಾಟಕ ಬರೆಯುವಾಗ ಕಂಡ ಟಿಪ್ಪು, ಇತಿಹಾಸದ ಸಾಕ್ಷ್ಯಾಧಾರಗಳಿಂದ ನಾನು ಕಲ್ಪಿಸಿದ ಟಿಪ್ಪು ಆಗಿರಲಿಲ್ಲ. ಅದು ಹುಲಿಮನೆ ಸೀತಾರಾಮ ಶಾಸ್ತ್ರಿಗಳು ರಂಗಭೂಮಿಯ ಮೇಲೆ ಸೃಷ್ಟಿಸಿದ ಟಿಪ್ಪುವಿನ ಪ್ರತಿಬಿಂಬವಾಗಿತ್ತು. ಒಂಬತ್ತು ವರ್ಷದ ಬಾಲಕನ ಮೇಲೆ ಶಾಸ್ತ್ರಿಗಳ ನಾಟಕ ಎಂಥ ಗಾಢ ಪ್ರಭಾವ ಬೀರಿತ್ತು ಎಂಬುವುದಕ್ಕೆ ಇದು ಸಾಕ್ಷಿಯಾಗಿದೆ' ಎಂದೊಮ್ಮೆ ಗಿರೀಶ ಕಾರ್ನಾಡ ನೆನಪಿಸಿಕೊಂಡಿದ್ದರು.

ಶಾಸ್ತ್ರಿಯವರೇ ಬರೆದಿದ್ದ ಆ ನಾಟಕವನ್ನು ಅವರೇ ಅಭಿನಯಿಸಿ ನಾಡಿನಾದ್ಯಂತ ಪ್ರಸಿದ್ಧಿಗೆ ತಂದ ವಿಷಯ ನನಗೆ ತಿಳಿದದ್ದು ವರ್ಷಗಳ ನಂತರ. ಆದರೆ, ಶಾಸ್ತ್ರಿಯವರು ತಮ್ಮ ಅಭಿನಯದಲ್ಲಿ ಕಾಣಿಸಿದ ಟಿಪ್ಪುಸುಲ್ತಾನನ ದೇಶಭಕ್ತಿ, ದೈವಭಕ್ತಿ ('ರಂಗನಾಥಾ' ಎಂದು ಮತ್ತೆ ಮತ್ತೆ ಅವನು ಸ್ಮರಿಸುತ್ತಿದ್ದುದು), ಅವನು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಕುಹಕತನವನ್ನು ಹಳಿಯುತ್ತಿದ್ದ ರೀತಿ ಇವೆಲ್ಲ ನನಗೆ ಅಚ್ಚಳಿಯದ ನೆನಪು. ಅಲ್ಲದೆ, ಶಾಂತಕುಮಾರ್ ಎಂಬ ಉತ್ತಮ ಹಾಸ್ಯನಟ ಅಭಿನಯಿಸುತ್ತಿದ್ದ ಮೀರ್ ಸಾದಿಕ್ ಪಾತ್ರ, ಅವನು ತನ್ನ ಒಂದು ಕಿವಿಯನ್ನು ಕುಣಿಸುತ್ತ 'ಕ್ಯೂ ಶರ್ಮಾತೀ ಹೋ' ಎಂಬ ಹಾಡನ್ನು ಗೆಳತಿಯೊಂದಿಗೆ ಹಾಡುವ ರೀತಿ, ಮರೆಯುವಂತಿಲ್ಲ.

ಟಿಪ್ಪುಸುಲ್ತಾನ್ ನಾಟಕದಲ್ಲಿ ಪ್ರೇಕ್ಷಕರಿಗೆ ಮನರಂಜನೆಯನ್ನು ಒದಗಿಸಿದ ಅನೇಕ ಸಂದರ್ಭಗಳಿದ್ದವು: ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ ಕಂಟಕಪ್ರಾಯನಾಗಿದ್ದ ಟಿಪ್ಪುವನ್ನು ಸೋಲಿಸಲು ಬ್ರಿಟಿಷ್ ಪ್ರತಿನಿಧಿಯಾಗಿದ್ದ ಕಾರ್ನ್‌ವಾಲೀಸ್, ಟಿಪ್ಪುವಿನ ಕೈಕೆಳಗೆ ಕೆಲಸಮಾಡುತ್ತಿದ್ದ ಮೀರ್ ಸಾದಿಕ್‌ನೊಂದಿಗೆ ಪಿತೂರಿ ನಡೆಸಿದ್ದ. ಅವರಿಬ್ಬರು ತಮ್ಮತಮ್ಮೊಳಗೆ ಮಾತಾಡುತ್ತಿದ್ದರು, ಕನ್ನಡದಲ್ಲಿ. ಟಿಪ್ಪುವನ್ನು ಸೋಲಿಸುವ ಸಲುವಾಗಿ, ಅವನ ಸೈನ್ಯದಲ್ಲಿರುವ ತೋಪುಗಳಲ್ಲಿ ಬಳಸಲಿರುವ ಮದ್ದಿನಲ್ಲಿ ಸಗಣಿಯನ್ನು ಬೆರೆಸಬೇಕೆಂದು ಮೀರ್ ಸಾದಿಕ್‌ನಿಗೆ ಕಾರ್ನ್‌ವಾಲೀಸ್ ಹೇಳುತ್ತಿದ್ದ. ಅದೂ ತನ್ನ ಹರಕುಮುರುಕು ಕನ್ನಡದಲ್ಲಿ. ಅವನು ಹೇಳುತ್ತಿದ್ದುದು 'ಸಗಣಿ', ಆದರೆ ಮೀರ್ ಸಾದಿಕ್‌ನಿಗೆ ಕೇಳಿಸುತ್ತಿರುವುದು 'ಶಕುನಿ'. ಇವರಿಬ್ಬರ ಈ ಗೊಂದಲ ಪ್ರೇಕ್ಷಕರನ್ನೆಲ್ಲ ಬಿದ್ದುಬಿದ್ದು ನಗುವಂತೆ ಮಾಡುತ್ತಿತ್ತು.

ಅಮೆರಿಕದಲ್ಲಿ ನನ್ನ ನೆರೆಯ ಬೀದಿಯ ಹೆಸರಿನ ಮೂಲಕ ನನಗೆ ಬಾಲ್ಯದಲ್ಲಿ ನೋಡಿನಲಿದ ಟಿಪ್ಪು ನಾಟಕ ಮತ್ತೆಮತ್ತೆ ಜ್ಞಾಪಕಕ್ಕೆ ಬರುವಂತಾಗಿದೆ. ಆದರೆ, ಯಾರ್ಕ್‌ಟೌನ್ ಯುದ್ಧದಲ್ಲಿ ಸೋಲನ್ನು ಸಹಿಸಿ ಅಮೆರಿಕಕ್ಕೆ ಸ್ವಾತಂತ್ರ್ಯ ಬರುವಂತೆ ಮಾಡಿದ ಕಾರ್ನ್‌ವಾಲೀಸ್ ಎಲ್ಲಿ, ಮುಂದೆ ಅದೇ ಕಾರ್ನ್‌ವಾಲೀಸ್, ಟಿಪ್ಪುವಿನ ತೋಪುಗಳಲ್ಲಿ 'ಶಕುನಿ' ಬೆರೆಸಿ ಟಿಪ್ಪು ಸುಲ್ತಾನನ್ನು ಸೋಲಿಸಿ ಮುಂದೆ ಇಂಡಿಯಾದ ಗವರ್ನರ್ ಜನರಲ್ ಆಗಿದ್ದು, ಮಾರ್ಕ್ವಿಸ್ ಎಂಬ ಬಿರುದು ಪಡೆದಿದ್ದೆಲ್ಲಿ? ಅದು ಬೇರೆ ವಿಷಯ.

ಸೀತಾರಾಮಶಾಸ್ತ್ರಿ ತಮ್ಮ ಪಾತ್ರಾಭಿವ್ಯಕ್ತಿಯ ಮೂಲಕ ಪ್ರಸಿದ್ಧಿಗೆ ತಂದ ಮೈಸೂರು ಹುಲಿ ಟಿಪ್ಪು ಸುಲ್ತಾನ ಇತ್ತೀಚಿನ ದಿನಗಳಲ್ಲಿ ಐತಿಹಾಸಿಕ ವಿವಾದದ ವ್ಯಕ್ತಿ. ಅವನೊಬ್ಬ ಹಿಂದೂದ್ವೇಷಿಯಾದ ಮುಸಲ್ಮಾನ ಮತಾಂಧ, ಅವನೊಬ್ಬ ಧೀರ ಸಾಹಸಿ ಎಂದು ಇತಿಹಾಸ ಗುರುತಿಸುವುದನ್ನು ತಡೆಯಬೇಕು ಎಂದು ವಾದಿಸುವವರು ಒಂದು ಪಕ್ಷ, ವ್ಯಕ್ತಿತ್ವದಲ್ಲಿ ದೋಷವುಳ್ಳವನಾದರೂ ಬ್ರಿಟಿಷರ ದಬ್ಬಾಳಿಕೆಯನ್ನು ವಿರೋಧಿಸಿ ನಿಂತ, ತನ್ನ ಆಡಳಿತದಲ್ಲಿ ಮತೀಯ ಸಾಮರಸ್ಯ ಗಳಿಸಿದ ದಕ್ಷ ಆಡಳಿತಗಾರ ಎಂದು ಅವನನ್ನು ನೋಡುವ ಇನ್ನೊಂದು ಪಕ್ಷ.

ಶಾಸ್ತ್ರಿಯವರು ತಾವು ಬರೆದ ಟಿಪ್ಪುಸುಲ್ತಾನ್ ನಾಟಕದ ಪ್ರದರ್ಶನ ಮಾಡುವ ಆಸೆಯಿಂದ 1940ರ ದಶಕದಲ್ಲಿ ಆಗ ಮೈಸೂರು ರಾಜ್ಯದ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರನ್ನು ಕಾಣಲು ಹೋದಾಗ, ಇಂಡಿಯಾದಲ್ಲಿ ಬ್ರಿಟಿಷ್ ಆಡಳಿತ ಇರುವವರೆಗೂ ನಿಮಗೆ ಈ ನಾಟಕವನ್ನು ಪ್ರದರ್ಶಿಸುವುದು ಅಪಾಯಕಾರಿ ಎಂದು ಹೇಳಿದರಂತೆ. ಈಗ, ಇಂದಿನ ಭಾರತದಲ್ಲಿ, ಟಿಪ್ಪುಸುಲ್ತಾನ್ ಎಂಬ ಕನ್ನಡದ ನಾಟಕವನ್ನು, ಇಬ್ಬರು ಬ್ರಾಹ್ಮಣ ನಟರು ಅದರ ಎರಡು ಮುಖ್ಯ ಮುಸಲ್ಮಾನ್ ಪಾತ್ರಗಳನ್ನೂ ಅತ್ಯಂತ ಯಶಸ್ವಿಯಾಗಿ ಪ್ರತಿನಿಧಿಸುವವರಾಗಿದ್ದು, ಕರ್ನಾಟಕದಾದ್ಯಂತ ಯಾವುದೇ ಪ್ರತಿಭಟನೆಯನ್ನೂ ಎದುರಿಸದೆಯೇ ಪ್ರದರ್ಶನಗೊಳಿಸಿದ, ಟಿಪ್ಪುಸುಲ್ತಾನ್ ಪಾತ್ರವನ್ನು ಜನಪ್ರಿಯಗೊಳಿಸಿದ ಆ ಬ್ರಾಹ್ಮಣ ನಾಟಕಕಾರ ಇಂದಿನ ಭಾರತದ ರಾಷ್ಟ್ರಪತಿಗಳಿಂದ ಬಹುಮಾನ ಪದಕವನ್ನು ಪಡೆಯುವುದು ಎಷ್ಟು ಸಂಭವನೀಯವಾದೀತು ಎನ್ನುವ ಪ್ರಶ್ನೆ ಅಪ್ರಸ್ತುತವಲ್ಲ.

ಶಾಸ್ತ್ರಿಯವರು ಕಟ್ಟಿ ಬೆಳೆಸಿದ ಜಯಕರ್ನಾಟಕ ನಾಟಕ ಸಂಘ 1952ರಲ್ಲಿ ರಾಯಚೂರಿನಲ್ಲಿ ಮುಕ್ಕಾಮು ಹಾಕಿರುವಾಗ, ಆಗಿನ ಹೈದರಾಬಾದ್ ನಿಜಾಮ್ ಆಡಳಿತವನ್ನು ಸಮರ್ಥಿಸಿ ಹೋರಾಟ ಮಾಡುತ್ತಿದ್ದ ರಾಜಾಕಾರ್ ದಂಗೆಯ ಸಂದರ್ಭದಲ್ಲಿ ಸಕಲ ಸಾಮಗ್ರಿಗಳೂ ಬೆಂಕಿಯಲ್ಲಿ ಸುಟ್ಟುಹೋಗಿ ಸಂಪೂರ್ಣ ನಾಶಗೊಂಡವು. ಬೇರೆ ದಿಕ್ಕಿಲ್ಲದ ಶಾಸ್ತ್ರಿಯವರು ತಮ್ಮ ಮೂಲ ಊರಾದ ಸಿದ್ದಾಪುರಕ್ಕೆ ಹಿಂದಿರುಗಿದ ಕೆಲವು ವರ್ಷಗಳ ನಂತರ ದೊಡ್ಡಮನೆ ಗಣೇಶ ಹೆಗಡೆ ಮೊದಲಾದ ಕೆಲವು ಹಿತಚಿಂತಕರ ಪ್ರಯತ್ನದಿಂದ ಸಣ್ಣದೊಂದು ಜಮೀನು ಸಾಗುವಳಿ ಮಾಡಿಕೊಂಡು ಇರುವಂತಾಯಿತು.


1936ರಲ್ಲಿ, ನಾನು ಕಾಲೇಜಿನ ರಜೆಯಲ್ಲಿ ಸಿದ್ದಾಪುರಕ್ಕೆ ಬಂದಾಗ, ನನ್ನ ತಂದೆ ತನಗೆ ತೋರಿಸಿದ ಔದಾರ್ಯದ ನೆನಪಿನಲ್ಲಿ ನನ್ನನ್ನು ಮತ್ತು ಗಣೇಶ ಹೆಗಡೆಯವರ ಮಗ ನನ್ನ ಬಂಧು-ಮಿತ್ರ ಸೂರ್ಯನಾರಾಯಣನನ್ನು ಶಾಸ್ತ್ರಿಯವರು ತಾವಿದ್ದ ವಡ್ಡಿನಗದ್ದೆ ಜಮೀನಿನ ಗುಡಿಸಲಿಗೆ ಕರೆದುಕೊಂಡು ಹೋಗಿ, ಸ್ವತಃ ಕೇಸರಿಭಾತ್ ಮಾಡಿ ತಿನ್ನಿಸಿ, ತಮ್ಮ ಜೀವನದ ಕೆಲವು ಘಟನೆಗಳನ್ನು ನಮಗೆ ಹೇಳಿದ ನೆನಪು ಈಗಲೂ ಆಗುವುದು.

ಕನ್ನಡದ ವಿಜ್ಞಾನ ಪಠ್ಯಕ್ಕೊಂದು ದೀವಟಿಗೆ

ಪ್ರವೀಣ ಕುಮಾರ್ ಪಿ.ವಿ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಕಳೆದೊಂದು ಶತಮಾನದಲ್ಲಿ ಆಗಿರುವ ಬೆಳವಣಿಗೆಗಳ ವೇಗ ದಿಗಿಲು ಮೂಡಿಸುವಂತಿದೆ. ಈ ನಾಗಾಲೋಟದ ಜೊತೆ ಹೆಜ್ಜೆ ಹಾಕದಿದ್ದರೆ ಕನ್ನಡಿಗರು ಹಿಂದುಳಿಯಬೇಕಾಗುತ್ತದೆ. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆಯನ್ನು ವಿಜ್ಞಾನ ಕಲಿಕೆಗೆ ಸಮರ್ಥವಾಗಿ ದುಡಿಸಿಕೊಳ್ಳಲಾಗುತ್ತಿದೆಯೇ ಎಂದು ನೋಡಿದರೆ ನಿರಾಸೆಯೇ ಉತ್ತರ.

ವಿಜ್ಞಾನ ಮತ್ತು ತಂತ್ರಜ್ಞಾನದ 'ತಿಳಿವು'ಗಳನ್ನು ಕಟ್ಟಿಕೊಡಲು ಕನ್ನಡವನ್ನು ಹದಗೊಳಿಸುವುದು ಇಂದಿನ ಕಾಲಘಟ್ಟದ ತುರ್ತು. ಬೆಂಗಳೂರಿನಲ್ಲಿ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿರುವ ಪ್ರಶಾಂತ ಸೊರಟೂರ ಅವರು ರಚಿಸಿರುವ 'ಕನ್ನಡದಲ್ಲಿ ವಿಜ್ಞಾನ ಎಡವುತ್ತಿರುವುದು ಎಲ್ಲಿ?' ಕೃತಿಯು ಈ ನಿಟ್ಟಿನಲ್ಲಿ ಒಂದು ಪ್ರಯತ್ನ. ವಿಜ್ಞಾನ ಮತ್ತು ತಂತ್ರಜ್ಞಾನದ ನಾಗಾಲೋಟದ ಜ್ಞಾನವನ್ನು ತಾಯಿ ನುಡಿಯಲ್ಲೇ ಕನ್ನಡಿಗರು ದಕ್ಕಿಸಿಕೊಳ್ಳುವಲ್ಲಿ ಆಗಬೇಕಾದ ಕೆಲಸಗಳಿಗೆ ಬೆಳಕಿಂಡಿಯಂತಿದೆ ಈ ಹೊತ್ತಿಗೆ.



ಪು: 164 ₹200

ಕನ್ನಡದಲ್ಲಿ ವಿಜ್ಞಾನ ಎಡವುತ್ತಿರುವುದು ಎಲ್ಲಿ?
ಲೇ: ಪ್ರಶಾಂತ ಸೊರಟೂರ
ಪ್ರ: ಮುನ್ನೋಟ ಟ್ರಸ್ಟ್
ಸಂ: 9353119792

ವಿಜ್ಞಾನ ಮತ್ತು ತಂತ್ರಜ್ಞಾನ ಕಲಿಸಲು, ಸುಲಭವಾಗಿ ಅರ್ಥವಾಗುವ ಕನ್ನಡ ಪದ ಕಟ್ಟುವ ಕಾಯಕವನ್ನು ಆಸಕ್ತಿಯಿಂದ ನಿರ್ವಹಿಸುತ್ತಾ ಬಂದವರು ಪ್ರಶಾಂತ. ವಿಜ್ಞಾನ ಮತ್ತು ತಂತ್ರಜ್ಞಾನದ ಬರಹಗಳನ್ನು ಪ್ರಕಟಿಸುವ 'ಅರಿಮೆ' ವೆಬ್‌ಸೈಟ್ ಮತ್ತು ಕನ್ನಡದಲ್ಲೇ ವಿಜ್ಞಾನ ಕಲಿಸುವ ವಿಡಿಯೊಗಳನ್ನು ಬಿತ್ತರಿಸುವ 'ತಿಳಿ' ಯುಟ್ಯೂಬ್ ಚಾನೆಲ್ ನಿರ್ವಹಣೆ ಹಾಗೂ ಪರಿಣಿತರ ಮೂಲಕ ವಿಜ್ಞಾನದ ಮಾಹಿತಿ ಹಂಚಿಕೊಳ್ಳುವ 'ಅರಿಮೆ @ ಮುನ್ನೋಟ' ಕಾರ್ಯಕ್ರಮಗಳಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಂಡವರು ಅವರು. ಮಕ್ಕಳಿಗೆ ವಿಜ್ಞಾನವನ್ನು ಕನ್ನಡದಲ್ಲಿ ಕಲಿಸುವಾಗ ಆಗುತ್ತಿರುವ ಲೋಪ ಸರಿಪಡಿಸುವ ಮೂಲಕ ವಿಜ್ಞಾನವನ್ನು ತಾಯಿ ನುಡಿಯಲ್ಲೇ ಕಲಿಯುವ ಆಸಕ್ತಿಯನ್ನು ಅವರಲ್ಲಿ ಬೆಳೆಸಬಹುದು. ವಿಜ್ಞಾನವನ್ನು ಜನರು ನಿತ್ಯ ಬಳಸುವ ಸುಲಭ ಪದಗಳ ಮೂಲಕ ಕಟ್ಟಿಕೊಡಬೇಕು ಎಂಬ ನಂಬಿಕೆ ಅವರದು.

ಪ್ರಾಥಮಿಕ ಕಲಿಕೆಯ ಹಂತದಲ್ಲೇ ವಿದ್ಯಾರ್ಥಿಗಳಿಗೆ ಗ್ರಹಿಕೆಗೆ ನಿಲುಕದ ಪದಗಳಲ್ಲಿ ವಿಜ್ಞಾನವನ್ನು ಕಲಿಸುವ ಮೂಲಕ ಹೇಗೆ ಗೊಂದಲ ಮೂಡಿಸಲಾಗುತ್ತಿದೆ ಎಂಬುದನ್ನು ಲೇಖಕರು ಉದಾಹರಣೆಗಳ ಸಮೇತ ಕಟ್ಟಿಕೊಟ್ಟಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿಜ್ಞಾನ ಪಠ್ಯಗಳಲ್ಲಿ ಬಳಸಿರುವ 1,403 ಪದಗಳನ್ನು ಪಟ್ಟಿ ಮಾಡಿ, ಅವುಗಳನ್ನು ತಿಳಿಯುವ ಕನ್ನಡ ಪದಗಳು (ಬೆಳಕು, ಮುಚ್ಚಳ ಇತ್ಯಾದಿ), ತಿಳಿಯುವ ಬೇರೆ ನುಡಿಯ ಪದಗಳು (ಬೀಜ, ಪ್ರಾಣಿ... ಇತ್ಯಾದಿ) ತಿಳಿಯದ ಕನ್ನಡ ಪದಗಳು (ಅಟ್ಟೆ, ಬಿರಿ ವ್ಯವಸ್ಥೆ... ಇತ್ಯಾದಿ) ಹಾಗೂ ತಿಳಿಯದ ಬೇರೆ ನುಡಿಯ ಪದಗಳು (ದ್ಯುತಿ, ಅಪಕ್ರ್ಯುಲಮ್... ಇತ್ಯಾದಿ) ಎಂದು ಪಟ್ಟಿ ಮಾಡಿದ್ದಾರೆ. ಅಷ್ಟೇ ಅಲ್ಲ ಅವುಗಳಿಗೆ ಪರ್ಯಾಯವಾಗಿ ಮಕ್ಕಳಿಗೆ ವಿಜ್ಞಾನವನ್ನು ಸುಲಭವಾಗಿ ತಿಳಿಸುವಂತಹ ಪದಗಳನ್ನು ಕನ್ನಡದಲ್ಲೇ ಹೇಗೆ ಕಟ್ಟಬಹುದು ಎಂಬುದನ್ನೂ ವಿವರಿಸಿದ್ದಾರೆ.

'ರಿಯಾಕ್ಟಿವಿಟಿ' ಎಂಬ ಇಂಗ್ಲಿಷ್ ಪದಕ್ಕೆ ಕನ್ನಡ ಪಠ್ಯದಲ್ಲಿ 'ಕ್ರಿಯಾಪಟುತ್ವ' ಎಂಬ ಪದವನ್ನು ಬಳಸಲಾಗಿದೆ. ಅದರ ಬದಲು 'ಚುರುಕುತನ' ಎಂದು ಸರಳವಾಗಿ ಹೇಳಿದರೆ ಸುಲಭವಾಗಿ ಅರ್ಥವಾಗುತ್ತದೆ. 'ಶೀತಲೀಕರಣ'ದ ಬದಲು 'ತಂಪುಗೊಳಿಸುವಿಕೆ' ಪದ ಬಳಕೆಯೇ ತಂಪು ನೀಡುತ್ತದೆ. 'ಸಂಕೋಚನ' ಪದಕ್ಕಿಂತ 'ಕುಗ್ಗುವಿಕೆ' ಕನ್ನಡಕ್ಕೆ ಹೆಚ್ಚು ಒಗ್ಗಿಕೊಳ್ಳುತ್ತದೆ. 'ಗ್ಯಾಲ್ವನೀಕರಣ' ಪದಕ್ಕೆ ಬದಲಾಗಿ 'ಸತುಸವರಿಕೆ' ಎಂದು ಬಳಸುವುದು ಒಳ್ಳೆಯದು ಎಂಬ ಅಭಿಪ್ರಾಯ ಲೇಖಕರದು. 'ಹೃತ್ಕರ್ಣ'ದ ಬದಲು 'ಹೃದಯದ ಮೇಲ್ಕೋಣೆ' ಹಾಗೂ 'ಹೃತ್ಕುಕ್ಷಿ' ಬದಲು 'ಹೃದಯದ ಕೆಳಕೋಣೆ' ಎಂದರೆ ವಿದ್ಯಾರ್ಥಿಗಳು ಗೊಂದಲವಿಲ್ಲದೇ ಕಲಿಯುತ್ತಾರೆ ಎಂಬುದು ಅವರ ಪ್ರತಿಪಾದನೆ. ವಿಜ್ಞಾನ ಕಲಿಸಲು ಬಳಕೆಯಾಗಿರುವ ಇಂತಹ 1,073 ಪದಗಳಿಗೆ ಅವರು ಪರ್ಯಾಯ ಪದಗಳನ್ನೂ ಸೂಚಿಸಿದ್ದಾರೆ. ಈ ಎಲ್ಲ ಪರ್ಯಾಯ ಪದಗಳೂ ಒಪ್ಪತಕ್ಕವುಗಳಲ್ಲ. ಉದಾಹರಣೆಗೆ, 'ನವೀಕರಿಸಬಹುದಾದ' ಪದಕ್ಕೆ ಬದಲಾಗಿ 'ಮರುಪಡೆಯಬಹುದಾದ' ಪದ ಬಳಸಬಹುದು ಎಂಬುದು ಲೇಖಕರ ಸಲಹೆ. ಇಲ್ಲಿ ಅವರು ಸೂಚಿಸಿರುವ ಪರ್ಯಾಯ ಪದಕ್ಕಿಂತ ಈಗ ಬಳಕೆಯಲ್ಲಿರುವ ಪದವೇ ಹೆಚ್ಚು ಸರಳ ಅನಿಸುತ್ತದೆ. 'ನಾನು ಹೇಳಿದ್ದನ್ನೇ ಒಪ್ಪಬೇಕಿಲ್ಲ. ಅವುಗಳನ್ನೂ ತಿದ್ದುಪಡಿ ಮಾಡಬಹುದು' ಎಂದೂ ಲೇಖಕರು ವಿನಮ್ರವಾಗಿ ಹೇಳಿಕೊಂಡಿದ್ದಾರೆ.

ಈ ಪುಸ್ತಕ ರೂಪುಗೊಳ್ಳುವುದರ ಹಿಂದೆ ಆಳವಾದ ಅಧ್ಯಯನವೂ ಇದೆ. ಇದರಲ್ಲಿರುವ ವಿಚಾರಗಳು ಲೇಖಕರೊಬ್ಬರ ಅಭಿಪ್ರಾಯಗಳಲ್ಲ. ವಿಜ್ಞಾನ ಕಲಿಸುವ ಶಿಕ್ಷಕರು ಹಾಗೂ ತಜ್ಞರ ಜೊತೆ ನಡೆಸಿದ ಸಂವಾದಗಳ ಹೂರಣವೇ ಈ ಪುಸ್ತಕ. ಕನ್ನಡದಲ್ಲೇ ವಿಜ್ಞಾನ ಪದಗಳನ್ನು ಕಟ್ಟುವಾಗ ಎದುರಾಗುವ ಒಂಬತ್ತು ಪ್ರಮುಖ ವಿಚಾರಗಳನ್ನು ಮುಂದಿಟ್ಟುಕೊಂಡು, ಅವುಗಳನ್ನು ಒಂದೊಂದಾಗಿ ವಿಶ್ಲೇಷಿಸಲಾಗಿದೆ.

ಒಳನೋಟ

ಕನ್ನಡದಲ್ಲಿ ವಿಜ್ಞಾನ ಕಲಿಸುವಾಗ ಎದುರಾಗುತ್ತಿರುವ ಕಗ್ಗಂಟುಗಳು ಹಾಗೂ ಮಕ್ಕಳು ಎದುರಿಸುತ್ತಿರುವ ಕಷ್ಟಗಳನ್ನೆಲ್ಲ ಕಡೆದು ತೆಗೆದ 'ಬೆಣ್ಣೆ'ಯಂತಿದೆ ಈ ಹೊತ್ತಿಗೆ. ಈ ಬೆಣ್ಣೆಯನ್ನೇ ಬಳಸಿಕೊಂಡು, ಇನ್ನಷ್ಟು ಚೆನ್ನಾಗಿ ಕಾಯಿಸಿ 'ಕನ್ನಡದ ಕಂಪು' ಸೂಸುವ ತುಪ್ಪವನ್ನು ತಯಾರಿಸಬೇಕಿದೆ. ತಾಯಿ ನುಡಿಯ ಕಳಕಳಿ ಹೊಂದಿದ ಮನಸುಗಳೆಲ್ಲವೂ ಇದಕ್ಕೆ ಕೈಜೋಡಿಸಬೇಕಿದೆ. ವಿಜ್ಞಾನದ ಸಂವಹನವನ್ನು ಕನ್ನಡದಲ್ಲೇ ಸಲೀಸಾಗಿ ನಡೆಸುವಲ್ಲಿ ಆಗಬೇಕಾದ ಕೆಲಸಕಾರ್ಯಗಳು ಬಹಳಷ್ಟಿವೆ. ಈ ಹಾದಿಯ ಆರಂಭದಲ್ಲಿ ಇಡಲಾದ ತಪ್ಪು ಹೆಜ್ಜೆಗಳನ್ನು ಸರಿಪಡಿಸಿಕೊಳ್ಳುವ ಕಿರುಪ್ರಯತ್ನವಾಗಿದೆ ಈ ಕೃತಿ.

8ನೇ ಪುಟದಿಂದ...

ಕೆಲವು ಪ್ರಣಯಪ್ರಿಯ ಅದ್ರಿ ಹತ್ತುವ ಹೋರಿಗಳು ಮತ್ತು ಮಣಕಗಳು ಮಳೆ ಸ್ವಲ್ಪ ಉದುರಾಡಿದರೆ ಸಾಕು, ಉತ್ಸಾಹದಿಂದ ಬಾಲ ಎತ್ತಿಕೊಂಡು ಸಿಕ್ಕಸಿಕ್ಕ ಕಡೆ ಓಡುತ್ತಿದ್ದವು. ಅವನ್ನು ಎಂತಹಾ ರನ್ನರ್‌ಗಳಿಗೂ ತಡೆಯಲು ಆಗುತ್ತಿರಲಿಲ್ಲ. ಅವು ಓಡುವುದನ್ನು ನೋಡಿ, ಸ್ಫೂರ್ತಿಗೊಂಡು ಉಳಿದ ಕೆಲವು ದನಗಳು 'ನಾವೂ ಅದ್ರಿ ಹತ್ತಬಲ್ಲೆವು' ಎಂಬಂತೆ ಅವನ್ನು ಹಿಂಬಾಲಿಸಿ ಓಡುತ್ತಿದ್ದವು. ಗದ್ದೆಯ ಬದುಗಳನ್ನು ನೆಗೆಯುತ್ತಾ, ಹಾರುತ್ತಾ ಅವು ಓಡುವುದು ರೋಚಕ ದೃಶ್ಯವಾಗಿತ್ತು. ಆದರೆ ಸಂಜೆ ಅವು ಕೊಟ್ಟಿಗೆಗೆ ಬರಲ್ಲ ಎಂಬ ಚಿಂತೆ ಕಾಡುತ್ತಿತ್ತು.

ಕೆಲವೊಮ್ಮೆ ಮಳೆ ಬಂದು ಕೆಲವು ಗದ್ದೆಗಳಲ್ಲಿ ಒಂದು ಅಡಿಯಷ್ಟು ನೀರು ನಿಂತಿರುತ್ತಿತ್ತು. ಮಾರನೇ ದಿನದ ಬಿಸಿಲಿಗೆ ಆ ನೀರು ಬಿಸಿಯಾಗಿರುತ್ತಿತ್ತು. ನಾವು ಬಟ್ಟೆ ಬಿಚ್ಚಿ ಯಾವ ಮುಲಾಜೂ ಇಲ್ಲದೆ, ಆ ಬಿಸಿನೀರಿನಲ್ಲಿ ಹಂದಿಗಳು ಕೆಸರಿನಲ್ಲಿ ಬಿದ್ದು ಹೊರಳಾಡುವಂತೆ ಹೊರಳಾಡುತ್ತಿದ್ದೆವು. ಆ ರಜೆಯಲ್ಲಿ ಮಲೆನಾಡಿನ ನೂರಾರು ಸಸ್ಯ, ಬೀಳು, ಬಳ್ಳಿ, ಗಿಡ, ಮರ, ವಿವಿಧ ಜಾತಿಯ ಹಣ್ಣುಗಳು, ವಿವಿಧ ಜಾತಿಯ ಮಾವು ಹಾಗೂ ಹಲಸಿನ ಹಣ್ಣುಗಳು, ವಿವಿಧ ರೀತಿಯ ಹಕ್ಕಿಗಳು, ಅವು ಗೂಡು ಕಟ್ಟುವ ರೀತಿ, ಮರಿಗಳನ್ನು ಆರೈಕೆ ಮಾಡುವ ಕ್ರಮ, ಏಡಿ, ಮೀನು, ನೂರಾರು ಬಗೆಯ ಹುಳಹುಪ್ಪಟೆಗಳು, ಗದ್ದೆಯಲ್ಲಿ ಹಾಗೂ ಕಾಡಿನಲ್ಲಿ ಬೆಳೆಯುತ್ತಿದ್ದ ಹತ್ತಾರು ರೀತಿಯ ಸೊಪ್ಪುಗಳು ನಮ್ಮ ಅರಿವಿನ ಮತ್ತು ಅನುಭವದ ಭಾಗವಾಗುತ್ತಿದ್ದವು.

ಕೆಲವೊಮ್ಮೆ ಕೋಲುಜೇನು, ಸಿಬ್ಬಲುಜೇನು ಕಂಡರೆ ಅದು ನಮ್ಮ ಹಕ್ಕೆಂಬಂತೆ ಕಿತ್ತು ತಿನ್ನುತ್ತಿದ್ದೆವು. ಕೆಲವು ಹಕ್ಕಿಗಳ ಗೂಡಲ್ಲಿ ನಮಗೆ ಮೊಟ್ಟೆ ಕಂಡರೆ, ಅವನ್ನು ತಗೊಂಡು, ಸೆಗಣಿ ಉಂಡೆ ಮಾಡಿ, ಅದರೊಳಗೆ ಆ ಮೊಟ್ಟೆಯಿಟ್ಟು, ಬೆಂಕಿಯಲ್ಲಿ ಸುಟ್ಟು ಮೊಟ್ಟೆ ತಿನ್ನುತ್ತಿದ್ದೆವು. ಆಹಾ, ಅದೆಂತಹ ರುಚಿ! ಅದೆಂತಹ ಸೊಗಸು! ಆಧುನಿಕ ಮೆನುವಿನಲ್ಲಿ ಇದು ಸಾಧ್ಯವಿಲ್ಲದ ಕೆಲಸ. ಬೆಳಿಗ್ಗೆಯಿಂದ ಸಂಜೆಯವರೆಗೆ ದನ ಮೇಯಿಸುವುದು ಕೆಲಸದ ಕಾಲು ಭಾಗವಾಗಿತ್ತು. ಉಳಿದುದು ನಿಸರ್ಗದೊಂದಿಗೆ ನಮ್ಮ ಭಾವನಾತ್ಮಕ, ಪ್ರೀತಿಯ, ಸಂತೋಷದ ಒಡನಾಟ. ಅದರಿಂದ ಬಿಡಿಸಿಕೊಳ್ಳುವುದು ಸುಲಭವಾಗಿರಲಿಲ್ಲ.

'ಕರಾಳ' ನೆನಪು

ಕಾಲ ಹೀಗೆ ನಿಸರ್ಗದೊಂದಿಗಿನ ಸಂತೋಷದ ಒಡನಾಟದಲ್ಲಿ ಕಳೆಯುತ್ತಿರುವಾಗ, ಮೇ 22 ನಮಗೆ ಯಾವ ಸೂಚನೆಯನ್ನೂ ಕೊಡದೆ ಬಂದೇಬಿಡುತ್ತಿತ್ತು. ಅಯ್ಯೋ, ಅದರ ಸಮಸ್ಯೆ, ಅದರ ಸಂಕಟ, ಆ ವ್ಯಥೆ, ಆ ದುಃಖ! ಪದಗಳಿಲ್ಲ. ಸ್ಲೇಟು, ಪುಸ್ತಕ, ಎಕ್ಸೈಜ್, ಜಾಮಿತ್ರ ಬಾಕ್ಸ್, ಛತ್ರಿ (ಯೂನಿಫಾರಮ್, ಶೂ, ಸಾಕ್ಸ್, ಟೈ, ಸ್ಕೂಲ್ ಬ್ಯಾಗ್, ಕ್ಯಾರಿಯರ್ ಬ್ಯಾಗ್ ಇವು ಆಗ ಉದಯಿಸಿರಲಿಲ್ಲ) ಇವನ್ನು ತರಲು ಪೋಷಕರು ಕಷ್ಟಪಡುತ್ತಿದ್ದರು. ಆದರೆ, ದುಃಖಪಡುತ್ತಿರಲಿಲ್ಲ. ನಾವು ಕಷ್ಟಪಡುತ್ತಿರಲಿಲ್ಲ. ಆದರೆ, ದುಃಖಪಡುತ್ತಿದ್ದೆವು. ರಜೆಯಲ್ಲಿ ನಾವು ತಿಂದ ಹಲಸಿನಕಾಯಿಯ ಮೇಣ, ಮಾವಿನ ಸೊನಗು, ಇನ್ನಿತರೆ ಪದಾರ್ಥಗಳೊಂದಿಗೆ ಬೆವರು ಸೇರಿ ನಮಗಿದ್ದ ಒಂದೇ ಒಂದು ಜೊತೆ ಬಟ್ಟೆಯನ್ನು ಕಳಾಹೀನ ಮಾಡಿರುತ್ತಿದ್ದವು. ಅವುಗಳ ಮೂತಿಮುಸುಡಿ ಅಡುಗೆಮನೆಯ ಮಸಿಬಟ್ಟೆಯನ್ನೂ ಮೀರಿಸುವಂತೆ ಆಗಿರುತ್ತಿತ್ತು. ಮಾವಿನ ಸೊನಗು, ಹಲಸಿನ ಮೇಣ ಜೊತೆಗೆ ಹದವಾದ ಸಿಂಬಳ ಹತ್ತಿದ್ದ ಜಾಗವನ್ನು ಬೆರಳಿನಿಂದ ಮಿಡಿದರೆ ಲಟ್ ಲಟ್ ಎಂದು ಶಬ್ದ ಬರುತ್ತಿತ್ತು.

ಬಟ್ಟೆ ಕೆಲವು ಕಡೆ ಹರಿದುಹೋಗಿರುತ್ತಿತ್ತು. ಸ್ಕೂಲಿಗೆ ಹೋಗಲು ಇಂತಹ ಬಟ್ಟೆಗಳನ್ನು ತೊಳೆದು ಅವಕ್ಕೆ ಮರುಜನ್ಮ ಕೊಡಬೇಕಿತ್ತು. ಈ ಸಂಕಟವನ್ನು ಎದುರಿಸಲಾರದೆ 'ಬಟ್ಟೆಯೇ ಇಲ್ಲದಿದ್ದರೆ ಚೆನ್ನಾಗಿರುತ್ತಿತ್ತು' ಎಂದು ಅನಿಸಿದ್ದೂ ಉಂಟು. ಆಗ ತರಾವರಿ ಬಟ್ಟೆ ಸೋಪು, ಮೈಸೋಪು ನಮ್ಮ ಹಳ್ಳಿಗೆ ಬಂದಿರಲಿಲ್ಲ. ಇದ್ದುದು ಒಂದೇ ಒಂದು; ಅದು 501 ಸಾಬೂನು. ಅದೇ ಬಟ್ಟೆಸೋಪೂ, ಮೈಸೋಪೂ ಆಗಿತ್ತು. ಅದನ್ನು ಕೊಳ್ಳಲು ಕೂಡಾ ಸ್ವಲ್ಪ ಆರ್ಥಿಕ ಸಾಮರ್ಥ್ಯ ಬೇಕಿತ್ತು. ಉಳಿದವರಿಗೆ ಸೀಗೇಕಾಯಿ ಮತ್ತು ಅಂಟುವಾಳಕಾಯಿ. ಇವುಗಳಿಂದ ಮಾತ್ರ ನಮ್ಮ ಕೊಳಕು ಬಟ್ಟೆಯನ್ನು ಕ್ಲೀನ್ ಮಾಡಲು ಆಗುತ್ತಿರಲಿಲ್ಲ.

ಮೇ 22 ಬಂದುದು ನಮ್ಮ ಪೋಷಕರಿಗೆ ಕಷ್ಟವೆನಿಸಿದರೆ; ನಮಗೆ ತೀವ್ರ ಸಂಕಟವಾಗುತ್ತಿತ್ತು. ಆರಂಭದ ಕೆಲವು ದಿನಗಳಲ್ಲಿ ಕಣ್ಣೀರು ಹಾಕಿಕೊಂಡು ಸ್ಕೂಲಿಗೆ ಹೋಗಿದ್ದೂ ಉಂಟು. ಸ್ಕೂಲಿಗೆ ಹೋಗಿಬರುವಾಗ ನಾವು ಆಡಿ ಕುಣಿದ ಗದ್ದೆಗಳಲ್ಲೇ ಹೋಗಬೇಕಿತ್ತು. ಆಗ ಗದ್ದೆಗಳು 'ನಿನ್ನೆ ಮೊನ್ನೆ ಸಂತೋಷದಿಂದ ಕುಣಿದು ಕುಪ್ಪಳಿಸಿದಿರಿ, ಈಗ ಹ್ಯಾಗಾಯ್ತು?' ಎಂದು ಗೇಲಿಮಾಡಿ ನಗುತ್ತಿರುವಂತೆ ಭಾಸವಾಗುತ್ತಿತ್ತು. ನಾವು ಮೇಯಿಸುತ್ತಿದ್ದ ದನಗಳು 'ಇನ್ನು ನಮ್ಮನ್ನು ಕಂಟ್ರೋಲ್ ಮಾಡಲು ನೀವು ಒಂದು ವರ್ಷದ ನಂತರ ಬರಬೇಕು, ಗೊತ್ತಾಯ್ತಾ?' ಎಂದು ಅಣಕಿಸುತ್ತಿರುವಂತೆ ಅನಿಸುತ್ತಿತ್ತು.

ನಮ್ಮ ಜೊತೆಯಲ್ಲೇ ಹಾಡಿಕುಣಿದ ಕೆಲವರು ಸ್ಕೂಲಿನಿಂದ ವಿ.ಆರ್.ಎಸ್. ತೆಗೆದುಕೊಂಡಿರುತ್ತಿದ್ದರು. ಅವರ ಮುಕ್ತ ಚಟುವಟಿಕೆಗಳ ಸುಖವನ್ನು ನೋಡಿ ನಮಗೆ ಕಣ್ಣೀರು ಬರುತ್ತಿತ್ತು. ಆ ಸುಖವನ್ನು ಬೆಂಬಲಿಸಿ, 'ನಿನ್ನ ಜೊತೆಗೆ ನಾವಿದ್ದೀವಿ' ಎಂದುಕೊಂಡ ಕೆಲವರು ತಾವೂ ವಿ.ಆರ್.ಎಸ್. ತೆಗೆದುಕೊಳ್ಳುತ್ತಿದ್ದುದೂ ಇತ್ತು. ಬೇಸಿಗೆ ರಜೆಯ ಬಯಲಿನ ಮುಕ್ತಬದುಕು ಮತ್ತು ಸ್ಕೂಲೆಂಬ ಆಲಯದ ಬಿಗಿಹಿಡಿತದ ಬದುಕುಗಳ ನಡುವೆ ಮೇ 22ರಂದು ಅತ್ಯಂತ ಉಗ್ರವಾದ, ಕ್ರೂರವಾದ ಯುದ್ಧವೇ ನಡೆಯುತ್ತಿತ್ತು. ಅಂದು ಸ್ಕೂಲಿಗೆ ಹೋಗಲು ಮೈ, ಮನ ಭಾರವೆನಿಸುತ್ತಿತ್ತು. ಒಂದೊಂದು ಹೆಜ್ಜೆ ಇಡುವುದು ಕೂಡ ಯಾವುದೋ ಹಿಂಸಾತ್ಮಕ ನರಕಕ್ಕೆ ಹೋಗುತ್ತಿದ್ದೇವೆ ಎನಿಸುತ್ತಿತ್ತು.

ಈಚಿನ ದಿನಗಳಲ್ಲಿ ಮೊದಲ ಬಾರಿಗೆ ಹಾಸ್ಟೆಲ್ ಸೇರುವ ಕೆಲವು ವಿದ್ಯಾರ್ಥಿಗಳು ಮನೆಯನ್ನು ನೆನೆಸಿಕೊಂಡು ಹಿಂಸೆಪಡುತ್ತಾರೆ. ಅದಕ್ಕೆ 'ಹೋಮ್‌ಸಿಕ್' ಎಂದು ಕರೆಯುತ್ತಾರೆ. ಆದರೆ ನಮಗಾಗುತ್ತಿದ್ದ ಹಿಂಸೆಯನ್ನು 'ಹೋಮ್‌ಸಿಕ್' ಎನ್ನಲು ಬರುವುದಿಲ್ಲ. ಯಾಕೆಂದರೆ ನಾವು ಮನೆಯೊಳಗಿದ್ದು ಸಂತೋಷಪಟ್ಟವರಲ್ಲ. ಮನೆಯ ಹೊರಗಡೆ ದನ ಮೇಯಿಸಿಕೊಂಡು, ಹಣ್ಣು ಹಂಪಲು ತಿಂದುಕೊಂಡು ಬಯಲಲ್ಲಿ ಸಂತೋಷ ಕಂಡವರು. ಹಾಗಾಗಿ ಅದಕ್ಕೆ 'ಬಯಲು ಸಿಕ್' ಎನ್ನಬಹುದೇನೊ. ಅಂತೂ ಪ್ರತೀ ವರ್ಷ ಮೇ 22 ಬಂತೆಂದರೆ ಅದೇ ಕರಾಳ ನೆನಪುಗಳು ಬಂದು ಮುತ್ತಿಕೊಳ್ಳುತ್ತವೆ. ಅಥವಾ ನಾವೇ ಆ ನೆನಪುಗಳೊಂದಿಗೆ ಮುತ್ತಿಕೊಳ್ಳುತ್ತೇವೆ. ಕಾಲ ಸಂದು ಎಷ್ಟೋ ವರ್ಷಗಳಾಗಿರಬಹುದು. ಆದರೆ, ಮೇ 22 ಮಾತ್ರ ನಮ್ಮ ನರನಾಡಿಗಳಲ್ಲಿ ನಮ್ಮ ಪ್ರಜ್ಞೆಯನ್ನೂ ಮೀರಿ ಭಯ ಹುಟ್ಟಿಸುತ್ತದೆ.

ಮೊದಲ ಓದು

ಮಲೆನಾಡಿನ ಯಕ್ಷಚೇತನಗಳ ಲೋಕ

ವೃತ್ತಿಯಲ್ಲಿ ಎಂಜಿನಿಯರ್, ಆದರೆ ಪ್ರವೃತ್ತಿಯಿಂದ ಯಕ್ಷ ಅಧ್ಯಯನಕಾರರಾದ ಲೇಖಕ ರವಿ ಮಡೋಡಿ ಅವರ ಅಕ್ಷರ ಸಾಹಸ 'ಮಲೆನಾಡಿನ ಯಕ್ಷಚೇತನಗಳು'. ಕರಾವಳಿ ಕಲೆ ಎಂದೇ ಪ್ರಸಿದ್ಧಿ ಪಡೆದಿರುವ ಯಕ್ಷಗಾನ, ಮಲೆನಾಡಿನಲ್ಲೂ ಅಷ್ಟೇ ಪ್ರಸಿದ್ಧಿಯಲ್ಲಿತ್ತು ಎನ್ನುವುದಕ್ಕೆ ಈ ಕೃತಿಯನ್ನು ಸಾಕ್ಷ್ಯವಾಗಿ ಮುಂದಿಡಬಹುದು.

ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಯಕ್ಷ ಸೇವೆಯಲ್ಲಿ ತೊಡಗಿಸಿಕೊಂಡಿದ್ದ ಕಲಾವಿದರನ್ನು ರವಿ ಅವರು ಇಲ್ಲಿ ಪರಿಚಯಿಸಿದ್ದಾರೆ. 'ಮಲೆನಾಡಿನಲ್ಲಿ ಹಿಂದೆ ಸೀಮೆಗೊಂದೊಂದು ಮೇಳವಿದ್ದ ದಾಖಲೆ ಇದೆ. ಈಗ ಅವುಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ಉಳಿದಿವೆ. ಕಳೆದು ಹೋದುದು ಸಿಗದಾದರೂ ಅಲ್ಲಿಯ ನೆನಪು ಉಳಿಯಬೇಕು' ಎಂದು ಮುನ್ನುಡಿಯಲ್ಲಿ ಶ್ರೀಧರ ಡಿ.ಎಸ್. ತಾಳಿಪಾಡಿ ಅವರು ಉಲ್ಲೇಖಿಸಿದ್ದಾರೆ. ಕೃತಿಯಲ್ಲಿ ಇಪ್ಪತ್ತಾರು ಕಲಾವಿದರ ಜೀವನ ಹಾಗೂ ಕಲಾಬದುಕಿನ ಹೆಜ್ಜೆಗಳಿವೆ. ಇವುಗಳ ಜೊತೆಗೆ ಆ ಕಲಾವಿದರಿದ್ದ ಮೇಳದ ಹಿನ್ನೆಲೆ ಹಾಗೂ ಅವುಗಳ ಸ್ಥಿತಿಗತಿ, ಪ್ರಸಂಗದ ವೇಳೆ ನಡೆದ ಸ್ವಾರಸ್ಯಕರ ಘಟನೆಗಳ ಮಾಹಿತಿಯೂ ಇಲ್ಲಿ ಅಡಕವಾಗಿದೆ. ತಾಳಮದ್ದಲೆ, ಯಕ್ಷಗಾನ ಪ್ರಸಂಗದಲ್ಲಿ ಆಗಿರುವ ನಕಾರಾತ್ಮಕ ಬದಲಾವಣೆಗಳ ಸೂಕ್ಷ್ಮ ಉಲ್ಲೇಖವೂ ಇಲ್ಲಿದೆ.

'ಕೇವಲ ಇಪ್ಪತ್ತಾರು ಕಲಾವಿದರಿಗೆ ಮಲೆನಾಡಿನ ಯಕ್ಷಚೇತನಗಳು ಮುಗಿಯುವುದಿಲ್ಲ' ಎನ್ನುವ ಮೂಲಕ ಈ ಕೃತಿಯ ಸರಣಿಯ ಮುನ್ಸೂಚನೆಯನ್ನೂ ಲೇಖಕರು ನೀಡಿದ್ದಾರೆ.



ಪು: 212 ₹200

ಮಲೆನಾಡಿನ ಯಕ್ಷಚೇತನಗಳು
ಲೇ: ರವಿ ಮಡೋಡಿ
ಪ್ರ: ಮಡಿಲು ಪ್ರಕಾಶನ
ಸಂ: 9844212231

ಗ್ರಾಮಗಳ ಚಹರೆ ಬದಲಾದ ಕಥನ



ಪು: 240 ₹220

ಗ್ರಾಮ ಪಲ್ಲಟ
ಲೇ: ತೈಲೂರು ವೆಂಕಟ ಕೃಷ್ಣ
ಪ್ರ: ಬಾನು ಪ್ರಕಾಶನ, ಮಂಡ್ಯ
ಸಂ: 9480255548

ಕೆಲಸದ ನೆಪದಲ್ಲಿ ಹಳ್ಳಿಯಿಂದ ನಗರಕ್ಕೆ ಬಂದು ನೆಲೆಸಿದವರಿಗೆ ಹುಟ್ಟೂರ ನೆನಪು ಕ್ಷಣಮಾತ್ರದಲ್ಲೇ ಸ್ಮೃತಿಪಟಲದಲ್ಲಿ ಬಾಲ್ಯ, ಯೌವ್ವನ ಕಾಲದ ನೆನಪುಗಳ ಬುತ್ತಿಬಿಚ್ಚಿಡುವ ಸವಿಗನಸು. 'ಗ್ರಾಮ ಪಲ್ಲಟ'ವೂ ಇದೇ ರೀತಿಯ ಒಂದು ನೆನಪಬುತ್ತಿ. ಲೇಖಕ ತೈಲೂರು ವೆಂಕಟ ಕೃಷ್ಣ ಅವರ ಐದಾರು ದಶಕಗಳ ಗ್ರಾಮೀಣ ಬದುಕಿನ ಪಲ್ಲಟಗಳ ಮೆಲುಕು.

ಗಾಣದಿಂದ ತೈಲ ತೆಗೆಯುತ್ತಿದ್ದ ಗಾಣಿಗರು ಕಟ್ಟಿದ ಊರು, ಸಮೃದ್ಧಿಯ ಹಾಲು, ಮೊಸರಿನ ಊರಾದ ಕಾರಣ 'ತೈಲೂರು' ಸೃಷ್ಟಿಯಾಗಿ, ಅಲ್ಲಿನ ಕೃಷಿ, ಕೋಳಿರಾಯನ ಗುಡ್ಡ, ಅಲ್ಲಿನ ರಂಗನಟರು, ಊರಹಬ್ಬದಲ್ಲಿ ನಡೆಯುತ್ತಿದ್ದ ಪೌರಾಣಿಕ ನಾಟಕಗಳು, ಹನುಮಂತನ ಕಿರೀಟದ ಕಥೆ, ಕನಸು, ಊರಹಬ್ಬ, ಊರಿನ ಪರಿಸರ ಹಾಗೂ ಪಕ್ಷಿಗಳು ಹೀಗೆ ಐವತ್ತೊಂದು ಶೀರ್ಷಿಕೆಗಳಲ್ಲಿ ಭೂತ, ವರ್ತಮಾನ ಹಾಗೂ ಭವಿಷ್ಯದ 'ಗ್ರಾಮ ಪಲ್ಲಟ'ವನ್ನು ತೆರೆದಿಟ್ಟಿದ್ದಾರೆ. ಲೇಖಕರ ನೆನಪಿನ ಶಕ್ತಿ ಪ್ರತೀ ಅಧ್ಯಾಯದಲ್ಲಿ ಉಲ್ಲೇಖಾರ್ಹ. ಶೀರ್ಷಿಕೆಯಡಿಯ ವಿಷಯವನ್ನು ವಿವರಿಸುತ್ತಲೇ ಮತ್ತೊಂದಿಷ್ಟು ನೆನಪನ್ನು ಕೆದಕಿ ಮತ್ತೆ ಮೂಲ ವಿಷಯಕ್ಕೆ ಮರಳುತ್ತಾರೆ.

ಪಲ್ಲಟ ಎಂಬ ಶೀರ್ಷಿಕೆಯಡಿಯ ಲೇಖನದಲ್ಲಿ ಹಳ್ಳಿಯಲ್ಲಿ ಇತ್ತೀಚೆಗೆ ಆಗಿರುವ ದಿಢೀರ್ ಬದಲಾವಣೆಗಳ ಬಗ್ಗೆ ಲೇಖಕರು ಉಲ್ಲೇಖಿಸಿದ್ದಾರೆ. ನಗರೀಕರಣದ ಆಕರ್ಷಣೆ, ತಂತ್ರಜ್ಞಾನದ ದುರ್ಬಳಕೆ, ನಾಟಿ ಹಸುಗಳ ಜಾಗಕ್ಕೆ ಬಂದ ವಿದೇಶಿ ತಳಿಗಳು ಹಾಗೂ ಇವುಗಳ ಉತ್ಪನ್ನಗಳಿಂದ ಆರೋಗ್ಯದ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ.

ಧ್ವನಿ ಮಾಲಿಕೆಯ ಅಕ್ಷರ ರೂಪ

ವಚನ ವರ್ಷಾರ್ಥ
ಲೇ: ಡಾ.ಬಸವರಾಜ ಸಾದರ
ಪ್ರ: ಬಸವಧರ್ಮ ಪ್ರಸಾರ ಸಂಸ್ಥೆ ಹಿರೇಮಠ ಸಂಸ್ಥಾನ ಭಾಲ್ಕಿ, ಬೀದರ್ ಜಿಲ್ಲೆ
ಸಂ: 9448947571, 9241978575



ಪು: 414 ₹300

ವಚನ ಸಾಹಿತ್ಯದ ಬಗ್ಗೆ ಕೃತಿಗಳು ಹೊಸದೇನಲ್ಲ. ಆದರೆ, ವಚನಗಳು ಹಾಗೂ ಅವುಗಳ ಸಾರವನ್ನು ವರ್ಷಪೂರ್ತಿ ಕೇಳಿಸಿ, ಅದ್ಭುತ ಪ್ರತಿಸ್ಪಂದನದ ಬಳಿಕ ಅವೆಲ್ಲವುಗಳ ಸಾರಸಂಗ್ರಹಿಸಿದ ಕೃತಿಯಿದು.

ಅಂದಹಾಗೆ ಇವು ಲೇಖಕರು ಪ್ರಜಾವಾಣಿಯ 'ಕನ್ನಡ ಧ್ವನಿ' ಪಾಡ್‌ಕಾಸ್ಟ್‌ನಲ್ಲಿ ಒಂದು ವರ್ಷ ನಿರಂತರವಾಗಿ ನಡೆಸಿಕೊಟ್ಟ 'ವಚನವಾಣಿ' ಧ್ವನಿಮಾಲಿಕೆಯ ಅಕ್ಷರರೂಪ. ಸರಿಸುಮಾರು ಎಲ್ಲ ಶರಣರ ಆಯ್ದ ವಚನಗಳನ್ನು ಈ ಕೃತಿ ಒಳಗೊಂಡಿದೆ. ಇಷ್ಟು ಶರಣರ ವಚನಗಳನ್ನು ಸಂಗ್ರಹಿಸಿ, ಅಧ್ಯಯನ ಮಾಡಿ, ಧ್ವನಿ ಮತ್ತು ಅಕ್ಷರ ರೂಪಕ್ಕಿಳಿಸುವುದು ಸವಾಲಿನ ಸಂಗತಿಯೇ ಸರಿ.

ಬಹುಪಾಲು ಜನರಿಗೆ ಅಷ್ಟೊಂದು ಪರಿಚಿತವಲ್ಲದ ಅಪರೂಪದ ಶರಣರ ವಚನಗಳು ಕೃತಿಯಲ್ಲಿವೆ. ಸುಂಕದ ಬಂಕಣ್ಣ, ಹೊಡೆಹುಲ್ಲ ಬಂಕಣ್ಣ, ಸೊಡ್ಡಳ ಬಾಚರಸ.... ಹೀಗೆ ಅತ್ಯಪರೂಪದ ವಚನಕಾರರು ಈ ಕೃತಿಯಲ್ಲಿ ಬೆಳಕು ಕಂಡಿದ್ದಾರೆ. ಅವರ ಕಾವ್ಯನಾಮವೂ ಅಷ್ಟೇ ಭಿನ್ನ.

ಎಲ್ಲ ವಚನಗಳಿಗೆ ಕೊಟ್ಟ ಐದು ಸಾಲುಗಳ ವಿವರಣೆಯು ಅಪ್ಪಟ ಮಾತಿನ ಶೈಲಿಯಲ್ಲಿ ಇದೆ. ತ್ವರಿತವಾಗಿ ಓದಿಸಿಕೊಂಡು ಹೋಗುತ್ತವೆ. ಸರಳವಾಗಿ ವಚನಗಳನ್ನು ಅರಿಯಲು ಬಯಸುವವರಿಗೆ ಬೇಕಾದ ಕೃತಿ. ಅಂದಹಾಗೆ ತಾಳೆಗರಿಯ ಕಟ್ಟುಗಳನ್ನೇ ಜೋಡಿಸಿಟ್ಟಂತೆ ಮಾಡಿರುವ ಕೃತಿಯ ಆಕಾರ, ವಿನ್ಯಾಸ ತುಂಬಾ ಆಕರ್ಷಕವಾಗಿವೆ. ವಚನಾಸಕ್ತರಿಗೆ ಸಂಗ್ರಹಯೋಗ್ಯ ಕೃತಿ.

ಸಾರ್ವತ್ರಿಕ ಕೃತಿ ಅನಿಮಲ್ ಫಾರ್ಮ್



ಪು: 166 ₹160

ಅನಿಮಲ್ ಫಾರ್ಮ್
ಮೂಲ: ಜಾರ್ಜ್ ಆರ್ವೆಲ್
ಕನ್ನಡಕ್ಕೆ: ಈಶ್ವರ ಹತ್ತಿ
ಪ್ರ: ಎಸ್.ಎಚ್.ಐ ಪ್ರಕಾಶನ, ಕೊಪ್ಪಳ
ಸಂ: 9823050797

ಈ ಕೃತಿಯು ಇಂಗ್ಲಿಷ್‌ನ ನೂರು ಪ್ರಸಿದ್ಧ ಕಾದಂಬರಿಗಳ ಪೈಕಿ ಒಂದು ಎಂದು ಟೈಮ್ ಮ್ಯಾಗಜಿನ್‌ನಿಂದ ಉಲ್ಲೇಖಗೊಂಡ ಜಾರ್ಜ್ ಆರ್ವೆಲ್ ಅವರ 'ಅನಿಮಲ್ ಫಾರ್ಮ್'ನ ಅನುವಾದ.

ಜಾರ್ಜ್ ಆರ್ವೆಲ್ ಮೂಲ ಹೆಸರು ಎರಿಕ್ ಅರ್ಥರ್ ಬ್ಲೇರ್. ಮೊನಚಾದ ಬರವಣಿಗೆಯೇ 'ಜಾರ್ಜ್ ಆರ್ವೆಲ್' ಎಂಬ ಕಾವ್ಯನಾಮದ ಹುಟ್ಟಿಗೆ ಕಾರಣ. ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುವವರನ್ನು ತೀಕ್ಷ್ಣವಾಗಿ ಟೀಕಿಸುವುದರಲ್ಲಿ ಆರ್ವೆಲ್‌ಗಿಂತ ಬೇರೊಬ್ಬ ಲೇಖಕರು ಇರಲಿಲ್ಲ ಎಂದು ವಿಮರ್ಶಕರು ಉಲ್ಲೇಖಿಸುತ್ತಾರೆ.

ಈ ಕೃತಿಯಲ್ಲಿ, ಕೊಟ್ಟಿಗೆಯಲ್ಲಿರುವ ವಿವಿಧ ಪ್ರಾಣಿಗಳನ್ನೇ ಪಾತ್ರಗಳನ್ನಾಗಿಸಿ ರಷ್ಯಾ ಕ್ರಾಂತಿಯ ಪೂರ್ವ ಮತ್ತು ನಂತರದ ಘಟನೆಗಳನ್ನು ಆರ್ವೆಲ್ ಮರುಸೃಷ್ಟಿಸುತ್ತಾರೆ. ಇಂದಿಗೂ ಪ್ರಸ್ತುತ ಎನ್ನುವಂತೆ ದೌರ್ಜನ್ಯವನ್ನು ಕಾಲ್ಪನಿಕ ಕಥೆಯ ರೂಪದಲ್ಲಿ ಇಲ್ಲಿ ಆರ್ವೆಲ್ ಪ್ರಸ್ತುತಪಡಿಸಿದ್ದಾರೆ. 'ಹೀಗಾಗಿ ಇದು ಕೇವಲ ಪ್ರಾಣಿಗಳ ಕಥೆಯಲ್ಲ. ರಷ್ಯಾ ಕ್ರಾಂತಿಯ ನಂತರ, ನಿರಂಕುಶ ಪ್ರಭುತ್ವದ ಪ್ರತಿಪಾದಕನಾಗಿದ್ದ ಸ್ಟಾಲಿನ್ ವಾದದ ಉದಯ ಹಾಗೂ ಸೋವಿಯತ್ ಒಕ್ಕೂಟದ ಅವನತಿಯನ್ನು ಬಿಂಬಿಸುತ್ತವೆ' ಎಂದಿದ್ದಾರೆ ಲೇಖಕ ಈಶ್ವರ ಹತ್ತಿ. ಈ ಕೃತಿಯು ಈಗಲೂ ಪ್ರಸ್ತುತ ಎನ್ನುವಂತಿದೆ. ಹಲವು ವಿದ್ಯಮಾನಗಳಿಗೆ ಕೈಗನ್ನಡಿಯಂತೆ ಕೆಲ ಪಾತ್ರಗಳು, ಘಟನೆಗಳು ತೋಚುತ್ತವೆ. ಪ್ರಾಣಿಗಳ ಲೋಕದ ಮೂಲಕ ಈ ಜಗತ್ತಿನ ಹಲವು ವಿಚಾರಗಳು ಇಲ್ಲಿ ಅನಾವರಣಗೊಳ್ಳುತ್ತವೆ. 'ಮನುಷ್ಯರು ಮನುಷ್ಯರೆ! ಪ್ರಾಣಿಗಳು ಪ್ರಾಣಿಗಳೆ' ಎನ್ನುವ ಕೊನೆಯಲ್ಲಿನ ಉಲ್ಲೇಖ ಕೃತಿಯ ಜೀವಾಳ. ಗೂಢಾರ್ಥಗಳನ್ನೊಳಗೊಂಡ ಭಾಷಾಂತರ ಪರಿಣಾಮಕಾರಿಯಾಗಿದ್ದು, ಓದಿಗೆ ಪೂರಕವಾಗಿದೆ.



ನಾವಿರೋದು ಆರೇ ಮಂದಿ!

ಕರ್ನಾಟಕದಲ್ಲಿ ಈಗ ಉಳಿದಿರುವ ಎರೆಭೂತ ಪಕ್ಷಿಗಳು ಕೇವಲ ಆರು. ಇವುಗಳ ಸಂತತಿ ಇನ್ನೆಷ್ಟು ದಿನ ಉಳಿಯಬಹುದು ಎಂಬ ಆತಂಕ ಕಾಡುತ್ತಿದೆ. ಜೀವವೈವಿಧ್ಯದ ಈ ದಿನವಾದರೂ ಅವುಗಳ ಆರ್ತನಾದ ನಮಗೆ ಕೇಳೀತೇ?

ಅಖಿಲೇಶ್ ಚಿಪ್ಪಳಿ

ಹಿಂದಿನ ಆರು ದಶಕಗಳಲ್ಲಿ ಪ್ರಪಂಚದ ಜೀವಪ್ರಬೇಧಗಳ ಸಂಖ್ಯೆಯಲ್ಲಿ ಶೇ 60ರಷ್ಟು ವಿನಾಶವಾಗಿದೆ. ಈಗಾಗಲೇ ಐದು ಮಹಾವಿನಾಶಗಳು ಸಂಭವಿಸಿವೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಆರನೇ ಮಹಾವಿನಾಶದೆಡೆಗೆ ನಾವೀಗ ವೇಗದಿಂದ ಸಾಗುತ್ತಿದ್ದೇವೆ. ಭೂಮಿಯ ಮೇಲೆ ಉಳಿದಿರುವ ಒಟ್ಟು ಜೀವವೈವಿಧ್ಯದ ಸಂಖ್ಯೆಯಲ್ಲಿ ಶೇ 30ರಷ್ಟು ನಾಶವಾದಲ್ಲಿ ಅದು ಇಡೀ ಭೂಮಿಯ ಎಲ್ಲರ ವಿನಾಶಕ್ಕೆ ನಾಂದಿಯಾಗುತ್ತದೆ ಎಂದು ವಿಜ್ಞಾನ ಹೇಳುತ್ತದೆ. ನಾವೀಗಾಗಲೇ ಅದರ ಪ್ರಮಾಣವನ್ನು ದುಪ್ಪಟ್ಟು ಮಾಡಿ, ಮೂರು ಪಟ್ಟು ಮಾಡುವತ್ತ ಅತಿವೇಗದಿಂದ ಸಾಗುತ್ತಿದ್ದೇವೆ.

ಕೋಟ್ಯಂತರ ಹಕ್ಕಿಗಳನ್ನೇ ಕೊಂದವರು ನಾವು. ಉತ್ತರ ಅಮೆರಿಕದಲ್ಲಿ ಹಲವು ಕೋಟಿಗಳ ಸಂಖ್ಯೆಯಲ್ಲಿದ್ದ, ಅಕ್ಷರಶಃ ಆ ಭಾಗದ ಭೂಮಂಡಲವನ್ನು ಆಳುತ್ತಿದ್ದ ಪ್ಯಾಸೆಂಜರ್ ಪಿಜನ್ ಎಂಬ ಪಾರಿವಾಳ ಸಂತತಿಯನ್ನು ನಾಶ ಮಾಡಿ ಬಹಳ ಕಾಲವೇನೂ ಕಳೆದಿಲ್ಲ. ಇದೀಗ ನಮ್ಮ ಕರುನಾಡಿನಲ್ಲೇ ಬದುಕಲು ಹೋರಾಟ ಮಾಡುತ್ತಿರುವ ದೈತ್ಯ ಪಕ್ಷಿ ಪ್ರಭೇದದ ಕಥೆ ಗೊತ್ತೇ?

ಕರ್ನಾಟಕದ ಬೀದರ್, ಬಳ್ಳಾರಿ ಹಾಗೂ ಗದಗ ಜಿಲ್ಲೆಗಳ ಕೆಲಭಾಗ ಹಾಗೂ ಆಂಧ್ರಪ್ರದೇಶದ ಕೊಂಚ ಭಾಗ, ಮಧ್ಯಪ್ರದೇಶ, ಮಹಾರಾಷ್ಟ್ರ, ಗುಜರಾತ್ ಮತ್ತು ರಾಜಸ್ಥಾನದಲ್ಲಿ ಕೇವಲ ಬೆರಳೆಣಿಕೆಯಷ್ಟು ಇಂಡಿಯನ್ ಗ್ರೇಟ್ ಬಸ್ಟರ್ಡ್ ಎಂಬ ದೈತ್ಯ ಪಕ್ಷಿಗಳಿವೆ. ಕನ್ನಡದಲ್ಲಿ ಈ ಪಕ್ಷಿಗೆ ಎರೆಭೂತ ಮತ್ತು ದೊರವಾಯನ ಎನ್ನುತ್ತಾರೆ. ಅಪ್ಪಟ ನೈಸರ್ಗಿಕ ಹುಲ್ಲುಗಾವಲು ಹಾಗೂ ವಿರಳ ಕುರುಚಲು ಮಟ್ಟಿಗಳಿರುವ ವಿಶಾಲ ಪ್ರದೇಶ ಇವುಗಳ ಆವಾಸಸ್ಥಾನ. ಮೂರು ಅಡಿಗಳಷ್ಟು ಎತ್ತರ ಬೆಳೆಯುವ ಇದು ದೈತ್ಯ ಪಕ್ಷಿ ಅಂದರೆ ನಮ್ಮೂರ ಉಷ್ಟ್ರಪಕ್ಷಿ ಎಂದುಕೊಳ್ಳಬಹುದು. ಇಂತಹದೇ ಹುಲ್ಲುಗಾವಲನ್ನು ಆಶ್ರಯಿಸಿ ಬದುಕುವ ಕೃಷ್ಣಮೃಗಗಳು ಮತ್ತು ಎರೆಭೂತಗಳು ಸಹಜೀವನ ನಡೆಸುತ್ತವೆ.



ಎರೆಭೂತಗಳ ಕುಟುಂಬ ವಿಹಾರ... ತಾಯಿ ಮತ್ತು ಮಗಳ ಒಂದು ಆಪ್ತಕ್ಷಣ
ಚಿತ್ರ: ದೇವೇಶ್ ಗಡವಿ

ಹುಲ್ಲುಗಾವಲಿನ ಕೀಟಗಳೇ ಇವುಗಳ ಪ್ರಮುಖ ಆಹಾರ. ಅಲ್ಲದೆ ಇವು ಹುಲ್ಲಿನ ಬೀಜ, ಬೋರೆಹಣ್ಣು, ಓತಿಕ್ಯಾತ, ಚಿಕ್ಕ ಉಡ ಇವುಗಳನ್ನು ತಿನ್ನುತ್ತವೆ. ಬಯಲುನಾಡಿನ ಕಪ್ಪುಮಣ್ಣಿನ ಪ್ರದೇಶದ ಹುಲ್ಲುಗಾವಲು ಇವುಗಳು ಸ್ವಚ್ಛಂದವಾಗಿ ಬದುಕಲು ಸೂಕ್ತ ತಾಣ. ಆದರೆ ಇತ್ತೀಚಿನ ವರ್ಷಗಳಲ್ಲಿ ಇವುಗಳ ಆವಾಸಸ್ಥಾನ ತುಂಡರಿಸಿಹೋಗಿದೆ. ಬಹಳ ಸೂಕ್ಷ್ಮ ಸ್ವಭಾವದ ಈ ಹಕ್ಕಿಗಳು ಬದುಕಲು ಹುಲ್ಲುಗಾವಲಿನ ಹುಲ್ಲು ಮತ್ತು ಪೊದೆಗಳು ಎರಡೂವರೆ ಅಡಿಯಷ್ಟು ಎತ್ತರವಾಗಿ ಬೆಳೆದಿರಬೇಕು. ಅದಕ್ಕಿಂತ ಜಾಸ್ತಿ ಬೆಳೆದರೆ ಅದು ಇವುಗಳ ಜೀವನಕ್ರಮಕ್ಕೆ ಅಡ್ಡಿಯಾಗುತ್ತದೆ.

ಇತ್ತೀಚಿನ ಅಧ್ಯಯನದ ಪ್ರಕಾರ, ಕರ್ನಾಟಕದಲ್ಲಿ ಈ ಪಕ್ಷಿಗಳ ಸಂಖ್ಯೆ ಬರೀ ಆರು. ಎರಡು ಜೋಡಿಗಳು ಹಾಗೂ ಅವುಗಳ ಮರಿಗಳೆರಡು ಕಂಡು ಬಂದಿದ್ದನ್ನು ದಾಖಲಿಸಲಾಗಿದೆ. ತಮ್ಮ ಆವಾಸಸ್ಥಾನದಲ್ಲಿ ಕೊಂಚ ಏರುಪೇರಾದರೂ ಇವು ಆ ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲಾರವು. ಅತ್ತ ಆಂಧ್ರಪ್ರದೇಶದಲ್ಲೂ ಇವುಗಳಿಗೆ ಬದುಕಲು ಕೊಂಚವೇ ಆವಾಸಸ್ಥಾನ ಉಳಿದಿದೆ. ಕರ್ನಾಟಕದಲ್ಲಿ ಇವುಗಳ ಆವಾಸಸ್ಥಾನದಲ್ಲಿ ಬದುಕಲು ಅವುಗಳಿಗೆ ತೊಂದರೆಯಾದರೆ, ಪಕ್ಕದ ಆಂಧ್ರಪ್ರದೇಶಕ್ಕೆ ವಲಸೆ ಹೋಗುತ್ತವೆ ಮತ್ತು ಅಲ್ಲಿಂದ ಇಲ್ಲಿಗೆ ಬರುತ್ತವೆ. ಈಗಿನ ಸನ್ನಿವೇಶದಲ್ಲಿ ಎಷ್ಟು ದಿನ ಈ ಸಂತತಿ ಉಳಿಯಬಹುದು ಎಂಬುದನ್ನು ಊಹಿಸಲು ಸಾಧ್ಯವಿಲ್ಲ. ಇಂತಹ ಅಪರೂಪದ ಪಕ್ಷಿ ಪ್ರಭೇದವನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲವೇ?



ಅಮೆರಿಕದ ಪ್ಯಾಸೆಂಜರ್ ಪಿಜನ್ (ಪಾರಿವಾಳ ಪ್ರಭೇದ) ವನ್ನು ಉಳಿಸಬೇಕು ಎಂದು ಅಲ್ಲಿನ ಸರ್ಕಾರ ಬಹಳ ಶ್ರಮಪಟ್ಟಿತ್ತು. ಆದರೆ, ಅದು ಎಚ್ಚೆತ್ತುಕೊಳ್ಳುವ ಹೊತ್ತಿಗೆ ತುಂಬಾ ತಡವಾಗಿತ್ತು. ಬಹಳ ಲಕ್ಷಗಟ್ಟಲೇ ಹಿಂಡುಗಳ ದೊಡ್ಡ ಗುಂಪಿನಲ್ಲಿ ಬದುಕುತ್ತಿದ್ದ, ಆ ಸಂತತಿ ಐದುನೂರು ಅಥವಾ ಸಾವಿರ ಹಕ್ಕಿಗಳಷ್ಟು ಸಂಖ್ಯೆಗೆ ಇಳಿದಾಗಲೇ ಅದು ಅವಸಾನ ಹೊಂದುವ ಸಂತತಿಯೆಂದು ಊಹಿಸಬಹುದಿತ್ತು. ಆದರೆ, ಅಲ್ಲಿನ ಸರ್ಕಾರ ಮೈಕೊಡವಿ ನಿಂತಿದ್ದು ತುಂಬಾ ತಡವಾಗಿ.

ಗ್ರೇಟ್ ಇಂಡಿಯನ್ ಬಸ್ಟರ್ಡ್ ಎಂದು ಕರೆಯಲಾಗುವ ಈ ಪ್ರಭೇದದ ಪಕ್ಷಿಗಳು ಭಾರತದಲ್ಲಿ 1970ರ ಸುಮಾರಿಗೆ 1200ರಷ್ಟಿದ್ದವು. ಈಗ ಶೀಘ್ರಗತಿಯಲ್ಲಿ ಕುಂಠಿತಗೊಂಡು, ಕರ್ನಾಟಕ ಮತ್ತು ಆಂಧ್ರಪ್ರದೇಶ ಸೇರಿ 6, ಗುಜರಾತಿನಲ್ಲಿ 3, ಮಹಾರಾಷ್ಟ್ರದಲ್ಲಿ 2 ಹಾಗೂ ರಾಜಸ್ಥಾನದಲ್ಲಿ 85 ಪಕ್ಷಿಗಳಿವೆ. ಈ ಹಿಂದೆ ಪಾಕಿಸ್ತಾನದಲ್ಲೂ ಇವುಗಳ ಸಂಖ್ಯೆ ಗಣನೀಯವಾಗಿತ್ತು. ಬೇಟೆ ಮತ್ತು ಆವಾಸಸ್ಥಾನ ನಾಶವಾದ ಕಾರಣಕ್ಕೆ ಪಾಕಿಸ್ತಾನದಲ್ಲಿ ಈ ಪಕ್ಷಿಗಳ ಸಂತತಿಯೇ ಇದೀಗ ಅಳಿದುಹೋಗಿದೆ.

ಎರೆಭೂತಗಳು ವೇಗವಾಗಿ ಅಳಿದುಹೋಗುತ್ತಿರುವುದನ್ನು ಗಮನಿಸಿದ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯು ಇವುಗಳನ್ನು ಉಳಿಸಲು ರಾಜ್ಯ ಸರ್ಕಾರಗಳಿಗೆ ಈ ಹಿಂದೆ ಸೂಚಿಸಿತ್ತು. ಅದರಂತೆ 2013ರಲ್ಲಿ ರಾಜಸ್ಥಾನ ಸರ್ಕಾರವು 'ಗ್ರೇಟ್ ಇಂಡಿಯನ್ ಬಸ್ಟರ್ಡ್ ಯೋಜನೆ' ರೂಪಿಸಿತು. ಈ ಪಕ್ಷಿಗಳ ಆವಾಸಸ್ಥಾನವನ್ನು ಗುರುತಿಸಿ, ಅದಕ್ಕೆ ಸೂಕ್ತ ರಕ್ಷಣೆ ನೀಡಿತು. ಸಂರಕ್ಷಿತ ತಾಣಗಳ ಸೂಕ್ಷ್ಮ ಪ್ರದೇಶಗಳಿಗೂ ಭದ್ರತೆ ನೀಡಿತು. ಹೆದ್ದಾರಿಗಳು, ವಿದ್ಯುತ್ ಪ್ರಸರಣಾ ಮತ್ತು ವಿತರಣಾ ವ್ಯವಸ್ಥೆಗಳು, ಮರುಬಳಕೆ ಶಕ್ತಿಯ ಮೂಲವಾದ ಸೌರಶಕ್ತಿ ಫಲಕಗಳು, ಒತ್ತುವರಿ ಇವುಗಳ ಆವಾಸಸ್ಥಾನವನ್ನು ನಾಶವಾಗಲು ಬಹುಮುಖ್ಯ ಕಾರಣವಾಗಿವೆ.

ಭಾರತವನ್ನು ಬ್ರಿಟಿಷರು ಆಳುತ್ತಿದ್ದ ಕಾಲದಲ್ಲಿ ಇವುಗಳನ್ನು ಮೋಜಿಗಾಗಿ ಕೊಲ್ಲಲಾಗುತ್ತಿತ್ತು. ಎರೆಭೂತದ ಎಳೆ ಹಕ್ಕಿಗಳ ಮಾಂಸ ಬಹಳ ರುಚಿ ಎಂಬ ಕಾರಣಕ್ಕೆ ಅವುಗಳ ಕಗ್ಗೊಲೆ ನಡೆಯಿತು. ಬ್ರಿಟಿಷ್ ಅಧಿಕಾರಿಯೊಬ್ಬ ಸುಮಾರು ಸಾವಿರಕ್ಕೂ ಮಿಕ್ಕಿ ಈ ಹಕ್ಕಿಗಳನ್ನು ಮೋಜಿಗಾಗಿ ಬೇಟೆಯಾಡಿದ್ದಾನೆ ಎಂಬುದು ದಾಖಲಾಗಿದೆ. ಇದರ ಹೊರತಾಗಿ ಕೆಲವು ಭಾಗಗಳಲ್ಲಿ ಆದಿವಾಸಿಗಳು ಇದು ಮೊಟ್ಟೆಯಿಟ್ಟು ಮರಿ ಮಾಡಿದ ನಂತರದಲ್ಲಿ ಅದರ ಗೂಡಿನ ಸುತ್ತ ಬೆಂಕಿ ಹಾಕುತ್ತಿದ್ದರು. ತನ್ನ ಮರಿಯನ್ನು ಕಾಪಾಡಲು ಬರುವ ತಾಯಿ ಹಕ್ಕಿಯನ್ನು ಸುಲಭದಲ್ಲಿ ಹಿಡಿದು ಸಾಯಿಸುವ ಪದ್ಧತಿ ಇದು. ಮೊಘಲ್ ದೊರೆ ಬಾಬರನಿಗೆ ಈ ಹಕ್ಕಿಯಿಂದ ಮಾಡಿದ ಖಾದ್ಯ ಇಷ್ಟವಾದ ಊಟವಾಗಿತ್ತು ಎಂಬುದನ್ನು ದಾಖಲಿಸಲಾಗಿದೆ.

ಕರ್ನಾಟಕ ಮತ್ತು ಆಂಧ್ರದ ಭಾಗದಲ್ಲಿ ಉಳಿದಿರುವ 6 ಎರೆಭೂತಗಳನ್ನು ಉಳಿಸಲೇಬೇಕಿದೆ. ಇದಕ್ಕಾಗಿ ಅರಣ್ಯ ಇಲಾಖೆ ಮತ್ತು ಸಾರ್ವಜನಿಕರು ಒಟ್ಟಾಗಿ ಶ್ರಮಿಸಬೇಕಿದೆ. ಮೊದಲ ಹಂತವಾಗಿ ಕರ್ನಾಟಕದಲ್ಲಿ ಇವುಗಳ ಆವಾಸಸ್ಥಾನದ ವ್ಯಾಪ್ತಿಯಲ್ಲಿ ಒತ್ತುವರಿ ಅಡ್ಡಿ-ಆತಂಕಗಳನ್ನು ನಿವಾರಿಸಿ ಕನಿಷ್ಠ ಐದು ಸಾವಿರ ಹೆಕ್ಟೇರಿನಷ್ಟು ಪ್ರದೇಶವನ್ನು ಒಗ್ಗೂಡಿಸಿ ವಿಸ್ತರಿಸಬೇಕಿದೆ. ಆ ಪ್ರದೇಶವನ್ನು ಮಾನವ ಹಸ್ತಕ್ಷೇಪ ಮುಕ್ತ ಮಾಡುವುದು, ಜೊತೆಗೆ ಬೀದಿನಾಯಿಗಳು ಮತ್ತಿತರ ಪ್ರಾಣಿಗಳು ಆ ಪ್ರದೇಶವನ್ನು ಪ್ರವೇಶಿಸದಂತೆ ಬೇಲಿ ನಿರ್ಮಾಣ ಮಾಡುವುದು ಮುಖ್ಯವಾಗಿ ಆಗಬೇಕಾದ ಕೆಲಸವಾಗಿದೆ.

ಹೀಗೊಂದು ಪ್ರಶ್ನೆ ಏಳುವುದು ಸಹಜ. ಬರೀ ಆರು ಹಕ್ಕಿಗಳನ್ನು ಉಳಿಸುವ ಸಲುವಾಗಿ ಇಷ್ಟೆಲ್ಲಾ ಶ್ರಮ ಏಕೆ? ಒಂದು ಪಕ್ಷಿಯ ಆವಾಸಸ್ಥಾನವನ್ನು ರಕ್ಷಣೆ ಮಾಡುವುದು ಎಂದರೆ, ಆ ಪ್ರದೇಶ ಆ ಪಕ್ಷಿಗೊಂದೇ ಸೀಮಿತವೆಂದು ತಿಳಿಯಬಾರದು. ಅಳಿವಿನಂಚಿನಲ್ಲಿರುವ ಕೃಷ್ಣಮೃಗ, ಬಂಡೆನರಿ, ತೋಳ, ಕತ್ತೆಕಿರುಬ ಹೀಗೆ ಅನೇಕ ಜೀವಿವೈವಿಧ್ಯಗಳು ಇದೇ ಆವಾಸಸ್ಥಾನದಲ್ಲಿ ಉಳಿಯುತ್ತವೆ. ಜೀವವೈವಿಧ್ಯದ ಕೊಂಡಿಯಲ್ಲಿ ಒಂದೊಂದು ಜೀವಿಯೂ ಅತಿಮುಖ್ಯ. ಆ ನಿಗದಿತ ಕೊಂಡಿ ಏಕೆ ಮುಖ್ಯವೆಂದು ನಮಗೆ ಈಗ ತಿಳಿಯದಿರಬಹುದು. ಮುಂದೊಂದು ದಿನ ಅದರ ಮಹತ್ವ ತಿಳಿಯುವಾಗ ಆ ಸಂತತಿಯೇ ವಿನಾಶವಾದಲ್ಲಿ, ನಮಗೆ ಪಶ್ಚಾತ್ತಾಪ ಪಡುವುದಷ್ಟೇ ಉಳಿಯುತ್ತದೆ.

ಬಾನಾಡಿಗಳ ಸಂಗದಲ್ಲಿ...

8ನೇ ಪುಟದಿಂದ...

ನಿಮಗೆ ಗೊತ್ತೆ? ಪಕ್ಷಿಗಳಲ್ಲಿ ಪ್ರಮುಖವಾಗಿ ಆರು ವಿಧಗಳಿವೆ.

1. **ಅರ್ಬೋರಿಯಲ್ ಪಕ್ಷಿಗಳು (Arboreal birds):** ಅರ್ಬೋರಿಯಲ್ ಎಂಬ ಪದವು ಹೆಚ್ಚಾಗಿ ಮರಗಳ ಮೇಲೆ ವಾಸಿಸುವ ಎಂಬ ಅರ್ಥ ಕೊಡುತ್ತದೆ. ಈ ಪಕ್ಷಿಗಳ ಗುಂಪು ಪೊದೆಗಳಲ್ಲಿ ಅಥವಾ ಪೊದೆಗಳ ಸುತ್ತಲೂ ತಮ್ಮ ಜೀವನವನ್ನು ನಡೆಸುತ್ತದೆ.
2. **ಭೂಮಿಯ ಹಕ್ಕಿಗಳು (Terrestrial birds):** ನೆಲದ ಮೇಲೆ ಹೆಚ್ಚಿನ ಸಮಯವನ್ನು ಕಳೆಯುವ ಪಕ್ಷಿಗಳು ಇವು. ಹಾರುವ ಸಾಮರ್ಥ್ಯವಿದ್ದರೂ ಅವು ನಡೆಯುತ್ತಲೇ ಇರುತ್ತವೆ, ಓಡುತ್ತವೆ, ನೆಲದ ಮೇಲೆ ಕುಳಿತುಕೊಳ್ಳುತ್ತವೆ.
3. **ಬೇಟೆಯ ಪಕ್ಷಿಗಳು (Birds of prey):** ಕೆಲವು ಪಕ್ಷಿಗಳು ಬೇಟೆಯನ್ನು ಮಾತ್ರ ಹಿಡಿಯುತ್ತವೆ. ಈ ಪಕ್ಷಿಗಳು ಚೂಪಾದ ಕೊಕ್ಕುಗಳೊಂದಿಗೆ ಮುಖ್ಯವಾಗಿ ಹಗಲಿನಲ್ಲಿ ಸಕ್ರಿಯವಾಗಿರುತ್ತವೆ (diurnal).
4. **ವೈಮಾನಿಕ ಪಕ್ಷಿಗಳು (Aerial birds):** ಹೆಚ್ಚಾಗಿ ಗಾಳಿಯಲ್ಲಿ ಹಾರುತ್ತ ಇರುತ್ತವೆ. ದುರ್ಬಲ ಅಥವಾ ವೆಸ್ಟಿಜಿಯಲ್ ಪರ್ಚಿಂಗ್ ಪಾದಗಳನ್ನು ಹೊಂದಿರುತ್ತವೆ. ಆದಾಗ್ಯೂ, ರೆಕ್ಕೆಗಳು ಬಲವಾಗಿರುತ್ತವೆ ಮತ್ತು ಹಾರಾಟಕ್ಕೆ ಬೇಕಾದ ಶಕ್ತಿಯನ್ನು ಹೊಂದಿರುತ್ತವೆ.
5. **ಈಜು ಮತ್ತು ಡೈವಿಂಗ್ ಪಕ್ಷಿಗಳು (Swimming and diving birds):** ಈ ರೀತಿಯ ಪಕ್ಷಿಗಳು ನೀರಿನಲ್ಲಿ ವಾಸಿಸುತ್ತವೆ. ಕೆಲವು ಪಕ್ಷಿಗಳು ಮೊಟ್ಟೆಯಿಡಲು ಭೂಮಿಗೆ ಬರುತ್ತವೆ. ಆದರೆ, ಹೆಚ್ಚಿನ ಬೆಳವಣಿಗೆಗಾಗಿ ನೀರಿಗೆ ಹಿಂತಿರುಗುತ್ತವೆ.
6. **ತೀರದ ಹಕ್ಕಿಗಳು ಅಥವಾ ಅಲೆದಾಡುವ ಪಕ್ಷಿಗಳು (Shore birds and wading birds):** ಈ ಜಲಚರ ಪಕ್ಷಿಗಳು ವಿರಳವಾಗಿ ಈಜುತ್ತವೆ.



ನೀರಿನ ಮೇಲೆ ಗುಳುಮುಳಕನ (ಲಿಟ್ಲ್ ಗ್ರೇಬ್) ಚಿನ್ನಾಟ ಚಿತ್ರ: ಶ್ರೀನಾಥ್ ಬಿದರೆ

ನಾವು ಬೆಂಗಳೂರಿನ ರಾಚೇನಹಳ್ಳಿ ಕೆರೆಯ ಪುನಶ್ಚೇತನದ ಕೆಲಸವನ್ನು 2014ರಲ್ಲಿ ಕೈಗೊಂಡಾಗ ಕೆಲವು ಪಕ್ಷಿಗಳನ್ನು ಬಹಳ ಸೂಕ್ಷ್ಮವಾಗಿ ಅಧ್ಯಯನ ಮಾಡುವ ಅವಕಾಶ ನನಗೆ ಸಿಕ್ಕಿತು. ಪದ್ಮಾ ಮತ್ತು ಅಶೋಕ್ ದಂಪತಿ ನಮಗೆ ಕೆರೆಗಳಲ್ಲಿ ಕಾಣುವ ಪಕ್ಷಿಗಳ ಬಗ್ಗೆ ಪರಿಚಯ ಮಾಡಿಸಿದ್ದರು. ನಮ್ಮ ಜಲಮಿತ್ರ ಸ್ವಯಂಸೇವಕರ ಗುಂಪಿನ ಶ್ರೀನಾಥ್ ಬಿದರೆ ಅವರು ಫೋಟೊಗ್ರಫಿ ಮತ್ತು ಪಕ್ಷಿ ವೀಕ್ಷಣೆಯಲ್ಲಿ ಪರಿಣತರು.

ಪ್ರತೀ ಭಾನುವಾರ ಬೆಳಿಗ್ಗೆ ನಾವು ರಾಚೇನಹಳ್ಳಿ ಕೆರೆಗೆ ಪಕ್ಷಿ ವೀಕ್ಷಣೆಗಾಗಿ ಹೋಗುತ್ತಿದ್ದೆವು. ಕೆರೆಗೆ ವಾಯು ವಿಹಾರಕ್ಕಾಗಿ ಬರುತ್ತಿದ್ದ ಜನರಿಗೆ ಪ್ರತ್ಯೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನೀರಿನ ಹಕ್ಕಿಗಳು, ಕೆರೆಯ ಮೀನುಗಳು, ನೀರಿನ ಗುಣಮಟ್ಟ, ಇತರ ಪಕ್ಷಿಗಳು, ಗಿಡ ಮರಗಳು ಮತ್ತು ಇವುಗಳ ಮಧ್ಯೆ ಇರುವ ಅವಲಂಬನೆ ಕುರಿತು ತಿಳಿಸಲು ಪ್ರಾರಂಭಿಸಿದೆವು. ಇದರಿಂದ ಕೆರೆಯಲ್ಲಿ ಪಕ್ಷಿಗಳಿಗೆ ಹಾನಿಯಾಗುವಂತಹ ಚಟುವಟಿಕೆ ನಿಯಂತ್ರಿಸಿ ಕೆರೆಯ ಜಾಗ ಮತ್ತು ಪರಿಸರವನ್ನು ಕಾಪಾಡುವಲ್ಲಿ ಹೆಚ್ಚು ಜನರು ನಮ್ಮೊಂದಿಗೆ ಕೈಜೋಡಿಸಿದರು.

ನಮ್ಮ ಕೆರೆಯಲ್ಲಿ ಸುಮಾರು 60ಕ್ಕೂ ಹೆಚ್ಚು ಪ್ರಕಾರದ ಪಕ್ಷಿಗಳನ್ನು ಕಾಣಬಹುದು. ಕೆರೆಯಲ್ಲಿ ಗ್ಲಾಸಿ ಐಬಿಸ್, ಲಿಟಲ್ ಗ್ರೀಬ್, ಲೋಟೆನ್ಸ್ ಸನ್‌ಬರ್ಡ್, ಹೆಜ್ಜಾರ್ಲೆ ಮೊದಲಾದ ಪಕ್ಷಿಗಳನ್ನು ಕಾಣಬಹುದು.

ಪ್ರಸಕ್ತ ವಿಶ್ವ ಜೀವವೈವಿಧ್ಯ ದಿನದ ಘೋಷಣೆಯು 'ಎಲ್ಲಾ ಜೀವಿಗಳಿಗಾಗಿ ಸಮಾನ ಭವಿಷ್ಯವನ್ನು ನಿರ್ಮಿಸುವುದು' ಎಂಬುದಾಗಿದೆ. ಜೀವವೈವಿಧ್ಯ ಮತ್ತು ಅಭಿವೃದ್ಧಿ ವಿಷಯಗಳಲ್ಲಿ ಸಮತೋಲನವನ್ನು ಕಾಪಾಡಿಕೊಂಡು ಭೂಮಿ ಮೇಲಿನ ಎಲ್ಲ ಜೀವಿಗಳಿಗೆ ಹಾನಿಯಾಗದಂತೆ ಸಹಬಾಳ್ವೆಯನ್ನು ಉತ್ತೇಜಿಸುವ ಅಗತ್ಯವನ್ನು ಅದು ಪ್ರತಿಪಾದಿಸುತ್ತದೆ. ಹವಾಮಾನ ಹಾಗೂ ಪರಿಸರದಲ್ಲಿ ಆಗುವ ಬದಲಾವಣೆಗಳಿಗೆ ಜೀವವೈವಿಧ್ಯವೇ ಅಡಿಪಾಯವಾಗಿದೆ. ಅದನ್ನು ಕಾಪಾಡಿಕೊಳ್ಳುವುದು ಅತಿ ಮುಖ್ಯವಾಗಿದೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಚಿಕ್ಕ ಲೆಕ್ಕ ಮಾಡು ಚೊಕ್ಕ

1. 99+9=9 ಇದಕ್ಕೆ ಒಂದು ಇಂಗ್ಲಿಷ್ ಪದ ಸೇರಿಸಿ ಸಮೀಕರಣ ಮಾಡಿ ಸರಿಪಡಿಸಿ
2. ಒಂದು ಕೈಯಲ್ಲಿ 5 ಬೆರಳುಗಳಿವೆ. ಎರಡೂ ಕೈಗಳಲ್ಲಿ 10 ಬೆರಳುಗಳಿವೆ. ಹಾಗಾದರೆ 10 ಕೈಗಳಲ್ಲಿ ಎಷ್ಟು ಬೆರಳುಗಳಾಗುತ್ತವೆ.
3. 48x159 = 7632 - ಈ ಗುಣಾಕಾರದ ವಿಶೇಷತೆ ಏನು?
4. ಒಂದು ವಸ್ತುವನ್ನು 10 ರೂಪಾಯಿಗಳಿಗೆ ಮಾರಿದರೆ 1 ರೂಪಾಯಿ ಲಾಭವಾಗುತ್ತದೆ. ಅದೇ ವಸ್ತುವನ್ನು 20 ರೂಪಾಯಿಗೆ ಮಾರಾಟ ಮಾಡಿದರೆ ಎಷ್ಟು ಲಾಭವಾಗುತ್ತದೆ?
5. ಯಾವ ಚಿಹ್ನೆಯನ್ನು ಬಳಸಿಕೊಳ್ಳದೇ 1 - 9 ಅಂಕಿಗಳನ್ನು ಬಳಸಿಕೊಂಡು 1 ಬರುವಂತೆ ಮಾಡುವುದು ಹೇಗೆ?
6. ಇಬ್ಬರು ಮಗ, ಇಬ್ಬರು ತಂದೆ, ಒಬ್ಬ ತಾತ, ಒಬ್ಬ ಮೊಮ್ಮಗ ಕೂಡಿ ಕಡಿಮೆ ಎಂದರೂ ಎಷ್ಟು ಜನ ಆಗುತ್ತಾರೆ?
7. 3 ? 2 1 4 ಎಂಬ ಸಂಖ್ಯೆಗಳಲ್ಲಿ ಯಾವ ಅಂಕಿ ಹಾಕಿದರೆ ಆ ಸಂಖ್ಯೆ 9ರಿಂದ ಪೂರ್ಣ ಭಾಗವಾಗುತ್ತದೆ?
8. 1ರಿಂದ 100ರವರೆಗೆ ಸಂಖ್ಯೆ ಬರೆದಾಗ ಎಷ್ಟು 9ಗಳು ಕಾಣಿಸಿಕೊಳ್ಳುತ್ತವೆ?
9. ಮೂರು ಸಾವಿರಕ್ಕೆ 3 ಸೊನ್ನೆ ಬಂದರೆ ನಾಲ್ಕು ಸಾವಿರಕ್ಕೆ ಎಷ್ಟು ಸೊನ್ನೆ ಬರುತ್ತವೆ?
10. ವೈದ್ಯರು 3 ಮಾತ್ರೆಗಳನ್ನು ಅರ್ಧ ತಾಸಿಗೆ ಒಂದರಂತೆ ತೆಗೆದುಕೊಳ್ಳಲು ಹೇಳಿದ್ದಾರೆ. ಒಟ್ಟು ಎಷ್ಟು ಅವಧಿ ಹಿಡಿಯುವುದು?

ಅದಲು ಬದಲು ಕಂಚಿ ಕದಲು...

ಇಲ್ಲಿ ಕೊಟ್ಟಿರುವ ಪದದ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಿ

1. ಆತನ ಗುಡಿ = ________
2. ಪಾಟ ಕವಚ = ________
3. ಜನಮಾನಸ = ________
4. ವಾಣಿ ಕದನ = ________

ಜಾಣಪದ ಆಟ

ಪದ ಪರಿಚಯ ಪರೀಕ್ಷೆ

	ಹ	ಳ	ಸುಳಿವು
1			ಷಡ್ರಸಗಳಲ್ಲಿ ಒಂದು
2			ಕೀಟ
3			ಪೇಪರು
4			ಬೈಯು
5			ತಾಂಡು



ಟ್ವೆಂಟಿ – 20 ಮ್ಯಾಚ್

ಶಬ್ದಗಳಿಗೂ ಅರ್ಥಗಳಿಗೂ ಹೊಂದಿಸಿ


1.	ನೆಲೆ	A.	ಬದುಕು
2.	ಬೆಕ್ಕಸ	B.	ಸೈನಿಕ
3.	ಮಿಡಚಿ	C.	ಲಾಲಿ ಹಾಡು
4.	ಲೋಲಾಕು	D.	ಉಡಾಳ
5.	ವಾರಿಧಿ	E.	ನಟಿ
6.	ಸದರಿ	F.	ಹೊಗಳಿಕೆ
7.	ಪುಷ್ಕಳ	G.	ಸಮುದ್ರ
8.	ಸಮರ	H.	ಮೇಲೆ ಕಾಣಿಸಿದ
9.	ಪೋಕರಿ	I.	ರೆಕ್ಕೆ
10.	ಜರಡಿ	J.	ಶಿವನ ಕುದುರೆ
11.	ಅಭಿನೇತ್ರಿ	K.	ಸಾಣಿಗೆ
12.	ಜೋಗುಳ	L.	ಕಿವಿಯ ಆಭರಣ
13.	ಪ್ರಶಂಸೆ	M.	ಆಶ್ರಯ
14.	ಗಮ್ಮತ್ತು	N.	ವಿಪುಲ
15.	ಗರಿ	O.	ಜೇನು
16.	ಬಂಡು	P.	ಆಶ್ಚರ್ಯ
17.	ಭಟ	Q.	ಯುದ್ಧ
18.	ಬಾಳು	R.	ಕುಲ
19.	ವಂಶ	S.	ಮೋಜು
20.	ನಿಧೀಶ್ವರ	T.	ಕುಬೇರ

ಆದಿಮಾನವನ ಚಿತ್ರಸಂವಹನ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಇದು ಆದಿಮಾನವ ಚಿತ್ರದ ಮೂಲಕ ಸಂವಹನ ನಡೆಸುತ್ತಿದ್ದ ಕಥೆ. ಸುಮಾರು 50 ಸಾವಿರ ವರ್ಷಗಳ ಹಿಂದೆ ಭೂಮಿಯ ಮೇಲೆ ಮನುಷ್ಯ ಗೋಚರಿಸಿದಾಗ ಪ್ರಾಣಿಯಂತಿದ್ದ. ಆಹಾರಕ್ಕಾಗಿ ಬೇಟೆ ಅವನ ಕೆಲಸವಾಗಿತ್ತು



ತಾನು ನೋಡಿದ ವಿಶಿಷ್ಟ ಪ್ರಾಣಿಯನ್ನು ಇತರರಿಗೆ ತೋರಿಸಲು ಕೈಗೆ ಸಿಕ್ಕ ಕಲ್ಲಿನಿಂದ ಗುಹೆಯ ಬಂಡೆ ಮೇಲೆ ಗೀಚಿ ತೋರಿಸುತ್ತಿದ್ದ. ಮಾತೇ ಇರದ ಆ ಕಾಲದಲ್ಲಿ ಚಿತ್ರವು ಸಂವಹನ ಮಾಧ್ಯಮವಾಗಿ ವಿಶ್ವಭಾಷೆ ಆಯಿತು



ವಿಶ್ರಾಂತಿಯ ಸಮಯದಲ್ಲಿ ಚಿತ್ರ ಗೀಚುವುದೇ ಅವನ ಆಸಕ್ತಿದಾಯಕ ಹವ್ಯಾಸವಾಯಿತು. ಸ್ಪೇನ್ ನ ಅಲ್ಟಿಮಿರಾ ಮತ್ತು ಗ್ರೀಕ್‌ನ ಕ್ಯಾಸ್ ಲಾ ಗುಹೆಗಳಲ್ಲಿ ಮೊತ್ತಮೊದಲ ಆದಿಮಾನವನ ಗುಹಾಂತರ ಚಿತ್ರಗಳನ್ನು ಕಾಣಬಹುದು



ಕಾಡ್ಗಿಚ್ಚುಗಳು ಸಂಭವಿಸಿದಾಗ ಅಲ್ಲಿ ಸೃಷ್ಟಿಯಾಗುವ ಬೂದಿ, ಇದ್ದಿಲುಗಳನ್ನು ಬಣ್ಣಗಳಾಗಿ ಬಳಸಲಾರಂಭಿಸಿದ. ಕ್ರಮೇಣ ಬೇರೆ ಬೇರೆ ವಸ್ತುಗಳನ್ನು ಬಳಸಿ ಬಣ್ಣಗಳನ್ನು ಸೃಷ್ಟಿಸಿದ



ಒಣಗಿದ ಎಲೆಗಳು, ಸುಣ್ಣದಕಲ್ಲು, ಕೆಂಪುಮಣ್ಣು ಪುಡಿಮಾಡಿ ಮರದ ಅಂಟು, ಕಾಯಿಗಳ ಜಿಗುಟು ಮತ್ತು ಪ್ರಾಣಿಗಳ ಕೊಬ್ಬನ್ನು ಇದಕ್ಕೆ ಮಿಶ್ರಣಮಾಡಿ ಬೇರೆ ಬೇರೆ ಬಣ್ಣಗಳನ್ನು ತಾನೇ ತಯಾರಿಸಿದ. ಪ್ರಕೃತಿಯಲ್ಲಿ ಕಂಡುಬಂದ ಬಣ್ಣಗಳೂ ಅವನಿಗೆ ಸ್ಫೂರ್ತಿಯಾದವು



ಹಾಗೆ ಸಿದ್ಧಪಡಿಸಿದ ಬಣ್ಣಗಳನ್ನು ಬಿದಿರಿನ ಕೊಳವೆಯ ಒಳಗೆ ಸಂಗ್ರಹಿಸಿಡುತ್ತಿದ್ದ. ಅಗತ್ಯವಾದಾಗ ತಾನು ಬಿಡಿಸಿಟ್ಟ ರೇಖೆಗಳಿಗೆ ತುಂಬಿ ಬಣ್ಣದ ಚಿತ್ರ ನೋಡಿ ಖುಷಿ ಪಡುತ್ತಿದ್ದ

ಇದು ಮೇ ಮಾಸದ ಪದ ಆಟ

ಇದು ಮೇ ತಿಂಗಳು. ಅದಕ್ಕಾಗಿ 15 ಮೇ ಅಕ್ಷರಗಳಿಗೆ ಮುಂದೆ ಕೊಟ್ಟ ಸುಳಿವಿಗೆ ತಕ್ಕಂತೆ ಎರಡಕ್ಷರಗಳ ಮೇ ಪದ ರಚಿಸಿ

1. ಮೇ ___ ___ (ಆಡು)
2. ಮೇ ___ ___ (ಅಗ್ರಭಾಗ ತುದಿ)
3. ಮೇ ___ ___ (ಮೋಡ)
4. ಮೇ ___ ___ (ಗಂಡು ಕುರಿ)
5. ಮೇ ___ ___ (ಮಿಗಿಲಾದದ್ದು)
6. ಮೇ ___ ___ (ನೇಗಿಲು, ರಂಟೆ)
7. ಮೇ ___ ___ (ಗುಂಪು)
8. ಮೇ ___ ___ (ಜೇನಿನ ಅಂಟು)
9. ಮೇ ___ ___ (ಕಣದಲ್ಲಿ ನೆಡುವ ಕಂಬ)
10. ಮೇ ___ ___ (ಟೇಬಲ್ಲು)
11. ಮೇ ___ ___ (ಎತ್ತರವಾದ ನೆಲ)
12. ಮೇ ___ ___ (ಯಜ್ಞ, ಯಾಗ)
13. ಮೇ ___ ___ (ಜಾನುವಾರುಗಳ ಆಹಾರ)
14. ಮೇ ___ ___ (ಗಡಿ)
15. ಮೇ ___ ___ (ಮೇಲ್ವಿಚಾರಣೆ ಮಾಡುವವ)

ಕಳೆದ ಸಂಚಿಕೆಯ ಸರಿ ಉತ್ತರಗಳು

1. ಒಮ್ಮೆ ಮಾತ್ರ. ನಂತರ ತೆಗೆಯಲು 100 ಇರುವುದಿಲ್ಲವಲ್ಲ
2. 99 ಸೆಕೆಂಡು 100ನೇ ತುಂಡು ಕತ್ತರಿಸುವುದಿಲ್ಲ
3. ಕೊನೆಯವನಿಗೆ 1 ಹಣ್ಣನ್ನು ಬುಟ್ಟಿಯಲ್ಲಿಟ್ಟೇ ಕೊಟ್ಟು ಬಿಡಬೇಕು
4. UBQT 5. ಕಾರವಾರ
6. ಟೊಮೆಟೊ 7. ಜಡೇಜ
8. 26 9. 22 ಹಾಗೂ 10
10. ಉಲ್ಟಾ ಹಿಡಿದು ಕೂಡಿಸಿ
11. 1961
12. ನಯನ
13. ವಾಟ್ಸನ್ ಇಲ್ಲಿ ಬಾ
14. O P (ಎಲ್ಲ ಅಕ್ಷರ ವಕ್ರ ರೇಖೆಯಲ್ಲಿವೆ)



ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:

majakoora@prajavani.co.in



ಹೆಮ್ಮೆಯ ಕ್ಷಣ ಬ್ರೆಜಿಲ್‌ನಲ್ಲಿ ಈಚೆಗೆ ನಡೆದ ಡೆಫ್‌ಲಿಂಪಿಕ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಿದ್ದ ಭಾರತದ ಅಥ್ಲೀಟ್‌ಗಳನ್ನು ಪ್ರಧಾನಿ ಮೋದಿ ಶನಿವಾರ ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸನ್ಮಾನಿಸಿದರು. ಈ ವೇಳೆ ಕ್ರೀಡಾಪಟುಗಳು ತಾವು ಹಸ್ತಾಕ್ಷರ ಮಾಡಿದ ಜೆರ್ಸಿಯನ್ನು ಮೋದಿಯವರಿಗೆ ಕಾಣಿಕೆ ನೀಡಿದರು. ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ ಸಚಿವ ಅನುರಾಗ್ ಠಾಕೂರ್ ಇದ್ದಾರೆ –ಪಿಟಿಐ ಚಿತ್ರ

ಆಸ್ಟ್ರೇಲಿಯಾ: ಆ್ಯಂಟನಿ ಅಲ್ಬನೆಸ್ ನೂತನ ಪ್ರಧಾನಿ?



ಸಿಡ್ನಿ (ಎಎಫ್‌ಪಿ): ಆಸ್ಟ್ರೇಲಿಯಾ ಸಂಸತ್ತಿಗೆ ನಡೆದ ಚುನಾವಣೆಯ ಪ್ರಾಥಮಿಕ ಫಲಿತಾಂಶ ಹೊರಬಿದ್ದಿದ್ದು, ಪ್ರಧಾನಿ ಸ್ಕಾಟ್ ಮಾರಿಸನ್ ನೇತೃತ್ವದ ಕನ್ಸರ್ವೇಟಿವ್ ಪಕ್ಷಕ್ಕೆ ಹಿನ್ನಡೆಯಾಗಿದೆ.

ವಿರೋಧ ಪಕ್ಷವಾಗಿದ್ದ ಲೇಬರ್ ಪಾರ್ಟಿ ಮುನ್ನಡೆ ಸಾಧಿಸಿದ್ದು, ಆ್ಯಂಟನಿ ಅಲ್ಬನೆಸ್ ಅವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸುವುದು ನಿಶ್ಚಿತವಾಗಿದೆ. 'ತಮ್ಮ ನೇತೃತ್ವ ತಂಡವು ಸೋಮವಾರ ಪ್ರಮಾಣವಚನ ಸ್ವೀಕರಿಸಲಿದೆ' ಎಂದೂ ಆ್ಯಂಟನಿ ಪ್ರಕಟಿಸಿದ್ದಾರೆ.

ಆ್ಯಂಟನಿ ಅಲ್ಬನೆಸ್ ನೇತೃತ್ವದ ಪಕ್ಷ 2007ರ ನಂತರ ಇದೇ ಮೊದಲಿಗೆ ಅಧಿಕಾರ ಗಳಿಸುವತ್ತ ಮುನ್ನಡೆದಿದೆ. ಅಲ್ಪಮತದ ಸರ್ಕಾರ ರಚನೆಯ ಸೂಚನೆ ಸ್ಪಷ್ಟವಾಗಿದೆ. ಹಿಂದೆ 2010–13ರಲ್ಲಿ ಅತಂತ್ರ ಸಂಸತ್ತು ರಚನೆಯಾಗಿತ್ತು.

ಕ್ವಾಡ್: ಪ್ರಧಾನಿ ಮೋದಿ 23 ಸಭೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಇದೇ 24ರಂದು ಟೋಕಿಯೊದಲ್ಲಿ ನಡೆಯಲಿರುವ ಕ್ವಾಡ್ ಶೃಂಗಸಭೆಯಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್, ಆಸ್ಟ್ರೇಲಿಯಾ ಹಾಗೂ ಜಪಾನ್‌ನ ಪ್ರಧಾನಮಂತ್ರಿಗಳ ಜತೆ ಸಭೆ ಸೇರಿದಂತೆ ಒಟ್ಟು 40 ಗಂಟೆಗಳ ಅವಧಿಯಲ್ಲಿ 23 ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಪ್ರಧಾನಿ ವ್ಯಾಪಾರ, ರಾಜತಾಂತ್ರಿಕ ಮಾತುಕತೆ ನಡೆಸಲಿದ್ದಾರೆ.

ಬಿಜೆಪಿ, ಕೇಂದ್ರ ಸರ್ಕಾರದ ವಿರುದ್ಧ ರಾಹುಲ್ ಗಾಂಧಿ ತೀವ್ರ ವಾಗ್ದಾಳಿ

'ಸರ್ಕಾರದಿಂದ ಜನರ ಧ್ವನಿ ದಮನ'

ನವದೆಹಲಿ (ಪಿಟಿಐ): ಸರ್ಕಾರದಲ್ಲಿರುವ ಪ್ರಭಾವಿಗಳು, ಸಿಬಿಐ, ಇ.ಡಿ., ಈಗ ಭಾರತವನ್ನು ತಿಂದು ಹಾಕುತ್ತಿವೆ. ಪಾಕಿಸ್ತಾನದಲ್ಲಿ ಆದಂತೆಯೇ ಭಾರತದಲ್ಲಿಯೂ ಆಗುತ್ತಿದೆ ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಹೇಳಿದ್ದಾರೆ.

ಸರ್ಕಾರದಲ್ಲಿರುವ ಪ್ರಭಾವಿ ವ್ಯಕ್ತಿಗಳು ಸಂಸ್ಥೆಗಳ ಮೇಲೆ ದಾಳಿ ನಡೆಸುತ್ತಿದ್ದಾರೆ ಮತ್ತು ಮಾಧ್ಯಮದಂತಹ ಸಂಸ್ಥೆಗಳನ್ನು ಕೈವಶ ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿದ್ದಾರೆ. ಬ್ರಿಡ್ಜ್ ಇಂಡಿಯಾ ಸಂಘಟನೆಯು ಲಂಡನ್‌ನಲ್ಲಿ ಶುಕ್ರವಾರ ಏರ್ಪಡಿಸಿದ್ದ 'ಐಡಿಯಾಸ್ ಫಾರ್ ಇಂಡಿಯಾ' ಸಮಾವೇಶದಲ್ಲಿ ರಾಹುಲ್ ಮಾತನಾಡಿದ್ದಾರೆ. ಆಡಳಿತಾರೂಢ ಬಿಜೆಪಿಯ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಜನರ ಧ್ವನಿಯನ್ನು ದಮನ ಮಾಡಲಾಗುತ್ತಿದೆ ಎಂದು ಅವರು ಆರೋಪಿಸಿದರು. ಕಾಂಗ್ರೆಸ್ ಪಕ್ಷವು ಜನರ ಬಳಿಗೆ ಹೋಗಲಿದೆ ಮತ್ತು 'ಭಾರತ ಎಂಬ ಚಿಂತನೆ'ಯನ್ನು ರಕ್ಷಿಸುವುದಕ್ಕಾಗಿ ಹೋರಾಡಲಿದೆ. ಆಡಳಿತಾರೂಢ ಪಕ್ಷದ ವಿರುದ್ಧ ದೊಡ್ಡ ಅಭಿಯಾನ ನಡೆಸುವುದಕ್ಕಾಗಿ ಪ್ರಾದೇಶಿಕ ಪಕ್ಷಗಳನ್ನು ಕಾಂಗ್ರೆಸ್ ಜತೆಗೂಡಿಸಲಿದೆ ಎಂದರು.

'ಮಾಧ್ಯಮ, ಸಂವಹನ ಮತ್ತು ಸಾಂಸ್ಥಿಕ ವ್ಯವಸ್ಥೆಗಳ ಮೇಲೆ ಬಿಜೆಪಿಗೆ ಶೇಕಡಾ ನೂರರಷ್ಟು ಹಿಡಿತ ಇದೆ. ಬಿಜೆಪಿ ಹೊಂದಿರುವ ಹಣ ಬಲವನ್ನು ಸರಿಗಟ್ಟಲು ನಮಗೆ ಸಾಧ್ಯವಿಲ್ಲ. ಸಂವಹನ ಮತ್ತು ಹಣ ಹೊಂದಿಸುವುದಕ್ಕೆ ಸಂಪೂರ್ಣ ಹೊಸ ವಿಧಾನವನ್ನು ನಾವು ಕಂಡುಕೊಳ್ಳಬೇಕಿದೆ. ಜನರಿಗೆ ಹೆಚ್ಚು ಹತ್ತಿರವಾಗುವಂತಹ ಸಾಂಸ್ಥಿಕ ರಚನೆಯ ಬಗ್ಗೆ ನಾವು ಯೋಚಿಸಬೇಕಿದೆ. ನಿರುದ್ಯೋಗ, ಬೆಲೆ ಏರಿಕೆ ಮತ್ತು ಪ್ರಾದೇಶಿಕ ವಿಚಾರಗಳ ಬಗ್ಗೆ ದೊಡ್ಡ ಮಟ್ಟದ ಚಳವಳಿ ನಡೆಸುವ ಬಗ್ಗೆಯೂ ಚಿಂತಿಸಬೇಕಿದೆ' ಎಂದು ರಾಹುಲ್ ಹೇಳಿದ್ದಾರೆ.

'ದೇಶದಾದ್ಯಂತ ಸೀಮೆ ಎಣ್ಣೆ ಹರಡಲಾಗಿದೆ. ಈಗ ಬೇಕಿರುವುದು ಒಂದು ಕಿಡಿ ಮಾತ್ರ' ಎಂದು ರಾಹುಲ್ ಎಚ್ಚರಿಸಿದ್ದಾರೆ.

'ನೀವು ಇದನ್ನೇ ಹೇಳಬೇಕು ಮತ್ತು ಬೇರೇನನ್ನೂ ಹೇಳಬಾರದು ಎಂದು ಕಾರ್ಯಕರ್ತರಿಗೆ ಹೇಳಲಾಗುತ್ತಿದೆ. ಕಮ್ಯುನಿಸ್ಟ್ ಸಿದ್ಧಾಂತವಾಗಲಿ ಆರ್‌ಎಸ್‌ಎಸ್ ಸಿದ್ಧಾಂತವಾಗಲಿ ನಿರ್ದಿಷ್ಟ ಸಿದ್ಧಾಂತವನ್ನು ಜನರ ಮೇಲೆ ಹೇರಲಾಗುತ್ತಿದೆ. ನಾವು ಆ ಸ್ವರೂಪವನ್ನು ಹೊಂದಿಲ್ಲ. ನಾವು ಭಾರತದ ಜನರ ಮಾತು ಆಲಿಸಿ, ಅದನ್ನು ಮುನ್ನೆಲೆಗೆ ತಂದು ನಿಲ್ಲಿಸುವ ಮನಸ್ಥಿತಿಯವರು' ಎಂದು ರಾಹುಲ್ ಹೇಳಿದ್ದಾರೆ.

ಉಕ್ರೇನ್‌ನಲ್ಲಿ ನಡೆಯುತ್ತಿರುವುದು ಮತ್ತು ಲಡಾಖ್‌ನಲ್ಲಿ ನಡೆಯುತ್ತಿರುವುದರ ನಡುವಣ ಸಾಮ್ಯವನ್ನು ಗಮನಿಸಿ ಎಂದಿದ್ದಾರೆ.

'ಅಮೆರಿಕದ ಜತೆಗೆ ನಿಮ್ಮ ಬಾಂಧವ್ಯವನ್ನು ನಾವು ಒಪ್ಪುವುದಿಲ್ಲ. ನಿಮ್ಮ ಭೌಗೋಳಿಕ ಸಮಗ್ರತೆಯನ್ನು ನಾವು ಒಪ್ಪುವುದಿಲ್ಲ' ಎಂದು ಉಕ್ರೇನ್‌ಗೆ ಪುಟಿನ್ ಹೇಳುತ್ತಿದ್ದಾರೆ. ಚೀನೀಯರೂ ಹಾಗೆಯೇ ಹೇಳುತ್ತಿದ್ದಾರೆ. 'ನಿಮ್ಮ ಭೌಗೋಳಿಕ ಸಮಗ್ರತೆಯನ್ನು ಒಪ್ಪುವುದಿಲ್ಲ, ಅಮೆರಿಕದ ಜತೆಗೆ ನಿಮ್ಮ ಸಂಬಂಧವನ್ನು ಒಪ್ಪುವುದಿಲ್ಲ' ಎಂದು ಭಾರತಕ್ಕೆ ಚೀನಾ ಹೇಳುತ್ತಿದೆ ಎಂದು ರಾಹುಲ್ ಹೇಳಿದ್ದಾರೆ.

'ಚೀನಾದ ಪಡೆಗಳು ಭಾರತದ ಒಳಗೆ ಇವೆ. ಪ್ಯಾಂಗಾಂಗ್ ಸರೋವರದಲ್ಲಿ ಚೀನಾ ದೊಡ್ಡ ಸೇತುವೆ ಕಟ್ಟಿದೆ. ಅವರು ಮೂಲಸೌಕರ್ಯ ನಿರ್ಮಿಸುತ್ತಿದ್ದಾರೆ. ಅವರು ಯಾವುದಕ್ಕೋ ಸಿದ್ಧತೆ ನಡೆಸುತ್ತಿದ್ದಾರೆ. ಆದರೆ, ಅದರ ಬಗ್ಗೆ ಮಾತನಾಡುವುದು ಸರ್ಕಾರಕ್ಕೆ ಬೇಕಿಲ್ಲ. ಸಂವಾದವನ್ನು ಹತ್ತಿಕ್ಕಲು ಸರ್ಕಾರ ಬಯಸುತ್ತಿದೆ. ಅದು ಭಾರತಕ್ಕೆ ಒಳ್ಳೆಯದಲ್ಲ' ಎಂದರು.

ಸಿಪಿಎಂನ ಸೀತಾರಾಮ ಯೆಚೂರಿ, ಟಿಎಂಸಿಯ ಮಹುವಾ ಮೊಯಿತ್ರಾ ಮತ್ತು ಆರ್‌ಜೆಡಿಯ ತೇಜಸ್ವಿ ಯಾದವ್ ಅವರೂ ಸಮಾವೇಶದಲ್ಲಿ ಇದ್ದರು.

ರಾಹುಲ್ ಗಾಂಧಿ ಅವರು ಹತಾಶ ಕಾಂಗ್ರೆಸ್‌ನ ಅರೆಕಾಲಿಕ, ಅಪಕ್ವ, ಸೋತ ನಾಯಕ. ವಿರೋಧ ಪಕ್ಷದಲ್ಲಿರುವುದು ಎಂದರೆ ಭಾರತಕ್ಕೆ ಹಾನಿ ಮಾಡುವುದಲ್ಲ

ಗೌರವ್ ಭಾಟಿಯಾ, ಬಿಜೆಪಿ ವಕ್ತಾರ

ಕೇಂದ್ರ ಸರ್ಕಾರದ ವಿರುದ್ಧ ಮಾತನಾಡಿದ ವ್ಯಕ್ತಿಗಳು ಕೇಂದ್ರದ ತನಿಖಾ ಸಂಸ್ಥೆಗಳಿಂದ ಪದೇ ಪದೇ ತನಿಖೆ ಎದುರಿಸಬೇಕಾಗುತ್ತದೆ

ಸಂಜಯ ರಾವುತ್, ಶಿವಸೇನಾ ವಕ್ತಾರ

'ಪ್ರಾದೇಶಿಕ ಪಕ್ಷಗಳ ಬಗ್ಗೆ ಗೌರವ ಇದೆ'

ತಮ್ಮ ಪಕ್ಷವು ಪ್ರಾದೇಶಿಕ ಪಕ್ಷಗಳನ್ನು ಗೌರವಿಸುತ್ತದೆ ಮತ್ತು 'ದೊಡ್ಡಣ್ಣ'ನಂತೆ ವರ್ತಿಸಲು ಬಯಸುವುದಿಲ್ಲ. ಬಿಜೆಪಿ ವಿರುದ್ಧದ ಹೋರಾಟವು 'ಗುಂಪು ಯತ್ನ' ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಹೇಳಿದ್ದಾರೆ. ಪ್ರಾದೇಶಿಕ ಪಕ್ಷಗಳಿಗೆ ಸಿದ್ಧಾಂತವೇ ಇಲ್ಲ ಎಂದು ಉದಯಪುರದಲ್ಲಿ ಇತ್ತೀಚೆಗೆ ನಡೆದ ಕಾಂಗ್ರೆಸ್ ಚಿಂತನ ಶಿಬಿರದಲ್ಲಿ ಅವರು ಹೇಳಿದ್ದರು.

'ಉದಯಪುರದಲ್ಲಿ ನಾನು ಹೇಳಿದ್ದನ್ನು ತಪ್ಪಾಗಿ ಗ್ರಹಿಸಲಾಗಿದೆ. ಈಗ ಇರುವುದು ಸೈದ್ಧಾಂತಿಕ ಯುದ್ಧ. ಇದು ರಾಷ್ಟ್ರೀಯ ಸೈದ್ಧಾಂತಿಕ ಯುದ್ಧ. ತಮಿಳು ರಾಜಕೀಯ ಸಂಘಟನೆಯಾಗಿರುವ ಡಿಎಂಕೆಯನ್ನು ನಾವು ಗೌರವಿಸುತ್ತೇವೆ. ಆದರೆ, ಕಾಂಗ್ರೆಸ್ ಪಕ್ಷವು ರಾಷ್ಟ್ರ ಮಟ್ಟದ ಸಿದ್ಧಾಂತವನ್ನು ಹೊಂದಿದೆ' ಎಂದು ಹೇಳಿದ್ದಾರೆ.

ವಿರೋಧ ಪಕ್ಷಗಳನ್ನು ಸಬಲೀಕರಿಸುವ ವ್ಯವಸ್ಥೆ ತಾನು ಎಂದು ಕಾಂಗ್ರೆಸ್ ಈಗ ಚಿಂತಿಸಬೇಕಿದೆ ಎಂದಿದ್ದಾರೆ.

'ಇತರ ವಿರೋಧ ಪಕ್ಷಗಳಿಗಿಂತ ಕಾಂಗ್ರೆಸ್ ಪಕ್ಷವು ಯಾವ ರೀತಿಯಲ್ಲಿಯೂ ಶ್ರೇಷ್ಠ ಅಲ್ಲ. ನಾವೆಲ್ಲರೂ ಒಂದೇ ಹೋರಾಟ ನಡೆಸುತ್ತಿದ್ದೇವೆ. ಅವರಿಗೆ ಅವರ ಸ್ಥಾನ, ನಮಗೆ ನಮ್ಮ ಸ್ಥಾನ ಇದೆ. ಆದರೆ, ಆರ್‌ಎಸ್‌ಎಸ್‌ನ ರಾಷ್ಟ್ರೀಯ ದೃಷ್ಟಿಕೋನ ಮತ್ತು ಕಾಂಗ್ರೆಸ್‌ನ ರಾಷ್ಟ್ರೀಯ ದೃಷ್ಟಿಕೋನದ ನಡುವೆ ಸೈದ್ಧಾಂತಿಕ ಸಮರ ನಡೆಯುತ್ತಿದೆ' ಎಂದು ರಾಹುಲ್ ವಿವರಿಸಿದರು.

'ವಿದೇಶಾಂಗ ಸೇವೆ ಅಹಂಕಾರಿ' 'ಕಮಲ–ಕೈ' ಟ್ವೀಟ್ ಸಮರ

ಭಾರತೀಯ ವಿದೇಶಾಂಗ ಸೇವೆಯು ಸಂಪೂರ್ಣ ಬದಲಾಗಿದೆ ಮತ್ತು ಅಹಂಕಾರಿಯಾಗಿದೆ ಎಂದು ಯುರೋಪ್‌ನ ಅಧಿಕಾರಿಗಳನ್ನು ಉಲ್ಲೇಖಿಸಿ ರಾಹುಲ್ ಗಾಂಧಿ ಹೇಳಿದ್ದಕ್ಕೆ ವಿದೇಶಾಂಗ ಸಚಿವ ಎಸ್. ಜೈಶಂಕರ್ ತಿರುಗೇಟು ನೀಡಿದ್ದಾರೆ.

'ಹೌದು, ಭಾರತೀಯ ವಿದೇಶಾಂಗ ಸೇವೆಯು ಬದಲಾಗಿದೆ. ಹೌದು, ಅಧಿಕಾರಿಗಳು ಸರ್ಕಾರದ ಆದೇಶಗಳನ್ನು ಪಾಲಿಸುತ್ತಿದ್ದಾರೆ. ಹೌದು, ಅವರು ಇತರರ ವಾದಗಳಿಗೆ ತಿರುಗೇಟು ನೀಡುತ್ತಿದ್ದಾರೆ. ಅಲ್ಲ, ಇದು ಅಹಂಕಾರ ಅಲ್ಲ. ಇದನ್ನು ಆತ್ಮವಿಶ್ವಾಸ ಎನ್ನುತ್ತಾರೆ. ಇದನ್ನು ದೇಶದ ಹಿತಾಸಕ್ತಿಯ ರಕ್ಷಣೆ ಎನ್ನುತ್ತಾರೆ' ಎಂದು ಜೈಶಂಕರ್ ಟ್ವೀಟ್ ಮಾಡಿದ್ದಾರೆ.

ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲಾ ಅವರು ಜೈಶಂಕರ್ ಟ್ವೀಟ್‌ಗೆ ಪ್ರತಿಕ್ರಿಯೆ ನೀಡಿದ್ದಾರೆ. 'ಹೌದು, ವಿದೇಶಾಂಗ ನೀತಿಯಲ್ಲಿ ಎಡವಿದ ರಾಜಕೀಯ ಯಜಮಾನರಿಗೆ ಗುಲಾಮರಾಗಿರುವುದು ಎಂದೂ ಇದನ್ನು ಹೇಳಬಹುದು. ಹೌದು, ನಮ್ಮ ಭೂಪ್ರದೇಶವನ್ನು ಅಕ್ರಮವಾಗಿ ವಶಕ್ಕೆ ಪಡೆದಿರುವ ಚೀನಾವನ್ನು ಎದುರಿಸಲಾಗದ ಸ್ಥಿತಿ ಎಂದೂ ಇದನ್ನು ಹೇಳಬಹುದು. ಹೌದು, ದೇಶದ ಬದಲಿಗೆ ಪಕ್ಷವೊಂದರ ಕಾರ್ಯಸೂಚಿಯನ್ನು ಮುಂದಕ್ಕೆ ಒಯ್ಯುವುದು ಎಂದೂ ಇದನ್ನು ಹೇಳಬಹುದು' ಎಂದು ಸುರ್ಜೇವಾಲಾ ಟ್ವೀಟ್ ಮಾಡಿದ್ದಾರೆ.

ಎನ್‌ಎಸ್‌ಇ ವಂಚನೆ: ಸಿಬಿಐ ಶೋಧ

ಮುಂಬೈ (ಪಿಟಿಐ): ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ) ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಶನಿವಾರ ದೇಶದ 10ಕ್ಕೂ ಹೆಚ್ಚು ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈ, ಗಾಂಧಿನಗರ, ದೆಹಲಿ, ನೋಯ್ಡಾ, ಗುರುಗ್ರಾಮ ಮತ್ತು ಕೋಲ್ಕತ್ತ ಸೇರಿದಂತೆ ಹಲವು ನಗರಗಳಲ್ಲಿ ಶೋಧ ನಡೆದಿದೆ.

ಈ ಪ್ರಕರಣದಲ್ಲಿ ಎನ್‌ಎಸ್‌ಇ ಮಾಜಿ ಸಿಇಒ ಮತ್ತು ಎಂ.ಡಿ ಚಿತ್ರಾ ರಾಮಕೃಷ್ಣ, ಜಿಒಒ (ಗ್ರೂಪ್ ಆಪರೇಟಿಂಗ್ ಆಫೀಸರ್) ಆನಂದ ಸುಬ್ರಮಣಿಯನ್ ವಿರುದ್ಧ ಸಿಬಿಐ ಈಗಾಗಲೇ ಚಾರ್ಜ್‌ಶೀಟ್ ಸಲ್ಲಿಸಿದೆ.

ಮಥುರಾದ ಶಾಹಿ ಮಸೀದಿ ಸ್ಥಳಾಂತರ ಪ್ರಕರಣ

ಅರ್ಜಿ ವಿಚಾರಣೆ ಜುಲೈ 20ಕ್ಕೆ

ಮಥುರಾ (ಪಿಟಿಐ): ಇಲ್ಲಿಯ ಕಟ್ರಾ ಕೇಶವ ದೇವ ದೇವಸ್ಥಾನಕ್ಕೆ ಹೊಂದಿಕೊಂಡಂತಿರುವ ಶಾಹಿ ಈದ್ಗಾ ಮಸೀದಿಯನ್ನು ತೆರವುಗೊಳಿಸಬೇಕು ಎಂದು ಕೋರಿ ಗೋಪಾಲ್ ಗಿರಿ ಎಂಬುವವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ತ್ವರಿತಗತಿ ನ್ಯಾಯಾಲಯವು ಜುಲೈ 20ಕ್ಕೆ ನಿಗದಿಪಡಿಸಿದೆ.

'ಈ ಅರ್ಜಿಯ ವಿಚಾರಣೆಯು ಶುಕ್ರವಾರ ನಡೆಯಬೇಕಿತ್ತು. ಆದರೆ ಉತ್ತರ ಪ್ರದೇಶದ ವಕೀಲರ ಸಂಘವು ಆ ದಿನ ಮುಷ್ಕರಕ್ಕೆ ಕರೆ ನೀಡಿದ್ದ ಕಾರಣ ನ್ಯಾಯಾಲಯವು ವಿಚಾರಣೆಯನ್ನು ಜುಲೈ 20ಕ್ಕೆ ನಿಗದಿಪಡಿಸಿದೆ' ಎಂದು ಅರ್ಜಿದಾರರ ಪರ ವಕೀಲ ದೀಪಕ್ ಶರ್ಮಾ ತಿಳಿಸಿದ್ದಾರೆ.

ದೇವಸ್ಥಾನಕ್ಕೆ ಸೇರಿದ 13.37 ಎಕರೆ ಪ್ರದೇಶದ ಒಂದು ಭಾಗದಲ್ಲಿ ಮಸೀದಿಯನ್ನು ನಿರ್ಮಿಸಲಾಗಿದೆ. ಅದನ್ನು ಸ್ಥಳಾಂತರಿಸಬೇಕು ಎಂದು ಕೋರಿ ಗೋಪಾಲ್ ಗಿರಿ ಅವರು 2021ರ ಸೆಪ್ಟೆಂಬರ್ 20ರಂದು ಸಿವಿಲ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು

ಮಥುರಾ ಜಿಲ್ಲಾ ನ್ಯಾಯಾಧೀಶರ ಆದೇಶದ ಮೇರೆಗೆ ಈ ಮೊಕದ್ದಮೆಯನ್ನು ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಿಗೆ (ತ್ವರಿತಗತಿ ನ್ಯಾಯಾಲಯ) ವರ್ಗಾಯಿಸಲಾಗಿದೆ.

ಸುನ್ನಿ ವಕ್ಫ್ ಮಂಡಳಿ, ಇಂತೆಝಾಮಿಯಾ ಸಮಿತಿ, ಶಾಹಿ ಈದ್ಗಾ ಮಸೀದಿ, ಶ್ರೀ ಕೃಷ್ಣ ಜನ್ಮಸ್ಥಾನ ಸೇವಾ ಸಂಸ್ಥಾನ ಮತ್ತು ಶ್ರೀ ಕೃಷ್ಣ ಜನ್ಮಭೂಮಿ ಟ್ರಸ್ಟ್ ಈ ಮೊಕದ್ದಮೆಯ ಪ್ರತಿವಾದಿಗಳಾಗಿವೆ.

ಶಾಹಿ ಈದ್ಗಾ ಮಸೀದಿ ಸ್ಥಳಾಂತರಿಸುವಂತೆ ಕೋರಿ ಮಥುರಾದ ವಿವಿಧ ಕೋರ್ಟ್‌ಗಳಲ್ಲಿ ಇದುವರೆಗೆ 11 ಅರ್ಜಿಗಳನ್ನು ಸಲ್ಲಿಸಲಾಗಿದೆ.



ಧಾರಾಕಾರ ಮಳೆಯಿಂದಾಗಿ ಬಾಂಗ್ಲಾದೇಶದ ಬೀನಿಬಜಾರ್ ವ್ಯಾಪ್ತಿಯಲ್ಲಿ ಸಾವಿರಾರು ಮನೆಗಳು ಜಲಾವೃತಗೊಂಡಿವೆ –ಎಎಫ್‌ಪಿ ಚಿತ್ರ

ಬಾಂಗ್ಲಾದೇಶ: ಭಾರಿ ಮಳೆ 20 ಲಕ್ಷ ಜನರು ಅತಂತ್ರ

ಸಿಲ್ಹೆಟ್, ಬಾಂಗ್ಲಾದೇಶ (ಎಎಫ್‌ಪಿ): ಧಾರಾಕಾರ ಮಳೆಯಿಂದಾಗಿ ಬಾಂಗ್ಲಾದೇಶದಲ್ಲಿ ಹಲವು ನದಿಗಳು ಉಕ್ಕಿ ಹರಿದಿವೆ. ಪ್ರವಾಹ ಸ್ಥಿತಿಯಿಂದಾಗಿ 20 ಲಕ್ಷ ಜನ ಸಂತ್ರಸ್ತರಾಗಿದ್ದಾರೆ. ಕಳೆದ ಎರಡು ದಶಕಗಳಲ್ಲಿಯೇ ಗಂಭೀರ ಸ್ಥಿತಿಗೆ ಬಾಂಗ್ಲಾ ಎದುರಾಗಿದೆ.

ಬಾರಾಕ್ ನದಿಯಲ್ಲಿ ನೀರಿನ ಹರಿವು ಗಣನೀಯವಾಗಿ ಏರಿದೆ. ಝುಕಿಗಾನಿ ವ್ಯಾಪ್ತಿಯಲ್ಲಿ ಸುಮಾರು 100 ಗ್ರಾಮಗಳು ಜಲಾವೃತಗೊಂಡಿವೆ ಎಂದು ಸಿಲ್ಹೆಟ್ ವಲಯದ ಸರ್ಕಾರದ ಮುಖ್ಯ ಆಡಳಿತಗಾರ ಮೊಶರ್ರಫ್ ಹೊಸೈನ್ ತಿಳಿಸಿದ್ದಾರೆ.

ಸುಮಾರು 20 ಲಕ್ಷ ಜನ ಅತಂತ್ರರಾಗಿದ್ದಾರೆ. ಪ್ರವಾಹ ಸಂಬಂಧಿತ ಅವಘಡಗಳಿಂದಾಗಿ ಈ ವಾರ ಸುಮಾರು 10 ಮಂದಿ ಮೃತಪಟ್ಟಿದ್ದಾರೆ. ಹಲವು ಪ್ರದೇಶಗಳಲ್ಲಿ ಪ್ರವಾಹದ ಪರಿಸ್ಥಿತಿಯು ಎದುರಾಗಿದೆ ಎಂದು ತಿಳಿಸಿದ್ದಾರೆ.

ಸಿಲ್ಹೆಟ್ ನಗರದಲ್ಲಿ ವಿದ್ಯುತ್ ವ್ಯತ್ಯಯವಾಗಿದೆ. ಸುಮಾರು 50 ಸಾವಿರ ಕುಟುಂಬಗಳು ಬಾಧಿತವಾಗಿವೆ ಎಂದು ತಿಳಿಸಿದರು.

ರಷ್ಯಾ ವಶಕ್ಕೆ ಮರಿಯುಪೋಲ್

ಮಾಸ್ಕೊ/ಲಂಡನ್ (ರಾಯಿಟರ್ಸ್/ಎಎಫ್‌ಪಿ): ಮರಿಯುಪೋಲ್ ನಗರ ಮತ್ತು ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರ ಸಂಪೂರ್ಣ ವಶಪಡಿಸಿಕೊಳ್ಳಲಾಗಿದೆ ಎಂದು ರಷ್ಯಾ ಘೋಷಿಸಿದೆ.

ಶಸ್ತ್ರಾಸ್ತ್ರ ತ್ಯಜಿಸಲು ಅಜೋವಾ ಸೈನಿಕರಿಗೆ ಉಕ್ರೇನ್ ಆದೇಶಿಸಿದ ಮೇಲೆ ಕೊನೆಯ 500 ಸೈನಿಕರು ಶುಕ್ರವಾರ ಶರಣಾಗಿದ್ದಾರೆ. 'ಮರಿಯುಪೋಲ್ ನಗರ ಮತ್ತು ಅಜೋವ್‌ಸ್ಟಾಲ್ ನಮ್ಮ ನಿಯಂತ್ರಣದಲ್ಲಿದೆ' ಎಂದು ರಷ್ಯಾ ರಕ್ಷಣಾ ಸಚಿವ ಸೆರ್ಗೈ ಶೋಯಿಗು, ಅಧ್ಯಕ್ಷ ಪುಟಿನ್ ಅವರಿಗೆ ಮಾಹಿತಿ ನೀಡಿದರು.

ನ್ಯಾಟೊ ವಿಸ್ತರಣೆಗೆ ಪ್ರತಿಯಾಗಿ ಪಶ್ಚಿಮದಲ್ಲಿ ಶೀಘ್ರ 12 ಹೊಸ ಸೇನಾ ನೆಲೆಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ಶೋಯಿಗು ತಿಳಿಸಿದರು.

ಪಾಶ್ಚಾತ್ಯ ರಾಷ್ಟ್ರಗಳು ಉಕ್ರೇನ್‌ಗೆ ರವಾನಿಸುತ್ತಿದ್ದ ಭಾರಿ ಶಸ್ತ್ರಾಸ್ತ್ರ, ಸೇನಾ ಉಪಕರಣಗಳನ್ನು ಜೊಟೊಮಿರ್ ಪ್ರದೇಶದಲ್ಲಿ ಕಲಿಬ್ ಕ್ಷಿಪಣಿಗಳಿಂದ ನಾಶಪಡಿಸಲಾಗಿದೆ ಎಂದು ರಷ್ಯಾ ಸೇನೆ ಶನಿವಾರ ಹೇಳಿದೆ.

ಎರಡು ಸುಖೋಯ್ –25 ಯುದ್ಧ ವಿಮಾನಗಳು ಮತ್ತು 14 ಡ್ರೋನ್‌ಗಳನ್ನು ಹೊಡೆದುರುಳಿಸಲಾಯಿತು. ರಿವ್ನೆ, ಚೆರ್ನಿವ್‌ನಲ್ಲೂ ಕಾರ್ಯಾಚರಣೆ ಮುಂದುವರಿದಿದೆ ಎಂದು ಸೇನೆ ಹೇಳಿದೆ.

ಕೇರಳ ಮಳೆ: 2 ಅಣೆಕಟ್ಟೆಗಳಿಂದ ನೀರು ಹೊರಕ್ಕೆ

ತಿರುವನಂತಪುರ (ಪಿಟಿಐ): ಕೇರಳದ 10 ಜಿಲ್ಲೆಗಳಲ್ಲಿ ಶನಿವಾರ ಭಾರಿ ಮಳೆಯಾಗಿದ್ದು, ಈ ಭಾಗಗಳಲ್ಲಿ ಭಾನುವಾರವೂ ಭಾರಿ ಮಳೆ ಮುಂದುವರಿಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಎಡೆಬಿಡದೆ ಬರುತ್ತಿರುವ ಮಳೆಯ ಕಾರಣ ಕೇರಳದ ಜಲಾಶಯಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದ್ದು, ಇಡುಕ್ಕಿ ಜಿಲ್ಲಾಡಳಿತವು ಕಲ್ಲರ್ಕುಟ್ಟಿ, ಪಾಂಬ್ಲಾ ಅಣೆಕಟ್ಟುಗಳ ಗೇಟುಗಳನ್ನು ತೆಗೆಸಿ ಹೆಚ್ಚುವರಿ ನೀರನ್ನು ಬಿಡುಗಡೆ ಮಾಡಿದೆ.

ಯಮುನೋತ್ರಿ ಹೆದ್ದಾರಿ ಕುಸಿತ–ಸಂಚಾರ ಸ್ಥಗಿತ (ಉತ್ತರಕಾಶಿ ವರದಿ): ರಿಷಿಕೇಶ– ಯಮುನೋತ್ರಿ ರಾಷ್ಟ್ರೀಯ ಹೆದ್ದಾರಿ ದುರಸ್ತಿಪಡಿಸಿ, ಸಂಚಾರಕ್ಕೆ ಮುಕ್ತಗೊಳಿಸಿದ ಕೆಲ ಗಂಟೆಗಳಲ್ಲಿಯೇ ಹೆದ್ದಾರಿಯ ಒಂದು ಭಾಗವು ಕುಸಿದಿದ್ದು, ಶುಕ್ರವಾರ ಮತ್ತೆ ಸಂಚಾರ ಸ್ಥಗಿತಗೊಂಡಿದೆ.

ಸಂಕ್ಷಿಪ್ತ ಸುದ್ದಿ

ಲಂಕಾಗೆ 40 ಸಾವಿರ ಟನ್ ಡೀಸೆಲ್: ಭಾರತ

ಕೊಲಂಬೊ (ಪಿಟಿಐ): ಆರ್ಥಿಕ ಬಿಕ್ಕಟ್ಟಿನಿಂದ ಬಳಲುತ್ತಿರುವ ಶ್ರೀಲಂಕಾಗೆ ಮತ್ತೆ 40,000 ಟನ್ ಡೀಸೆಲ್ ಒದಗಿಸಲು ಭಾರತ ಶನಿವಾರ ನಿರ್ಧರಿಸಿದೆ. ಸಾಲದ ರೂಪದಲ್ಲಿ ಈ ಕೊಡುಗೆ ನೀಡಲಾಗಿದೆ ಎಂದು ಭಾರತ ಹೈಕಮಿಷನ್ ಟ್ವೀಟ್ ಮಾಡಿದೆ.

ಇಂಧನ ಆಮದು ಮಾಡಿಕೊಳ್ಳಲು ಭಾರತವು ಲಂಕಾಗೆ ಕಳೆದ ತಿಂಗಳು ₹ 3,890 ಕೋಟಿ (500 ಮಿಲಿಯನ್ ಡಾಲರ್) ನೆರವು ಒದಗಿಸಿತ್ತು.

ಅಲ್ಲದೆ, ಹಾಲಿನ ಪೌಡರ್, ಔಷಧ, ಅಕ್ಕಿ ಸೇರಿ ಅಗತ್ಯ ವಸ್ತುಗಳನ್ನೂ ಭಾರತ ಪೂರೈಸುತ್ತಿದೆ. ಇವುಗಳನ್ನು ಹೊತ್ತ ಹಡಗು ಕೊಲಂಬೊಗೆ ಭಾನುವಾರ ತಲುಪಲಿದೆ ಎಂದು ಭಾರತ ಹೈಕಮಿಷನ್ ಶುಕ್ರವಾರ ಪ್ರಕಟಿಸಿತ್ತು.

ಈ ಮಧ್ಯೆ, ಜಪಾನ್ ಕೂಡಾ ತನ್ನ ವಿಶ್ವ ಆಹಾರ ಕಾರ್ಯಕ್ರಮದಡಿ ₹ 11.67 ಕೋಟಿ ಮೌಲ್ಯದಷ್ಟು ಪರಿಕರಗಳನ್ನು ಒದಗಿಸಿದೆ.

ತುರ್ತು ಸ್ಥಿತಿ ಆದೇಶ ರದ್ದು: ದೇಶವ್ಯಾಪಿ ತಲೆದೋರಿದ್ದ ಪ್ರತಿಭಟನೆಯನ್ನು ಹತ್ತಿಕ್ಕಲು ಜಾರಿಗೊಳಿಸಿದ್ದ ತುರ್ತು ಪರಿಸ್ಥಿತಿಯನ್ನು ಶುಕ್ರವಾರ ಮಧ್ಯರಾತ್ರಿಯಿಂದಲೇ ಜಾರಿಗೆ ಬರುವಂತೆ ಶ್ರೀಲಂಕಾ ಸರ್ಕಾರ ಹಿಂತೆಗೆದುಕೊಂಡಿದೆ.

ಸುಮಾರು 2 ವಾರದಿಂದ ತುರ್ತು ಪರಿಸ್ಥಿತಿ ಜಾರಿಯಲ್ಲಿತ್ತು. ದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸ್ಥಿತಿಯು ಸುಧಾರಿಸಿರುವ ಹಿನ್ನೆಲೆಯಲ್ಲಿ ಈ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂದು ಅಧ್ಯಕ್ಷರ ಕಾರ್ಯಾಲಯ ಪ್ರಕಟಿಸಿದೆ.

ಪ್ರಚೋದನಕಾರಿ ಪೋಸ್ಟ್: ಬೋಧಕನಿಗೆ ಜಾಮೀನು

ನವದೆಹಲಿ: ವಾರಾಣಸಿಯ ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ 'ಶಿವಲಿಂಗ' ಪತ್ತೆ ಕುರಿತ ಹೇಳಿಕೆಗಳನ್ನು ಉಲ್ಲೇಖಿಸಿ ಪೋಸ್ಟ್ ಮಾಡಿದ್ದಕ್ಕಾಗಿ ಶುಕ್ರವಾರ ರಾತ್ರಿ ಬಂಧನಕ್ಕೊಳಗಾಗಿದ್ದ ದೆಹಲಿ ವಿಶ್ವವಿದ್ಯಾಲಯದ ಹಿಂದೂ ಕಾಲೇಜಿನ ಸಹ ಪ್ರಾಧ್ಯಾಪಕ ರತನ್ ಲಾಲ್ ಅವರಿಗೆ ದೆಹಲಿಯ ನ್ಯಾಯಾಲಯ ಶನಿವಾರ ಜಾಮೀನು ಮಂಜೂರು ಮಾಡಿದೆ.

ವಿವಿಧ ಗುಂಪುಗಳ ನಡುವೆ ದ್ವೇಷವನ್ನು ಉತ್ತೇಜಿಸುವುದು ಮತ್ತು ಸೌಹಾರ್ದತೆ ಮೇಲೆ ದುಷ್ಪರಿಣಾಮ ಬೀರುವ ಕೃತ್ಯಗಳು) ಮತ್ತು ಕಲಂ 295ಎ (ಉದ್ದೇಶಪೂರ್ವಕವಾಗಿ ಯಾವುದೇ ವರ್ಗದ ಧಾರ್ಮಿಕ ಭಾವನೆಗಳು, ಧರ್ಮವನ್ನು ಅವಮಾನಿಸುವ ಕೃತ್ಯ) ಅಡಿಯಲ್ಲಿ ಲಾಲ್ ಅವರನ್ನು ಬಂಧಿಸಲಾಗಿದೆ ಎಂದು ದೆಹಲಿಯ ಉತ್ತರ ಸೈಬರ್ ಪೊಲೀಸರು ತಿಳಿಸಿದ್ದಾರೆ.

ಮಾನಸಿಕ ಅಸ್ವಸ್ಥನ ಹತ್ಯೆ: ವ್ಯಕ್ತಿ ಬಂಧನ

ನೀಮುಚ್ (ಮಧ್ಯಪ್ರದೇಶ) (ಪಿಟಿಐ): ಮಾನಸಿಕ ಅಸ್ವಸ್ಥರಾದ ಹಿರಿಯ ನಾಗರಿಕರೊಬ್ಬರನ್ನು ತನ್ನ ಗುರುತಿನ ಚೀಟಿ ತೋರಿಸುವಂತೆ ಒತ್ತಾಯಿಸಿ ಕಪಾಳಕ್ಕೆ ಹೊಡೆದು ಹತ್ಯೆ ಮಾಡಿದ ಆರೋಪಿಯನ್ನು ಮಧ್ಯಪ್ರದೇಶ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಮಾನಸದ ನಿವಾಸಿ ದಿನೇಶ್ ಕುಶ್ವಾಹ (38) ಬಂಧಿತ ಆರೋಪಿ. ಕೊಲೆಯಾದ ಹಿರಿಯ ನಾಗರಿಕ ಭವಾರ್‌ಲಾಲ್ ಜೈನ್ (65) ರಟ್ಲಾಮ್ ಜಿಲ್ಲೆಯ ಸರಸಿ ಗ್ರಾಮದ ನಿವಾಸಿ. ಇವರು ಮೇ 16ರಂದು ಚಿತ್ತೋರ್‌ಗಢದ ಧಾರ್ಮಿಕ ಕಾರ್ಯಕ್ರಮಕ್ಕೆ ಹೋದ ಮೇಲೆ ನಾಪತ್ತೆಯಾಗಿದ್ದರು. ಇವರ ಶವ ಗುರುವಾರ ಸಂಜೆ ನೀಮುಚ್ ಜಿಲ್ಲೆಯ ರಾಮಪುರ ರಸ್ತೆಯಲ್ಲಿ ಸಿಕ್ಕಿತ್ತು.

ಆರೋಪಿಯು, ಭವಾರ್‌ಲಾಲ್ ಜೈನ್ ಅವರಿಗೆ 'ನೀನು ಮೊಹಮ್ಮದ್' ಎಂದು ಹೆಸರಿಸಿ, ಗುರುತಿಗೆ ಆಧಾರ್ ಕಾರ್ಡ್ ತೋರಿಸಲು ಒತ್ತಾಯಿಸಿ ಪದೇ ಪದೇ ಕಪಾಳಮೋಕ್ಷ ಮಾಡಿರುವ ದೃಶ್ಯ ವಿಡಿಯೊದಲ್ಲಿ ಸೆರೆಯಾಗಿದೆ.

ಶವ ಸಂಸ್ಕಾರದ ಬಳಿಕ ಕುಟುಂಬ ಸದಸ್ಯರಿಗೆ ಈ ವಿಡಿಯೊ ಲಭಿಸಿತ್ತು.

ಪೇಟಿಎಂ ಜನರಲ್ ಇನ್ಶುರೆನ್ಸ್ ಲಿಮಿಟೆಡ್ ಸ್ಥಾಪನೆ

ನವದೆಹಲಿ (ಪಿಟಿಐ): ಪೇಟಿಎಂ ಜನರಲ್ ಇನ್ಶುರೆನ್ಸ್ ಲಿಮಿಟೆಡ್ (ಪಿಜಿಐಎಲ್) ಎನ್ನುವ ಜಂಟಿ ಉದ್ದಿಮೆ ಸ್ಥಾಪನೆ ಮಾಡಿರುವುದಾಗಿ ಪಾವತಿ ಮತ್ತು ಹಣಕಾಸು ಸೇವೆಗಳನ್ನು ನೀಡುವ ಪೇಟಿಎಂನ ಮಾತೃಸಂಸ್ಥೆ ಒನ್97 ಕಮ್ಯುನಿಕೇಷನ್ಸ್ ಶನಿವಾರ ತಿಳಿಸಿದೆ. ಈ ವಿಮಾ ಕಂಪನಿಯಲ್ಲಿ 10 ವರ್ಷದಲ್ಲಿ ₹ 950 ಕೋಟಿ ಹೂಡಿಕೆ ಮಾಡುವುದಾಗಿಯೂ ಅದು ಹೇಳಿದೆ.

ಪಿಜಿಐಎಲ್ ಸ್ಥಾಪನೆಗೆ ಆಡಳಿತ ಮಂಡಳಿಯು ಶುಕ್ರವಾರ ಒಪ್ಪಿಗೆ ನೀಡಿದೆ ಎಂದು ಕಂಪನಿಯು ಷೇರುಪೇಟೆ ಶನಿವಾರ ತಿಳಿಸಿದೆ.

ವಿಮಾ ಕಂಪನಿಯಲ್ಲಿ ಒನ್97 ಕಮ್ಯುನಿಕೇಷನ್ಸ್ ಆರಂಭದಲ್ಲಿ ಶೇ 49ರಷ್ಟು ಷೇರುಪಾಲು ಹೊಂದಲಿದೆ. ಇನ್ನುಳಿದ ಶೇ 51ರಷ್ಟು ಷೇರು ಪಾಲನ್ನು ವ್ಯವಸ್ಥಾಪಕ ನಿರ್ದೇಶಕ ವಿಜಯ್ ಶೇಖರ್ ಶರ್ಮಾ ನೇತೃತ್ವದ ವಿಎಸ್ಎಸ್ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್ ಹೊಂದಲಿದೆ. ಬಂಡವಾಳ ಹೂಡಿಕೆಯ ನಂತರ ವಿಮಾ ಕಂಪನಿಯಲ್ಲಿ ಪೇಟಿಎಂ ಪಾಲು ಶೇ 74ರಷ್ಟಾಗಲಿದ್ದು, ವಿಎಚ್‌ಪಿಎಲ್‌ನ ಪಾಲು ಶೇ 26ಕ್ಕೆ ಇಳಿಕೆ ಆಗಲಿದೆ. ವಿಮಾ ಕಂಪನಿಗೆ ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಐಆರ್‌ಡಿಎಐ) ಒಪ್ಪಿಗೆ ದೊರೆಯಬೇಕಿದೆ.

ರಹೇಜಾ ಕ್ಯೂಬಿಇ ಜನರಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್ ಅನ್ನು ಸ್ವಾಧೀನಪಡಿಸಿಕೊಳ್ಳುವ ಸಂಬಂಧ ಷೇರು ಖರೀದಿ ಒಪ್ಪಂದವು ನಿಗದಿತ ಸಮಯದಲ್ಲಿ ಪೂರ್ಣಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಕಂಪನಿಯ ಆಡಳಿತವು ಜಂಟಿ ಉದ್ದಿಮೆ ಸ್ಥಾಪಿಸುವ ನಿರ್ಧಾರಕ್ಕೆ ಬಂದಿದೆ. ರಹೇಜಾ ಕ್ಯುಬಿಇ ಅನ್ನು ಸ್ವಾಧೀನಪಡಿಸಿಕೊಳ್ಳುವುದಾಗಿ ಪೇಟಿಎಂ 2020ರ ಜುಲೈನಲ್ಲಿ ಘೋಷಿಸಿತ್ತು.

ಪೇಟಿಎಂ ನಷ್ಟ ₹ 761 ಕೋಟಿ

ನವದೆಹಲಿ (ಪಿಟಿಐ): ಪಾವತಿ ಮತ್ತು ಹಣಕಾಸು ಸೇವೆಗಳನ್ನು ನೀಡುವ ಪೇಟಿಎಂನ ಮಾತೃಸಂಸ್ಥೆ ಒನ್97 ಕಮ್ಯುನಿಕೇಷನ್ಸ್‌ನ ನಷ್ಟವು 2022ರ ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ₹ 761 ಕೋಟಿಗೆ ತಲುಪಿದೆ.

ಪಾವತಿ ವ್ಯವಸ್ಥೆಯ ನಿರ್ವಹಣಾ ಶುಲ್ಕ ಮತ್ತು ಉದ್ಯೋಗಿಗಳ ವೆಚ್ಚದಲ್ಲಿ ಏರಿಕೆ ಆಗುತ್ತಿರುವುದರಿಂದ ನಷ್ಟದಲ್ಲಿ ಏರಿಕೆ ಆಗಿದೆ ಎಂದು ತಿಳಿಸಿದೆ. 2021–22ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ನಷ್ಟವು ₹ 441 ಕೋಟಿ ಇತ್ತು.

ಕಾರ್ಯಾಚರಣಾ ವರಮಾನ ₹ 815 ಕೋಟಿಯಿಂದ ₹ 1,540 ಕೋಟಿಗೆ ಶೇ 89ರಷ್ಟು ಹೆಚ್ಚಾಗಿದೆ. ಉದ್ಯೋಗಿಗಳ ಮೇಲಿನ ವೆಚ್ಚವು ₹ 863 ಕೋಟಿಗೆ ಎರಡು ಪಟ್ಟು ಹೆಚ್ಚಾಗಿದೆ.

ಬಿಎಚ್‌ಇಎಲ್ ಲಾಭ ₹ 912 ಕೋಟಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬಿಎಚ್‌ಇಎಲ್, 2022ರ ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ₹ 912 ಕೋಟಿ ನಿವ್ವಳ ಲಾಭ ಗಳಿಸಿದೆ.

ವರಮಾನದಲ್ಲಿ ಏರಿಕೆ ಆಗಿರುವುದರಿಂದ ನಿವ್ವಳ ಲಾಭ ಸಾಧ್ಯವಾಗಿದೆ ಎಂದು ಕಂಪನಿಯು ತಿಳಿಸಿದೆ.

2020–21ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹ 1,036 ಕೋಟಿ ನಷ್ಟ ಆಗಿತ್ತು ಎಂದು ಷೇರುಪೇಟೆಗೆ ಶನಿವಾರ ಮಾಹಿತಿ ನೀಡಿದೆ.

2022ರ ಜನವರಿ–ಮಾರ್ಚ್ ಅವಧಿಯಲ್ಲಿ ಕಂಪನಿಯ ವರಮಾನ ₹ 8,181 ಕೋಟಿಗೆ ತಲುಪಿದೆ. 2021ರ ಜನವರಿ–ಮಾರ್ಚ್ ಅವಧಿಯಲ್ಲಿ ವರಮಾನವು ₹ 7,245 ಕೋಟಿ ಇತ್ತು.

ಕಂಪನಿಯ ವೆಚ್ಚವು ₹ 8,744 ಕೋಟಿಯಿಂದ ₹ 7,091 ಕೋಟಿಗೆ ಇಳಿಕೆ ಆಗಿದೆ ಎಂದು ಕಂಪನಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

21-5-2022

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10850-10900
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (---)
ಒಂದು ವಾರದ ಡೆಲಿವರಿ	1595 (---)
ಸೋಯಾ ಕಚ್ಚಾ	1500 (---)
ಪಾಮ್ ವಾರದ ಡೆಲಿವರಿ	1525 (---)
ಸೂರ್ಯಕಾಂತಿ ಎಣ್ಣೆ ಕಚ್ಚಾ	1800 (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,975 (---)
ಬೆಳ್ಳಿ ಕೆ.ಜಿ 61,600 (---)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಚಿತ್ರದುರ್ಗ	
ಆಪಿ	48819-49269
ಬೆಟ್ಟೆ	39029-39449
ಕೆಂಪುಗೋಟು	31900-32300
ರಾಶಿ	48339-48779
ಕಾರ್ಕಳ	
ಹಳೆಚಾಲಿ	46000-54500
ಹೊಸಚಾಲಿ	40000-45000
ಪುತ್ತೂರು	
ಹೊಸತು	27500-45000
ಕೋಕ	11000-26000
ಶಿರಸಿ	
ಬೆಟ್ಟೆ	36109-44819
ಬಿಳಿಗೋಟು	23799-33899
ಚಾಲಿ	30699-39411
ರಾಶಿ	42109-50909

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	16000	16000	218.70 ಸೆಂಟ್ಸ್
ಎಸಿ	8900	8500	8675	
ಆರ್‌ಪಿ	9500	9900	10000	ಲಂಡನ್
ಆರ್‌ಸಿ	4550	4350	4475	2080ಡಾಲರ್ಸ್

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (---)
ಸೋಯಾ (ರಿಫೈನ್ಡ್)	₹1555 (---)
ಸೂರ್ಯಕಾಂತಿ (ರಿಫೈನ್ಡ್)	₹1870 (---)
ಪಾಮೋಲಿನ್	₹1527(---)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹485
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹490

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹255-505
ದ್ವಿತಳಿ (ಬಿ.ವಿ) ₹260-823

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹170
ಆರ್‌ಎಸ್‌ಎಸ್-5 ₹164.50
ಗುಡ್ ಲಾಟ್ ₹159

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹18000-27000
2ನೇ ದರ್ಜೆ ₹10000-15000

ಫೆಡರಲ್ ರಿಸರ್ವ್‌ನಿಂದ ಇನ್ನಷ್ಟು ಬಡ್ಡಿದರ ಹೆಚ್ಚಳ ನಿರೀಕ್ಷೆ, ಡಾಲರ್ ಮೌಲ್ಯ ವೃದ್ಧಿ ಪರಿಣಾಮ

ಎಫ್‌ಪಿಐ: ₹35,137 ಕೋಟಿ ಹಿಂತೆಗೆತ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಪೇಟೆಗಳಿಂದ ಬಂಡವಾಳ ಹಿಂದಕ್ಕೆ ಪಡೆಯುವುದು ಮುಂದುವರಿದಿದೆ. ಮೇ ತಿಂಗಳಿನಲ್ಲಿ ಇದುವರೆಗೆ ₹ 35,137 ಕೋಟಿ ಮೊತ್ತವನ್ನು ಷೇರುಪೇಟೆಯಿಂದ ಹಿಂದಕ್ಕೆ ಪಡೆದಿದ್ದಾರೆ. ಇದರಿಂದಾಗಿ 2022ರಲ್ಲಿ ಈವರೆಗೆ ಷೇರುಪೇಟೆಯಿಂದ ಒಟ್ಟಾರೆ ₹ 1.63 ಲಕ್ಷ ಕೋಟಿಗೂ ಅಧಿಕ ಬಂಡವಾಳ ಹೊರಹೋದಂತಾಗಿದೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್ ಇನ್ನಷ್ಟು ತ್ವರಿತವಾಗಿ ಬಡ್ಡಿದರ ಹೆಚ್ಚಳ ಮಾಡುವ ಸಾಧ್ಯತೆ ಹಾಗೂ ಕರೆನ್ಸಿ ವಿನಿಯಮ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯ ವೃದ್ಧಿಯಾಗುತ್ತಿರುವುದರಿಂದ ವಿದೇಶಿ ಬಂಡವಾಳ ಹೊರಹರಿವು ಹೆಚ್ಚಾಗುತ್ತಿದೆ.

ಮುಖ್ಯಾಂಶಗಳು

- ಕೇಂದ್ರೀಯ ಬ್ಯಾಂಕ್‌ಗಳಿಂದ ಬಡ್ಡಿದರ ಏರಿಕೆ
- ಅಮೆರಿಕದ ಡಾಲರ್ ಮೌಲ್ಯ ವೃದ್ಧಿ
- ರಷ್ಯಾ–ಉಕ್ರೇನ್ ಸಂಘರ್ಷ

ಬಂಡವಾಳ ಹೊರಹರಿವು (ಕೋಟಿಗಳಲ್ಲಿ)

ಜನವರಿ	₹28,526
ಫೆಬ್ರುವರಿ	₹38,068
ಮಾರ್ಚ್	₹48,262
ಏಪ್ರಿಲ್	₹17,144
ಮೇ 2–20	₹35,137

‘ಅಲ್ಪಾವಧಿಯಲ್ಲಿ ಭಾರತದ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳ ಒಳಹರಿವು ಚಂಚಲವಾಗಿರಲಿದೆ. ಕಚ್ಚಾ ತೈಲ ದರ ಏರಿಕೆ, ಹಣದುಬ್ಬರ, ಕೇಂದ್ರೀಯ ಬ್ಯಾಂಕ್‌ಗಳು ಆರ್ಥಿಕ ನೀತಿಯನ್ನು ಬಿಗಿಗೊಳಿಸಿರುವುದು ಸೇರಿದಂತೆ ಇನ್ನೂ ಹಲವು ಕಾರಣಗಳಿಂದ ಬಂಡವಾಳ ಒಳಹರಿವು ಅಸ್ಥಿರವಾಗಿರಲಿದೆ’ ಎಂದು ಕೋಟಕ್ ಸೆಕ್ಯುರಿಟೀಸ್‌ನ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

‘ಅಮೆರಿಕದ ಮಾರುಕಟ್ಟೆಯು ದುರ್ಬಲವಾಗಿದ್ದು, ಡಾಲರ್ ಮೌಲ್ಯ ಉತ್ತಮವಾಗಿದೆ. ಹೀಗಾಗಿ ಅಲ್ಪಾವಧಿಯಲ್ಲಿ ಎಫ್‌ಪಿಐ ಮಾರಾಟ ಮಾಡುವುದನ್ನು ಮುಂದುವರಿಸಲಿದ್ದಾರೆ’ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

‘ಎಫ್‌ಪಿಐ ಹೊರಹರಿವಿಗೆ ಪ್ರಮುಖ ಕಾರಣವೇ ಡಾಲರ್ ಮೌಲ್ಯ ವೃದ್ಧಿ. ಡಾಲರ್ ಇಂಡೆಕ್ಸ್ 103ರ ಮಟ್ಟವನ್ನೂ ಮೀರಿದೆ. ಎಫ್‌ಪಿಐಗೆ ದೊಡ್ಡ ಮಟ್ಟದಲ್ಲಿ ಲಾಭ ಮಾಡಿಕೊಳ್ಳಲು ಭಾರತವು ಪ್ರಮುಖ ಮಾರುಕಟ್ಟೆ ಆಗಿದೆ’ ಎಂದೂ ಅವರು ಹೇಳಿದ್ದಾರೆ.

ರಷ್ಯಾ–ಉಕ್ರೇನ್ ಸಂಘರ್ಷದಿಂದ ಪೂರೈಕೆ ಸಮಸ್ಯೆ ಎದುರಾಗಿದೆ. ಇದರಿಂದಾಗಿ ಹಣದುಬ್ಬರ ಹೆಚ್ಚಾಗುತ್ತಿದೆ. ಈ ಸಮಸ್ಯೆ ನಿವಾರಣೆಗಾಗಿ ಅಮೆರಿಕದ ಫೆಡರಲ್ ರಿಸರ್ವ್ ಈಗಾಗಲೇ ಎರಡು ಬಾರಿ ಬಡ್ಡಿದರ ಏರಿಕೆ ಮಾಡಿದೆ.

‘ರಷ್ಯಾ–ಉಕ್ರೇನ್ ಸಂಘರ್ಷದಿಂದಾಗಿ ಹೂಡಿಕೆದಾರರು ಭಾರತದಂತಹ ಮಾರುಕಟ್ಟೆಯಿಂದ ದೂರ ಉಳಿಯುತ್ತಿದ್ದಾರೆ. ಅಲ್ಲದೆ, ಸದ್ಯದ ಪರಿಸ್ಥಿತಿಯಲ್ಲಿ ಲಾಭ ಮಾಡಿಕೊಳ್ಳುವುದಕ್ಕಿಂತಲೂ ಉತ್ತಮ ಆಯ್ಕೆ ಬೇರೊಂದಿಲ್ಲ ಎನ್ನುವುದು ಅವರ ಅಭಿಪ್ರಾಯಪವಾಗಿದೆ’ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ವಿದೇಶಿ ಹೂಡಿಕೆದಾರರು ಸಾಲಪತ್ರ ಮಾರುಕಟ್ಟೆಯಿಂದಲೂ ₹ 6,133 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ. ತೈವಾನ್, ದಕ್ಷಿಣ ಕೊರಿಯಾ, ಇಂಡೊನೇಷ್ಯಾ ಮತ್ತು ಫಿಲಿಪ್ಪೀನ್ಸ್ ದೇಶಗಳಿಂದಲೂ ಮೇ ತಿಂಗಳಿನಲ್ಲಿ ಬಂಡವಾಳ ಹೊರಹರಿವು ಕಂಡುಬಂದಿದೆ.

ಸಿಎನ್‌ಜಿ ದರ ₹ 2 ಹೆಚ್ಚಳ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಸಿಎನ್‌ಜಿ ದರವನ್ನು ಪ್ರತಿ ಕೆ.ಜಿಗೆ ಶನಿವಾರ ₹ 2ರಷ್ಟು ಹೆಚ್ಚಿಸಲಾಗಿದೆ. ಎರಡು ತಿಂಗಳ ಅವಧಿಯಲ್ಲಿ 13ನೇ ಬಾರಿ ದರ ಹೆಚ್ಚಳ ಮಾಡಲಾಗಿದೆ.

ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್ (ಐಜಿಎಲ್) ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಶನಿವಾರದ ದರ ಪರಿಷ್ಕರಣೆಯಿಂದ ದೆಹಲಿಯಲ್ಲಿ ಸಿಎನ್‌ಜಿ ದರವು ₹ 75.61ಕ್ಕೆ ತಲುಪಿದೆ. ಮುಂಬೈನಲ್ಲಿ ₹ 76ಕ್ಕೆ ತಲುಪಿದೆ. ಸ್ಥಳೀಯ ಮಾರಾಟ ತೆರಿಗೆಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ದರದಲ್ಲಿ ವ್ಯತ್ಯಾಸ ಆಗುತ್ತದೆ.

ಒಂದು ವರ್ಷದಲ್ಲಿ ಕೆ.ಜಿಗೆ ₹ 32.21ರಷ್ಟು ಹೆಚ್ಚಿಸಲಾಗಿದೆ.

ಕರಗಿತು ₹ 13.44 ಲಕ್ಷ ಕೋಟಿ ಸಂಪತ್ತು

ಬೆಂಗಳೂರು: ದೇಶದ ಷೇರುಪೇಟೆಗಳ ವಾರದ ವಹಿವಾಟು ನಕಾರಾತ್ಮಕ ಅಂತ್ಯ ಕಂಡಿದ್ದು, ಇದರಿಂದ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 13.44 ಲಕ್ಷ ಕೋಟಿಗಳಷ್ಟು ಕರಗಿದೆ. ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹ 254.78 ಲಕ್ಷ ಕೋಟಿಗಳಿಗೆ ಇಳಿಕೆ ಕಂಡಿದೆ.

ಜಿಆರ್‌ಟಿಯಿಂದ ಬೆಳ್ಳಿ ಮೇಲೆ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಆರ್‌ಟಿ ಜುವೆಲರ್ಸ್ ಕಂಪನಿಯು ಆಕರ್ಷಕವಾದ ಬೆಳ್ಳಿಯ ಸಾಮಗ್ರಿಗಳನ್ನು ಬಿಡುಗಡೆ ಮಾಡಿದೆ.

ಕಲಾತ್ಮಕತೆಯಿಂದ ಕೂಡಿದ ಬೆಳ್ಳಿಯ ಆಭರಣಗಳು, ಡಿನ್ನರ್ ಸೆಟ್‌ಗಳು ಹಾಗೂ ಪೂಜಾ ವಸ್ತುಗಳು ಖರೀದಿಗೆ ಲಭ್ಯವಿವೆ ಎಂದು ಅದು ತಿಳಿಸಿದೆ.

ಬೆಳ್ಳಿಯ ವಸ್ತುಗಳ ವೇಸ್ಟೇಜ್ ಮೇಲೆ ಶೇ 25ರಷ್ಟು ರಿಯಾಯಿತಿ ಹಾಗೂ ಬೆಳ್ಳಿಯ ಆಭರಣಗಳ ಎಂಆರ್‌ಪಿ ಮೇಲೆ ಶೇ 10ರಷ್ಟು ರಿಯಾಯಿತಿಯನ್ನು ಗ್ರಾಹಕರು ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.









ಉದಯ ಚೌಟ

ಕಬಡ್ಡಿ ಆಟಗಾರ ಉದಯ ನಿಧನ

ಮಂಗಳೂರು: ಏಕಲವ್ಯ ಪುರಸ್ಕೃತ, ಅಂತರರಾಷ್ಟ್ರೀಯ ಮಾಜಿ ಕಬಡ್ಡಿ ಆಟಗಾರ ಉದಯ ಚೌಟ (43) ಅವರು ಶನಿವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಪುತ್ರಿ, ತಾಯಿ ಇದ್ದಾರೆ.

ಉದಯ ಚೌಟ ಅವರು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಮಾಣಿಯವರು. ಶನಿವಾರ ಬೆಳಗಿನ ಜಾವ ಎದೆನೋವು ಕಾಣಿಸಿಕೊಂಡಿದ್ದರಿಂದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ನಿಧನರಾದರು. ಸಂಜೆ ಮಾಣಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

2006–07 ರಲ್ಲಿ ಮುಂಬೈಯಲ್ಲಿ ನಡೆದ 2ನೇ ವಿಶ್ವಕಪ್ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಭಾರತ ತಂಡದಲ್ಲಿ ಆಡಿ, ಶ್ರೇಷ್ಠ ಆಟಗಾರರಾಗಿ ಹೊರಹೊಮ್ಮಿದ್ದರು. 2004ರಲ್ಲಿ ಭಾರತ– ಬಾಂಗ್ಲಾ ಟೆಸ್ಟ್ ಕಬಡ್ಡಿಯಲ್ಲಿ ಚಿನ್ನ ಗೆದ್ದ ತಂಡದಲ್ಲಿ ಅವರಿದ್ದರು.

ಡೈಮಂಡ್ ಲೀಗ್: ದೀನಾ, ಕೀಲಿ ಮಿಂಚು

ಬರ್ಮಿಂಗ್‌ಹ್ಯಾಂ: ಬ್ರಿಟನ್‌ನ ದೀನಾ ಆ್ಯಷರ್ ಸ್ಮಿತ್ ಮತ್ತು ಕೀಲಿ ಹಡ್ಕಿನ್ಸನ್ ಅವರು ಡೈಮಂಡ್ ಲೀಗ್ ಅಥ್ಲೆಟಿಕ್ಸ್‌ನಲ್ಲಿ ಚಿನ್ನ ಗೆದ್ದುಕೊಂಡರು. ಶನಿವಾರ ನಡೆದ 100 ಮೀ ಓಟದಲ್ಲಿ ಒಲಿಂಪಿಯನ್ ಜಮೈಕಾದ ಶೆರಿಕಾ ಜಾಕ್ಸನ್ ಅವರನ್ನು ಆ್ಯಶರ್ ಹಿಂದಿಕ್ಕಿದರು. 800 ಮೀ ಓಟದಲ್ಲಿ ಕೀಲಿ ಒಲಿಂಪಿಯನ್ ಫ್ರಾನ್ಸ್‌ನ ರೆನೆಲಿ ಲಮೊಟ್ ಅವರನ್ನು ಹಿಂದಿಕ್ಕಿದರು.

ರಾಯಲ್ ಚಾಲೆಂಜರ್ಸ್ ತಂಡದ 'ಆಸೆ' ಈಡೇರಿಸಿದ ಮುಂಬೈ ಇಂಡಿಯನ್ಸ್ ಬಳಗ

ಡೆಲ್ಲಿ ಔಟ್; ಬೆಂಗಳೂರು ಇನ್!

ಮುಂಬೈ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಮತ್ತು ಅದರ ಅಭಿಮಾನಿಗಳ ಆಸೆ ಕೊನೆಗೂ ಈಡೇರಿತು. ಶನಿವಾರ ರಾತ್ರಿ ಮುಂಬೈ ಇಂಡಿಯನ್ಸ್ ಎದುರು ಡೆಲ್ಲಿ ಕ್ಯಾಪಿಟಲ್ಸ್ ಸೋಲುವುದರೊಂದಿಗೆ ಫಫ್ ಡುಪ್ಲೆಸಿ ಬಳಗವು ಪ್ಲೇ ಆಫ್ ಪ್ರವೇಶ ಖಚಿತವಾಯಿತು.

ಲೀಗ್ ಹಂತದ ಪಾಯಿಂಟ್ ಪಟ್ಟಿಯಲ್ಲಿ ತನ್ನ ಎಲ್ಲ 14 ಪಂದ್ಯಗಳನ್ನು ಆಡಿದ್ದ ಆರ್‌ಸಿಬಿ 16 ಅಂಕ ಗಳಿಸಿತ್ತು. 14 ಪಾಯಿಂಟ್‌ಗಳೊಂದಿಗೆ ಡೆಲ್ಲಿ ತಂಡವು ಶನಿವಾರ ಮುಂಬೈ ಎದುರು ಜಯಿಸಿದ್ದರೆ, ಪಾಸಿಟಿವ್ ರನ್‌ರೇಟ್ ಕಾರಣ ಪ್ಲೇಆಫ್ ಪ್ರವೇಶಿಸುವ ಅವಕಾಶ ಇತ್ತು.

ಅದರಿಂದಾಗಿ ಆರ್‌ಸಿಬಿ ಅವಕಾಶ ಕೈತಪ್ಪುತ್ತಿತ್ತು. ಅದರಿಂದಾಗಿಯೇ ಡೆಲ್ಲಿ–ಮುಂಬೈ ಪಂದ್ಯವು ಮಹತ್ವ ಪಡೆದಿತ್ತು. ಆರ್‌ಸಿಬಿ ತಂಡದ ಆಟಗಾರರು, ಫ್ರ್ಯಾಂಚೈಸಿ ಸಿಬ್ಬಂದಿ ಮತ್ತು ಅಭಿಮಾನಿಗಳು ಸಾಮಾಜಿಕ ಜಾಲತಾಣಗಳಲ್ಲಿ ಕಳೆದ ಎರಡು ದಿನಗಳಿಂದ ಮುಂಬೈ ಇಂಡಿಯನ್ಸ್ ಗೆಲುವಿಗಾಗಿ ಪ್ರಾರ್ಥಿಸಿದ್ದರು. 25ರಂದು ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ನಡೆಯಲಿರುವ ಎಲಿಮಿನೇಟರ್‌ನಲ್ಲಿ ಆರ್‌ಸಿಬಿಯು ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಸೆಣಸಲಿದೆ.



ಮುಂಬೈ ಇಂಡಿಯನ್ಸ್ ತಂಡದ ಜಸ್‌ಪ್ರೀತ್ ಬೂಮ್ರಾ ಸಂಭ್ರಮ –ಪಿಟಿಐ ಚಿತ್ರ

ಈ ಸಲದ ಟೂರ್ನಿಯಲ್ಲಿ 10 ಪಂದ್ಯಗಳನ್ನು ಸೋತು ಈಗಾಗಲೇ ಹೊರಬಿದ್ದಿರುವ ರೋಹಿತ್ ಶರ್ಮಾ ಬಳಗವು ಡೆಲ್ಲಿ ವಿರುದ್ಧ 5 ವಿಕೆಟ್‌ಗಳಿಂದ ಗೆದ್ದು, ಆರ್‌ಸಿಬಿಗೆ ಅನುಕೂಲವಾಯಿತು. ವಾಂಖೆಡೆ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಮುಂಬೈ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಜಸ್‌ಪ್ರೀತ್ ಬೂಮ್ರಾ (25ಕ್ಕೆ3) ಉತ್ತಮ ಬೌಲಿಂಗ್ ಮುಂದೆ ಡೆಲ್ಲಿ ತಂಡಕ್ಕೆ ಬೃಹತ್ ಮೊತ್ತ ದಾಖಲಿಸಲು ಸಾಧ್ಯವಾಗಲಿಲ್ಲ. ಪೊವೆಲ್ (43; 34ಎ) ಮತ್ತು ನಾಯಕ ರಿಷಭ್ ಪಂತ್ (39; 33ಎ) ಐದನೇ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ 75 ರನ್‌ಗಳ ಬಲದಿಂದ 20 ಓವರ್‌ಗಳಲ್ಲಿ 7 ವಿಕೆಟ್‌ಗಳಲ್ಲಿ 159 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಮುಂಬೈ ತಂಡವು ಇಶಾನ್ ಕಿಶನ್ (48; 35ಎ) ಮತ್ತು ಟಿಮ್ ಡೇವಿಡ್ (34; 11ಎ) ಬ್ಯಾಟಿಂಗ್ ಬಲದಿಂದ 19.1 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 160 ರನ್ ಗಳಿಸಿ ಜಯಿಸಿತು. ಡೆಲ್ಲಿ ತಂಡದ ಫೀಲ್ಡಿಂಗ್ ಲೋಪಗಳು ಮುಳುವಾದವು. ಅದರಲ್ಲೂ ನಾಯಕ, ವಿಕೆಟ್‌ಕೀಪರ್ ರಿಷಭ್ ಪಂತ್ 12ನೇ ಓವರ್‌ನಲ್ಲಿ ಡೆವಾಲ್ಡ್ ಬ್ರೆವಿಸ್ ಕ್ಯಾಚ್ ಅನ್ನು ಕೈಚೆಲ್ಲಿದರು. ಎಂಟನೇ ಓವರ್‌ನಲ್ಲಿಯೂ ಶಾರ್ದೂಲ್ ಠಾಕೂರ್ ಅವರಿಂದ ಬ್ರೆವಿಸ್ ಜೀವದಾನ ಪಡೆದಿದ್ದರು. ಬ್ರೆವಿಸ್ 33 ಎಸೆತಗಳಲ್ಲಿ 37 ರನ್ ಗಳಿಸಿ ತಂಡಕ್ಕೆ ನೆರವಾದರು.

ಇನ್ನೊಂದೆಡೆ ಇಶಾನ್ ಕೂಡ ಮಿಂಚಿದರು. ಮಧ್ಯಮಕ್ರಮಾಂಕದಲ್ಲಿ ತಿಲಕ್ ವರ್ಮಾ (21 ರನ್) ಮತ್ತು ಟಿಮ್ ಡೇವಿಡ್ (34; 11ಎಸೆತ) ಚೆಂದದ ಆಟವಾಡಿ ಮುಂಬೈ ತಂಡವನ್ನು ಗೆಲುವಿನ ಹಾದಿಯಲ್ಲಿ ನಡೆಸಿದರು.

ಬೂಮ್ರಾ ಮಿಂಚು: ಡೆಲ್ಲಿ ತಂಡಕ್ಕೆ ಜಸ್‌ಪ್ರೀತ್ ಬೂಮ್ರಾ ಕೊಟ್ಟ ಪೆಟ್ಟಿನಿಂದಾಗಿ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ. ಪೃಥ್ವಿ ಶಾ, ಮಿಚೆಲ್ ಮಾರ್ಷ್ ಮತ್ತು ರೋವ್ಮನ್ ಪೊವೆಲ್ ಅವರ ವಿಕೆಟ್‌ಗಳನ್ನು ಬೂಮ್ರಾ ಕಬಳಿಸಿದರು. ಅವರಿಗೆ ಡೇನಿಯಲ್ ಸ್ಯಾಮ್ಸ್, ಮಾರ್ಕಂಡೆ ಮತ್ತು ರಮಣದೀಪ್ ಸಿಂಗ್ ಉತ್ತಮ ಜೊತೆ ನೀಡಿ ಡೆಲ್ಲಿ ಬ್ಯಾಟಿಂಗ್ ಪಡೆಗೆ ಕಡಿವಾಣ ಹಾಕಿದರು.

'ಬಣ್ಣ' ಬದಲಿಸಿದ ಆರ್‌ಸಿಬಿ

ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡ ಜಯಿಸಲಿ ಎಂದು ಆರ್‌ಸಿಬಿ ಆಟಗಾರರು, ಫ್ರ್ಯಾಂಚೈಸಿ ಮತ್ತು ಅಭಿಮಾನಿಗಳು ಹಾರೈಸಿದ್ದರು. ಆರ್‌ಸಿಬಿ ಫ್ರ್ಯಾಂಚೈಸಿ ತನ್ನ ಟ್ವಿಟರ್ ಖಾತೆಯಲ್ಲಿ ಲಾಂಛನದ ಬಣ್ಣವನ್ನೇ ಬದಲಿಸಿದೆ. ಕೆಂಪು ಬಣ್ಣದ ಬದಲಿಗೆ ಮುಂಬೈ ತಂಡದ ನೀಲಿಯನ್ನು ಹಾಕಿತ್ತು. ಆರ್‌ಸಿಬಿ ಬೆಂಬಲಿಗರೆಲ್ಲರೂ ಮುಂಬೈ ವಿಜಯಕ್ಕೆ ಹಾರೈಸುತ್ತಿದ್ದಾರೆ ಎಂದು ಹೇಳಿತ್ತು. 'ಪಂದ್ಯದಲ್ಲಿ ರೋಹಿತ್ ಆಟ ಗರಿಗೆದರಲಿದೆ. ಮುಂಬೈ ವಿಜಯಿಯಾಗಲಿ' ಎಂದು ಆರ್‌ಸಿಬಿ ನಾಯಕ ಫಫ್ ಡುಪ್ಲೆಸಿ ಹೇಳಿದ್ದರು. ಆರ್‌ಸಿಬಿ ಆಟಗಾರರು, ಸಿಬ್ಬಂದಿ ಮತ್ತು ಅಧಿಕಾರಿಗಳು ಹೋಟೆಲ್‌ನಲ್ಲಿ ದೊಡ್ಡಪರದೆಯ ಮೇಲೆ ಡೆಪಂದ್ಯವನ್ನು ವೀಕ್ಷಿಸಿದರು. ಡೆಲ್ಲಿಯ ವಿಕೆಟ್‌ಗಳು ಪಟಪಟನೆ ಪತನವಾದ ಸಂದರ್ಭದಲ್ಲಿ ಬೆಂಗಳೂರು ಆಟಗಾರರು ಸಂತಸ ವ್ಯಕ್ತಪಡಿಸಿದರು. ಈ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಬಹಳಷ್ಟು ಜನರ ಗಮನ ಸೆಳೆದಿವೆ.

ಇಂದಿನ ಪಂದ್ಯ

ಸನ್‌ರೈಸರ್ಸ್ ಹೈದರಾಬಾದ್–ಪಂಜಾಬ್ ಕಿಂಗ್ಸ್

ಪಂದ್ಯ ಆರಂಭ: ರಾತ್ರಿ 7.30

ಸ್ಥಳ: ವಾಂಖೆಡೆ ಕ್ರೀಡಾಂಗಣ, ಮುಂಬೈ

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 7ಕ್ಕೆ 159 (20 ಓವರ್)

ಪೃಥ್ವಿ ಸಿ ಇಶಾನ್ ಬಿ ಬೂಮ್ರಾ 24 (23 ಎ, 4x2, 4x1), ವಾರ್ನರ್ ಸಿ ಬೂಮ್ರಾ ಬಿ ಸ್ಯಾಮ್ಸ್ 5 (6 ಎ, 4x1), ಮಿಚೆಲ್ ಸಿ ರೋಹಿತ್ ಬಿ ಬೂಮ್ರಾ 0 (1 ಎ), ರಿಷಭ್ ಸಿ ಇಶಾನ್ ಬಿ ರಮಣ್‌ದೀಪ್ 39 (33 ಎ, 4x4, 6x1), ಸರ್ಫರಾಜ್ ಸಿ ಇಶಾನ್ ಬಿ ಮರ್ಕಂಡೆ 10 (7 ಎ, 6x1), ರೋವ್ಮನ್ ಬಿ ಬೂಮ್ರಾ 43 (34 ಎ, 4x1, 6x4), ಅಕ್ಷರ್ ಔಟಾಗದೆ 19 (10 ಎ, 6x2), ಶಾರ್ದೂಲ್ ಸಿ ಡೇವಿಡ್ ಬಿ ರಮಣ್‌ದೀಪ್ 4 (5 ಎ), ಕುಲದೀಪ್ ಔಟಾಗದೆ 1 (1 ಎ)

ಇತರೆ (ಬೈ 4, ಲೆಗ್‌ಬೈ 2, ವೈಡ್ 8) 14

ವಿಕೆಟ್ ಪತನ: 1-21 (ಡೇವಿಡ್ ವಾರ್ನರ್, 2.6), 2-22 (ಮಿಚೆಲ್ ಮಾರ್ಷ್, 3.2), 3-31 (ಪೃಥ್ವಿ ಶಾ, 5.4), 4-50 (ಸರ್ಫರಾಜ್ ಖಾನ್, 8.4), 5-125 (ರಿಷಭ್ ಪಂತ್, 15.6), 6-143 (ರೋವ್ಮನ್ ಪೊವೆಲ್, 18.2), 7-151 (ಶಾರ್ದೂಲ್ ಠಾಕೂರ್, 19.3)

ಬೌಲಿಂಗ್: ಡ್ಯಾನಿಯಲ್ ಸ್ಯಾಮ್ಸ್ 4-0-30-1, ಹೃತಿಕ್ ಶೋಕೀನ್ 4-0-34-0, ಜಸ್‌ಪ್ರೀತ್ ಬೂಮ್ರಾ 4-0-25-3, ಮಯಂಕ್ ಮಾರ್ಕಂಡೆ 4-0-26-1, ರಿಲೆ ಮೆರೆಡಿತ್ 2-0-9-0, ರಮಣ್‌ದೀಪ್ ಸಿಂಗ್ 2-0-29-2

ಮುಂಬೈ ಇಂಡಿಯನ್ಸ್ 5ಕ್ಕೆ 160 (19.1 ಓವರ್)

ಇಶಾನ್ ಸಿ ವಾರ್ನರ್ ಬಿ ಕುಲದೀಪ್ 48 (35 ಎ, 4x3, 6x4), ರೋಹಿತ್ ಸಿ ಶಾರ್ದೂಲ್ ಬಿ ನಾರ್ಕಿಯ 2 (13 ಎ), ಬ್ರೆವಿಸ್ ಬಿ ಶಾರ್ದೂಲ್ 37 (33 ಎ, 4x1, 6x3), ತಿಲಕ್ ಸಿ ರಿಷಭ್ ಬಿ ನಾರ್ಕಿಯ 21 (17 ಎ, 4x1, 6x1), ಡೇವಿಡ್ ಸಿ ಶಾ ಬಿ ಶಾರ್ದೂಲ್ 34 (11 ಎ, 4x2, 6x4), ರಮಣ್‌ದೀಪ್ ಔಟಾಗದೆ 13 (6 ಎ, 6x2), ಸ್ಯಾಮ್ಸ್ ಔಟಾಗದೆ 0 (1 ಎ)

ಇತರೆ (ಲೆಗ್‌ಬೈ 1, ನೋಬಾಲ್ 1, ವೈಡ್ 3) 5

ವಿಕೆಟ್ ಪತನ: 1-25 (ರೋಹಿತ್ ಶರ್ಮಾ, 5.2), 2-76 (ಇಶಾನ್ ಕಿಶನ್, 11.3), 3-95 (ಡಿವಾಲ್ಡ್ ಬ್ರೆವಿಸ್, 14.3), 4-145 (ಟಿಮ್ ಡೇವಿಡ್, 17.5), 5-155 (ತಿಲಕ್ ವರ್ಮಾ, 18.5)

ಬೌಲಿಂಗ್: ಖಲೀಲ್ ಅಹಮ್ಮದ್ 3.1-0-24-0, ಎನ್ರಿಚ್ ನಾರ್ಕಿಯ 4-0-37-2 ಶಾರ್ದೂಲ್ ಠಾಕೂರ್ 3-0-32-2, ಮಿಚೆಲ್ ಮಾರ್ಷ್ 2-0-7-0, ಕುಲದೀಪ್ ಯಾದವ್ 4-0-33-1, ಅಕ್ಷರ್ ಪಟೇಲ್ 3-0-26-0

ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 5 ವಿಕೆಟ್‌ಗಳ ಜಯ

ಪ್ಲೇಆಫ್ ವೇಳಾಪಟ್ಟಿ

ಕ್ವಾಲಿಫೈಯರ್ 1	ಗುಜರಾತ್ ಟೈಟನ್ಸ್–ರಾಜಸ್ಥಾನ ರಾಯಲ್ಸ್	ಮೇ 24 ಕೋಲ್ಕತ್ತ
ಎಲಿಮಿನೇಟರ್	ಲಖನೌ ಸೂಪರ್ ಜೈಂಟ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು	ಮೇ 25 ಕೋಲ್ಕತ್ತ
ಕ್ವಾಲಿಫೈಯರ್ 2	ಎಲಿಮಿನೇಟರ್ ವಿಜೇತ–ಕ್ವಾಲಿಫೈಯರ್ 1	ಮೇ 27 ಅಹಮದಾಬಾದ್

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	14	10	4	0	0	20	0.316
ರಾಜಸ್ಥಾನ	14	9	5	0	0	18	0.298
ಲಖನೌ	14	9	5	0	0	18	0.251
ಬೆಂಗಳೂರು	14	8	6	0	0	16	-0.253
ಡೆಲ್ಲಿ	14	7	7	0	0	14	0.204
ಕೋಲ್ಕತ್ತ	14	6	8	0	0	12	0.146
ಪಂಜಾಬ್	13	6	7	0	0	12	-0.043
ಹೈದರಾಬಾದ್	13	6	7	0	0	12	-0.230
ಚೆನ್ನೈ	14	4	10	0	0	8	-0.203
ಮುಂಬೈ	14	4	10	0	0	8	-0.506

*ಶನಿವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್‌ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	629
ರಾಹುಲ್	ಲಖನೌ	537
ಕ್ವಿಂಟನ್ ಡಿಕಾಕ್	ಲಖನೌ	502

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್‌ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	26
ಹಸರಂಗ	ಬೆಂಗಳೂರು	24
ಕಗಿಸೊ	ಪಂಜಾಬ್	22



ವಿಶ್ವಕಪ್ ಆರ್ಚರಿಯಲ್ಲಿ ಚಿನ್ನ ಗೆದ್ದ ಭಾರತ ತಂಡದ ಅಭಿಷೇಕ್ ವರ್ಮನ್, ರಜತ್ ಚೌಹಾಣ್ ಮತ್ತು ಅಮನ್ ಸೈನಿ ಅವರು ವಿಜಯವೇದಿಕೆಯಲ್ಲಿ 'ಪುಷ್ಪ' ಚಿತ್ರದ ನಾಯಕ ನಟನ ಹಾವಭಾವ ತೋರಿಸಿ ಸಂತಸಪಟ್ಟರು – ಸಾಯ್ ಟ್ವಿಟರ್ ಚಿತ್ರ

ಆರ್ಚರಿ: ಭಾರತ ತಂಡಕ್ಕೆ ಚಿನ್ನದ ಪದಕ

ಗ್ವಾಂಗ್ಜು, ದಕ್ಷಿಣ ಕೊರಿಯಾ (ಪಿಟಿಐ): ಭಾರತ ಪುರುಷರ ಕಂಪೌಂಡ್ ಆರ್ಚರಿ ತಂಡವು ಶನಿವಾರ ವಿಶ್ವಕಪ್ ಸ್ಟೇಜ್‌ಗಳಲ್ಲಿ ಸತತ ಎರಡನೇ ಚಿನ್ನದ ಪದಕ ಜಯಿಸಿತು.

ವೈಯಕ್ತಿಕ ವಿಭಾಗದಲ್ಲಿ ವಿಶ್ವ ಚಾಂಪಿಯನ್ ನಿಕೊ ವೀನರ್ ವಿರುದ್ಧ ಸೆಣಸಿದ ಮೋಹನ್ ಭಾರದ್ವಾಜ್ ಬೆಳ್ಳಿ ಪದಕ ಪಡೆದರು. ಮಹಿಳೆಯರ ತಂಡ ವಿಭಾಗದಲ್ಲಿ ಭಾರತವು ಕಂಚಿನ ಪದಕ ಪಡೆದರು.

ಟಾಪ್ಸ್ (ಟಾರ್ಗೆಟ್ ಒಲಿಂಪಿಕ್ ಪೋಡಿಯಂ) ಪ್ರೋತ್ಸಾಹ ಪಡೆದಿರುವ ಭರವಸೆಯ ಆರ್ಚರ್‌ಗಳು ಈ ಸಾಧನೆ ಮಾಡಿದರು. ಅಭಿಷೇಕ್ ವರ್ಮನ್, ರಜತ್ ಚೌಹಾಣ ಮತ್ತು ಅಮನ್ ಸೈನಿ ಅವರಿದ್ದ ಪುರುಷರ ತಂಡವು ಫ್ರಾನ್ಸ್ ಎದುರು ಜಯ ಸಾಧಿಸಿ ಚಿನ್ನ ಗಳಿಸಿತು.

ರಾಜ್ಯ ಮಿನಿ ಒಲಿಂಪಿಕ್ ಕ್ರೀಡಾಕೂಟ: ಅನುರಾಗ್ ಉತ್ತಮ ಅಥ್ಲೀಟ್

ಸ್ಪ್ರಿಂಟ್‌ನಲ್ಲಿ ಮೋನಿಷ್, ಸ್ವರ 'ಡಬಲ್' ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟ್ರ್ಯಾಕ್‌ನಲ್ಲಿ ಮತ್ತೊಮ್ಮೆ ಮಿಂಚಿದ ಬೆಂಗಳೂರು ಜಿಲ್ಲೆಯ ಮೋನಿಷ್ ಚಂದ್ರಶೇಖರ್ ಮತ್ತು ಬೆಳಗಾವಿ ಜಿಲ್ಲೆಯ ಸ್ವರ ಸಂತೋಷ್ ಶಿಂಧೆ ಅವರು ಸ್ಪ್ರಿಂಟ್‌ನಲ್ಲಿ ಡಬಲ್ ಸಾಧನೆ ಮಾಡಿದರು.

ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಸಹಯೋಗದಲ್ಲಿ ಆಯೋಜಿಸಿರುವ ರಾಜ್ಯ ಮಿನಿ ಒಲಿಂಪಿಕ್ಸ್‌ನ 100 ಮೀಟರ್ಸ್ ಓಟದಲ್ಲಿ ಚಿನ್ನ ಗೆದ್ದಿದ್ದ ಇಬ್ಬರೂ 200 ಮೀಟರ್ಸ್‌ನಲ್ಲೂ ಮೊದಲಿಗರಾದರು.

ಬಾಲಕರ ವಿಭಾಗದಲ್ಲಿ ಮೋನಿಷ್ ಶನಿವಾರ ಎರಡು ಸೆಕೆಂಡುಗಳ ಅಂತರದಲ್ಲಿ ಧಾರವಾಡದ ಸೈಯದ್ ಸಬೀರ್ ಅವರನ್ನು ಹಿಂದಿಕ್ಕಿದರೆ ಬಾಲಕಿಯರ ವಿಭಾಗದಲ್ಲಿ ಸ್ವರ ಬೆಂಗಳೂರಿನ ಸುಚಿತ್ರಾ ಅವರ ಸವಾಲನ್ನು ಸುಲಭವಾಗಿ ಮೆಟ್ಟಿನಿಂತರು. ಶನಿವಾರ ಮುಕ್ತಾಯಗೊಂಡ ಅಥ್ಲೆಟಿಕ್ಸ್‌ನಲ್ಲಿ ಸ್ವರ ಉತ್ತಮ ಅಥ್ಲೀಟ್ ಆಗಿ ಹೊರಹೊಮ್ಮಿದರು. ಬಾಲಕರ ವಿಭಾಗದಲ್ಲಿ ಉಡುಪಿ ಜಿಲ್ಲೆಯ ಅನುರಾಗ್ ಉತ್ತಮ ಕ್ರೀಡಾಪಟು ಪ್ರಶಸ್ತಿ ಗಳಿಸಿದರು.

ಫಲಿತಾಂಶಗಳು: ಬಾಲಕರ 200 ಮೀಟರ್ಸ್: ಮೋನಿಷ್ ಚಂದ್ರಶೇಖರ್ (ಬೆಂಗಳೂರು)–1. ಕಾಲ: 23.6 ಸೆ, ಸೈಯದ್ ಸಬೀರ್ (ಧಾರವಾಡ)–2, ಸಾಯಿನಾಥ್ ಎಚ್.ವಿ (ಉತ್ತರ ಕನ್ನಡ)–3; ಲಾಂಗ್ ಜಂಪ್: ಮನ್ವಿತ್ (ಚಾಮರಾಜನಗರ)–1. ಅಂತರ: 5.42 ಮೀ, ಆದಿತ್ಯ ಸುರೇಶ್ ನಾಯಕ್ (ಬೆಳಗಾವಿ)–2, ಸುಮಿತ್ ಸತೀಶ್ (ಧಾರವಾಡ)–3; ಡಿಸ್ಕಸ್ ಥ್ರೋ: ಅನುರಾಗ್ ಜಿ (ಉಡುಪಿ)–1. ದೂರ: 41.67 ಮೀ, ಅವಿನಾಶ್ ತಲಕೇರಿ (ವಿಜಯಪುರ)–2, ರುದ್ರಗೌಡ ರಾವ್ (ಬೆಳಗಾವಿ)–3; 4x100 ಮೀ ರಿಲೆ: ಧಾರವಾಡ–1, ಉಡುಪಿ–2, ರಾಯಚೂರು–3; ಬಾಲಕಿಯರ 200 ಮೀ ಓಟ: ಸ್ವರ ಸಂತೋಷ್ ಶಿಂಧೆ (ಬೆಳಗಾವಿ)–1. ಕಾಲ: 26.6, ಸುಚಿತ್ರಾ (ಬೆಂಗಳೂರು)–2, ಗಗನಾ (ಕೊಡಗು)–3; ಲಾಂಗ್ ಜಂಪ್: ಅಪೇಕ್ಷ ಬಿ.ಆರ್ (ಮೈಸೂರು)–1. ಅಂತರ: 4.93 ಮೀ, ಅದ್ವಿಕಾ ಆದಿತ್ಯ (ಬೆಂಗಳೂರು)–2, ಆವನಿ (ಉಡುಪಿ)–3; ಡಿಸ್ಕಸ್ ಥ್ರೋ: ವರ್ಷಾ ಗೌಡ (ಮೈಸೂರು)–1. ದೂರ: 21.68 ಮೀ, ಭೂಮಿಕಾ (ಚಾಮರಾಜನಗರ)–2, ಶ್ರೀಮಾಯಿ ಕುಲಕರ್ಣಿ (ಬೆಂಗಳೂರು)–3; 4x100 ಮೀ ರಿಲೆ: ಬೆಂಗಳೂರು–1, ಬೆಳಗಾವಿ–2, ಉಡುಪಿ–3.



ಬಾಲಕಿಯರ ಬ್ಯಾಸ್ಕೆಟ್‌ಬಾಲ್‌ನಲ್ಲಿ ಪ್ರಶಸ್ತಿ ಗೆದ್ದ ಮೌಂಟ್ಸ್ ಕ್ಲಬ್ ತಂಡ. ನಿಂತವರು: (ಎಡದಿಂದ): ತನುಶ್ರೀ, ತಸ್ಮೈ, ನಿಧೀ ಉಮೇಶ್, ಜಯವಂತಿ ಶ್ಯಾಮ್ (ಕೋಚ್),ಗುಣಶೇಖರ (ಕೆಎಸ್‌ಬಿಬಿಎ ಉಪಾಧ್ಯಕ್ಷ), ಕೆ.ಗೋವಿಂದರಾಜ್ (ಕೆಒಎ ಅಧ್ಯಕ್ಷ), ಮಂಜೇಗೌಡ (ಕೆಒಎ ಉಪಾಧ್ಯಕ್ಷ), ಆರ್.ರಾಜನ್ (ಕೆಎಸ್‌ಬಿಬಿಎ ಉಪಾಧ್ಯಕ್ಷ), ನಿಲಯ, ಅನನ್ಯ, ಅಮೂರ್ಯ ಸಂತೋಷ್; ಕುಳಿತವರು: ಅದಿತಿ ಶೆಟ್ಟಿ, ಪ್ರಣ್ಯ, ಈಶಾನ್ವಿ, ಪ್ರಾರ್ಥನ, ಆರಾಧನ, ಅನ್ಯ

ಬ್ಯಾಸ್ಕೆಟ್‌ಬಾಲ್: ಎಂಎನ್‌ಕೆ, ಮೌಂಟ್ಸ್ ಚಾಂಪಿಯನ್

ಎಂಎನ್‌ಕೆ ರಾವ್ ಬಿ.ಸಿ ಮತ್ತು ಮೌಂಟ್ಸ್ ಬಿ.ಸಿ ತಂಡದವರು ಬ್ಯಾಸ್ಕೆಟ್‌ಬಾಲ್‌ನಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು. ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಎಂಎನ್‌ಕೆ ರಾವ್ ತಂಡ 64–46ರಲ್ಲಿ ಎಚ್‌ಬಿಆರ್ ಬಿ.ಸಿಯನ್ನು ಮಣಿಸಿತು. ಎಂಎನ್‌ಕೆ ಪರವಗಿ ವಿಜೇಂದ್ರ ಮತ್ತು ಅಕ್ಷತ್ ತಲಾ 22 ಪಾಯಿಂಟ್ ಗಳಿಸಿದರು. ಎಚ್‌ಬಿಆರ್‌ಗಾಗಿ ಸಂವೇಗ್ 19 ಪಾಯಿಂಟ್ ಕಲೆ ಹಾಕಿದರು. ಭರತ್ ಎಸ್‌ಯು ವಿರುದ್ಧ 55–33ರಲ್ಲಿ ಗೆದ್ದ ಜೆಎಸ್‌ಸಿ ಮೂರನೇ ಸ್ಥಾನ ಗಳಿಸಿತು.

ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಮೌಂಟ್ಸ್ ಬಿ.ಸಿ 56–33ರಲ್ಲಿ ಎಂಸಿಎಚ್‌ಸಿಯನ್ನು ಸೋಲಿಸಿತು. ನಿಧಿ 30 ಮತ್ತು ತಾರುಶ್ರೀ 10 ಪಾಯಿಂಟ್ಸ್‌ಗಳೊಂದಿಗೆ ಮೌಂಟ್ಸ್ ಪರ ಮಿಂಚಿದರು. ಎಂಸಿಎಚ್‌ಎಸ್‌ಗಾಗಿ ಅದಿತಿ 19 ಪಾಯಿಂಟ್ಸ್ ಗಳಿಸಿದರು. ಕೋರಮಂಗಲ ಎಸ್‌ಸಿ ಮೂರನೇ ಸ್ಥಾನ ಗಳಿಸಿತು. ಮೈಸೂರಿನ ನ್ಯಾಷನಲ್ಸ್ ತಂಡವನ್ನು ಅದು 47–33ರಲ್ಲಿ ಮಣಿಸಿತು. ಕೋರಮಂಗಲ ತಂಡಕ್ಕಾಗಿ ರೂತ್ 15, ಜಯಶ್ರೀ 10 ಪಾಯಿಂಟ್ ಗಳಿಸಿದರು. ಮೈಸೂರು ತಂಡದ ಧ್ರುತ್‌ಶ್ರೀ 21 ಪಾಯಿಂಟ್‌ಗಳೊಂದಿಗೆ ಮಿಂಚಿದರು.

ಫ್ರೆಂಚ್ ಓಪನ್ ಟೆನಿಸ್: ನಡಾಲ್ ಜೊಕೊವಿಚ್ ಮೇಲೆ ಕಣ್ಣು

ಪ್ಯಾರಿಸ್ (ಎಎಫ್‌ಪಿ): ದಾಖಲೆಯ ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳನ್ನು ಗೆದ್ದುಕೊಂಡಿರುವ ಸ್ಪೇನ್‌ನ ರಫೆಲ್ ನಡಾಲ್ ಮತ್ತು ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನದಲ್ಲಿರುವ ಸರ್ಬಿಯಾದ ನೊವಾಕ್ ಜೊಕೊವಿಚ್ ಭಾನುವಾರ ಆರಂಭವಾಗಲಿರುವ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಗಮನ ಸೆಳೆಯಲಿದ್ದಾರೆ. ಯುವ ಆಟಗಾರ ಕಾರ್ಲೋಸ್ ಅಲ್ಕರಾಜ್ ಸವಾಲನ್ನು ಇವರಿಬ್ಬರು ಮೀರಿ ನಿಲ್ಲುವರೇ ಎಂಬುದು ಕುತೂಹಲ ಕೆರಳಿಸಿದೆ.

ಹಾಲಿ ಚಾಂಪಿಯನ್ ಜೊಕೊವಿಚ್ 13 ಬಾರಿಯ ಚಾಂಪಿಯನ್ ನಡಾಲ್ ಅವರನ್ನು ಕ್ವಾರ್ಟರ್ ಫೈನಲ್‌ನಲ್ಲಿ ಮುಖಾಮುಖಿಯಾಗುವ ಸಾಧ್ಯತೆ ಇದ್ದು ಇವರಿಬ್ಬರ ಪೈಕಿ ಒಬ್ಬರಿಗೆ ಅಲ್ಕರಾಜ್ ಸೆಮಿಫೈನಲ್‌ನಲ್ಲಿ ಎದುರಾಗುವ ಸಾಧ್ಯತೆ ಇದೆ.

ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ನಿರಾಕರಿಸಿದ ಹಿನ್ನೆಲೆಯಲ್ಲಿ ಜನವರಿಯಲ್ಲಿ ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ ಆಡಲು ಅವಕಾಶ ಸಿಗದ ಜೊಕೊವಿಚ್ ಕಳೆದ ವರ್ಷ ಫ್ರೆಂಚ್ ಓಪನ್ ಟೂರ್ನಿಯ ಎರಡನೇ ಪ್ರಶಸ್ತಿ ಗೆದ್ದುಕೊಂಡಿದ್ದರು.

ಭಾನುವಾರ 35ನೇ ವರ್ಷಕ್ಕೆ ಕಾಲಿಡಲಿರುವ ಅವರು ಈ ವರ್ಷ ಕೇವಲ ಐದು ಟೂರ್ನಿಗಳಲ್ಲಿ ಆಡಿದ್ದಾರೆ. ಕಳೆದ ವಾರ ನಡೆದ ಇಟಾಲಿಯನ್ ಓಪನ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದು ವೃತ್ತಿಜೀವನದಲ್ಲಿ ಸಾವಿರ ಪಂದ್ಯಗಳನ್ನು ಗೆದ್ದ 5ನೇ ಆಟಗಾರ ಎನಿಸಿಕೊಂಡಿದ್ದರು. 94ನೇ ಶ್ರೇಯಾಂಕದ ಜಪಾನ್ ಆಟಗಾರ ಯೊಶಿಹಿತೊ ನಿಶಿಯೋಕ ಎದುರು ಅವರು ಮೊದಲ ಸುತ್ತಿನಲ್ಲಿ ಆಡುವರು.



ನೊವಾಕ್ ಜೊಕೊವಿಚ್



ರಫೆಲ್ ನಡಾಲ್ –ಎಎಫ್‌ಪಿ ಚಿತ್ರಗಳು

ಪಾದದಲ್ಲಿ ನೋವು ಕಾಣಿಸಿಕೊಂಡಿರುವ ನಡಾಲ್, ಇಟಾಲಿಯನ್ ಓಪನ್‌ನಲ್ಲಿ ನೀರಸ ಆಟವಾಡಿದ್ದರು. ಆದರೆ ಬುಧವಾರ ಅಭ್ಯಾಸದ ವೇಳೆ ಅವರಲ್ಲಿ ಯಾವುದೇ ತೊಂದರೆ ಕಾಣಿಸಿಕೊಂಡಿರಲಿಲ್ಲ. 21 ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದು ರೋಜರ್ ಫೆಡರರ್ ಮತ್ತು ನೊವಾಕ್ ಜೊಕೊವಿಚ್ ಅವರನ್ನು ಹಿಂದಿಕ್ಕಿರುವ ನಡಾಲ್ ಫ್ರೆಂಚ್ ಓಪನ್‌ನಲ್ಲಿ ಒಟ್ಟು 105 ಪಂದ್ಯಗಳನ್ನು ಗೆದ್ದುಕೊಂಡಿದ್ದಾರೆ. ಮೊದಲ ಸುತ್ತಿನ ಪಂದ್ಯದಲ್ಲಿ ಅವರು ಆಸ್ಟ್ರೇಲಿಯಾದ ಜೋರ್ಡಾನ್ ಥಾಮ್ಸನ್ ವಿರುದ್ಧ ಸೆಣಸಲಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಸ್ಲಾನೆ ಸ್ಟೀಫನ್ಸ್, ಆನ್ಸ್ ಜಬೆವುರ್, ಗಾರ್ಬೈನ್ ಮುಗುರುಜಾ, ಕರೋಲಿನಾ ಮುಚೋವ, ಮರಿಯಾ ಸಕ್ಕರಿ, ಕೊಕೊ ಗಫ್ ಮುಂತಾದವರು ಕಣದಲ್ಲಿರುವ ಪ್ರಮುಖರು.

ಸಿಂಧುಗೆ ಸೋಲು

ಬ್ಯಾಂಕಾಕ್(ಪಿಟಿಐ): ಭಾರತದ ಪಿ.ವಿ. ಸಿಂಧು ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಸೆಮಿಫೈನಲ್‌ನಲ್ಲಿ ಮುಗ್ಗರಿಸಿದರು.

17–21, 16–21 ರಿಂದ ಒಲಿಂಪಿಕ್ ಚಾಂಪಿಯನ್ ಚೀನಾದ ಚೆನ್ ಯೂ ಫೀ ವಿರುದ್ಧ ಅವರು ಸೋತರು.

ಎರಡು ಒಲಿಂಪಿಕ್ಸ್‌ಗಳಲ್ಲಿ ಪದಕ ಜಯಿಸಿರುವ ಸಿಂಧು, 2019ರ ಬಿಡಬ್ಲ್ಯುಎಫ್ ಟೂರ್ ಫೈನಲ್‌ನಲ್ಲಿಯೂ ಯೂ ಫೀ ವಿರುದ್ಧ ಸೋತಿದ್ದರು.

ಆರಂಭದಲ್ಲಿ ಮುನ್ನಡೆ ಗಳಿಸಿದ್ದ ಸಿಂಧು ಎದುರು ರಕ್ಷಣಾತ್ಮಕವಾಗಿ ಆಡಿದ್ದ ಯೂ ಫೀ ನಂತರ ತಿರುಗಿ ಬಿದ್ದರು. 3–3ರ ಸಮಬಲದ ನಂತರ ಕ್ರಾಸ್‌ಕೋರ್ಟ್ ಮತ್ತು ಫೋರ್ ಹ್ಯಾಂಡ್ ಹೊಡೆಗಳನ್ನು ಪರಿಣಾ ಮಕಾರಿಯಾಗಿ ಬಳಸಿದರು. ಈ ಸಂದರ್ಭದಲ್ಲಿ ಸಿಂಧು ಎಡವಿದರು. 11–7ರ ಮುನ್ನಡೆಯೊಂದಿಗೆ ಯೂ ಫೀ ಪ್ರಾಬಲ್ಯ ವಿಸ್ತರಿಸಿ17–12ರವರೆಗೂ ಯೂಫೀ ತಮ್ಮ ಮುನ್ನಡೆಯನ್ನು ಬೆಳೆಸಿದರು. ಕ್ರಾಸ್‌ಕೋರ್ಟ್ ರಿಟರ್ನ್‌ಗಳ ಮೂಲಕ ಎರಡು ಪಾಯಿಂಟ್ ಪಡೆದ ಸಿಂಧು 15–17ರಿಂದ ಅಂತರ ತಗ್ಗಿಸಿದರು. ಆದರೆ ತಮ್ಮ ಮುನ್ನಡೆಯನ್ನು ಯಾವುದೇ ಹಂತದಲ್ಲಿಯೂ ಯೂ ಫಿ ಬಿಟ್ಟುಕೊಡಲಿಲ್ಲ.

ಎರಡನೇ ಗೇಮ್‌ನಲ್ಲಿ ಇನ್ನಷ್ಟು ವೇಗದ ಆಟಕ್ಕೆ ಒತ್ತು ನೀಡಿದ ಚೀನಾದ ಆಟಗಾರ್ತಿ ಐದು ಪಾಯಿಂಟ್‌ಗಳ ಅಂತರದಿಂದ ಗೆದ್ದರು.